ಶನಿವಾರ, ಜುಲೈ 27, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕಿರುನೋಟ
ಮುಂಬೈನಲ್ಲಿ ನಡೆದ 'ಉಲಝ್' ಸಿನಿಮಾ ಪ್ರಚಾರ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ಜಾಹ್ನವಿ ಕಪೂರ್ ಕಾಣಿಸಿಕೊಂಡಿದ್ದು ಹೀಗೆ...



ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Arkavathi Layout

ARKAVATHI 3RD Block 30x40 South Facing 1 km Airport Road, Genuine Buyers. USR- 7019770736 /8951614989.

Banashankari

BANASHANKARI 6TH STAGE WANTED/ AVAILABLE BDA RESIDENTIAL AND COMMERCIAL SITES IMMEDIATE SETTLEMENT CONTACT: 8050908920/ 9986866661

Jayanagar

PRIME RESIDENTIAL Property SALE in 1st Block near Madhavan Park. 40x60 South Facing. Brokers Excuse. 7760110114.

Kengeri

KENGERI UPANAGAR BDA Site 25X42. E/F Banashankari 6th Stage, 7th Block. 20X30. W/F 9632822225, 9110467577.

Kanakapura Road

KANAKAPURA ROAD 10000 Square feet Conversion 30x40, 40x60, 50x80, BDA, BMRDA Sites For Sale: 9916817739

Kempegowda Layout

NADA PRABHU Kempegowda Layout Site No. 1691 South face 40x60 8th Block 'E' Sector sqft 6500/ negotiable. 9980339217, 9448709882

Rajarajeshwari Nagar

SITE FOR SALE KANAKAPURA ROAD & RR NAGAR 5th STAGE 30x45 CALL: 8951748434/ 9986401915

Mysore Road

RERA-BMRDA APPROVED Sites
Rs. 2 Lakh Discount ON SPOT BOOKING
Mysore Road, Near Big Banyan Tree, Bank Loan Avbl, Ready for Regist ration & Construction. Call for Site Visit: **9606940714**

RAILWAY CO-OPERATIVE SOCIETY. 30X40, A Khata, Hejjala Railway Station half Km. 2800/-. Negotiable. Owner: 9486676000.

Mysore

SITE FOR SALE 30 x 50 E/F Hanchaya Village, Mysore. MUDA approved just 7.5km from Suburban Bus Stand. Rate : Rs. 5000/-persqft. Owner 9481067944 / 7892798276

Nagarabhavi

50X80 EAST FACING CORNER SITE Sale Nagarabhavi 2nd Stage, Near Swathi Hotel. Genuine Buyers Call: 9964358675.

Sarjapur Road

SALE 30×40 SW Corner Telecom Layout Sarjapur Rs. 4000 FT, no broker, Contact: 9900507294

Sanjaynagar

SANJAYNAGAR KEB Layout BDA Approved 1050 Sft North West Corner Excellent Location Call: 9341260828

RMV BHOOPASANDRA BDA Site 29'x57' East 40' Road, off Chawla Road/Central Excise, 3.15Crore. Owner: 9980555558

Vidyaranyapura

SITE BBMP A Katha 20x30, 40x30 SEMI COMMERCIAL SF 9200/- THINDLU LAKE SHOW GARDEN: 8296895858

SALE 30×40 EAST MSR Shantiniketan, Tumkur Rs. 3500 FT, No Brokers. Genuine Buyers contact: 9900507294

Vishweshwariah Layout

SMV LAYOUT 8th Block 20x30 BDA Semi-Commercial East Face SITE With Office SALE. 9164089633, 9663226688.

"30X40 BDA-SITE for sale Vishveshwaraih 3rd Block near Vidyaniketan School, Good location. Contact: 9845924949"

SALE, BDA 60X40 Adjacent 3 sites, S/f @ SMV Layout, 3rd block, 11000/ sqft. 7411255535

DIRECT OWNER 40x60 BDA Site-Sale VISHVESWARAIAH LAYOUT BLOCK-7,near KLE Law College,Adjacent to Nagarabhavi. Call:9742681666

'A' KHATA Plot for Sale, 18500 sqft Vishweshwariah Layout 6th block, Ullal Upanagara. 7022573176/ 8308173176.

Yeshwanthpur

SALE TUMKUR Road, BDA 112x125 Commercial Site, West facing 200ft road, Near Orion Mall, Metro cash and'carry, Yeshwantpur Railway station. Contact Owner 9900276199.

Mysore

INVEST ON Chance Property just 100 meters to Infosys Mysore East Gate 40x60 West Facing Site, E Khata @ 5300/- Psqft. Chandru: 9844754873

Vijayanagar

VIJAYNAGAR 25X47 North, 40x60 East M.C.Layout, 30x46 South, 50x80 West RPC layout, 30x46 North, 6500sqft commercial. 9008267445.

House

Ramamurthy Nagar

LUXURY DUPLEX HOUSE 20x30 Sale, Ground+ 3`Floors, 3`BHK, Rammurthy Nagar. 90L. Call: 9110499696.

R T Nagar

R.T.NAGAR HMT Layout 40X60 5-BHK Duplex-House, Lift, N/W Corner Teak, Italian Marble 4-Carparking 9845378269 7829203369

Flat

Rajajinagar

NEW 3 BHK Attach Wall Mould cum out Teak granite Italian Kitchen 1450 sqft 6th Block, Rajkumar Road, 1.5Cr, 1/2 Km Lulu Mall. Contact:- 9341256998/ 9739217086.

J P Nagar

SEVENTH PHASE 1100Sft,2BHK Semi-furnished OC,CC Flat 68L, 30X40,North 4BHK Triplex 180L,8904210201

Vidyaranyapura

2BHK FLAT SALE 52 LAKHS Including Registration and Carpark. Near BEL Factory Doddabomsandra: 9035813667/ 9538599224

Agricultural Land

Bannerghatta Road

BANNERGHATTA ROAD Kohli Param Road Sigapalya 100x100, 5-5 Gunta Separate Pani 1100000/- Gunta Negotiable 9844155175

Commercial Land

Banashankari

"40X60 COMMERCIAL property for sale Hosakerehalli 100 feet Ring Road Banashankari 3rd Stage. 9845500019/ 7019314962"

Commerical

Nagarabhavi

SALE NAGARABHAVI 80 Feet Road Commercial Corner Building, 4400sqft Area (Ground+ Four Floor) Kumar: 9945928994

REAL ESTATE BUYING

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement. genuine Sellers Contact: 9902038118, 9449060605

WANTED BDA & BBMP SITES Anjanapura Banashankari 6th Stage, BCC & BCMC Layout, JP.Nagar 8th 9th Phase, Vishweshwaraiah Layout, Contact: 9845297419

WANTED BDA SITES ANJANAPURA , JP.Nagar 20x30,30x40, 40x60, 50x80,Immediate Settlement Sellers Contact : 9008844447

Kanakapura Road

WANTED SITE 30x40, 40x60 Anjanapura BDA, Kanakapura Road, Banashankari 6`Stage, Gubblala BCCHS Layout. Agent Excuse. Contact: 9663454878

Multiple Locations

URGENT REQUIREMENT 30x40,`40x60, 50x80 BDA Commercial &.Residential for genuine buyers`in Vishveshwaraiya Layout,`BSK 6th`Stage, Vakhil's,`Narayan Nagar,`Judicial Layout and other areas`also, (Brokers excuse) Krishna- 9845059328

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Vishweshwariah Layout

"URGENT REQUIRED 30x40 Vishveshwaraiah Layout any facing our buyer budget 10000/-to 12000/- P.Sft, Immediate Registration. Contact: 7892224597"

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

Industrial & Factory

Peenya

WANTED INDUSTRIAL Area or shed of 2500 sq.Feet in & around peenya. Contact owners only.9113057549

Joint Development

Joint Venture

"URGENTLY REQUIRED-PROPERTY any dimensions in &`around Bangalore for Builders (Joint Venture or Individual). genuine Parties-Call: 9019533999/ 9731379933"

BUILDERS ESSENTIAL

Roofing Materials

***WE-FIX* LEAKING** ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial



Long Term Lease Rental
7447 Sft Fitted Out Office
with 96 Work Stations, 5 Cabins, 3 Meeting Rooms, 1Board,1MD Cabin, Cafeteria. ON OLD AIRPORT ROAD NEXT TO HAL MUSEUM.
Whatsapp 98450 31550
For More Details. **Brokers Excuse !**

LOOKING FOR an office space for rent measuring around 700 to 800 Sqft close to Hennur, Kalyannagar, Banaswadi area. Budget: 25,000/- to 30,000/- Contact: 9606923488. BROKERS EXCUSE

Flats

FLAT FOR SENIOR LIVING. ALL FACILITIES. NEAR BIAL. CALL SMS 9900103481

Industrial And Factory

FOR RENT, OPEN Area 5900 sq.ft. KSSIDC Industrial Site, 1st Phase Kanakapura 40 HP Power, Facing Highway, Opp Maruti Showroom. 9620869322

House

GROUND FLOOR, 2BHK.Independent House For Rent Near Metro Hosahalli , and Metro Vijayanagar 9945193725

SOCIAL SERVICES

Others

GUARANTEED LIFETIME Income Plan. Secure Your Future With Guaranteed Lifetime Regular Income Plan. Pay Premium for just 15 years and enjoy a guaranteed lifetime of regular income starting from 16th year with many benefits. Shrinivas: 9980814884

JOB OPPORTUNITIES

Engg/ Production Technical

CIVIL ENGINEERS with 1-5 years experience to work at our Bangalore project. interested send resumes to gvrconst@gmail.com

BUSINESS

Business to Business

Business

WANTED BUSINESS PARTNER HOTEL BUSINESS CONTACT: 8892501007/ 9606701007

Medical

RUNNING NEW Modern NABH Ready 50 Bed Hospital South Bangalore, Longterm Rental Partnership WhatsApp: 00447868727506

PERSONAL

Change of Name


I, P. GYANCHAND S/o.Late Premchand Bhandari R/a#77 Krubmigal Road,Near Lalbagh Main Gate Bangalore 560004 declare that's GYANCHAND. P. and GYANCHAND PREMCHAND BHANDARI these`two above names are pertaining to my Name i.e. P. GYANCHAND only. vide`affidavit dated:26.7.2024 sworn before`Notary Mamatha.N.K. Bengaluru

CHANGE OF NAME
I, **PRATIBHA SHREENIVAS NADIGER, PRATHIBHA S NADIGER** and **PRATIBHA DIXIT**, residing at #A-95, 8th Block, Central Silk Board Staff Qtrs, Madiwala, Bengaluru-560068, all above names partain to me only. Vide affidavit dated 22-07-2024 before notary B.M.Chandrashekar, Bengaluru. Henceforth I shall be called as **PRATIBHA SHREENIVAS NADIGER** only

WE, SAJIN THOMAS and Smt. SHRUTHI SAJIN THOMAS residing at C207, Arun Patios, 2nd Floor Kenchenahalli, Yelahanka, Bangalore-560064 are changed our Daughter's name from SERAH SAJIN to SERAH SAJIN THOMAS vide affidavit dated 27/03/2024 sworn before notary S.R.Ravikumar, Bangalore

CHANGE OF NAME
I, **Sunitha G.L,** Residing at No.79, 17th Cross, T.G. Layout, Near Raghavendra Temple, Ittamadu, Banashankari 3rd Stage, Bengaluru-560085, have changed my daughter's name from **CHIRANTHANA A.S** to **SARIKA A.S** vide affidavit dated 18-07-2024, sworn before notary K. Venkateshan Bengaluru. Henceforth she shall be Called **SARIKA A.S** only


CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru







ಪಿಕ್ಚರ್ ಪ್ಯಾಲೇಸ್







ನಿದ್ದೆ ಬಂದಲ್ಲೇ ಬಿದ್ದೆ!!!


ಆಹಹಾ... ಆರಾಮಗಾಳಿ, ಮರದ ತಂಪು, ದಣಿದ ದೇಹ, ಕುಸಿದ ಕಸುವು.. ಸಾಕಿಷ್ಟು ಕಣ್ರೆಪ್ಪೆಗಳು ಪರಸ್ಪರ ಅಪ್ಪಿ, ನಿಮ್ಮನ್ನ ನಿದ್ರಾಲೋಕಕ್ಕೆ ಕರೆದೊಯ್ದು ಕಂಗಳ ಬಾಗಿಲು ಹಾಕುತ್ತವೆ. ಒಮ್ಮೆ ಕಣ್ಮುಚ್ಚಿಕೊಂಡರೆ ಸಾಕು, ನಮ್ಮೊಳಗಿನ ಲೋಕ ಕಣ್ಬಿಡುತ್ತದೆ. ಮನಸು ಸಂಚಾರಿ, ಕನಸು ಸುವಿಹಾರಿ. ದೇಹ ನಿದ್ದೆಗೆ ಜಾರಿದಾಗಲೆಲ್ಲ ಇದೇ ಆಗುವುದು.


ಮನೆಯೆಲ್ಲ ಕತ್ತಲಾಗಿಸಿ, ಹಾಸಿ, ಹೊದ್ದು ಮಲಗುವುದಲ್ಲ, ಭೂಮ್ತಾಯಿ ಮಡಿಲಲ್ಲಿ ಆಕಾಶವನ್ನೇ ಹೊದ್ದು, ತೂಗಾಡುವ ಮರಗಳು ಸೆರಗಿನಂತೆ ಗಾಳಿಹಾಕಲು ತುಯ್ದಾಗಲೆಲ್ಲ.. ಕಣ್ತೂಕಡಿಸುತ್ತವೆ. ಅಲ್ಲಲ್ಲೇ ಪವಡಿಸು ಪರಮಾತ್ಮ ಹಾಡು ಕಿವಿಗೆ ಕೇಳಲಾರಂಭಿಸುತ್ತದೆ. ಬಾಲ್ಯದಿಂದಾಚೆ ಬರದವರು ಕಿವಿತುಂಬ ಲಾಲಿ ಲಾಲಿ ಸುಕುಮಾರ ಕೇಳುತ್ತ, ಬೆಂಚಿಗೆ ತಬ್ಬಿ, ಕಾಲ್ಚಾಗಿ ಮಲಗುತ್ತಾರೆ. ನಿದ್ದೆಯಲ್ಲಿಯೂ ಎಚ್ಚರದಿಂದಿರಬೇಕು ಅಥವಾ ಎಚ್ಚರದಲ್ಲಿಯೇ ಮೈಮರೆತು ಮಲಗಬೇಕೆನ್ನುವವರು ಬ್ಯಾಗನ್ನೇ ಕೈಗೆ ಸುತ್ತಿಕೊಂಡು, ದಿಂಬಾಗಿಸಿ ಮಲಗುತ್ತಾರೆ. ಪಾರ್ಕಿಗೆ ಕರೆತಂದ ಮಗುವ ಆಡಲು ಕೈಬಿಟ್ಟು, ನೆಲಕ್ಕೆ ಬೆನ್ನಾನಿಸಿ, ಕಿಂಡಲ್‌ನಲ್ಲಿಯೇ ಕಲ್ಪನಾಲೋಕಕ್ಕೆ ಹೋಗುವ ಅಮ್ಮ, ಅಮ್ಮನೇ ಜೊತೆಗಿರುವಳೆಂಬ ನಂಬಿಕೆಯಲ್ಲಿ ಮೈಮರೆತು ಕಲ್ಲುಹಾಸಿನ ಮೇಲೆ ಮಲಗುವ ಕೆಲಸ ಹುಡುಕಲು ಬಂದ ಯುವಕರು.. ನಿದ್ದೆ ಬಂದರೆ ಸಾಕೆ? ಮೈಮನಸುಗಳಿಗೆ ಹಿತವೆನಿಸಬೇಕಲ್ಲ.. ಕುಳಿತಲ್ಲಿಯೇ ಕಣ್ಮುಚ್ಚಿದವರೂ ಸಾಕಷ್ಟು ಜನಸಿಗುತ್ತಾರೆ. ಬೆಂಗಳೂರೆಂಬೋ ಊರಿನಲ್ಲಿ ದೇಹ ಬಸವಳಿದಾಗ ಇಂಥ ಸಣ್ಣ ಸಣ್ಣ ನಿದ್ರೆಗಳು ಚೇತೋಹಾರಿಯಾಗಿರುತ್ತವೆ. ಸಂತೆಯಲ್ಲಿ ಸಂತನಂತೆ ನಿದ್ದೆ ಹೋದವರ ಈ ಕ್ಷಣಗಳನ್ನು ಸೆರೆ ಹಿಡಿದವರು

ಪ್ರಜಾವಾಣಿಯ ಫೋಟೊ
ಜರ್ನಲಿಸ್ಟ್ **ಎಂ.ಎಸ್. ಮಂಜುನಾಥ್**










ರಂಗಪಯಣದಿಂದ ರಂಗಪರ್ವ

2009ರಲ್ಲಿ ಮಕ್ಕಳಿಗಾಗಿ ಬೇಸಿಗೆ ಶಿಬಿರ, ನಾಟಕಗಳು, ಹಾಡು ಕುಣಿತದ ಮೂಲಕ ಗ್ರಾಮಾಂತರ ಪ್ರದೇಶದಲ್ಲಿ ಹುಟ್ಟಿಕೊಂಡ ತಂಡವೇ ರಂಗಪಯಣ.

ಕಲೆ, ಸಂಸ್ಕೃತಿಯ ಮೇಲಿನ ಪ್ರೀತಿಯಿಂದ ದಶಕಕ್ಕೂ ಮೀರಿ ರಂಗಭೂಮಿಯಲ್ಲಿ ಹೆಜ್ಜೆ ಹಾಕಿದ ರಂಗಪಯಣ ಗ್ರಾಮಾಂತರ ಪ್ರದೇಶದ ಮಕ್ಕಳನ್ನು ಅದರಲ್ಲಿಯೂ ಪ್ರಮುಖವಾಗಿ ಸರ್ಕಾರಿ ಶಾಲೆಯ ಮಕ್ಕಳನ್ನ ಒಂದೆಡೆ ಸೇರಿ ತಿಂಗಳುಗಳ ಕಾಲ ಅವರಿಗೆ ಅಭಿನಯ, ರಂಗಗೀತೆ, ನೃತ್ಯದಪಟ್ಟುಗಳನ್ನು ಕಲಿಸಲು ಮುಂದಾಯಿತು. ರಂಗದೊಂದಿಗೆ ಶಿಕ್ಷಣ ಎಂಬ ಅಡಿ ಬರಹದೊಂದಿಗೆ ಸಾಕಷ್ಟು ಇಂಥ ಕೆಲಸಗಳನ್ನು ಸಾರ್ಥಕಗೊಳಿಸಿದ ಹೆಗ್ಗಳಿಕೆ ತಂಡಕ್ಕಿದೆ. ಕಲಿಯುವ, ಕಲಿಸುವ ಪ್ರಯತ್ನ ನಿರಂತರವಾಗಿ ಮಾಡಿಕೊಂಡು ಬಂದಿದೆ.

ಪ್ರತಿ ವರ್ಷವೂ ವಿಶೇಷ, ವಿಶಿಷ್ಟ ಹೊಸ ನಾಟಕದೊಂದಿಗೆ ರಂಗ ಮನಸ್ಸುಗಳನ್ನು ಅರಳಿಸುವ ಕೆಲಸ ಮಾಡುತ್ತಿದೆ.

ಶ್ರೀನಿವಾಸ್ ವೈದ್ಯರ ಮನಸುಖರಾಯನ ಮನಸು ಕಥೆಗಳ ಆಧಾರಿತ 'ಶ್ರದ್ಧಾ ನಾಟಕದ ಮೂಲಕ ಹೆಜ್ಜೆಯನಿಟ್ಟ ರಂಗಪಯಣ ತಂಡ ಡಾ.ಎಚ್ .ಎಸ್. ವೆಂಕಟೇಶ ಮೂರ್ತಿ ಅವರ ಮಾದಾರಿ ಮಾದಾಯ್ಯ, ಒಂದಾನೊಂದು ಕಾಲದಲ್ಲಿ, ಪ್ರವೀಣ್ ಸೂಡರ ಗುಲಾಬಿ ಗ್ಯಾಂಗ್ ಮತ್ತು ಗುಲಾಬಿ ಗ್ಯಾಂಗ್ ಭಾಗ 2 , ಸಾರಾ ಅಬೂಬಕ್ಕರ್ ಅವರ 'ಚಂದ್ರಗಿರಿ ತೀರದಲ್ಲಿ' ಡಾ.ಬೇಲೂರು ರಘುನಂದನ್ ಅವರ ' ಗಾರ್ಗಿ' ರಾಜಗುರು ಹೊಸಕೋಟೆ ಅವರ ಭೂಮಿ, ಸೋಮಾಲಿಯ ಕಡಲ್ಗಳ್ಳರು, ಫೂಲನ್ ದೇವಿ, ಬದುಕು ಜಟಕಾ ಬಂಡಿ, ನವರಾತ್ರಿಯ ಕೊನೆಯದಿನ ಹೀಗೆ ಹಲವಾರು ರಂಗಪ್ರಯೋಗಗಳನ್ನು ಸಾದರಪಡಿಸಿದೆ.



ಒಂದಾನೊಂದು ಕಾಲದಲ್ಲಿ ನಾಟಕದ ದೃಶ್ಯ

ಆಗಸ್ಟ್ 3 ಶರೀಫ : ಮಾಲೂರು
4 **ಬಿದ್ದೂರಿನ ಬಿಗ್ ಬೆನ್:**ಸರ್ಜಾಪುರ
5 **ಗುಲಾಬಿ ಗ್ಯಾಂಗ್ 2:** ಕಲಾಗ್ರಾಮ
6 **ಒಂದಾನೊಂದು ಕಾಲದಲ್ಲಿ:** ಕಲಾಗ್ರಾಮ
11 **ಫೂಲನ್ ದೇವಿ:**ಆನೇಕಲ್
12 **ನವರಾತ್ರಿಯ ಕೊನೆ ದಿನ:**ಕಲಾಗ್ರಾಮ
13 **ಫೂಲನ್ ದೇವಿ:** ಕಲಾಗ್ರಾಮ
17 ಮತ್ತು 18 ಗುಲಾಬಿ ಗ್ಯಾಂಗ್: ಮೈಸೂರು
21 **ಚಂದ್ರಗಿರಿ ತೀರದಲ್ಲಿ:** ಕಲಾಗ್ರಾಮ
22 **ಬಿದ್ದೂರಿನ ಬಿಗ್ಬೆನ್:** ರಾಯಲ್ ಕಾಲೇಜ್
23 ಶರೀಫ
24 55 **ನಿಮಿಷದ ಒಂದು ಪ್ರೇಮಕಥೆ:** ಆನೇಕಲ್
27 55 **ನಿಮಿಷದ ಒಂದು ಪ್ರೇಮಕಥೆ:** ಕಲಾಗ್ರಾಮ

ರಂಗಪಯಣ 15 ವರ್ಷದ ಸಾರ್ಥಕ ಸಾಧನೆಯ ಸಂಭ್ರಮದಲ್ಲಿದೆ. ಇದರ ಭಾಗವಾಗಿ ಜುಲೈ 31 ರಿಂದ ಆಗಸ್ಟ್ 27ರವರೆಗೆ ನಿರಂತರವಾಗಿ 15ರಂಗ ಪ್ರಯೋಗಗಳನ್ನು ವಿವಿಧೆಡೆ ಪ್ರದರ್ಶಿಸುವ ಮೂಲಕ ತನ್ನ ಸಂಭ್ರಮವನ್ನು ವಿಶೇಷವಾಗಿ ಆಚರಿಸಲು ಚಿಂತಿಸಿದೆ.

ಜುಲೈ 31 ರಂದು 'ಒಂದಾನೊಂದು ಕಾಲದಲ್ಲಿ; ರಚನೆ: ಗಿರೀಶ್ ಕಾನಾರ್ಡ್. ವಿನ್ಯಾಸ, ನಿರ್ದೇಶನ: ರಾಜಗುರು ಹೊಸಕೋಟೆ.

ನಿರ್ವಹಣೆ: ನಯನ ಜೆ. ಸೂಡ. ಸ್ಥಳ: ರವೀಂದ್ರ ಕಲಾಕ್ಷೇತ್ರ ಜೆ.ಸಿ.ರಸ್ತೆ.ಬೆಂಗಳೂರು. ಸಂಜೆ 7ಕ್ಕೆ.

ರಾಂಗ್ಲರ್ ಕ್ಯಾಂಪೇನ್‌ನಲ್ಲಿ ಹೃತಿಕ್ ರೋಷನ್

ಜಗತ್ತು ಇನ್ನೂ ಪ್ರಸಿದ್ಧ ರಾಂಗ್ಲರ್ ಮಾಡೆಲ್ ಜೀಪುಗಳಿಗೆ ಮಾರುಹೋಗುತ್ತಿದೆ. ಭಾರತದಲ್ಲಿ ನಮ್ಮ ರಾಂಗ್ಲರ್ ಜೀಪುಗಳನ್ನು ಲಾಂಚ್ ಮಾಡಿದಾಗಿನಿಂದ ಅದು ಗುಣಮಟ್ಟ ಕಾಯ್ದುಕೊಂಡಿದ್ದು, ಇದೀಗ ಹೊಸ ಮಾದರಿಯ ಪ್ರಚಾರ ಅಭಿಯಾನದಲ್ಲಿ ಹೃತಿಕ್ ರೋಷನ್ ರಾಯಭಾರಿಯಾಗಿ, ಗಮನ ಸೆಳೆಯುತ್ತಿದ್ದಾರೆ.

ಹೃತಿಕ್ ರೋಷನ್ ಸದಾ ಪರಿಪೂರ್ಣರಾಗಲು ಸದಾ ತುಡಿಯುತ್ತಾರೆ. ಇಂಥದ್ದೇ ಗುಣ ಜೀಪ್ ರಾಂಗ್ಲರ್‌ಗಿದೆ. ಈ ಎರಡೂ ಗುಣಗಳನ್ನು ಗಮನದಲ್ಲಿರಿಸಿಕೊಂಡೇ 'ದಿ ಒನ್ ಅಂಡ್ ಒನ್ಲಿ' ಎಂಬ ಟ್ಯಾಗ್‌ಲೈನ್ ನೀಡಲಾಗಿದೆ. ಕಾರ್ಯಕ್ಷಮತೆ ಮತ್ತು ಪ್ರತಿಷ್ಠೆಗೆ ಖ್ಯಾತಿ ಪಡೆದಿರುವುದರ ದ್ಯೋತಕವಾಗಿ ಪ್ರಚಾರ ಅಭಿಯಾನವನ್ನೂ ರೂಪಿಸಲಾಗಿದೆ..

ಇದು ಕೇವಲ ಎಸ್‌ಯುವಿ ಅಭಿಯಾನ ಅಷ್ಟೇ ಅಲ್ಲ, ಇದು ವಾಹನ ಚಾಲನೆಯನ್ನು ಸಂಭ್ರಮಿಸುವಂತಹದ್ದು. ಕೀರ್ತಿ ಶಿಖರವನ್ನು ಏರಿದಷ್ಟೇ ಮುಖ್ಯವಾದುದು ಅಲ್ಲಿಯೇ ಸ್ಥಾಯಿಯಾಗಿ ಉಳಿಯುವಂಥದ್ದು. ಸದಾ ಶ್ರೇಷ್ಠರಾಗಿ ಉಳಿಯಲು ನಿರಂತರ ಶ್ರಮ ಪಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಉಳಿದೆಲ್ಲ ಸ್ಪರ್ಧಾರ್ಥಿಗಳನ್ನು ಹಿಂದಿಕ್ಕಿ ರಾಂಗ್ಲರ್ ಜೀಪ್‌ಗಳು ಮುಂಚೂಣಿಯಲ್ಲಿರುವುದು ಏಕೆ ಎಂಬುದನ್ನೂ ಈ ಪ್ರಚಾರ ಸ್ಪಷ್ಟವಾಗಿ ತಿಳಿಸಿಕೊಡುತ್ತದೆ ಎಂದು ಕಂಪನಿ ಹೇಳಿಕೊಂಡಿದೆ.



ಮೊದಲ ವಿಜ್ಞಾನಿಗಳ ದುಂಡು ಮೇಜಿನ ಸಮ್ಮೇಳನ



ವಿಜ್ಞಾನಿಗಳ ದುಂಡುಮೇಜಿನ ಸಭೆಯಲ್ಲಿ ಪಾಲ್ಗೊಂಡ ವಿಜ್ಞಾನಿಗಳು: (ಎಡದಿಂದ ಬಲಕ್ಕೆ) ಡಾ.ಮೂರ್ತಿ ಚಾವಲಿ, ಡಾ.ಆರ್‌ಎಂ ಚಿಟ್ನಿಸ್, ಡಾ.ಭರತ ಕಾಲೆ, ಡಾ.ಮಿಲಿಂಡ್ ಪಾಂಡೆ, ಡಾ.ಸಂಜಯ್ ಕಮ್ಟೇಕರ್, ರಾಹುಲ್ ಕಾರಾಡ್, ಡಾ. ಅಶೋಕ್ ಜೋಷಿ, ಡಾ.ಸುಜಾತಾ ಚಕ್ಲೋನೊಬೀಸ್, ಡಾ.ಆರ್‌ಎ.ಮಶೇಲ್ಕರ್, ಡಾ.ವಿಜಯ್ ಭಟ್ಕರ್, ಪ್ರೊ. ವಿಶ್ವನಾಥ.ಡಿ, ಗಣಪತಿ ಯಾದವ್, ಡಾ.ಸುನಿಲ್ ಎಸ್ ಭಾಗ್ವತ್

ಪುಣೆ: ಎಂಐಟಿ ವರ್ಲ್ಡ್ ಪೀಸ್ ವಿಶ್ವವಿದ್ಯಾಲಯದಲ್ಲಿ ಮೊದಲ ರಾಷ್ಟ್ರೀಯ ವಿಜ್ಞಾನಿಗಳ ದುಂಡು ಮೇಜಿನ ಸಮ್ಮೇಳನ ಯಶಸ್ವಿಯಾಯಿತು.

'ವಿಕಸಿತ ಭಾರತ 2047: ವಿಜ್ಞಾನ ಮತ್ತು ತಂತ್ರಜ್ಞಾನ' ಎಂಬ ವಿಷಯಾಧಾರಿತ ಸಮ್ಮೇಳನವು ಜುಲೈ 19 ರಿಂದ ಜುಲೈ 21ರ ತನಕ ನಡೆಯಿತು. ಭಾರತದ ವೈಜ್ಞಾನಿಕ ಭವಿಷ್ಯದ ಕುರಿತು ಮೂರು ದಿನಗಳ ಕಾಲ ವಿಜ್ಞಾನಿಗಳು, ಶಿಕ್ಷಣತಜ್ಞರು, ಸಂಶೋಧಕರು ತಮ್ಮ ವಿಚಾರಗಳನ್ನು ಮಂಡಿಸಿದರು.

ಈ ಸಮ್ಮೇಳನವು ಫಿಸಿಕಲ್ ಸೈನ್ಸ್, ಜೀವ ವಿಜ್ಞಾನ, ಎಂಜಿನಿಯರಿಂಗ್, ತಂತ್ರಜ್ಞಾನಗಳ, ಅಧ್ಯಾತ್ಮ, ಸುಸ್ಥಿರತೆ, ಆರೋಗ್ಯ ಹಾಗೂ ವಿಶ್ವ ಶಾಂತಿಯ ಕುರಿತು ಸಂವಾದಗಳಿದ್ದವು. ನವೀನ ವಿಚಾರಗಳ ಬಗ್ಗೆ ಚರ್ಚೆಯಾಯಿತು. ಯುವಜನತೆಯಲ್ಲಿ ನೂತನ ಯೋಜನೆಗಳನ್ನು ಹುಟ್ಟುಹಾಕುವುದು ಸಮ್ಮೇಳನದ ಉದ್ದೇಶವಾಗಿತ್ತು.

ಅಯೋಧ್ಯೆಯಲ್ಲಿ ನೋನಿ ಗಿಡ ನೆಡುವ ಯೋಜನೆ



ಅಯೋಧ್ಯೆಯಲ್ಲಿ ನೋನಿ ಗಿಡ ನೆಡಲಾಯಿತು. ಅದಮ್ಯ ಚೇತನದ ತೇಜಸ್ವಿನಿ ಅನಂತಕುಮಾರ್, ಅಮೃತ್ ನೋನಿ ಸಂಸ್ಥೆಯ ಶ್ರೀನಿವಾಸಮೂರ್ತಿ, ಅಂಬುಜಾಕ್ಷಿ ಶ್ರೀನಿವಾಸಮೂರ್ತಿ ಇದ್ದರು

ರಾಮ ಹುಟ್ಟಿದ ನಾಡು ಅಯೋಧ್ಯೆಯಲ್ಲಿ ರಾಮೇನಕೊಪ್ಪದ ಅಮೃತ್ ನೋನಿ ಗಿಡವನ್ನು ನೆಡಲಾಯಿತು.

ವ್ಯಾಲ್ಯೂ ಪ್ರಾಡಕ್ಟ್ಸ್ ಪ್ರೈವೇಟ್ ಲಿಮಿಟೆಡ್ (ಅಮೃತ್ ನೋನಿ) ಸಂಸ್ಥೆಯು 'ಆಯುಷ್ ವನ್' ಮತ್ತು 'ಏಕ್ ಪೆಡ್ ಮಾ ಕೆ ನಾಮ್' ಕಾರ್ಯಕ್ರಮದಡಿ ಅಯೋಧ್ಯೆಯ ಮುಖ್ಯ ಅರಣ್ಯಾಧಿಕಾರಿ ಪ್ರಣವ್ ಜೈನ್ ಅವರ ಮಾರ್ಗದರ್ಶನದಲ್ಲಿ ನೋನಿ ಮೊರಿಂಡಾ ಸಿಟ್ರಿಫೋಲಿಯಾ ಗಿಡವನ್ನು ಅಯೋಧ್ಯೆಯ ಟಿಎಲ್‌ಎಂ ಸಂಸ್ಥೆಯ ಆವರಣದಲ್ಲಿ ನೆಡಲಾಯಿತು.

ಅದಮ್ಯ ಚೇತನ ಸಂಸ್ಥೆಯು 'ಅಯೋಧ್ಯೆಯಲ್ಲಿ ಸಸ್ಯಾಗ್ರಹ' ಎಂಬ ಯೋಜನೆ ಹಮ್ಮಿಕೊಂಡಿದ್ದು, ವ್ಯಾಲ್ಯೂ ಪ್ರಾಡಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಈ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದೆ.

ಅಯೋಧ್ಯೆಯ ನಾನಾ ಕಡೆಗಳಲ್ಲಿ ಅಮೃತ್ ನೋನಿ, ಸೀತಾ ಅಶೋಕ ಮತ್ತು ಸಿಂಸಾಪ ಗಿಡಗಳನ್ನು ನೆಡುವ ಇರಾದೆ ಹೊಂದಿದೆ. ಅಮೃತ್ ನೋನಿ ಸಂಸ್ಥೆಯ ಶ್ರೀನಿವಾಸ ಮೂರ್ತಿ, ಅಂಬುಜಾಕ್ಷಿ ಶ್ರೀನಿವಾಸಮೂರ್ತಿ ಉಪಸ್ಥಿತರಿದ್ದರು.

ಜೆಸಿಬಿ ಬದಲಿಗೆ ಪ್ರಯಾಣಿಕ ವಾಹನ ಬಳಕೆ • ₹3.99 ಕೋಟಿ ಅಕ್ರಮ

ಹೂಳೆತ್ತಲು ಆಟೊ, ಸ್ಕೂಟರ್, ಕಾರು

• ಎಸ್ ರವಿಪ್ರಕಾಶ್



ಬೆಂಗಳೂರು: ರಾಜ್ಯದಲ್ಲಿ ಕೆರೆಗಳ ಹೂಳೆತ್ತಲು ಜೆಸಿಬಿ ಯಂತ್ರ, ಲಾರಿಗಳಷ್ಟೇ ಅಲ್ಲ ಕಾರು, ಸ್ಕೂಟರ್, ಸಣ್ಣ ಗಾತ್ರದ ಗೂಡ್ಸ್ ವಾಹನ, ಆಟೊ ರಿಕ್ಷಾಗಳನ್ನೂ ಬಳಸಲಾಗಿದೆ. ಅವುಗಳ ಹೆಸರಿಗೆ ಕೋಟಿಗಟ್ಟಲೆ ಬಿಲ್ ಕೂಡ ಪಾವತಿಯಾಗಿದೆ.

ಕರ್ನಾಟಕ ಕೆರೆ ಸಂರಕ್ಷಣಾ ಪ್ರಾಧಿಕಾರದ ಮೂಲಕ 20 ಜಿಲ್ಲೆಗಳಲ್ಲಿ ನಡೆದ ಕೆರೆಗಳ ಹೂಳು ತೆಗೆಯುವ ಕಾಮಗಾರಿಗಳಲ್ಲಿ ಪ್ರಯಾಣಿಕ ವಾಹನಗಳು, ಸಣ್ಣ ಗಾತ್ರದ ಸರಕು ಸಾಗಣೆ ವಾಹನಗಳ ನೋಂದಣಿ ಸಂಖ್ಯೆ ದಾಖಲಿಸಿ ₹3.99 ಕೋಟಿ ಬಿಲ್ ಪಾವತಿಸಿರುವುದು ಮಹಾ ಲೇಖಪಾಲರು (ಸಿಎಜಿ) ನಡೆಸಿರುವ ಲೆಕ್ಕಪರಿಶೋಧನೆಯಲ್ಲಿ ಬಹಿರಂಗವಾಗಿದೆ.

'ಕೆರೆ ಸಂರಕ್ಷಣಾ ಪ್ರಾಧಿಕಾರದ ವತಿಯಿಂದ 2020–21ರಿಂದ 2022–23ರ ನಡುವೆ ರಾಜ್ಯದ ಸುಮಾರು 173 ಕೆರೆಗಳ ಹೂಳು ತೆಗೆಯಲಾಗಿದೆ. ಹೂಳು ತೆಗೆದ ಕಾಮಗಾರಿಗಳಿಗೆ ಸಂಬಂಧಿಸಿದ ಕಡತಗಳನ್ನು ಪರಿಶೀಲಿಸಿದಾಗ, 174 ಕೆರೆಗಳ ಪೈಕಿ 108 ಕೆರೆಗಳ ಕಾಮಗಾರಿಗಳ ಬಿಲ್ ಪಾವತಿಯಲ್ಲಿ ಲೋಪಗಳಿರುವುದು ಕಂಡು ಬಂದಿದೆ' ಎಂಬ ಉಲ್ಲೇಖ ಲೆಕ್ಕಪರಿಶೋಧನಾ ವರದಿಯಲ್ಲಿದೆ.

108 ಕೆರೆಗಳಲ್ಲಿ ಹೂಳನ್ನು ತೆಗೆಯಲು 230 ಜೆಸಿಬಿ, ಹಿಟಾಚಿ ಎಕ್ಸ್‌ವೇಟರ್ ಬಳಸಿದ್ದು, 38,197 ಗಂಟೆಗಳ ಕೆಲಸ ಮಾಡಲಾಗಿದೆ ಎಂದು ಬಿಲ್ ಸೃಜಿಸಲಾಗಿದೆ. ಇದಕ್ಕಾಗಿ ₹3.19 ಕೋಟಿ ವೆಚ್ಚವಾಗಿದೆ ಆಗಿದೆ. ಹೂಳು ತೆಗೆಯಲು ಬಳಸಿರುವ 191 ಜೆಸಿಬಿಗಳ ಮಾಲೀಕತ್ವದ ದಾಖಲೆ, ಗುತ್ತಿಗೆ ಕರಾರು, ನೋಂದಣಿ ಪ್ರಮಾಣಪತ್ರದ ಪುಸ್ತಕಗಳ ದಾಖಲೆಗಳನ್ನು ಸಲ್ಲಿಸಿಲ್ಲ. ಲಾಗ್‌ಬುಕ್‌ನಲ್ಲಿ ನಮೂದಿಸಿರುವ ವಾಹನಗಳ ನೋಂದಣಿ ಸಂಖ್ಯೆಯನ್ನು ಆರ್‌ಟಿಒ ದಾಖಲೆಗಳಲ್ಲಿ ತಾಳೆ ಹಾಕಿದಾಗ ಅವು ಪ್ರಯಾಣಿಕ ವಾಹನಗಳಾದ ಕಾರು, ಸ್ಕೂಟರ್, ಮಾರುತಿ ವ್ಯಾನ್, ರಿಟ್ಜ್ ಕಾರು, ಆಟೊ ರಿಕ್ಷಾ ಮುಂತಾದವು ಎಂಬುದು ಖಚಿತವಾಗಿದೆ. ಈ 191 ವಾಹನಗಳಿಗೆ ಪಾವತಿಸಿದ ಬಿಲ್ ಮೊತ್ತವೇ ₹2.62 ಕೋಟಿ ಎಂದು ವರದಿ ವಿವರಿಸಿದೆ.

ಒಂದೇ ನೋಂದಣಿ ಸಂಖ್ಯೆಯ ಮೂರು ಜೆಸಿಬಿಗಳು ಒಂದೇ ದಿನ ಒಂದೇ ಸಮಯದಲ್ಲಿ ಬೇರೆ ಬೇರೆ ಕೆರೆಗಳಲ್ಲಿ ಕೆಲಸ ಮಾಡಿವೆ ಎಂದು ಉಲ್ಲೇಖಿಸಿ ಬಿಲ್ ಸೃಜಿಸಿರುವುದನ್ನೂ ಲೆಕ್ಕಪರಿಶೋಧಕರು ಪತ್ತೆ ಮಾಡಿದ್ದಾರೆ. ಇದು ಪ್ರಾಯೋಗಿಕವಾಗಿ ಅಸಾಧ್ಯ ಎಂದೂ ವರದಿಯಲ್ಲಿ ಹೇಳಿದ್ದಾರೆ.

ಅರ್ಹ ಮುಖ್ಯಸ್ಥರಿಗಾಗಿ ಒತ್ತಾಯ

ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದಲ್ಲಿ ತಾಂತ್ರಿಕ ತಜ್ಞ ಡಿ.ಜಿ.ವೆಂಕಟರಾಮಯ್ಯ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರಿಗೆ ಐದು ಜಿಲ್ಲೆಗಳ ಉಸ್ತುವಾರಿಯನ್ನೂ ನೀಡಲಾಗಿದೆ. ಪ್ರಾಧಿಕಾರಕ್ಕೆ 50 ಹುದ್ದೆಗಳು ಮಂಜೂರಾಗಿವೆ. ಅದರಲ್ಲಿ ತಾಂತ್ರಿಕ ತಜ್ಞರ ಹುದ್ದೆಗಳಿವೆ. ಆದರೆ ಸರ್ಕಾರ ಅರ್ಹರನ್ನು ನೇಮಿಸಲು ಆಸಕ್ತಿ ತೋರಿಸುತ್ತಿಲ್ಲ ಎಂದು ಪ್ರಾಧಿಕಾರದ ಮೂಲಗಳು ತಿಳಿಸಿವೆ.

'ಕಣ್ತಪ್ಪಿನಿಂದ ಆದ ದೋಷ'

'ಕೆರೆ ಬಳಕೆದಾರರ ಗುಂಪುಗಳ (ಟಿಯುಜಿ) ಕಣ್ತಪ್ಪಿನಿಂದ ಈ ರೀತಿ ಪ್ರಯಾಣಿಕ ವಾಹನಗಳ ನೋಂದಣಿ ಸಂಖ್ಯೆಗಳನ್ನು ದಾಖಲಿಸಿದ್ದು, ಇದರಿಂದ ಲೋಪವಾಗಿದೆ' ಎಂದು ತಾಂತ್ರಿಕ ತಜ್ಞ ಡಿ.ಜಿ.ವೆಂಕಟರಾಮಯ್ಯ 'ಪ್ರಜಾವಾಣಿ'ಗೆ ತಿಳಿಸಿದರು.

'ನೈಜ ಇತಿಹಾಸ ಮುಚ್ಚಿಡಲಾಗಿದೆ'

'ಶೋಷಿತ ಸಮುದಾಯಗಳ ಸಮಾವೇಶ'ದಲ್ಲಿ ಶ್ರೀನಿವಾಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಪುನರುಜ್ಜೀವನ ಎಂದು ಸಮಾಜ ಸುಧಾರಕರ ಇತಿಹಾಸವನ್ನು ಶಾಲೆಗಳಲ್ಲಿ ಕಲಿಸಲಾಗುತ್ತಿದೆ. ಆದರೆ, ನೈಜ ಪುನರುಜ್ಜೀವನವನ್ನು ಮುಚ್ಚಿಡಲಾಗಿದೆ ಎಂದು ಪ್ರಾಧ್ಯಾಪಕ ಶ್ರೀನಿವಾಸ್ ತಿಳಿಸಿದರು.

ದಸಂಸ–50, ಛತ್ರಪತಿ ಶಾಹು ಮಹಾರಾಜರ 150ನೇ ಜನ್ಮದಿನದ ಅಂಗವಾಗಿ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಆರ್‌ಪಿಐ) ಮತ್ತು ದಲಿತ ಸಂಘರ್ಷ ಸಮಿತಿ (ಭೀಮವಾದ) ಶುಕ್ರವಾರ ಹಮ್ಮಿಕೊಂಡಿದ್ದ 'ಶೋಷಿತ ಸಮುದಾಯಗಳ ಏಕತಾ ಸಮಾವೇಶ'ದಲ್ಲಿ ಅವರು ಮಾತನಾಡಿದರು.

ರಾಜಾರಾಮ್ ಮೋಹನ್ ರಾಯ್ ಸ್ಥಾಪಿಸಿದ ಬ್ರಹ್ಮ ಸಮಾಜ, ದಯಾನಂದ ಸರಸ್ವತಿ ಸ್ಥಾಪಿಸಿದ ಆರ್ಯ ಸಮಾಜ, ಆತ್ಮರಾಂ ಪಾಂಡುರಂಗ ಸ್ಥಾಪಿಸಿದ ಪ್ರಾರ್ಥನಾ ಸಮಾಜಗಳ ಬಗ್ಗೆ, ಅವರು ಮಾಡಿದ ಸುಧಾರಣೆಗಳ ಬಗ್ಗೆ ಮಾಹಿತಿ ಸಿಗುತ್ತದೆ. ಇವರೆಲ್ಲ ಬ್ರಾಹ್ಮಣ ಸಮಾಜದಲ್ಲಿದ್ದ ಕೆಲವು ಅನಿಷ್ಟಗಳ ವಿರುದ್ಧ ಹೋರಾಟ ಮಾಡಿದವರು. ನಿಜವಾದ ಪುನರುಜ್ಜೀವನವು ಜ್ಯೋತಿ ಬಾ ಫುಲೆ–ಸಾವಿತ್ರಿ ಬಾಯಿ ಫುಲೆ ಮಾಡಿದ ಶಿಕ್ಷಣ ಕ್ರಾಂತಿ, 'ಸತ್ಯ ಶೋಧಕ ಸಮಾಜ' ಮಾಡಿದ ಸುಧಾರಣೆಗಳಿಂದ ಆರಂಭವಾಗಿತ್ತು ಎಂದು ತಿಳಿಸಿದರು.

ಶಾಹು ಮಹಾರಾಜರು ಶೋಷಿತರಿಗೆ ಶೇ 50ರಷ್ಟು ಮೀಸಲಾತಿ ನೀಡಿ, 2000 ವರ್ಷಗಳಿಂದ ಪ್ರಾತಿನಿಧ್ಯ ಇಲ್ಲದ ವರ್ಗಗಳಿಗೂ ಅದು ದೊರೆಯುವಂತೆ ಮಾಡಿದರು ಎಂದು ವಿವರಿಸಿದರು.

ಆರ್‌ಪಿಐ, ಡಿಎಸ್‌ಎಸ್ (ಭೀಮವಾದ) ರಾಜ್ಯಾಧ್ಯಕ್ಷ ಆರ್. ಮೋಹನರಾಜು ಮಾತನಾಡಿ, 'ಅಂಬೇಡ್ಕರ್ ಎಂಬ ಪ್ರತಿಭೆಯನ್ನು ಗುರುತಿಸಿ ಬೆಳೆಸಿದ್ದರಿಂದ ಸಮಾನತೆಯ ಆಧಾರದಲ್ಲಿ ಸಂವಿಧಾನವನ್ನು ರಚಿಸಲು, ಶೋಷಿತರ ಧ್ವನಿಯಾಗಲು ಸಾಧ್ಯವಾಯಿತು. ಅಂಬೇಡ್ಕರ್ ಅವರ ಚಿಂತನೆಯ ಹಿಂದೆ ಸಮ ಸಮಾಜಕ್ಕಾಗಿ ಶ್ರಮಿಸಿದ ಬುದ್ಧ, ಬಾ ಫುಲೆ, ಶಾಹು ಮಹಾರಾಜರಂಥ ಅನೇಕರ ಹೋರಾಟಗಳಿವೆ' ಎಂದರು.



'ಶೋಷಿತ ಸಮುದಾಯಗಳ ಏಕತಾ ಸಮಾವೇಶ'ದಲ್ಲಿ ಆರ್‌ಪಿಐ, ರಾಜ್ಯ ಡಿಎಸ್‌ಎಸ್ (ಭೀಮವಾದ) ಅಧ್ಯಕ್ಷ ಆರ್. ಮೋಹನರಾಜು ಅವರು ಛತ್ರಪತಿ ಶಾಹು ಮಹಾರಾಜ ಹಾಗೂ ಡಾ. ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ರಾಜ್ಯ ಉಪಾಧ್ಯಕ್ಷ ರಾಜು .ಎಂ ತಳವಾರ್, ಶೇಖರ್ ಹಾವಂಜೆ, ಸಂಘಟನಾ ಕಾರ್ಯದರ್ಶಿ ಕೆ. ಎಂ. ಶ್ರೀನಿವಾಸ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ



ಪರದಾಟ... ಕೆ.ಆರ್. ಮಾರುಕಟ್ಟೆಗೆ ಹೋಗುವ ರಸ್ತೆಯಲ್ಲಿ ಮಳೆ ನೀರು ಮತ್ತು ಚರಂಡಿ ನೀರು ನಿಂತಿರುವುದರಿಂದ ಪಾದಚಾರಿಗಳು ಪರದಾಡುವಂತಾಗಿದೆ – ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಆ.5ಕ್ಕೆ 'ಮುಖ್ಯಮಂತ್ರಿ ಮನೆ ಚಲೊ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೈಕ್ಷಣಿಕ ಸಹಾಯಧನ ಕಡಿತ ಮಾಡಿರುವ ಆದೇಶ ಹಿಂಪಡೆಯುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕರ ಸಂಘಗಳ ಸಮನ್ವಯ ಸಮಿತಿಯು ಆಗಸ್ಟ್ 5ರಂದು 'ಮುಖ್ಯಮಂತ್ರಿ ಮನೆ ಚಲೊ' ಹಮ್ಮಿಕೊಂಡಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ (ಸಿಐಟಿಯು) ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ್, 'ಈ ಹೋರಾಟದಲ್ಲಿ ಹತ್ತು ಸಾವಿರಕ್ಕೂ ಅಧಿಕ ಮಂದಿ ಭಾಗವಹಿಸುವ ನಿರೀಕ್ಷೆಯಿದೆ. ಹೈಕೋರ್ಟ್ ಆದೇಶದಂತೆ ಶೈಕ್ಷಣಿಕ ಧನಸಹಾಯ ಬಿಡುಗಡೆ ಮಾಡಬೇಕು. ರಾಜ್ಯದಲ್ಲಿ 2007ರಿಂದ ಅಸ್ತಿತ್ವದಲ್ಲಿ ಇರುವ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿಯು ಕಾರ್ಮಿಕರಿಗಾಗಿ 19 ಸೌಲಭ್ಯಗಳನ್ನು ಘೋಷಿಸಿದ್ದು, ಕೇವಲ 11 ಮಾತ್ರವೇ ಜಾರಿಯಲ್ಲಿದೆ' ಎಂದರು.

'ನೈಜ ಕಾರ್ಮಿಕರ ನೋಂದಣಿ ಮತ್ತು ಮರು ನೋಂದಣಿ ಅರ್ಜಿಗಳನ್ನು ಸಕಾರಣವಿಲ್ಲದೇ ತಿರಸ್ಕರಿಸುವುದಕ್ಕೆ ಕಡಿವಾಣ ಹಾಕಬೇಕು. ವಿಳಂಬ ಮಾಡದೇ ಕಾರ್ಡ್ ವಿತರಿಸಬೇಕು. ತ್ವರಿತವಾಗಿ ಅರ್ಜಿ ವಿಲೇವಾರಿ ಮಾಡಬೇಕು ಎಂದು ಆಗ್ರಹಿಸಿದರು.

ನಿಧನ ವಾರ್ತೆ

ರೇಣುಕಾ ಕುರ್ತಕೋಟಿ



ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರ ಅಕ್ಕ ರೇಣುಕಾ ಕುರ್ತಕೋಟಿ (83) ಅವರು ಶುಕ್ರವಾರ ನಿಧನರಾಗಿದ್ದಾರೆ.

ಅವರು ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಪತಿ ಲಿಂಗರಾಜ್ ಕುರ್ತಕೋಟಿ, ನಾಲ್ವರು ಹೆಣ್ಣುಮಕ್ಕಳು ಹಾಗೂ ಒಬ್ಬ ಪುತ್ರ, ಮಹೇಶ ಜೋಶಿ ಸೇರಿದಂತೆ ಮೂವರು ಸಹೋದರರು ಮತ್ತು ಓರ್ವ ಸಹೋದರಿ ಇದ್ದಾರೆ.

ರೇಣುಕಾ ಅವರು ಕೆನರಾ ಬ್ಯಾಂಕ್‌ನಲ್ಲಿ ವಲಯ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿದ್ದರು.

ಡಾ.ದಯಾನಂದ ಬಲ್ಲಾಳ್



ಕುಂದಾಪುರ: ಬೆಂಗಳೂರಿನ ಸಂಜಯ್ ಗಾಂಧಿ ಆಸ್ಪತ್ರೆಯ ನಿವೃತ್ತ ವೈದ್ಯಕೀಯ ನಿರ್ದೇಶಕ ಹೆಬ್ರಿ ಬೀಡು ಡಾ.ದಯಾನಂದ ಬಲ್ಲಾಳ್ (87) ಅನಾರೋಗ್ಯದಿಂದ ಬೆಂಗಳೂರಿನ ಆಸ್ಪತ್ರೆಯಲ್ಲಿ ಗುರುವಾರ ನಿಧನರಾದರು.

ಮದ್ರಾಸ್ ರಾಜ್ಯದ ರಣಜಿ ತಂಡವನ್ನು ಪ್ರತಿನಿಧಿಸಿದ್ದ ಅವರು, ಕರ್ನಾಟಕ ರಾಜ್ಯ ಸರ್ಕಾರಿ ಅಧಿಕಾರಿಗಳ ತಂಡದಲ್ಲಿ ಅಂತರರಾಷ್ಟ್ರೀಯ ಟೆನಿಸ್ ಆಟಗಾರರಾಗಿ ಗುರುತಿಸಿಕೊಂಡಿದ್ದರು. ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾಗಿಯೂ ಸೇವೆ ಸಲ್ಲಿಸಿದ್ದರು.

ಅವರಿಗೆ ಪುತ್ರರಾದ, ಬೆಂಗಳೂರಿನ ಸಂಜಯ್ ಗಾಂಧಿ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ.ಮದನ್ ಬಲ್ಲಾಳ್, ಅಮೆರಿಕಾದ ಫೋರ್ಡ್ ಕಾರ್ ಕಂಪನಿಯಲ್ಲಿ ಉನ್ನತ ಹುದ್ದೆಯಲ್ಲಿರುವ ರಾಮ್ ಬಲ್ಲಾಳ್, ಪುತ್ರಿ ಶಾಂತಿ ಪಿ. ಶೆಟ್ಟಿ ಹಾಗೂ ಪತ್ನಿ ಉಷಾ ಡಿ. ಬಲ್ಲಾಳ್ ಇದ್ದಾರೆ. ಬೆಂಗಳೂರಿನ ಹೆಬ್ಬಾಳದ ಹಿಂದೂ ರುದ್ರಭೂಮಿಯ ಚಿತಾಗಾರದಲ್ಲಿ ಶುಕ್ರವಾರ ಮೃತರ ಅಂತ್ಯಕ್ರಿಯೆ ನೆರವೇರಿತು.

ಸೆರೆಲ್ಯಾಕ್ ಪ್ಯಾಕೆಟ್‌ಗಳಲ್ಲಿ ಡ್ರಗ್ಸ್ ಸಾಗಣೆ

ಆರೋಪಿ, ನೈಜೀರಿಯಾ ಪ್ರಜೆ ಬಂಧಿಸಿದ ಸಿಸಿಬಿ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳು ಸೇವಿಸುವ ಸೆರೆಲ್ಯಾಕ್ ಪ್ಯಾಕೆಟ್‌ಗಳಲ್ಲಿ ಡ್ರಗ್ಸ್ ಇಟ್ಟು ಮುಂಬೈನಿಂದ ಬೆಂಗಳೂರಿಗೆ ತಂದು ಡ್ರಗ್ಸ್ ಪೆಡ್ಲರ್‌ಗಳಿಗೆ ಪೂರೈಸುತ್ತಿದ್ದ ವಿದೇಶಿ ಪ್ರಜೆಯನ್ನು ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ನೈಜೀರಿಯಾ ದೇಶದ ಚುಕ್ಕುದ್ದೀನ್ ಬಂಧಿತ ಆರೋಪಿ. ಈತನಿಂದ ₹6 ಕೋಟಿ ಮೌಲ್ಯದ ನಾಲ್ಕು ಕೆ.ಜಿ. ತೂಕದ ಎಂಡಿಎಂಎ ಕ್ರಿಸ್ಟೆಲ್, ಎರಡು ಮೊಬೈಲ್, ಒಂದು ಎಲೆಕ್ಟ್ರಾನಿಕ್ ತೂಕದ ಯಂತ್ರ ಸೇರಿದಂತೆ ಹಲವು ವಸ್ತುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ವ್ಯಾಪಾರ ವೀಸಾದ ಅಡಿ ಆರೋಪಿ ಭಾರತಕ್ಕೆ ಬಂದಿದ್ದ. ತಮಿಳುನಾಡಿನ ಕೊಯಮತ್ತೂರಿನಲ್ಲಿ ನೆಲಸಿ, ಬಟ್ಟೆ ವ್ಯಾಪಾರ ನಡೆಸುತ್ತಿದ್ದ. ವ್ಯಾಪಾರದಲ್ಲಿ ನಷ್ಟವಾದ ಮೇಲೆ ಬೆಂಗಳೂರಿಗೆ ಬಂದಿದ್ದ ಆರೋಪಿ, ತನ್ನ ದೇಶದ ಪ್ರಜೆಗಳನ್ನು ಪರಿಚಯಿಸಿ ಕೊಂಡಿದ್ದ. ಅವರ ಮೂಲಕ ಡ್ರಗ್ಸ್ ಸಾಗಾಟ ಹಾಗೂ ಪೂರೈಕೆಯ ಬಗೆಯನ್ನು ತಿಳಿದುಕೊಂಡಿದ್ದ. ಆರ್ಥಿಕ ಸಂಕಷ್ಟದಲ್ಲಿದ್ದ ಆರೋಪಿಯು ಅಕ್ರಮವಾಗಿ ಹಣ ಸಂಪಾದನೆ ಮಾಡಲು ಅಡ್ಡದಾರಿ ಹಿಡಿದಿದ್ದ. ಮುಂಬೈನಲ್ಲಿರುವ ಸ್ನೇಹಿತರ ಮೂಲಕ ಸೆರೆಲ್ಯಾಕ್ ಸೇರಿದಂತೆ ವಿವಿಧ ಪ್ಯಾಕೆಟ್‌ಗಳಲ್ಲಿ ಎಂಡಿಎಂಎ ಇಟ್ಟು ಬೆಂಗಳೂರಿಗೆ ಡ್ರಗ್ಸ್ ತರಿಸಿಕೊಳ್ಳುತ್ತಿದ್ದ. ನಂತರ, ನಗರದಲ್ಲಿ ಒಂದು ಗ್ರಾಂಗೆ



ಚುಕ್ಕುದ್ದೀನ್

₹10 ಸಾವಿರದಿಂದ ₹15 ಸಾವಿರ ದರಕ್ಕೆ ಮಾರಾಟ ಮಾಡಿ ಹಣ ಸಂಪಾದನೆ ಮಾಡುತ್ತಿದ್ದ' ಎಂದು ಪೊಲೀಸರು ಹೇಳಿದರು.

ಇನ್ನೊಂದು ಪ್ರಕರಣದಲ್ಲಿ ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣಾ ವ್ಯಾಪ್ತಿಯ ಬೆಟ್ಟದಾಸನಪುರ ಮನೆಯಲ್ಲಿ ಆರೋಪಿಯಿಂದ ನಾಲ್ಕು ಕೆ.ಜಿಯಷ್ಟು ಡ್ರಗ್ಸ್ ಅನ್ನು ಜಪ್ತಿ ಮಾಡಲಾಗಿದೆ.

ಮನೆಯಲ್ಲಿ ಗೋಧಿ ಹಿಟ್ಟು ಒಣಗಿಸುವ ರೀತಿಯಲ್ಲಿ ಡ್ರಗ್ಸ್ ಅನ್ನು ಆರೋಪಿ ಒಣಗಿಸಲು ಹಾಕಿದ್ದ. ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಡ್ರಗ್ಸ್ ಪೆಡ್ಲರ್ ಬಂಧನ: ಮತ್ತೊಂದು ಪ್ರಕರಣದಲ್ಲಿ ಡ್ರಗ್ಸ್ ಮಾರಾಟ ದಂಧೆಯಲ್ಲಿ ತೊಡಗಿದ್ದ ಊಬರ್ ಕ್ಯಾಬ್ ಚಾಲಕನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಕೇರಳದ ಆಕಾಶ್(26) ಬಂಧಿತ. ಈತನಿಂದ ಸುಮಾರು ₹1.50 ಕೋಟಿ ಮೌಲ್ಯದ 746 ಗ್ರಾಂ ಕೊಕೇನ್ ಮಾದಕ ವಸ್ತು ಜಪ್ತಿ ಮಾಡಲಾಗಿದೆ.

ಹಲವು ವರ್ಷಗಳಿಂದ ಊಬರ್ ಕ್ಯಾಬ್ ಓಡಿಸಿಕೊಂಡಿದ್ದ. ಸುಲಭವಾಗಿ ಹಣ ಗಳಿಸಲು ಡ್ರಗ್ಸ್ ಮಾರಾಟ ದಂಧೆಯಲ್ಲಿ ತೊಡಗಿದ್ದ ಎಂದು ಎಂದು ಪೊಲೀಸರು ಹೇಳಿದರು.

₹28 ಲಕ್ಷ ಮೌಲ್ಯದ ಆಭರಣ ವಶ

ಬೆಂಗಳೂರು: ಮನೆಯ ಕಿಟಕಿ ಗ್ರಿಲ್ ತುಂಡರಿಸಿ ಚಿನ್ನಾಭರಣಗಳನ್ನು ಕಳ್ಳತನ ಮಾಡಿದ್ದ ಇಬ್ಬರನ್ನು ಎಚ್.ಎಸ್.ಆರ್. ಲೇಔಟ್ ಪೊಲೀಸರು ಬಂಧಿಸಿ, ₹28 ಲಕ್ಷ ಮೌಲ್ಯದ ಆಭರಣ, ದ್ವಿಚಕ್ರ ವಾಹನ ವಶಪಡಿಸಿಕೊಂಡಿದ್ದಾರೆ.

ಎಚ್‌ಎಸ್‌ಆರ್ ಲೇಔಟ್‌ನ ಒಂದನೇ ಸೆಕ್ಟರ್‌ನ ನಿವಾಸಿಯೊಬ್ಬರು ಮನೆಗೆ ಬೀಗ ಹಾಕಿ ಪ್ರವಾಸ ಹೋಗಿದ್ದರು. ಮರಳಿದಾಗ ಚಿನ್ನಾಭರಣ ಕಳವು ಆಗಿದ್ದು, ಗೊತ್ತಾಗಿ ದೂರು ನೀಡಿದ್ದರು. ಈ ಸಂಬಂಧ ಅಕ್ಬರ್ ನಗರದ ದಿನಕರನ್ ಹಾಗೂ ಪುದುಚೇರಿಯ ರಘುನಾಮನ್ ರನ್ನು ಪುದುಚೇರಿಯಲ್ಲಿ ಬಂಧಿಸಿದರು.

ಆರೋಪಿಗಳ ಮನೆಯಿಂದ 188 ಗ್ರಾಂ ಚಿನ್ನ, 1 ಕೆ.ಜಿ. ಬೆಳ್ಳಿ ವಸ್ತು ಹಾಗೂ ಆಭರಣ ಅಂಗಡಿಗಳಲ್ಲಿ ಮಾರಾಟ ಮಾಡಿದ್ದ 200 ಗ್ರಾಂ ಚಿನ್ನಾಭರಣಗಳನ್ನು ವಶಕ್ಕೆ ಪಡೆಯಲಾಗಿದೆ. ಒಟ್ಟು 388 ಗ್ರಾಂ ತೂಕದ ಚಿನ್ನಾಭರಣ, 1 ಕೆ.ಜಿ. ಬೆಳ್ಳಿಯ ವಸ್ತುಗಳು ಮತ್ತು ಕೃತ್ಯಕ್ಕೆ ಬಳಸಿದ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ. ಇವರ ಬಂಧನದಿಂದ ಮೂರು ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ.

ಚಾಲಕನಿಗೆ ಚಾಕು ತೋರಿಸಿ ಬೆದರಿಕೆ: ಮೂವರ ಬಂಧನ



ಕಾರಿಗೆ ಕಾಲಿನಿಂದ ಒದ್ದಿದ್ದ ದೃಶ್ಯ.

ಬೆಂಗಳೂರು: ಸುದ್ದಗುಂಟೆಪಾಳ್ಯ ಪೊಲೀಸ್ ಠಾಣಾ ವ್ಯಾಪ್ತಿಯ ಡಬಲ್ ಡೆಕರ್ ಮೇಲ್ಸೇತುವೆಯಲ್ಲಿ ದ್ವಿಚಕ್ರ ವಾಹನಗಳಲ್ಲಿ ವ್ಹೀಲಿ ನಡೆಸಿ ಆ ರಸ್ತೆಯಲ್ಲಿ ಚಲಿಸುತ್ತಿದ್ದ ಕಾರಿನ ಚಾಲಕನಿಗೆ ಚಾಕು ತೋರಿಸಿ ಬೆದರಿಸಿದ್ದ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಮಡಿವಾಳದ ಸಿದ್ಧಾರ್ಥ ಕಾಲೊನಿಯ ಸಂಜಯ್ ಹಾಗೂ ಇಬ್ಬರು ಬಾಲಕರನ್ನು ಬಂಧಿಸಲಾಗಿದೆ. ಉಳಿದ ಆರೋಪಿಗಳಿಗೆ ಪತ್ತೆ ಕಾರ್ಯ ನಡೆದಿದೆ ಎಂದು ಪೊಲೀಸರು ಹೇಳಿದರು.

'ಜುಲೈ 24ರಂದು ಸಂಜೆ 6 ಗಂಟೆ ಸುಮಾರಿಗೆ ಮೇಲ್ಸೇತುವೆಯಲ್ಲಿ ಕಾರೊಂದು ಚಲಿಸುತ್ತಿತ್ತು. ಆ ಕಾರಿನ ಹಿಂದೆ ಐವರು ವ್ಹೀಲಿ ಮಾಡಿಕೊಂಡು ಬರುತ್ತಿದ್ದರು. ಆ ಕಾರಿನ ಚಾಲಕನಿಗೆ ಚಾಕು ತೋರಿಸಿ ಬೆದರಿಸಿದ ಆರೋಪಿಗಳು, ಕಾರಿಗೆ ಒದ್ದಿದ್ದಾರೆ. ಹಿಂದೆ ಮತ್ತೊಂದು ವಾಹನದಲ್ಲಿ ಬರುತ್ತಿದ್ದ ವ್ಯಕ್ತಿಯೊಬ್ಬರು ಈ ದೃಶ್ಯವನ್ನು ತಮ್ಮ ಮೊಬೈಲ್‌ನಲ್ಲಿ ಚಿತ್ರೀಕರಿಸಿದ್ದರು. ಅದನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡಿದ್ದರು. ಆ ದೃಶ್ಯ ಆಧರಿಸಿ ಆರೋಪಿಗಳನ್ನು ಪತ್ತೆಹಚ್ಚಿ ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು. ವ್ಹೀಲಿ ನಡೆಸುವಾಗ ಕಾರು ಅಡ್ಡಬಂತು ಎನ್ನುವ ಕಾರಣಕ್ಕೆ ಆರೋಪಿಗಳು ಬೆದರಿಕೆ ಹಾಕಿದ್ದಾರೆ ಎನ್ನಲಾಗಿದೆ.

'ಸೆಂಚುರಿ ಕಳ್ಳ'ನ ಬಂಧನ– ಕೋಟಿ ಬೆಲೆ ಆಭರಣ ವಶ

ಬೆಂಗಳೂರು: ನಗರದ ಹಲವೆಡೆ ಮನೆಗಳಿಗೆ ನುಗ್ಗಿ ಚಿನ್ನಾಭರಣ ಕಳವು ಮಾಡಿ ಆ ಆಭರಣಗಳನ್ನು ಹೊರ ರಾಜ್ಯಗಳ ಚಿನ್ನಾಭರಣ ಅಂಗಡಿಗಳಿಗೆ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಕೋಣನಕೊಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೋಣನಕುಂಟೆಯ ಇಮ್ರಾನ್ ಅಲಿಯಾಸ್ 'ಚೋರ್' ಇಮ್ರಾನ್ ಬಂಧಿತ. ಆತನಿಂದ ₹1 ಕೋಟಿ ಮೌಲ್ಯದ ಚಿನ್ನಾಭರಣ, ಬೆಳ್ಳಿ ಸಾಮಗ್ರಿ ಹಾಗೂ ಕೃತ್ಯಕ್ಕೆ ಬಳಸಿದ್ದ ಕಾರನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಬಂಧನದಿಂದ ಒಟ್ಟು 26 ಕಳವು ಪ್ರಕರಣಗಳು ಪತ್ತೆಯಾಗಿವೆ. ಆರೋಪಿಯು ವೃತ್ತಿಪರ ಕಳ್ಳನಾಗಿದ್ದು, ನಗರದ ವಿವಿಧೆಡೆ ಸುತ್ತಾಡಿ ಮನೆಗಳ್ಳತನ ಮಾಡುತ್ತಿದ್ದ. ನಂತರ, ಕದ್ದ ಚಿನ್ನಾಭರಣಗಳನ್ನು ಮೈಸೂರು, ಹೊರ ರಾಜ್ಯದಲ್ಲಿ ಮಾರಾಟ ಮಾಡುತ್ತಿದ್ದ. ಕೆಲವು ಆಭರಣಗಳನ್ನು ಗಿರವಿ ಇಡುತ್ತಿದ್ದ ಎಂದು ಪೊಲೀಸರು ಹೇಳಿದರು.

ಚುಂಚಘಟ್ಟದಲ್ಲಿ ವಾಸವಿರುವ ವ್ಯಕ್ತಿಯೊಬ್ಬರು ಮನೆಗೆ ಬೀಗ ಹಾಕಿಕೊಂಡು ಅಂಗಡಿಗೆ ಹೋಗಿದ್ದರು. ವಾಪಸ್ ರಾತ್ರಿ ಮನೆಗೆ ಬಂದು ನೋಡಿದಾಗ ಮನೆಯ ಮುಂಭಾಗದ ಬಾಗಿಲನ್ನು ಒಡೆದು ಒಳನುಗ್ಗಿದ್ದ ಆರೋಪಿ ಬೀರುವಿನಲ್ಲಿಟ್ಟಿದ್ದ 300 ಗ್ರಾಂ ಚಿನ್ನಾಭರಣ ಹಾಗೂ ₹1.70 ಲಕ್ಷ ನಗದು ಕಳವು ಮಾಡಿಕೊಂಡು ಹೋಗಿದ್ದು ಗೊತ್ತಾಗಿತ್ತು. ಮನೆ ಮಾಲೀಕರು ನೀಡಿದ ದೂರು ಆಧರಿಸಿ ಕಳ್ಳನನ್ನು ಪತ್ತೆಹಚ್ಚಿ ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಕೃತ್ಯ ನಡೆಸಿದ್ದ ಸ್ಥಳದಲ್ಲಿ ಅಳವಡಿಸಿದ್ದ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಿ ಆರೋಪಿಯನ್ನು ಪತ್ತೆ ಮಾಡಲಾಯಿತು ಎಂದು ಪೊಲೀಸರು ತಿಳಿಸಿದರು.

ಕರ್ನಾಟಕ ಸೇರಿ ಹಲವು ರಾಜ್ಯಗಳಲ್ಲಿ 120ಕ್ಕೂ ಹೆಚ್ಚು ಕಳ್ಳತನ ಮಾಡಿದ್ದ ಎನ್ನಲಾಗಿದೆ. ಹೀಗಾಗಿ ಈತನನ್ನು 'ಸೆಂಚುರಿ ಕಳ್ಳ' ಎಂದೂ ಕರೆಯುತ್ತಿದ್ದರು. ಬೀಗ ಹಾಕಿದ್ದ ಮನೆಗಳನ್ನು ಗುರುತಿಸಿ ಒಬ್ಬನೇ ಬಂದು ಕಳ್ಳತನ ಮಾಡುವುದು ಈತನ ಅಪರಾಧ ಶೈಲಿ. ದೊಡ್ಡ ಮನೆಗಳಿಗೆ ಕನ್ನ ಹಾಕುವಂತಹ ಕೆಲವು ಕಳ್ಳತನ ಪ್ರಕರಣಗಳಲ್ಲಿ ಮಾತ್ರ ಸಹಾಯಕರನ್ನು ಕರೆದುಕೊಂಡು ಹೋಗುತ್ತಿದ್ದ ಎಂದು ಪೊಲೀಸರು ಹೇಳಿದರು.

₹50 ಸಾವಿರ ಬಹುಮಾನ ಘೋಷಣೆ: ಚೋರ್ ಇಮ್ರಾನ್ ಕದ್ದ ಆಭರಣಗಳನ್ನು ಮುಂಬೈ, ಹೈದರಾಬಾದ್, ಮೈಸೂರು, ಬೆಂಗಳೂರು ಸೇರಿದಂತೆ ವಿವಿಧ ಸ್ಥಳಗಳಲ್ಲಿ ಜುವೆಲ್ಲರಿ ಅಂಗಡಿಗಳಲ್ಲಿ ಮಾರಾಟ ಮಾಡುತ್ತಿದ್ದ. ಇದರಿಂದ ಬಂದ ಹಣ ತೆಗೆದುಕೊಂಡು ಗೋವಾ ಹಾಗೂ ಮುಂಬೈಗಳಲ್ಲಿ ಉಳಿದುಕೊಂಡು ಮೋಜು ಮಾಡುತ್ತಿದ್ದ. ಹಣ ಖಾಲಿಯಾದ ಬಳಿಕ ಮತ್ತೆ ನಗರಕ್ಕೆ ಬಂದು ಬೀಗ ಹಾಕಿದ ಮನೆಗಳನ್ನು ಗುರುತಿಸಿ ಕಳವು ಮಾಡುತ್ತಿದ್ದ ಎಂಬುದು ವಿಚಾರಣೆಯಿಂದ ಗೊತ್ತಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಪೊಲೀಸರ ಕಾರ್ಯಾಚರಣೆಗೆ ಪ್ರಶಂಸೆ ವ್ಯಕ್ತಪಡಿಸಿರುವ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಆರೋಪಿಯನ್ನು ಬಂಧಿಸಿದ ತಂಡಕ್ಕೆ ₹50 ಸಾವಿರ ಬಹುಮಾನ ಘೋಷಿಸಿದ್ದಾರೆ.

ಕೀಳು ಮಾತು: ರೇಡಿಯೊ ಜಾಕಿ ಸೇರಿ ಇಬ್ಬರ ಬಂಧನ

ಬೆಂಗಳೂರು: ವಾಕ್ ಮತ್ತು ಶ್ರವಣದೋಷವುಳ್ಳವರ ಕುರಿತು ಕೀಳಾಗಿ ಮಾತನಾಡಿದ್ದ ಆರೋಪದಡಿ ರೇಡಿಯೊ ಜಾಕಿ ಸೇರಿದಂತೆ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ರೋಹನ್ ಕಾರ್ಯಪ್ಪ ಮತ್ತು ಶರವಣ ಭಟ್ಟಾಚಾರ್ಯ ಬಂಧಿತರು. ರೋಹನ್ ಕಾರ್ಯಪ್ಪ ಅವರು ಎಫ್‌ಎಂ ರೇಡಿಯೊದಲ್ಲಿ ಜಾಕಿಯಾಗಿ ಕೆಲಸ ಮಾಡುತ್ತಿದ್ದರೆ, ಶರವಣ ಅವರು ಮನೆಯಲ್ಲೇ ಇದ್ದರು. ಯುವ ರಾಜಕಾರಣಿಗಳನ್ನು ಅಣಕಿಸುವ ಭರದಲ್ಲಿ ವಾಕ್ ಮತ್ತು ಶ್ರವಣದೋಷವುಳ್ಳವರ ಕುರಿತು ಅವಹೇಳನಕಾರಿಯಾಗಿ ರೀಲ್ಸ್ ಮಾಡಿದ್ದರು ಎನ್ನಲಾಗಿದೆ.

ರೋಹನ್ ಅವರು ಹಿಂದಿ ಭಾಷೆಯಲ್ಲಿ ರಾಜಕೀಯದ ಕುರಿತು ಮಾತನಾಡಿದ್ದರೆ, ಶರವಣ ಅದನ್ನು ಸನ್ನೆಯಲ್ಲಿ ಮಾಡಿ ಅವಹೇಳನ ಆಗುವಂತೆ ತೋರಿಸಿದ್ದರು ಎಂಬ ಆರೋಪವಿದೆ. ಆ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದರು. ಈ ವಿಡಿಯೊಗೆ ಆಕ್ಷೇಪ ವ್ಯಕ್ತವಾದ ಮೇಲೆ ಡಿಲೀಟ್ ಮಾಡಿ ಕ್ಷಮೆ ಕೋರಿದ್ದರು ಎಂದು ಮೂಲಗಳು ತಿಳಿಸಿವೆ.

ಆರೋಪಿಗಳನ್ನು ಬಂಧಿಸುವಂತೆ ವ್ಯಕ್ತಿಯೊಬ್ಬರು ನಗರ ಪೊಲೀಸ್ ಆಯುಕ್ತರಿಗೆ ದೂರು ನೀಡಿದ್ದರು. ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ.

ಮಳಿಗೆಯಲ್ಲಿ ಸ್ಫೋಟ: ಇಬ್ಬರಿಗೆ ಗಾಯ

ಬೆಂಗಳೂರು: ಹುಳಿಮಾವು ಠಾಣಾ ವ್ಯಾಪ್ತಿಯ ಭಗವತಿ ಬಡಾವಣೆಯ ರಾಹುಲ್ ಹೋಮ್ ಅಪ್ಲಯನ್ಸಸ್ ಮಳಿಗೆಯಲ್ಲಿ ಗ್ಯಾಸ್ ಸಿಲಿಂಡರ್‌ನಲ್ಲಿ ಸೋರಿಕೆಯಾಗಿ ಬೆಂಕಿ ಹೊತ್ತಿಕೊಂಡು- ಗುರುವಾರ ರಾತ್ರಿ ಸ್ಫೋಟ ಸಂಭವಿಸಿದೆ.,

ಮಳಿಗೆಯ ಮಾಲೀಕ ಸುರೇಶ್ ದಾಸ್ ಅವರ ಮಗ ರಾಹುಲ್ ಅವರು ಗಾಯಗೊಂಡಿದ್ದಾರೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪೊಲೀಸರು ಹೇಳಿದರು.

'ಸ್ಫೋಟದ ರಭಸಕ್ಕೆ ಅಕ್ಕಪಕ್ಕದ ಅಂಗಡಿಗಳ ಬಾಗಿಲು, ಗೋಡೆ ಹಾಗೂ ಕಿಟಕಿಗಳಿಗೆ ಹಾನಿಯಾಗಿದೆ. ಮಳಿಗೆಯ ಬಾಗಿಲು ಕಿತ್ತುಬಂದು ಎದುರು ಮನೆಯ ಗೋಡೆಗೆ ಅಪ್ಪಳಿಸಿತ್ತು' ಎಂದು ಪೊಲೀಸರು ತಿಳಿಸಿದರು.

'ಸ್ಫೋಟಕ್ಕೆ ನಿಖರ ಕಾರಣ ತಿಳಿಸಿಲ್ಲ. ನಿರ್ಲಕ್ಷ್ಯ ತೋರಿದ ಆರೋಪದಡಿ ಮಾಲೀಕ ಸುರೇಶ್ ದಾಸ್, ರಾಹುಲ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಬೆಚ್ಚಿಬಿದ್ದ ಜನರು: ಗುರುವಾರ ರಾತ್ರಿ 10.54ರ ಸುಮಾರಿಗೆ ಸ್ಫೋಟ ಸಂಭವಿಸಿತ್ತು. ಅಕ್ಕಪಕ್ಕದ ಅಂಗಡಿಗಳ ಮಾಲೀಕರು ಶಬ್ದ ಕೇಳಿ ಓಡಿದ್ದರು. ತಕ್ಷಣವೇ ಪೊಲೀಸರು ಅಗ್ನಿಶಾಮಕ ದಳದ ಸಿಬ್ಬಂದಿಗೆ ಮಾಹಿತಿ ನೀಡಿದ್ದರು. ಅವರು ಸ್ಥಳ ಪರಿಶೀಲನೆ ನಡೆಸಿದರು.

ಒಳಗುತ್ತಿಗೆ ನೌಕರರ ಸೇವೆ ಕಾಯಂಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ (ಎನ್‌ಎಚ್‌ಎಂ) ಕಾರ್ಯ ನಿರ್ವಹಿಸುತ್ತಿರುವ ಒಳಗುತ್ತಿಗೆ ನೌಕರರ ಸೇವೆಯನ್ನು ಕಾಯಂಗೊಳಿಸಬೇಕೆಂದು ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಎನ್‌ಎಚ್‌ಎಂ ಒಳಗುತ್ತಿಗೆ ನೌಕರರ ಸಂಘ ಆಗ್ರಹಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಅಶ್ವತ್ ಎಚ್.ಕೆ., 'ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿ ಎನ್‌ಎಚ್‌ಎಂ ನೌಕರರ ಸೇವೆ ಕಾಯಂಗೊಳಿಸುವ ಭರವಸೆ ನೀಡಲಾಗಿತ್ತು ಎಂದು ಸ್ಮರಿಸಿದರು.

ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಆರೋಗ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರವ 28 ಸಾವಿರಕ್ಕೂ ಹೆಚ್ಚು ಎನ್‌ಎಚ್‌ಎಂ ಒಳಗುತ್ತಿಗೆ ನೌಕರರ ಸೇವೆಯನ್ನು ಕೂಡಲೇ ಕಾಯಂಗೊಳಿಸಬೇಕು' ಎಂದು ಆಗ್ರಹಿಸಿದರು.

'ಈಗಾಗಲೇ ಮಣಿಪುರ ರಾಜ್ಯದಲ್ಲಿ ಎನ್‌ಎಚ್‌ಎಂ ಒಳಗುತ್ತಿಗೆ ನೌಕರರ ಸೇವೆಯನ್ನು ಕಾಯಂಗೊಳಿಸಲಾಗಿದೆ. ಅದೇ ಮಾದರಿಯಲ್ಲಿ ನಮ್ಮ ರಾಜ್ಯದಲ್ಲಿನ ನೌಕರರನ್ನು ಕಾಯಂಗೊಳಿಸಬೇಕು. ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಿ, ಸರ್ಕಾರಿ ನೌಕರರಿಗೆ ನೀಡುವ ಎಲ್ಲ ಸೌಲಭ್ಯಗಳನ್ನು ನಮಗೂ ನೀಡಬೇಕು. ಆಗಸ್ಟ್ 15ರೊಳಗೆ ನಮ್ಮ ಎಲ್ಲ ಬೇಡಿಕೆಗಳನ್ನು ಈಡೇರಿಸಬೇಕು' ಎಂದು ಅವರು ಒತ್ತಾಯಿಸಿದರು.



ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕಲಾವಿದರನ್ನು ನಿರ್ಲಕ್ಷಿಸುತ್ತಿದೆ ಎಂದು ಆರೋಪಿಸಿ ಹಾಗೂ ಧನಸಹಾಯದ ಬಾಕಿ ಹಣ ಬಿಡುಗಡೆ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕಲಾವಿದರು, ಸಂಘಟಕರು ಹಾಗೂ ಸಂಘ–ಸಂಸ್ಥೆಗಳ ಮುಖ್ಯಸ್ಥರು ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಜಿಲ್ಲಾ, ತಾಲ್ಲೂಕು ಘಟಕ ಅಧ್ಯಕ್ಷರ ಆಯ್ಕೆ

ನೆಲಮಂಗಲ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷ ಅರಿಶಿನಕುಂಟೆ ನಿವಾಸಿ ರೇವಣಸಿದ್ದಯ್ಯ, ತಾಲ್ಲೂಕು ಘಟಕದ ಅಧ್ಯಕ್ಷರಾಗಿ ಎನ್. ರಾಜಶೇಖರ್ ಆಯ್ಕೆಯಾದರು. ಈಚೆಗೆ ಚುನಾವಣೆಯಲ್ಲಿ ಸರ್ವಾನುಮತದಿಂದ ಈ ಆಯ್ಕೆ ನಡೆದಿದೆ ಎಂದು ಚುನಾವಣಾಧಿಕಾರಿ ಸದಾಶಿವಯ್ಯ ತಿಳಿಸಿದ್ದಾರೆ.



ರೇವಣಸಿದ್ದಯ್ಯ



ರಾಜಶೇಖರ್

ಆ.25ಕ್ಕೆ ಭಕ್ತಿಗೀತೆ ಗಾಯನ, ಭರತನಾಟ್ಯ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನವು ರಾಜಾ ಸರ್ ಮುತ್ತಯ್ಯ ಚೆಟ್ಟಿಯಾರ್ ಮತ್ತು ರುಕ್ಮಿಣಿದೇವಿ ಅರುಂಡೇಲ್ ದತ್ತಿನಿಧಿಯಡಿ ಆಗಸ್ಟ್ 25ರಂದು ಬೆಳಿಗ್ಗೆ 10.30ಕ್ಕೆ ಭಕ್ತಿಗೀತೆ ಗಾಯನ ಮತ್ತು ಭರತನಾಟ್ಯ ಸ್ಪರ್ಧೆ ಹಮ್ಮಿಕೊಂಡಿದೆ.

ಕೆ.ಮೋಹನ್ ದೇವ್ ಆಳ್ವ ಮತ್ತು ಎಂ.ಕೆ. ಶೈಲಜಾ ಆಳ್ವ ದಂಪತಿ ಪ್ರತಿಷ್ಠಾನದಲ್ಲಿ ಈ ದತ್ತಿ ಸ್ಥಾಪಿಸಿದ್ದಾರೆ. ಸ್ಪರ್ಧೆಯನ್ನು 13ರಿಂದ 16 ವರ್ಷದವರಿಗೆ ಆಯೋಜಿಸಲಾಗಿದೆ. ಪ್ರಥಮ ಮೂರು ಸ್ಥಾನ ಪಡೆದವರಿಗೆ ಕ್ರಮವಾಗಿ ₹ 4 ಸಾವಿರ, ₹ 3 ಸಾವಿರ ಹಾಗೂ ₹ 2 ಸಾವಿರ ನಗದು ಬಹುಮಾನ ನೀಡಲಾಗುತ್ತದೆ.


ಆಸಕ್ತರು ಪ್ರತಿಷ್ಠಾನದಿಂದ ಅರ್ಜಿ ನಮೂನೆ ಪಡೆದು, ವಯಸ್ಸಿನ ದೃಢೀಕರಣದೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು ಆ.15ರೊಳಗೆ ಬಿ.ಎಂ. ಶ್ರೀ. ಪ್ರತಿಷ್ಠಾನ, 3ನೇ ಮುಖ್ಯರಸ್ತೆ, ನರಸಿಂಹರಾಜ ಕಾಲೊನಿ, ಬೆಂಗಳೂರು–560004 ವಿಳಾಸಕ್ಕೆ ಸಲ್ಲಿಸಬೇಕು ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು ತಿಳಿಸಿದ್ದಾರೆ. ಸಂಪರ್ಕಕ್ಕೆ: 9972812127

ಸುಧಾ ಓದಿರಿ

ಪ್ರಜಾವಾಣಿ ಶನಿವಾರ, 27 ಜುಲೈ 2024 4

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ



ಸೈಬರ್ ಸಖ್ಯ ಇರಲಿ ಎಚ್ಚರ

ರೂಪಾ ಕೆ.ಎಂ.

ಈಚೆಗೆ 77 ವರ್ಷದ ಮಹಿಳೆಯೊಬ್ಬರಿಗೆ ₹ 1.2 ಕೋಟಿ ಸೈಬರ್ ವಂಚನೆ ಆಗಿರುವ ಪ್ರಕರಣ ಬೆಳಕಿಗೆ ಬಂದಿದೆ. 35 ವರ್ಷದ ಮಹಿಳೆಯೊಬ್ಬರು ಹಂತ ಹಂತವಾಗಿ ₹ 20 ಲಕ್ಷ ಹಣವನ್ನು ಕಳೆದುಕೊಂಡಿದ್ದಾರೆ. ಡೇಟಿಂಗ್ ಆ್ಯಪ್‌ವೊಂದರಲ್ಲಿ ಪರಿಚಯಗೊಂಡ 24 ವರ್ಷದ ಹುಡುಗನೊಬ್ಬನಿಂದ 45ರ ಮಹಿಳೆಯ ಬ್ಯಾಂಕ್ ಅಕೌಂಟ್ ಬರಿದಾಯಿತು ಎನ್ನುತ್ತದೆ ಮತ್ತೊಂದು ಪ್ರಕರಣ.

ಇಂಥ ಬೆಳಕಿಗೆ ಬರುವ ಹಾಗೂ ಬಾರದೇ ಉಳಿಯುವ ಹಲವು ಪ್ರಕರಣಗಳು ಕಣ್ಮುಂದಿವೆ. ಪ್ರೀತಿ ಜಾಲಕ್ಕೆ ಬಿದ್ದು, ಮರುಳಾಗಿ ಸೈಬರ್ ವಂಚನೆಯಲ್ಲಿ ಹಣ ಕಳೆದುಕೊಂಡವರು, ಹಣ ದುಪ್ಪಟ್ಟಾಗುತ್ತದೆ ಎಂದು ಅತೀವ ಆಸೆಯಲ್ಲಿ ಹಣದ ಥೈಲಿಯನ್ನು ಅಪರಿಚಿತರಿಗೆ ಕೊಟ್ಟವರು, 'ಅದೇನೋ ಹೊಸ ಆಫರ್ ಬಂದಿದೆ, ಎಲ್ಲ ಉಚಿತ ಅಂತೆ'! ಅಂತ ಹೇಳಿ ಏನಂತನೂ ಯೋಚಿಸದೇ ಎಟಿಎಂ ಪಿನ್, ಒಟಿಪಿಗಳನ್ನು ಆಗಂತುಕರಿಗೆ ತಿಳಿಸಿ ಹಣ ಕಳೆದುಕೊಂಡವರು. ಹೀಗೆ ಹಣದ ಜತೆಗೆ ಬದುಕಿಗೆ ಅಗತ್ಯವಿರುವ ನಂಬಿಕೆ, ಆತ್ಮವಿಶ್ವಾಸ ಕಳೆದುಕೊಂಡು ಖಿನ್ನತೆಗೆ ಜಾರಿದವರ ಕಥೆಗಳು ಹಲವಷ್ಟಿವೆ.

ಸೈಬರ್ ವಂಚನೆಯ ರೂಪ ಹಲವು ವಿಧಗಳಲ್ಲಿವೆ. ಅವುಗಳ ಅಂತಿಮ ಉದ್ದೇಶ ವಂಚನೆಯಾದರೂ, ಅದರ ಜಾಲದೊಳಗೆ ಸುಲಭವಾಗಿ ಹೊಕ್ಕು, ಹೊರಬರಲಾರದವರ ವೈಯಕ್ತಿಕ ಬದುಕನ್ನು ಬುಡಮೇಲಾಗಿಸಬಹುದು. ಆರ್ಥಿಕವಾಗಿ ಬರಿದು ಮಾಡಿ, ಸಾಮಾಜಿಕವಾಗಿ ತಲೆ ಎತ್ತದಂತೆ ಮಾಡುವ ಸಾಧ್ಯತೆಯನ್ನೂ ಅಲ್ಲಗಳೆಯುವಂತಿಲ್ಲ. ಮಹಿಳೆಯರ ವಿರುದ್ಧ ಅತಿ ಸಾಮಾನ್ಯವಾಗಿ ನಡೆಯುವ ಸೈಬರ್ ವಂಚನೆಗಳು ಹೀಗಿವೆ.

ಸೈಬರ್ ಗ್ರೂಮಿಂಗ್: ಸೈಬರ್‌ನಲ್ಲಿ ಸದಾ ಲಭ್ಯವಿರುವಂತೆ ಕಾಣುವ ಮಾಯ್ಕಾರರು ಚಂದದ ಮಾತುಗಳನ್ನಾಡಿ ಸಂಬಂಧವನ್ನು ಬೆಳೆಸಲು ನೋಡುತ್ತಾರೆ. ಇಡೀ ಜಗತ್ತು ಪ್ರೀತಿಯಿಂದ ತುಂಬಿದೆ ಮತ್ತು ಚೆಲುವೆಲ್ಲವನ್ನೂ ತುಂಬಿಕೊಂಡು ತೂಗುತ್ತಿದೆ ಎಂಬ ಮಾತುಗಳನ್ನು ಆಡುತ್ತಲೇ ಮಾಯಾಜಾಲವನ್ನು ಬೀಸುತ್ತಾರೆ. ಭಾವಾನಾತ್ಮಕ ಪ್ರಪಂಚವೊಂದನ್ನು ಸೃಷ್ಟಿಸಿ, ನಂಬಿಕೆ, ವಿಶ್ವಾಸವನ್ನು ಗಳಿಸುತ್ತಾರೆ. ಕ್ರಮೇಣ ಅದರ ಲಾಭ ಪಡೆಯಲು ಹವಣಿಸುತ್ತಾರೆ. ಲೈಂಗಿಕವಾಗಿ ದೌರ್ಜನ್ಯ ಮಾಡುವುದು ಈ ಸ್ವರೂಪದ ಅಪರಾಧದ ಮುಖ್ಯ ಉದ್ದೇಶವಾಗಿರುತ್ತದೆ.

ಸೈಬರ್ ಹ್ಯಾಕಿಂಗ್: ತಂತ್ರಜ್ಞಾನ, ಆರ್ಥಿಕ ಜ್ಞಾನ ಅಷ್ಟಾಗಿ ಇರದ ಹೆಣ್ಣುಮಕ್ಕಳೇ ಈ ಬಗೆಯ ಅಪರಾಧಗಳಲ್ಲಿ ಬಲಿಪಶುಗಳಾಗುತ್ತಾರೆ. ಹಣಕಾಸು, ಬ್ಯಾಂಕ್ ಖಾತೆಗಳಿಗೆ ಸಂಬಂಧಪಟ್ಟ ಮಾಹಿತಿಯನ್ನು ಹೆಣ್ಣುಮಕ್ಕಳಿಂದಲೇ ಪಡೆದುಕೊಂಡು, ದಾಖಲಾತಿಗಳನ್ನು ತಿದ್ದಿ ಖಾತೆಗೆ ಕನ್ನ ಹಾಕುತ್ತಾರೆ. ಒಟಿಪಿ, ಎಪಿಕೆ ಫೈಲ್‌ಗಳನ್ನು ಬ್ಯಾಂಕ್ ಹೆಸರಿನಲ್ಲಿ ಕಳುಹಿಸಿ, ನಕಲಿ ಅಧಿಕಾರಿಗಳೆಂದು ಹೇಳಿಕೊಂಡು ಹಣ ದೋಚಲಾಗುತ್ತದೆ.

ಸೈಬರ್ ಬ್ಲ್ಯಾಕ್‌ಮೇಲ್: ಇಂಟರ್‌ನೆಟ್ ಮೂಲಕವೇ ಒಬ್ಬರಿಗೊಬ್ಬರ ನಡುವೆ ಬೆಸೆದ ಬಂಧವನ್ನು ಸಾಮಾಜಿಕವಾಗಿ ಹರಾಜು ಹಾಕುತ್ತೇನೆ ಎಂಬ ಧಾಟಿಯಲ್ಲಿ ನಡೆಸುವ ಬ್ಲ್ಯಾಕ್‌ಮೇಲ್ ಬಗೆಯ ಅಪರಾಧವಿದು. ಅದರಲ್ಲಿಯೂ ಬೇಡಿಕೆ ಇಟ್ಟು, ಅದನ್ನು ಈಡೇರಿಸದೇ ಇದ್ದರೆ 'ಆಡಿಯೊ' 'ವಿಡಿಯೊ', ಫೋಟೊಗಳನ್ನು ಸಾಮಾಜಿಕವಾಗಿ ಪೋಸ್ಟ್ ಮಾಡಲಾಗುತ್ತದೆ ಎಂಬ ಬೆದರಿಕೆಯೊಡ್ಡಿ ನಡೆಸುವ ಅಪರಾಧವಿದು. ಖಾಸಗಿ ಚಿತ್ರಗಳು, ವಿಡಿಯೊಗಳನ್ನು ಮುಂದಿಟ್ಟುಕೊಂಡು ಬೆದರಿಕೆ ಹಾಕುವ ಮೂಲಕ ಭಯದ ವಾತಾವರಣವನ್ನು ನಿರ್ಮಿಸಲಾಗುತ್ತದೆ.

ಸೈಬರ್ ಸ್ಟಾಕಿಂಗ್: ಹೆಣ್ಣುಮಕ್ಕಳ ಸೋಷಿಯಲ್ ಮೀಡಿಯಾ ಖಾತೆಗಳನ್ನು ಪದೇ ಪದೇ ತಡಕಾಡುವುದು. ಅದರಿಂದ ಮಾಹಿತಿ ಪಡೆದು, ಆ ಮಾಹಿತಿಯನ್ನು ತಮಗೆ ಬೇಕಾದ ರೀತಿಯಲ್ಲಿ ತಿದ್ದಿ, ಸುಳ್ಳಿನ ಕಂತೆಯನ್ನು ಹರಡುವುದು. ಹೆಚ್ಚಾಗಿ ಖ್ಯಾತನಾಮ ಹೆಣ್ಣಮಕ್ಕಳ ಸಾಮಾಜಿಕ ಜಾಲತಾಣಗಳ ಖಾತೆಗಳ ಮೇಲೆ ಹೀಗೆ ಸ್ಟಾಕರ್‌ಗಳ ಕಣ್ಣು ನೆಟ್ಟಿರುತ್ತದೆ.

ಸೈಬರ್ ಬುಲ್ಲಿಂಗ್: ಯಾರದ್ದೇ ತಪ್ಪಿರಲಿ ಅದಕ್ಕೆ ಹೆಣ್ಣುಮಕ್ಕಳನ್ನೇ ಗುರಿಯಾಗಿಸಿ, ಅವರ ಉಡುಗೆ, ತೊಡುಗೆ, ವೈಯಕ್ತಿಕ ಬದುಕಿನ ಮೇಲೆ ತೀವ್ರತರದಲ್ಲಿ ದಾಳಿ ನಡೆಸುವುದನ್ನು ಇಂಥ ಪ್ರಕರಣಗಳಲ್ಲಿ ನೋಡಬಹುದು. ಬೇರೆಯವರ ಮನೆಯ ಹೆಣ್ಣುಮಕ್ಕಳ ಬಗ್ಗೆ ವೃಥಾ ಅಭಿಪ್ರಾಯಗಳನ್ನು ಹೊಲಸು ಭಾಷೆಯಲ್ಲಿ ನೀಡುತ್ತಾ, ನಾವು ಸುಭಗರಂತೆ ನಟಿಸುವ ಚಾಳಿ ಈ ಬಗೆಯ ಅಪರಾಧದಲ್ಲಿ ಕಂಡುಬರುತ್ತದೆ. ಹೆಚ್ಚಾಗಿ ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯರಾಗಿರುವವರನ್ನು, ಖ್ಯಾತನಾಮ ಹೆಣ್ಣುಮಕ್ಕಳನ್ನೇ ಗುರಿಯಾಗಿಸಲಾಗುತ್ತದೆ.

ಸೈಬರ್ ಮಾರ್ಫಿಂಗ್ ಮತ್ತು ಡೀಪ್ ಫೇಕ್: ಆನ್‌ಲೈನ್‌ನಲ್ಲಿ ಲಭ್ಯವಿರುವ ಎಡಿಟಿಂಗ್ ಟೂಲ್‌ಗಳನ್ನು ಬಳಸಿ, ಅಶ್ಲೀಲಚಿತ್ರಗಳಿಗೆ ಹೆಣ್ಣುಮಕ್ಕಳ ಫೋಟೊಗಳನ್ನು ಎಡಿಟ್ ಮಾಡುವುದು, ಅಸಭ್ಯ ಎನಿಸುವ ಫೋಟೊಗಳನ್ನು ಪ್ರದರ್ಶಿಸಿ, ಆತ್ಮವಿಶ್ವಾಸವನ್ನು ಕುಗ್ಗಿಸುವ ಕೆಲಸ ಮಾಡುವುದು. ಗಂಭೀರ ಸ್ವರೂಪದ ಎಡಿಟಿಂಗೇ ಈ ಡೀಪ್ ಫೇಕ್. ನಿಜವಾದ ವ್ಯಕ್ತಿಗೆ ಶಾಕ್ ಆಗುವಷ್ಟು ಡೀಪ್ ಫೇಕ್ ತಂತ್ರಜ್ಞಾನದ ಮೂಲಕ ಅವರ ಫೋಟೊಗಳನ್ನು ಎಡಿಟಿಂಗ್ ಮಾಡಲಾಗುತ್ತದೆ. ಈ ಎಲ್ಲ ಬಗೆಯ ಸೈಬರ್ ಅಪರಾಧಗಳಲ್ಲಿ ಹೆಣ್ಣುಮಕ್ಕಳಿಗೆ ಬೆದರಿಕೆಯೊಡ್ಡಿ ಹಣ ಪಡೆಯುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ.

ಭಾವನಾತ್ಮಕತೆ ಬಿಡಿ

ಬಹುತೇಕ ಹೆಣ್ಣುಮಕ್ಕಳು ಭಾವನಾತ್ಮಕವಾಗಿ ಸ್ಪಂದಿಸುತ್ತಾರೆ ಎಂಬ ವಿಚಾರವನ್ನೇ ಇಂಟರ್‌ನೆಟ್‌ನಲ್ಲಿರುವ ಅಪರಾಧ ಜಗತ್ತು ತನ್ನ ಬಂಡವಾಳವಾಗಿಸಿಕೊಂಡಿದೆ. ಭಾವನಾತ್ಮಕವಾಗಿ ದುರ್ಬಲವಾಗಿರುವವರನ್ನು, ಬಹುಬೇಗ ಮಾತಿನ ಮೋಡಿಗೆ ಮರಳಾಗುವವರನ್ನೇ ಇಂಥ ಅಪರಾಧಗಳಲ್ಲಿ ಬಲಿಪಶುವಾಗಿಸಲಾಗುತ್ತದೆ. ಹೀಗೆ ಮಾತಿನಲ್ಲಿಯೇ ಮೋಡಿ ಮಾಡಿ ಲೈಂಗಿಕವಾಗಿ, ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಶೋಷಿಸಲಾಗುತ್ತದೆ.

ಆರ್ಥಿಕ ಜ್ಞಾನ ಬೆಳೆಸಿಕೊಳ್ಳಿ

ಹೆಣ್ಣುಮಕ್ಕಳು ಆರ್ಥಿಕವಾಗಿ ಸ್ವಾತಂತ್ರ್ಯ ಪಡೆಯುವಷ್ಟೆ ಮುಖ್ಯವಾಗಿ ಆರ್ಥಿಕ ಹಾಗೂ ತಾಂತ್ರಿಕ ಜ್ಞಾನವನ್ನು ಬೆಳೆಸಿಕೊಳ್ಳಬೇಕು. ನಿವೇಶನ, ಚಿನ್ನ, ಷೇರು ಹೀಗೆ ಯಾವುದರಲ್ಲಿ ಎಷ್ಟು ಹೂಡಿಕೆ ಮಾಡಬೇಕು ಎಂಬುದರ ಬಗ್ಗೆ ಸಮರ್ಪಕ ಜ್ಞಾನ ಬೆಳೆಸಿಕೊಳ್ಳಬೇಕು. ಹಣಕಾಸು ಇರಲಿ; ವೈಯಕ್ತಿಕ ಬದುಕಿನ ವಿವರಗಳೇ ಇರಲಿ ಯಾರಿಗೆ ಎಷ್ಟು ಮಾಹಿತಿ ನೀಡಬೇಕು ಎಂಬುದರ ಬಗ್ಗೆ ಸರಿಯಾಗಿ ತಿಳಿದಿರಲಿ. ಸೈಬರ್ ಕಳ್ಳರು ತಂತ್ರಜ್ಞಾನದ ಯಾವ ಹಾದಿ ಹಿಡಿದು ಖನ್ನ ಹಾಕುತ್ತಾರೆ ಎನ್ನುವ ಬಗ್ಗೆ ಕನಿಷ್ಠ ಜ್ಞಾನವನ್ನು ಬೆಳೆಸಿಕೊಳ್ಳೋಣ. ಗಂಡಾಗಲಿ, ಹೆಣ್ಣಾಗಲಿ ಮೋಸ ಹೋಗುವ ಮನಸ್ಥಿತಿ ಇರುವವರೆಗೂ ಮೋಸ ಮಾಡುವವರು ಇದ್ದೇ ಇರುತ್ತಾರೆ ಎಂಬುದನ್ನು ಮರೆಯದಿರೋಣ.

ಅರಿವು ಅಗತ್ಯ

ಈ ರೀತಿ ಆನ್‌ಲೈನ್‌ನಲ್ಲಿ ಮೋಸ ಹೋಗುವ ಪ್ರಕರಣಗಳಿಗೆ ಗಂಡು ಹೆಣ್ಣೆಂಬ ಭೇದ ಇರುವುದಿಲ್ಲ. ಬಾಲ್ಯದಲ್ಲಿ ಪ್ರೀತಿ, ವಿಶ್ವಾಸ, ಹೊಗಳಿಕೆಯಿಂದ ವಂಚಿತಗೊಂಡ ಮನಸ್ಸುಗಳು ಬಹುಬೇಗ ಇಂಥ ಮೋಸಕೂಪಕ್ಕೆ ಬಲಿಯಾಗುತ್ತಾರೆ. ಸಣ್ಣ ಪ್ರಶಂಸೆಯನ್ನೂ ಪ್ರೀತಿಯೆಂದು ನಂಬಿ ಬಿಡುತ್ತಾರೆ. ಯಾರಲ್ಲಿ ಎಷ್ಟು ಹಂಚಿಕೊಳ್ಳಬೇಕು ಮತ್ತು ಹಂಚಿಕೊಳ್ಳಬಾರದು ಎಂಬ ರೇಖೆಯನ್ನು ಮರೆಯುತ್ತಾರೆ.

ಈಗೀಗಂತೂ ಸಾಮಾಜಿಕ ಜಾಲತಾಣಗಳೇ ಬದುಕಿನ ಭಾಗವಾಗಿಬಿಟ್ಟಿವೆ. ಸಾಮಾಜಿಕ ವ್ಯವಸ್ಥೆಯ ಬದುಕಿನಿಂದ ಬಹುದೂರ ಹೋಗಿಬಿಟ್ಟಿದ್ದೇವೆ. ಸ್ನೇಹಿತರು, ಪ್ರೀತಿಪಾತ್ರರೆಲ್ಲರೂ ವರ್ಚುಯಲ್ ಆಗಿ ಇದ್ದಾರೆ ಹೊರತು ಆಫ್‌ಲೈನ್‌ನಲ್ಲಿ ಕಡಿಮೆಯಾಗಿದ್ದಾರೆ. ಆನ್‌ಲೈನ್ ಡೇಟಿಂಗ್, ಚಾಟಿಂಗ್‌ಗಳ ಜಮಾನದಲ್ಲಿ ಇರುವುದರಿಂದ ವರ್ಚುಯಲ್ ಜಗತ್ತಿನ ತವಕ ಹಾಗೂ ತಲ್ಲಣಗಳನ್ನು ಅರಿಯುವುದು ಬಹುಮುಖ್ಯ. ವ್ಯವಹಾರಿಕ ಜ್ಞಾನ ಬೆಳೆಸಿಕೊಳ್ಳಬೇಕು. ಯಾವುದೇ ಆ್ಯಪ್ ಇರಲಿ; ಸಾಮಾಜಿಕ ಜಾಲತಾಣಗಳೇ ಇರಲಿ ಅರಿವು ಮೂಡಿಸಿಕೊಳ್ಳುವುದು ಮುಖ್ಯ.

ಡಾ.ಅಲೋಕ್ ಕುಲಕರ್ಣಿ, ಹಿರಿಯ ಮನಶಾಸ್ತ್ರಜ್ಞ, ಮಾನಸ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಆ್ಯಂಡ್ ನ್ಯುರೋಸೈನ್ಸ್, ಹುಬ್ಬಳ್ಳಿ



ತಿಳಿದಿರಲಿ 'ಗೋಲ್ಡನ್ ಅವರ್'

ಭಾವಾನಾತ್ಮಕ ಕಥೆ ಹೇಳಿ ಹೆಣ್ಣುಮಕ್ಕಳ ನಂಬಿಕೆ ಗಳಿಸಿ ಹಣ ಕೀಳಲಾಗುತ್ತದೆ. ತಂತ್ರಜ್ಞಾನ ಪರಿಣತರಲ್ಲದ ಹೆಣ್ಣುಮಕ್ಕಳು ಬಹುಬೇಗ ಮೋಸಕ್ಕೆ ಈಡಾಗುತ್ತಾರೆ. ಹಣ ಕಳೆದುಕೊಳ್ಳುವುದು ಎಂದರೆ ಕೈಯಿಂದ ಕೈಗೆ ಕೊಟ್ಟು ಮೋಸ ಹೋಗುವ ಪರಿಕಲ್ಪನೆಯಲ್ಲಿಯೇ ಇದ್ದೇವೆ. ಆದರೆ ಡಿಜಿಟಲ್ ಯುಗದಲ್ಲಿ ಒಟಿಪಿ, ಆಧಾರ್ ನಂಬರ್‌ಗಳನ್ನು ಪಡೆದು ಬ್ಯಾಂಕ್ ಖಾತೆಗೆ ಕನ್ನ ಹಾಕಬಹುದು ಎಂಬುದರ ಬಗ್ಗೆ ಅರಿವು ಬೆಳೆಸಿಕೊಳ್ಳಬೇಕು.

ಸೈಬರ್ ಕ್ರೈಂನಲ್ಲಿಯೂ 'ಗೋಲ್ಡನ್ ಅವರ್' ಪರಿಕಲ್ಪನೆ ಇದೆ. ಹಣ ಕಳೆದುಕೊಂಡವರು ತಡಮಾಡದೇ 1930 ಸೈಬರ್ ಅಪರಾಧಗಳ ಸಹಾಯವಾಣಿಗೆ ಕರೆ ಮಾಡಿ, ಪ್ರಕರಣ ದಾಖಲಿಸಬೇಕು. ಅಥವಾ ಹತ್ತಿರದ ಪೊಲೀಸ್ ಸ್ಟೇಷನ್‌ನಲ್ಲಿಯೂ ಪ್ರಕರಣ ದಾಖಲಿಸಬಹುದು. ಪೊಲೀಸರು ತ್ವರಿತವಾಗಿ ಬ್ಯಾಂಕ್‌ನ ನೆರವಿನೊಂದಿಗೆ ಹಣ ವರ್ಗಾವಣೆಯಾಗದಂತೆ 'ಡೆಬಿಟ್ ಫ್ರೀಜ್', 'ಅಕೌಂಟ್ ಫ್ರೀಜ್' ಮಾಡುತ್ತಾರೆ. ಇದು ಎಲ್ಲೋ ಕುಳಿತ ಸೈಬರ್ ಕಳ್ಳರ ಕೈಗಳನ್ನು ಕಟ್ಟುವ ಬಗೆ. ಹಾಗಾಗಿ ಮೋಸ ಹೋದ ತಕ್ಷಣ ಪ್ರಕರಣ ದಾಖಲಿಸಿ.

www.cybercrime.gov.inನಲ್ಲಿಯೂ ಪ್ರಕರಣ ದಾಖಲಿಸಬಹುದು.

ಸತೀಶ್ ವೆಂಕಟಸುಬ್ಬು, ಸೈಬರ್ ವಕೀಲ



ಬಾಣಂತಿಗೆ ಮನೆಮದ್ದು

ಪ್ರಸವದ ನಂತರವೂ ಬಾಣಂತಿಯ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸಲೇಬೇಕು. ಏಕೆಂದರೆ ಅಮ್ಮನ ಆರೋಗ್ಯದಲ್ಲಿ ಏರುಪೇರಾದರೆ ಅದು ಮಗುವಿನ ಆರೋಗ್ಯದ ಮೇಲೂ ಪರಿಣಾಮ ಬೀರುತ್ತದೆ. ಬಾಣಂತಿಯರಿಗೆಂದೇ ವಿಶೇಷ ಮದ್ದಿನ ರೆಸಿಪಿ ನೀಡಿದ್ದಾರೆ

ಪುಷ್ಪಾ ಎನ್‌.ಕೆ.ರಾವ್

ಕಾಳು ಮೆಣಸಿನ ಸಾರು



ಬೇಕಾಗುವ ಸಾಮಗ್ರಿಗಳು: ಜೀರಿಗೆ ಒಂದು ಚಮಚ, ಕರಿಮೆಣಸು ಒಂದು ಚಮಚ ಅರಿಶಿನದ ಪುಡಿ ಕಾಲು ಚಮಚ, ತುಪ್ಪ ಎರಡು ಚಮಚ, ಉಪ್ಪು ರುಚಿಗೆ ತಕ್ಕಷ್ಟು, ಬೆಲ್ಲ: ಸಣ್ಣ ತುಂಡು, ಲಿಂಬೆ ಹಣ್ಣು ಒಂದು, ಇಂಗು ಸ್ವಲ್ಪ, ಒಗ್ಗರಣೆಗೆ ತುಪ್ಪ, ಸಾಸಿವೆ, ಕರಿಬೇವು, ಒಂದು ಬ್ಯಾಡಗಿ ಮೆಣಸು, ಇಂಗು.

ಮಾಡುವ ವಿಧಾನ: ಒಂದು ಬಾಣಲೆಗೆ ಕಾಳು ಮೆಣಸು, ಜೀರಿಗೆಯನ್ನು ಹಾಕಿ ಸ್ವಲ್ಪ ಬಿಸಿ ಮಾಡಿಕೊಳ್ಳಬೇಕು. ಅದನ್ನು ಪುಡಿ ಮಾಡಿಡಿ. ಈಗ ಒಂದು ಪಾತ್ರೆಗೆ ಸ್ವಲ್ಪ ನೀರು ಹಾಕಿ ಕುದಿಯಲು ಬಿಡಿ. ಅದಕ್ಕೆ ಅರಿಶಿನ, ಉಪ್ಪು, ಬೆಲ್ಲವನ್ನು ಸೇರಿಸಿ. ನಂತರ ಕಾಳು ಮೆಣಸಿನ ಪುಡಿಯನ್ನು ಹಾಕಬೇಕು. ಬೇಕಿದ್ದರೆ ಸ್ವಲ್ಪವೇ ಸ್ವಲ್ಪ ತೊಗರಿಬೇಳೆಯನ್ನು ಬೇಯಿಸಿ ಸೇರಿಸಿಕೊಳ್ಳಬಹುದು. ನಂತರ ಇಂಗು, ಕರಿಬೇವಿನ ಒಗ್ಗರಣೆಯನ್ನು ತುಪ್ಪದ ಜೊತೆ ಹಾಕಬೇಕು. ಕೆಳಗಿಟ್ಟ ನಂತರ ಲಿಂಬೆಹಣ್ಣಿನ ರಸವನ್ನು ಹಿಂಡಬೇಕು. ಈಗ ಬಾಣಂತಿಯ ಮೆಣಸಿನ ಸಾರು ಊಟಕ್ಕೆ ಸಿದ್ಧ.

ಬಾಳೆಹೂವಿನ ಚಟ್ನಿ



ಬೇಕಾಗುವ ಸಾಮಗ್ರಿಗಳು: ಬಾಳೆಹೂವು ಅಥವಾ ಮೋತೆ: ದೊಡ್ಡದು, ಧನಿಯಾ 3 ಚಮಚ, ಓಮ ಕಾಳು 2 ಚಮಚ ಜೀರಿಗೆ 2 ಚಮಚ, ಕರಿಮೆಣಸು 1 1/2 ಚಮಚ, ಉಪ್ಪು ರುಚಿಗೆ ತಕ್ಕಷ್ಟು, ಅರಿಶಿನಪುಡಿ: ಕಾಲು ಚಮಚ, ವಾಟೆಹುಳಿ: ಐದಾರು ಒಣಗಿಸಿದ ಹಣ್ಣಿನ ಸಿಪ್ಪೆ, ತುಪ್ಪ: ಒಂದು ಬಟ್ಟಲು, ಹೆಚ್ಚಾದರೂ ಅಡ್ಡಿಯಿಲ್ಲ.

ಮಾಡುವ ವಿಧಾನ: ಬಾಳೆಹೂವಿನ ಮೇಲಿನ ಸಿಪ್ಪೆಯನ್ನು ತೆಗೆದು ಒಳಗಿನ ಎಳೆಯ ಭಾಗವನ್ನು ಸಣ್ಣದಾಗಿ ಕತ್ತರಿಸಿ, ಒಂದು ಪಾತ್ರೆಗೆ ಹಾಕಿ, ನೀರುಹಾಕಿ. ಅದಕ್ಕೆ ಸ್ವಲ್ಪ ಎಣ್ಣೆ ಮತ್ತು ಹುಳಿಮಜ್ಜಿಗೆ ಹಾಕಿ ಕೆಲವು ಕಾಲ ಬಿಡಿ. ಅದರಲ್ಲಿದ್ದ ಒಗರಿನ ಅಂಶವೆಲ್ಲ ಹೋಗುತ್ತದೆ. ನಂತರ ಅದನ್ನು ಕುಕ್ಕರಿಗೆ ಹಿಂಡಿಹಾಕಿ. ಅದಕ್ಕೆ ಅರಸಿನ, ಉಪ್ಪು, ಮತ್ತೆ ಮೇಲೆ ಹೇಳಿದ ಮಸಾಲೆ ಸಾಮಾನುಗಳನ್ನೆಲ್ಲ ಹಾಕಿ ಎರಡು ಸೀಟಿ ಕೂಗಿಸಿ. ತಣ್ಣಗಾದ ನಂತರ ಅದನ್ನು ಮಿಕ್ಸಿ ಜಾರಿಗೆ ಹಾಕಿ, ನುಣ್ಣಗೆ ರುಬ್ಬಿ. ಒಂದು ಬಾಣಲೆಗೆ ತುಪ್ಪ, ಸಾಸಿವೆ ಹಾಕಿ ಬಿಸಿಮಾಡಿ. ನಂತರ ಅದಕ್ಕೆ ರುಬ್ಬಿದ ಮಿಶ್ರಣವನ್ನು ಹಾಕಿ, ಸಣ್ಣ ಉರಿಯಲ್ಲಿ ಮಗಚುತ್ತಿರಿ. ನೀರಿನ ಅಂಶ ಹೋಗುವ ತನಕ ಕೈಯಾಡಿಸುತ್ತಲೇ ಇರಿ. ಪುಡಿ ಚಟ್ನಿಯ ಹಾಗೆ ಆಗುತ್ತದೆ. ಆರಿದ ನಂತರ ಅದನ್ನು ಜಾಡಿಗೆ ಹಾಕಿ. ಬಾಣಂತಿಯು ಮೊದಲಿನ ಊಟವನ್ನು ತುಪ್ಪ ಹಾಕಿಕೊಂಡು ಅದರಲ್ಲಿಯೇ ಮಾಡಬೇಕು. ನಂತರ ಮೊಸರನ್ನವನ್ನು ಹಳೆಯದಾದ ಮಾವಿನಮಿಡಿ ಉಪ್ಪಿನಕಾಯಿ, ಲಿಂಬೆಹಣ್ಣು, ಅಥವಾ ಹೇರಳೆ ಉಪ್ಪಿನಕಾಯಿಯೊಂದಿಗೆ ಊಟ ಮಾಡಬೇಕು. ಆ ಚಟ್ನಿಯನ್ನು ಬಿಸಿಮಾಡಿ ಉಪಯೋಗಿಸುವುದು ಒಳ್ಳೆಯದು.


ಕೊಡಿ ಚಟ್ನಿ



ಬೇಕಾಗುವ ಸಾಮಗ್ರಿಗಳು: ಹುಣಸೆ, ನೆಲ್ಲಿಕಾಯಿ, ಪೇರಳೆ, ದಾಳಿಂಬೆ, ನೇರಳೆ, ನೆಲನಲ್ಲಿ ಮುಂತಾದ ಗಿಡಗಳ ಚಿಗುರುಗಳು. (ಒಗರು ಇರುವ ಯಾವುದೇ ಚಿಗುರು ಆಗುತ್ತದೆ. ಸರಿಯಾದ ಪರಿಚಯ ಇರಬೇಕು ಅಷ್ಟೇ) ಎರಡು, ಮೂರು ಬಟ್ಟಲು.
ಧನಿಯಾ 2 ಚಮಚ, ಜೀರಿಗೆ 1 ಚಮಚ, ಓಮ 1 ಚಮಚ, ಕರಿಮೆಣಸು ಒಂದು ಚಮಚ
ವಾಟೆ ಹುಳಿಯ ಸಿಪ್ಪೆ : ನಾಲ್ಕು. ಎಲ್ಲ ಗ್ರಂಧಿಗೆ ಅಂಗಡಿಗಳಲ್ಲಿ ದೊರೆಯುತ್ತದೆ.
ಅರಿಶಿನ: ಚಿಟಿಕೆ, ಉಪ್ಪು: ರುಚಿಗೆ, ತುಪ್ಪ: ಒಂದು ಬಟ್ಟಲು, ಒಗ್ಗರಣೆಗೆ: ಸಾಸಿವೆ, ತುಪ್ಪ, ಉದ್ದಿನಬೇಳೆ.

ಮಾಡುವ ವಿಧಾನ: ಮೊದಲು ಎಲ್ಲಾ ಚಿಗುರುಗಳನ್ನು ಚೆನ್ನಾಗಿ ತೊಳೆದುಕೊಳ್ಳಿ. ಕುಕ್ಕರಿಗೆ ವಾಟೆಹುಳಿ, ಉಪ್ಪು, ಅರಿಶಿನ ಹಾಕಿ ಚೆನ್ನಾಗಿ ಬೇಯಿಸಿ. ಒಂದು ಬಾಣಲೆಗೆ ಧನಿಯಾ, ಜೀರಿಗೆ, ಓಮ, ಕರಿಮೆಣಸು ಹಾಕಿ ಸ್ವಲ್ಪ ಹುರಿಯಿರಿ. ನಂತರ ಎಲ್ಲವನ್ನೂ ಮಿಕ್ಸಿಯಲ್ಲಿ ರುಬ್ಬಿ. ಒಂದು ಬಾಣಲೆಗೆ ತುಪ್ಪ ಹಾಕಿ, ಎಲ್ಲಾ ಮಿಶ್ರಣವನ್ನು ಸೇರಿಸಿ ಹದ ಬೆಂಕಿಯಲ್ಲಿ ಬಾಡಿಸಿ. ನೀರಿನ ಅಂಶ ಹೋಗುವವರೆಗೂ ಮಗಚುತ್ತಿರಿ. ಆರಿದ ನಂತರ ತೆಗೆದಿಟ್ಟು, ಉಪಯೋಗಿಸುವ ಮುನ್ನ ಸ್ವಲ್ಪ ಬಿಸಿಮಾಡಿ, ತುಪ್ಪದೊಂದಿಗೆ ಊಟ ಮಾಡಬೇಕು. ಹದಿನೈದು ದಿನ ಈ ಚಟ್ನಿಯನ್ನು, ಹದಿನೈದು ದಿನ ಬಾಳೆಹೂವಿನ ಚಟ್ನಿಯನ್ನು ಉಪಯೋಗಿಸಬೇಕು. ಒಂದೇ ದಿನ ಎರಡನ್ನೂ ಬಳಸಬಾರದು.

ಮುಟ್ಟಿನ ರಜೆ ಅತ್ಯಗತ್ಯ



ಪ್ರತಿಕ್ರಿಯೆ

ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ, ವೈದ್ಯಕೀಯ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದ್ದು ಮುಟ್ಟಿನ ಬವಣೆಯ ನಡುವೆಯೂ ಮಹಿಳೆಯರು ತಮ್ಮ ಸಾಮರ್ಥ್ಯವನ್ನು ಸಾಬೀತುಗೊಳಿಸಿದ್ದಾರೆ. ಸಾರ್ವಜನಿಕ ಮತ್ತು ಖಾಸಗಿ ವಲಯಗಳ ಪ್ರಗತಿಯಲ್ಲಿ ಮಹಿಳೆಯರ ಪಾಲು ಹೆಚ್ಚಾಗಿಯೇ ಇದೆ. ಮುಟ್ಟಿನ ದಿನಗಳಲ್ಲಿ ಒಂದು ಅಥವಾ ಎರಡು ದಿನಗಳ ರಜೆ ದೊರಕಿದರೆ ಅವರು ಮತ್ತಷ್ಟು ಪ್ರಫುಲ್ಲಿತರಾಗಿ ಕೆಲಸದಲ್ಲಿ ತೊಡಗಿಕೊಳ್ಳಲು ಅನುವು ಮಾಡಿಕೊಟ್ಟಂತಾಗುತ್ತದೆ.

ಸುಪ್ರೀಂ ಕೋರ್ಟ್ ಈಗಾಗಲೇ ಮಹಿಳೆಯರಿಗೆ ಮುಟ್ಟಿನ ರಜೆಯನ್ನು ಕಾನೂನುಬದ್ಧಗೊಳಿಸಲು ನೀತಿ (ಪಾಲಿಸಿ) ರೂಪಿಸಬೇಕು ಎಂದು ಒಕ್ಕೂಟ ಮತ್ತು ರಾಜ್ಯ ಸರ್ಕಾರಗಳಿಗೆ ಸೂಚಿಸಿದೆ. ರಜೆಯನ್ನು ಕಡ್ಡಾಯಗೊಳಿಸಿ ನ್ಯಾಯಾಲಯವೇ ಆದೇಶ ಹೊರಡಿಸಿದರೆ ಅದು ವ್ಯತಿರಿಕ್ತ ಪರಿಣಾಮ ಬೀರಬಹುದು ಮತ್ತು ಮಹಿಳೆಯರ ಉದ್ಯೋಗದ ಅವಕಾಶಕ್ಕೆ ಕುತ್ತು ಬರಬಹುದು ಎಂದು ನ್ಯಾಯಪೀಠ ಆತಂಕ ವ್ಯಕ್ತಪಡಿಸಿದೆ.

ಈ ಮಾತುಗಳನ್ನು ಹೇಳುವ ಬದಲು ಇಂತಹ ನೀತಿ ರೂಪುಗೊಳ್ಳಲು ಪೂರಕವಾದ, ವೈಜ್ಞಾನಿಕ ಸಮರ್ಥನೆಯ, ಸ್ವಲ್ಪ ಕಾಳಜಿಯ ಮಾತುಗಳನ್ನು ಹೇಳಿದಿದ್ದರೆ ನೀತಿ ರೂಪುಗೊಳ್ಳುವ ಬಗ್ಗೆ ಒಂದಿಷ್ಟು ಭರವಸೆ ಬರುತ್ತಿತ್ತು. ಸರ್ಕಾರದ ಮೇಲೆ ಒತ್ತಡ ಬೀಳುತ್ತಿತ್ತು. ಆದರೆ ಈ ಮಾತನ್ನೇ ತಿರುಚಿ ಉದ್ಯಮಗಳು, ಕಂಪನಿಗಳು ಮಹಿಳೆಯರ ಉದ್ಯೋಗ ಅವಕಾಶಕ್ಕೆ ಕೊಕ್ಕೆ ಹಾಕಲು ಪ್ರಯತ್ನಿಸಬಹುದು.

ಮುಟ್ಟಿನ ಅವಧಿಯಲ್ಲಿ ನೋವು ಮತ್ತು ಮನಸ್ಸಿನ ಕಿರಿಕಿರಿ ಸಾಮಾನ್ಯ. ಯಾರೇ ಮಾತನಾಡಿಸಿದರೂ ಸಿಡಿಸಿಡಿ ಎನ್ನುವ ಹಾಗಾಗುತ್ತದೆ. ನಕಾರಾತ್ಮಕ ಆಲೋಚನೆಗಳು ಬರುತ್ತಿರುತ್ತವೆ. ಮುಟ್ಟಿನ ದಿನಗಳಲ್ಲಿ ಪ್ರತಿ ಮಹಿಳೆಯೂ ಅನುಭವಿಸುವ ನೋವು ಒಬ್ಬೊಬ್ಬರಲ್ಲಿ ಒಂದೊಂದು ವಿಧವಾಗಿರುತ್ತದೆ. ಪ್ರತಿ ತಿಂಗಳೂ ಕೆಲವರಲ್ಲಿ ಹೊಟ್ಟೆನೋವು ಇನ್ನು ಕೆಲವರಲ್ಲಿ ಸೊಂಟನೋವು, ಸ್ತನಗಳಲ್ಲಿ ನೋವು, ಕಾಲು-ತೊಡೆಗಳಲ್ಲಿ ಸೆಳೆತ, ಅಧಿಕ ರಕ್ತಸ್ರಾವ, ಉರಿಮೂತ್ರ, ಮಲಬದ್ಧತೆ, ಮಾತ್ರವಲ್ಲದೇ ಮಾನಸಿಕವಾಗಿ ಆತಂಕ, ಬೇಸರ, ಕೋಪ, ಅಲ್ಪ ಪ್ರಮಾಣದ ಖಿನ್ನತೆ ಸಾಮಾನ್ಯ.

ಬಹುತೇಕ ಮಹಿಳೆಯರು ಸಹಿಸಿಕೊಳ್ಳುತ್ತಾರೆ. ಆದರೆ ವ್ಯಕ್ತಪಡಿಸುವುದಿಲ್ಲ. ಎಲ್ಲರಲ್ಲೂ ಸಾಮಾನ್ಯವಾಗಿ ಮುಟ್ಟಿನ ಆರಂಭದ ದಿನ ನೋವು ಅಧಿಕವಾಗಿರುತ್ತದೆ. ಉದರದ ಮಾಂಸಖಂಡಗಳಲ್ಲಿ ಜರುಗುವ ಆಕುಂಚನ, ಸಂಕೋಚನಗಳಿಂದಾಗಿ ಸಲೀಸಾಗಿ ರಕ್ತಸ್ರಾವವಾಗಲು ಈ ಹೊಟ್ಟೆನೋವು ಕಾಣಿಸಿಕೊಳ್ಳುತ್ತದೆ. ಗರ್ಭಕೋಶದ ಸೋಂಕು ಇದ್ದಲ್ಲಿ ಮತ್ತು ಹುಟ್ಟಿನಿಂದಲೇ ಹಿಂದಕ್ಕೆ ಬಾಗಿದ ಗರ್ಭಕೋಶ ಇದ್ದಲ್ಲಿ ನೋವು ಇದ್ದೇ ಇರುತ್ತದೆ. ಇಂತಹ ಹಲವು ಕಾರಣಗಳಿಂದಾಗಿ ಮಹಿಳೆಯರಿಗೆ ವಿಶ್ರಾಂತಿಯ ಅಗತ್ಯ ಇದೆ.

ಈ ಕಾರಣದಿಂದ ಉದ್ಯೋಗದ ಸ್ಥಳದಲ್ಲಿ ಮುಟ್ಟಿನ ರಜೆ ನೀಡುವ ಬಗ್ಗೆ ವಿಶ್ವದಾದ್ಯಂತ ಚರ್ಚೆಗಳು ನಡೆಯುತ್ತಿವೆ. ಇಂಡೋನೇಷ್ಯಾ, ಜಪಾನ್, ದಕ್ಷಿಣ ಕೊರಿಯಾ, ತೈವಾನ್‌ಗಳಲ್ಲಿ ಈಗಾಗಲೇ ಎರಡು ದಿನಗಳ ಮತ್ತು ಆಫ್ರಿಕಾದ ಜಾಂಬಿಯಾದಲ್ಲಿ ಒಂದು ದಿನದ ಮುಟ್ಟಿನ ರಜೆಯನ್ನು ಈಗಾಗಲೇ ಕಾನೂನುಬದ್ಧಗೊಳಿಸಲಾಗಿದೆ. ಈ ಎಲ್ಲಾ ದೇಶಗಳಲ್ಲಿ ಮಹಿಳೆಯರು ಕೆಲಸ ಮಾಡುವ ಸಾಮರ್ಥ್ಯ ಹೆಚ್ಚಾಗಿರುವುದು ಅಂಕಿಅಂಶಗಳು ಪ್ರಚುರಪಡಿಸುತ್ತವೆ. ಕೋವಿಡ್ ನಂತರ ಸ್ಪೇನಿನಲ್ಲಿ ಮುಟ್ಟಿನ ರಜೆ ನೀಡಲು ಮಸೂದೆ ಮಂಡಿಸಲಾಗಿದೆ.

ಕೋವಿಡ್ ಸಮಯದಲ್ಲಿ ತಿಂಗಳುಗಟ್ಟಲೇ ವರ್ಕ್ ಫ್ರಂ ಹೋಮ್ ಮಾಡುವಾಗ ಮಹಿಳೆಯರಿಗೆ ಮುಟ್ಟಿನ ಅವಧಿಯ ರಜೆಯ ಮಹತ್ವದ ಅರಿವು ಹೆಚ್ಚಾಯಿತು. ಆ ನಂತರ ಖಾಸಗಿ ಕಂಪನಿಯೊಂದು ರಜೆ ಘೋಷಿಸಿತು.

ಭಾರತದಲ್ಲಿ 1992ರಲ್ಲಿ ಬಿಹಾರದಲ್ಲಿ ಮಹಿಳೆಯರಿಗೆ ಎರಡು ದಿನಗಳ ಮುಟ್ಟಿನ ರಜೆ ನೀಡಲಾಗುತ್ತಿದೆ. 2017ರಲ್ಲಿ ಅರುಣಾಚಲ ಪ್ರದೇಶದಲ್ಲಿ 'ದಿ ಮೆನ್ಸುಟ್ರೇಯಷನ್ ಬೆನಿಫಿಟ್ಸ್ ಬಿಲ್ 2017' ಎಂಬ ಖಾಸಗಿ ಮಸೂದೆ ಮಂಡಿಸಲಾಗಿದೆ. ಇದರ ಪ್ರಕಾರ ಖಾಸಗಿ ಮತ್ತು ಸಾರ್ವಜನಿಕ ಸಂಸ್ಥೆಗಳು ಉದ್ಯೋಗಸ್ಥ ಮಹಿಳೆಯರು ಪ್ರತಿ ತಿಂಗಳು ಎರಡು ದಿನಗಳ ರಜೆಗೆ ಅರ್ಹರಾಗಿರುತ್ತಾರೆ. ಇದೊಂದು ಕಾನೂನಾಗಬೇಕಿದೆ.

ಕರ್ನಾಟಕದಲ್ಲಿ ರಾಜ್ಯ ಸರ್ಕಾರ ಖಾಸಗಿ ಕಂಪನಿಗಳು, ಆಶಾ ಕಾರ್ಯಕರ್ತೆಯರು ಮತ್ತು ಅಂಗನವಾಡಿ ಅಕ್ಕಂದಿರಿಗೆ ಮುಟ್ಟಿನ ರಜೆ ಕೊಡುವ ಬಗ್ಗೆ ಮಾದರಿ ನೀತಿ ರೂಪಿಸಿಕೊಡಲು ತಜ್ಞರ ಸಮಿತಿ ರಚಿಸಿದ್ದು ವರದಿ ಬಹುತೇಕ ಸಿದ್ಧವಾಗಿದೆ. ಆದರೆ ಈ ಮಾದರಿ ನೀತಿ ರೂಪಿಸುವುದರಲ್ಲಿ ಸರ್ಕಾರಿ ನೌಕರಿಯಲ್ಲಿರುವ ಮಹಿಳೆಯರನ್ನು ಹೊರಗಿಡಲಾಗಿದೆ. ಇದು ಯಾಕೆಂದು ಇನ್ನೂ ತಿಳಿದು ಬಂದಿಲ್ಲ. ಅವರಿಗೆ ಪ್ರತ್ಯೇಕ ಸೌಲಭ್ಯ ಈಗಾಗಲೇ ಇದೆಯೋ ಅಥವಾ ಅವರಿಗೆ ಪ್ರತ್ಯೇಕ ನೀತಿಯನ್ನು ರೂಪಿಸಲಾಗುತ್ತಿದೆಯೋ ತಿಳಿದಿಲ್ಲ.

ಮುಟ್ಟಿನ ಸಮಯದಲ್ಲಿ ಪ್ರತಿ ಉದ್ಯೋಗದ ಸ್ಥಳದಲ್ಲಿ ಮಹಿಳೆಯರಿಗೆ ರಜೆ ನೀಡುವ ಸೌಲಭ್ಯ ಮತ್ತು ವಿಶ್ರಾಂತಿಯ ಸ್ಥಳ ಇರಲೇಬೇಕು. ಇದರಿಂದ ಅವರ ಕಾರ್ಯಕ್ಷಮತೆ ಹೆಚ್ಚುತ್ತದೆ. ಇಂಥ ಕಾನೂನು ಬಂದಲ್ಲಿ ಮಹಿಳೆಯರಿಗೆ ಮುಟ್ಟಿನ ದಿನಗಳು ಹೆಚ್ಚು ಸಹನೀಯವಾಗಲು ಸಾಧ್ಯ. ಮುಟ್ಟಿನ ರಜೆ ಮಹಿಳೆಯರ ಹಕ್ಕು.

ಡಾ. ವಸುಂಧರಾ ಭೂಪತಿ

ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ಯಾವುದು ಸೂಕ್ತ ಆಯ್ಕೆ?

ಸ್ಪಂದನ



ಡಾ. ವೀಣಾ ಎಸ್‌. ಭಟ್

- **32 ವರ್ಷ. ಆಫೀಸಿನ ಕ್ಲರ್ಕ್ ಆಗಿ ಕೆಲಸ ಮಾಡುತ್ತಿದ್ದೇನೆ. ಎರಡನೇ ಬಾರಿಗೆ ಗರ್ಭಿಣಿಯಾಗಿದ್ದೇನೆ. ಮೊದಲ ಮಗನಿಗೆ 4 ವರ್ಷ. ಸಹಜ ಹೆರಿಗೆಯಾಗಿತ್ತು. ಈ ಬಾರಿ ಹೆರಿಗೆಯ ನಂತರ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬೇಕು. ಕೈ ಆಪರೇಷನ್ ಮಾಡಿಸಲೇ ಅಥವಾ ಕರೆಂಟ್ ಆಪರೇಷನ್ ಒಳ್ಳೆಯದೇ. ನನ್ನದು ಉಷ್ಣಶರೀರ ಪ್ರಕೃತಿ. ಖಾಸಗಿ ವೈದ್ಯರ ಹತ್ತಿರ ತೋರಿಸುತ್ತಿರುವೆ. ಸಿಸೇರಿಯನ್ ಮಾಡಿಸಿಕೊಂಡು ಒಟ್ಟಿಗೆ ಸಂತಾನಶಕ್ತಿ ಹರಣ ಚಿಕಿತ್ಸೆ ಮಾಡಿಸಿಕೊಳ್ಳುವುದು ಒಳ್ಳೆಯದೇ? ಸಲಹೆ ನೀಡಿ.**

ಪಂಕಜ, ಊರು ತಿಳಿಸಿಲ್ಲ.

ಪಂಕಜ ಅವರೇ ಮೊದಲನೆಯದಾಗಿ ನೀವು ಯಾವುದೇ ಕಾರಣಕ್ಕೂ ಸಂತಾನಶಕ್ತಿ ಹರಣ ಚಿಕಿತ್ಸೆಗಾಗಿ ಸಿಸೇರಿಯನ್ ಮಾಡಿಸಿಕೊಳ್ಳುವುದು ಬೇಡ. ಮೊದಲನೆಯದು ಸಹಜ ಹೆರಿಗೆಯಾಗಿದೆ. ಸಿಸೇರಿಯನ್ ಹೆರಿಗೆ ಸುರಕ್ಷಿತ ಅನಿಸಿದರೂ ಅದು ದೊಡ್ಡಶಸ್ತ್ರ ಚಿಕಿತ್ಸೆಯ ವ್ಯಾಪ್ತಿಯಡಿ ಬರುತ್ತದೆ. ಅದರದ್ದೆ ಆದ ಸಾಧಕ ಬಾಧಕಗಳು ಇವೆ. ಮೊದಲ ಹೆರಿಗೆ ನಿಮಗೆ ಸಹಜವಾಗಿ ಆಗಿರುವುದರಿಂದ ಈಬಾರಿಯೂ ಹೆಚ್ಚಿನ ಪಕ್ಷ ಸಹಜ ಹೆರಿಗೆಯೇ ಆಗುವುದು. ನೀವು ಮಗು ಜನನವಾದ ಮೇಲೆ ಮಗುವಿನ ಆರೋಗ್ಯ ಸ್ಥಿತಿ ಹೇಗಿದೆ ಎಂದು ನೋಡಿಕೊಂಡು ನಂತರ ಶಾಶ್ವತ ಸಂತಾನಶಕ್ತಿ ಹರಣ ಚಿಕಿತ್ಸೆ ಮಾಡಿಸಿಕೊಳ್ಳಿ. ಹೆರಿಗೆಯಾದ ತಕ್ಷಣ 'ಮಿನಿಲ್ಯಾಪ್' ಅಥವಾ ಕೈಆಪರೇಷನ್ ಎಂದು ಜನಸಾಮಾನ್ಯರು ಹೇಳುವ ಈ ಶಸ್ತ್ರಚಿಕಿತ್ಸೆಯಲ್ಲಿ ಹೊಟ್ಟೆಯನ್ನ ಕೇವಲ ಒಂದೆರಡು ಇಂಚು ಮಾತ್ರ ಕೊಯ್ದು, ಆ ರಂಧ್ರದಿಂದ ಗರ್ಭನಾಳಗಳನ್ನ ಒಂದೊಂದಾಗಿ ಕೈಬೆರಳಿಂದ ಹೊರತಂದು ನಿರ್ದಿಷ್ಟ ಜಾಗದಲ್ಲಿ ಒಂದು ಸೆಂ.ಮಿನಷ್ಟು ಕತ್ತರಿಸಿ ಸೂಕ್ತದಾರದಿಂದ ಹೊಲಿಗೆ ಹಾಕಿ ಉದರದೊಳಗೆ ಸೇರಿಸಿ ಹೊಟ್ಟೆಯನ್ನ ಪುನಃ ಹೊಲಿಗೆ ಹಾಕುತ್ತಾರೆ. ಈ ವಿಧಾನವನ್ನು ಹೆರಿಗೆಯಾಗಿ ಒಂದೆರಡು ದಿನಗಳಲ್ಲೇ ಮಾಡಬಹುದು. ಇಲ್ಲವೇ ಮಗುವಿನ ಬೆಳವಣಿಗೆ ನೋಡಿಕೊಂಡು ನಂತರದ ದಿನಗಳಲ್ಲೂ ಮಾಡಿಸಿಕೊಳ್ಳಬಹುದು.

ಕರೆಂಟ್ ಆಪರೇಷನ್ ಎಂದರೆ ಉದರದರ್ಶಕ ಅಥವಾ ಲ್ಯಾಪ್ರೋಸ್ಕೋಪಿಕ್ ಟ್ಯೂಬೆಕ್ಟಮಿ- ಅಂದರೆ ಈ ವಿಧಾನದಲ್ಲಿ ಹೊಟ್ಟೆಯಲ್ಲಿ ಸಣ್ಣರಂಧ್ರವನ್ನು ಮಾಡಿ ಉದರದರ್ಶಕವನ್ನು ತೂರಿಸಿ ಕಾರ್ಬನ್‌ಡೈ ಆಕ್ಸೈಡ್ ಅನಿಲದ ಮೂಲಕ ಸ್ಥಳಾವಕಾಶಮಾಡಿಕೊಂಡು ಗರ್ಭನಾಳವನ್ನು ಗುರುತಿಸಿ ಸೂಕ್ತ ಜಾಗದಲ್ಲಿ ಪ್ಲಾಸ್ಟಿಕ್‌ಕ್ಲಿಪ್ ಅಥವಾ ಬ್ಯಾಂಡ್‌ಗಳನ್ನು ಗರ್ಭನಾಳಕ್ಕೆ ಅಳವಡಿಸುತ್ತಾರೆ. ಈ ವಿಧಾನವನ್ನೇ ಜನಸಾಮಾನ್ಯರು ಕರೆಂಟ್ ಆಪರೇಷನ್ ಅನ್ನುತ್ತಾರೆ. ಆದರೆ ಈ ವಿಧಾನವನ್ನು ಹೆರಿಗೆಯಾದ ತಕ್ಷಣ ಮಾಡಲು ಸಾಧ್ಯವಿಲ್ಲ. ಕನಿಷ್ಠ 6ರಿಂದ 8ತಿಂಗಳು ಕಳೆದ ಮೇಲೆ ಮಾಡಲು ಸಾಧ್ಯವಾಗುವುದು. ಈ ಎರಡು ವಿಧಾನದಲ್ಲಿಯೂ ಒಂದೆರಡು ದಿನಗೊಳಗಾಗಿ ಮನೆಗೆ ತೆರಳಬಹುದು. ಉದರದರ್ಶಕದಲ್ಲಿ ಗರ್ಭನಾಳದ ಬ್ಯಾಂಡ್ ತುಂಬಾ ಅಪರೂಪದ ಸಂದರ್ಭದಲ್ಲಿ ಕಳಚಿಬೀಳಬಹುದು. ಶರೀರದ ಉಷ್ಣತೆಗೂ ಲ್ಯಾಪ್ರೋಸ್ಕೋಪಿ ಆಪರೇಷನ್‌ಗೂ ಯಾವ ಸಂಬಂಧವೂ ಇಲ್ಲ. ಎರಡೂ ವಿಧಾನಗಳು ಸಂತಾನಶಕ್ತಿ ಹರಣ ಚಿಕಿತ್ಸೆಗೆ ಉತ್ತಮ ವಿಧಾನಗಳೇ. ಲ್ಯಾಪ್ರೋಸ್ಕೋಪಿ ವಿಧಾನದಲ್ಲಿ ಬೇಗನೇ ಶಸ್ತ್ರ ಚಿಕಿತ್ಸೆಯಿಂದ ಚೇತರಿಸಿಕೊಳ್ಳಬಹುದು

- **ಮೇಡಂ ನನಗೆ ಮದುವೆಯಾಗಿ 3ವರ್ಷಗಳಾಯಿತು. ನನಗೆ ಅಸ್ತಮಾ ಕಾಯಿಲೆಯಿದ್ದು, ಅದಕ್ಕಾಗಿ ಇನ್‌ಹೇಲರ್‌ಅನ್ನು ವೈದ್ಯರು ಕೊಟ್ಟಿರುತ್ತಾರೆ. ನನಗೆ ಕಳೆದ ವರ್ಷ ಗರ್ಭಧಾರಣೆಯಾಗಿ 2ನೇ ತಿಂಗಳಿಗೆ ಗರ್ಭಪಾತವಾಯಿತು ಮತ್ತೆ ಗರ್ಭನಿಂತರೆ ಹೀಗೆ ಆಗುತ್ತದೆಯೇ? ಇನ್‌ಹೇಲರ್ ತೆಗೆದುಕೊಂಡಿರುವುದರಿಂದ ಹೀಗಾಯಿತೇ? ಮಗುವಿಗೂ ಅಸ್ತಮಾ ಬರಬಹುದೇ?**

ಗಂಗಾ, ಊರು ತಿಳಿಸಿಲ್ಲ.

ಗಂಗಾ, ನಿಮಗೆ ಈ ಮೊದಲು ಆಗಿರುವ ಗರ್ಭಪಾತವು ಖಂಡಿತವಾಗಿಯೂ ನೀವು ತೆಗೆದುಕೊಳ್ಳುತ್ತಿರುವ ಔಷಧಿಯಿಂದ ಆಗಿರಲಿಕ್ಕಿಲ್ಲ. ಹೆಚ್ಚಿನ ಸಂದರ್ಭಗಳಲ್ಲಿ ಅಸ್ತಮ ಇದ್ದಾಗ ಇನ್‌ಹೇಲರ್ ಔಷಧಗಳನ್ನು ತೆಗೆದುಕೊಳ್ಳುವುದರಿಂದ ಗರ್ಭಪಾತವಾಗುವ ಸಂಭವವೂ ತುಂಬಾ ಕಡಿಮೆ. ತಜ್ಞವೈದ್ಯರ ಮೇಲ್ವಿಚಾರಣೆಯಲ್ಲಿ ಔಷಧಗಳನ್ನು ಮುಂದುವರಿಸುತ್ತಾ ಗರ್ಭಧಾರಣೆಯಾದರೂ ಹೆಚ್ಚಿನ ತೊಂದರೆಯಾಗದೇ ಸುರಕ್ಷಿತವಾಗಿ ಈ ಹಂತವನ್ನು ದಾಟಬಹುದು. ಅಲರ್ಜಿಕ್ ಆಸ್ತಮಾ ಇದ್ದರೆ ನಿಮ್ಮ ಮಗುವಿಗೆ ಅದು ಬರುವ ಸಂಭವ ಹೆಚ್ಚಿದ್ದರೂ ಗರ್ಭಾವಸ್ಥೆಯಲ್ಲಿ ಪೌಷ್ಟಿಕ ಆಹಾರ ಸೇವಿಸುತ್ತಾ ಹೆರಿಗೆಯ ನಂತರವೂ ಮುಂದುವರಿಸಿ. ಜತೆಗೆ ಮಗುವಿಗೆ ದೀರ್ಘಾವಧಿಯವರೆಗೆ ಸ್ತನ್ಯಪಾನ ಮಾಡಿಸಿದರೆ ಮಗುವಿಗೆ ಆಸ್ತಮಾ ಬರುವ ಸಂಭವವೂ ಕಡಿಮೆ ಆಗುತ್ತದೆ.

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

‘40 ವರ್ಷಗಳಲ್ಲಿ ಕಪ್ಪು ಚುಕ್ಕೆ ಇಲ್ಲ; ತೆರೆದ ಪುಸ್ತಕ’

ಮುಡಾ ಬದಲಿ ನಿವೇಶನ ಹಂಚಿಕೆಯಲ್ಲಿ ಅಕ್ರಮದ ಆರೋಪಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು

ಬೆಂಗಳೂರು: ‘ನನ್ನ ರಾಜಕೀಯ ಜೀವನ ತೆರೆದ ಪುಸ್ತಕದಂತೆ ಪಾರದರ್ಶಕ ಮತ್ತು ಪ್ರಾಮಾಣಿಕವಾಗಿದೆ. 40 ವರ್ಷಗಳಲ್ಲಿ ಕಪ್ಪು ಚುಕ್ಕೆ ಬೀಳದಂತೆ ಕಾಪಾಡಿಕೊಂಡಿರುವ ನನ್ನ ವ್ಯಕ್ತಿತ್ವಕ್ಕೆ ಮಸಿ ಬಳಿಯಲು ಬಿಜೆಪಿ, ಜೆಡಿಎಸ್‌ನವರು ಮುಡಾ ನಿವೇಶನ ಹಂಚಿಕೆ ವಿಷಯದಲ್ಲಿ ಸುಳ್ಳು ಆರೋಪ ಮಾಡುತ್ತಿದ್ದಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ತಮ್ಮ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ಬದಲಿ ನಿವೇಶನ ಹಂಚಿಕೆಯಲ್ಲಿ ಅವ್ಯವಹಾರ ನಡೆದಿದೆ ಎಂಬ ಆರೋಪಗಳ ಕುರಿತು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಸುದೀರ್ಘವಾಗಿ ಪ್ರತಿಕ್ರಿಯೆ ನೀಡಿದ ಅವರು, ‘ಚುನಾವಣೆಗಳಲ್ಲಿನ ಸತತ ಸೋಲಿನಿಂದ ಹತಾಶರಾಗಿರುವ ವಿರೋಧ ಪಕ್ಷಗಳು ಸೇಡು ತೀರಿಸಿಕೊಳ್ಳುವ ನೀಚ ರಾಜಕಾರಣ ಮಾಡುತ್ತಿದೆ’ ಎಂದು ವಾಗ್ದಾಳಿ ನಡೆಸಿದರು.

‘ನಾನು 1983ರಲ್ಲಿ ಶಾಸಕನಾಗಿ ಆಯ್ಕೆಯಾಗಿದ್ದೆ. 1984ರಲ್ಲೇ ಸಚಿವನಾಗಿದ್ದೆ. ಉಪ ಮುಖ್ಯಮಂತ್ರಿಯೂ ಆಗಿದ್ದೆ. ಎರಡನೇ ಬಾರಿ ಮುಖ್ಯಮಂತ್ರಿ ಆಗಿದ್ದೇನೆ. ಈವರೆಗೆ ನನ್ನ ಮೇಲೆ ಒಂದು ಆರೋಪವೂ ಬಂದಿಲ್ಲ. ಕಪ್ಪು ಚುಕ್ಕೆ ಬಾರದಂತೆ ನಡೆದುಕೊಂಡಿದ್ದೇನೆ. ನಾನು ಎರಡನೇ ಬಾರಿ ಮುಖ್ಯಮಂತ್ರಿ ಆಗಿರುವುದನ್ನು ಸಹಿಸಲು ಬಿಜೆಪಿ, ಜೆಡಿಎಸ್‌ನವರಿಗೆ ಆಗುತ್ತಿಲ್ಲ. ಅದಕ್ಕಾಗಿಯೇ ಸುಳ್ಳು ಆರೋಪ ಮಾಡಿ ನನ್ನ ವ್ಯಕ್ತಿತ್ವದ ತೇಜೋವಧೆ ಮಾಡಲು ನಿರಂತರ ಪ್ರಯತ್ನ ನಡೆಸುತ್ತಿದ್ದಾರೆ’ ಎಂದರು.

ವಿಧಾನಸಭಾ ಚುನಾವಣೆಯಲ್ಲಿ ಬೆಂಬಲಿತ ಸಹಸದಸ್ಯರೂ ಸೇರಿದಂತೆ ಕಾಂಗ್ರೆಸ್ 136 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತು. ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಮಾಡಿಕೊಂಡರೂ ಲೋಕಸಭಾ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗಳಿಸಲು ಸಾಧ್ಯವಾಗಲಿಲ್ಲ. ಇದರಿಂದ ಹತಾಶರಾಗಿರುವ ಬಿಜೆಪಿ ಮತ್ತು ಜೆಡಿಎಸ್‌ನವರು ಸೇಡಿನ ರಾಜಕಾರಣಕ್ಕೆ ವಿಧಾನಸಭೆ ಮತ್ತು ವಿಧಾನ ಪರಿಷತ್‌ಗಳನ್ನು ಬಳಸಿಕೊಂಡರು ಎಂದು ದೂರಿದರು.

‘ಮುಡಾದಿಂದ ಬದಲಿ ನಿವೇಶನ ಹಂಚಿಕೆ ವಿಚಾರದಲ್ಲಿ ನಾನಾಗಲಿ, ನನ್ನ ಪತ್ನಿ ಪಾರ್ವತಿ ಅವರಾಗಲಿ, ನನ್ನ ಬಾಮೈದ ಬಿ.ಎಂ. ಮಲ್ಲಿಕಾರ್ಜುನ ಸ್ವಾಮಿ ಅವರಾಗಲಿ ಯಾವುದೇ ತಪ್ಪು ಮಾಡಿಲ್ಲ. ನ್ಯಾಯಯುತವಾಗಿ ಖರೀದಿಸಿದ ಜಮೀನನ್ನು ಮುಡಾ ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿತ್ತು. ಕಾನೂನಿನ ಪ್ರಕಾರವೇ ಬದಲಿ ನಿವೇಶನ ಹಂಚಿಕೆ ಮಾಡಲಾಗಿದೆ. ಆದರೆ, ಬಿಜೆಪಿ, ಜೆಡಿಎಸ್‌ನವರು ಸುಳ್ಳು ದಾಖಲೆಗಳನ್ನು ಹರಿಯಬಿಟ್ಟು ನನ್ನ ಮತ್ತು ನಮ್ಮ ಕುಟುಂಬದ ತೇಜೋವಧೆಗೆ ಯತ್ನಿಸುತ್ತಿದ್ದಾರೆ. ನಮ್ಮ ಸರ್ಕಾರಕ್ಕೂ ಕೆಟ್ಟ ಹೆಸರು ತರಲು ಹೊರಟಿದ್ದಾರೆ’ ಎಂದು ಸಿದ್ದರಾಮಯ್ಯ ಆರೋಪಿಸಿದರು.

‘ರಾಜ್ಯದ ಬಹುಭಾಗದಲ್ಲಿ ಅತಿವೃಷ್ಟಿ, ಪ್ರವಾಹ ಇದೆ. ವಿಧಾನಮಂಡಲದ ಅಧಿವೇಶನದಲ್ಲಿ ಆ ಬಗ್ಗೆ ಚರ್ಚೆ ಆಗಬೇಕಿತ್ತು. ವಿರೋಧ ಪಕ್ಷದವರು ವಾಲ್ಮೀಕಿ ಅಭಿವೃದ್ಧಿ ನಿಗಮದ ಪ್ರಕರಣ, ಮುಡಾ ಪ್ರಕರಣ ಮುಂದಿಟ್ಟುಕೊಂಡು ಕಲಾಪ ಹಾಳುಮಾಡಿದರು. ಕಾಂಗ್ರೆಸ್ ಸದಸ್ಯರು ಜನರ ಸಂಕಷ್ಟಗಳ ಬಗ್ಗೆ ಪ್ರಸ್ತಾಪಿಸಿದರೂ ಚರ್ಚೆಗೆ ಅವಕಾಶ ನೀಡದೆ ಗಲಾಟೆ ಮಾಡಿದರು’ ಎಂದು ಅಸಮಾಧಾನ ವ್ಯಕ್ತಪಡಿಸಿದರು. ❖

‘ವಿಚಾರಣೆಯಿಂದ ಸತ್ಯ ಹೊರಬರಲಿದೆ’

‘ಮುಡಾ ನಿವೇಶನಗಳ ಹಂಚಿಕೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪಗಳ ಕುರಿತು ಸಮಗ್ರ ವಿಚಾರಣೆ ನಡೆಸಲು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ನೇತೃತ್ವದಲ್ಲಿ ಏಕಸದಸ್ಯ ಆಯೋಗ ನೇಮಿಸಲಾಗಿದೆ. ವಿಚಾರಣೆಯಲ್ಲಿ ಎಲ್ಲ ಸತ್ಯವೂ ಹೊರಬರಲಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘2006ರಿಂದ ಈವರೆಗೆ ನಡೆದಿರುವ ಎಲ್ಲ ಪ್ರಕ್ರಿಯೆಗಳ ಬಗ್ಗೆಯೂ ವಿಚಾರಣೆ ನಡೆಸಲು ಆದೇಶ ಹೊರಡಿಸಲಾಗಿದೆ. ಯಾವ ಅವಧಿಯಲ್ಲಿ? ಏನು ನಡೆದಿದೆ? ಎಂಬ ಸತ್ಯ ಜನರಿಗೆ ಗೊತ್ತಾಗುತ್ತದೆ’ ಎಂದರು.




ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಎಚ್‌ಡಿಕೆಗೆ ಕೈಗಾರಿಕಾ ನಿವೇಶನ ದಾಖಲೆ ಬಿಡುಗಡೆ ಮಾಡಿದ ಸಿ.ಎಂ

ಬೆಂಗಳೂರು: ಮೈಸೂರಿನ ವಿಶ್ವೇಶ್ವರಯ್ಯನಗರ ಕೈಗಾರಿಕಾ ಸಬರ್ಬ್ 3ನೇ ಹಂತದಲ್ಲಿ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಮಂಜೂರು ಮಾಡಲಾದ ನಿವೇಶನ ಮತ್ತು ನಿವೇಶನದ ಬದಲಿಗೆ ನೀಡಿದ ಬದಲಿ ನಿವೇಶನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆ ಮಾಡಿದರು.

ತಮಗೆ ಕೈಗಾರಿಕಾ ನಿವೇಶನ ಮಂಜೂರು ಮಾಡುವಂತೆ ಕುಮಾರಸ್ವಾಮಿ ಅವರು ಬರೆದ ಪತ್ರ, ನಿವೇಶನ ಮಂಜೂರಾದ ದಾಖಲೆ, ಶುಲ್ಕ ಪಾವತಿ ರಸೀತಿ, ಸ್ವಾಧೀನ ಪತ್ರ, ಬದಲಿ ನಿವೇಶನ ನೀಡುವಂತೆ ಕುಮಾರಸ್ವಾಮಿ ಅವರು ಬರೆದ ಪತ್ರಗಳ ಪ್ರತಿಗಳನ್ನು ಅವರು ಮಾಧ್ಯಮಗೋಷ್ಠಿಯಲ್ಲಿ ಪ್ರದರ್ಶಿಸಿದರು.



ಕೂಡಲೇ ಕೈಗಾರಿಕೆಯನ್ನು ಆರಂಭಿಸಲು ನಿವೇಶನ ಮಂಜೂರು ಮಾಡಿ ಎಂದು ಕೋರಿ ಎಚ್.ಡಿ.ಕುಮಾರಸ್ವಾಮಿ 1984ರಲ್ಲಿ ಬರೆದಿದ್ದ ಪತ್ರ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆ ಮಾಡಿದ ದಾಖಲೆ. ಕೆಲವೇ ದಿನಗಳಲ್ಲಿ ನಿವೇಶನ ಮಂಜೂರಾಗಿದ್ದರೂ ಅವರು ಕೈಗಾರಿಕೆ ಆರಂಭಿಸಿಲ್ಲ. ಎರಡು ವರ್ಷಗಳ ಒಳಗೆ ಕೈಗಾರಿಕೆ ಆರಂಭಿಸಬೇಕು ಎಂಬ ನಿಯಮ ಉಲ್ಲಂಘಿಸಿದ್ದಾರೆ ಎಂದು ಸಿದ್ದರಾಮಯ್ಯ ಆರೋಪಿಸಿದ್ದಾರೆ

ದಾಖಲೆಗಳ ಪಟ್ಟಿ

- **02.11.1984:** ‘ನಾನು ಮೈಸೂರು ನಿವಾಸಿಯಾಗಿದ್ದು, ಮೈಸೂರಿನಲ್ಲಿ ಕೈಗಾರಿಕೆ ಆರಂಭಿಸಲು ನಿವೇಶನ ಮಂಜೂರು ಮಾಡಿ’ ಎಂದು ಎಚ್.ಡಿ.ಕುಮಾರಸ್ವಾಮಿ ಅವರು ಸಿಐಟಿಬಿ ಅಧ್ಯಕ್ಷರಿಗೆ ಬರೆದ ಪತ್ರ
- **07.11.1984:** ಎಚ್.ಡಿ.ಕುಮಾರಸ್ವಾಮಿ ಅವರ ಕೋರಿಕೆ ಮೇರೆಗೆ 75 ಅಡಿx280 ಅಡಿ ನಿವೇಶನ ಮಂಜೂರು ಮಾಡಿ, ₹37,334 ಶುಲ್ಕ ಪಾವತಿಸುವಂತೆ ಸಿಐಟಿಬಿ ನೀಡಿದ ಮಂಜೂರಾತಿ ಪತ್ರ. ಆರು ತಿಂಗಳೊಳಗೆ ಕಟ್ಟಡ ನಿರ್ಮಾಣ ಕಾಮಗಾರಿ ಆರಂಭಿಸಬೇಕು ಮತ್ತು ಎರಡು ವರ್ಷಗಳ ಒಳಗೆ ಕೈಗಾರಿಕೆ ಕಾರ್ಯಾರಂಭ ಮಾಡಬೇಕು ಎಂದು ಪತ್ರದಲ್ಲಿ ಷರತ್ತು ಹಾಕಲಾಗಿತ್ತು
- **12.12.1984:** ಸಂಬಂಧಿತ ನಿವೇಶನಕ್ಕೆ ಶುಲ್ಕ ಪಾವತಿ ಮಾಡಿದ ಮತ್ತು ಸ್ವಾಧೀನ ಪತ್ರ ಕೋರಿದ್ದನ್ನು ಉಲ್ಲೇಖಿಸಿ ಮೈಸೂರು ನಗರಾಭಿವೃದ್ಧಿ ಮಂಡಳಿಯು ನೀಡಿದ ಪತ್ರ
- **09.12.2000:** ಸಬರ್ಬ್ 3ನೇ ಹಂತದಲ್ಲಿ ತಮಗೆ ಮಂಜೂರಾಗಿರುವ 17/ಬಿ ನಿವೇಶನಕ್ಕೆ ಸಂಬಂಧಿಸಿದಂತೆ ಸ್ವಾಧೀನ ಪತ್ರ ನೀಡುವಂತೆ ಕುಮಾರಸ್ವಾಮಿ ಅವರು ಮುಡಾ ಆಯುಕ್ತರಿಗೆ ಬರೆದ ಪತ್ರ
- **23.02.2017:** ‘ಕೈಗಾರಿಕೆ ಪ್ರಾರಂಭಿಸಲು ನನಗೆ ಮಂಜೂರಾಗಿದ್ದ 17/ಬಿ ನಿವೇಶನದ ಅರ್ಧ ಭಾಗವನ್ನು ಬೇರೆಯವರಿಗೂ ಮಂಜೂರು ಮಾಡಲಾಗಿದೆ. ಈ ನಿವೇಶನದ ಸ್ವಾಧೀನವನ್ನೂ ನನಗೆ ನೀಡಿರುವುದಿಲ್ಲ. ಹೀಗಾಗಿ ಕೂಡಲೇ ಕೈಗಾರಿಕೆಯನ್ನು ಪ್ರಾರಂಭಿಸಲು ಸದರಿ ನಿವೇಶನದ ಹಕ್ಕು ಪತ್ರ ನೀಡಬೇಕು ಅಥವಾ ಬದಲಿ ನಿವೇಶನದ ಹಕ್ಕು ಪತ್ರವನ್ನಾದರೂ ನೀಡಬೇಕು’ ಎಂದು ಎಚ್.ಡಿ.ಕುಮಾರಸ್ವಾಮಿ ಮುಡಾ ಆಯುಕ್ತರಿಗೆ ಬರೆದ ಪತ್ರ
- **06.09.2019:** ‘ಕೈಗಾರಿಕೆ ಪ್ರಾರಂಭಿಸಲು ನನಗೆ ಮಂಜೂರಾಗಿದ್ದ 17/ಬಿ ನಿವೇಶನದ ಅರ್ಧ ಭಾಗವನ್ನು ಬೇರೆಯವರಿಗೂ ಮಂಜೂರು ಮಾಡಲಾಗಿದೆ. ಈ ನಿವೇಶನದ ಸ್ವಾಧೀನವನ್ನೂ ನನಗೆ ನೀಡಿರುವುದಿಲ್ಲ. ಈ ನಿವೇಶನಕ್ಕೆ ಹಕ್ಕು ಪತ್ರ ನೀಡಿ ಅಥವಾ ಅದೇ ಬಡಾವಣೆಯಲ್ಲಿ ಬದಲಿ ನಿವೇಶನ ಮಂಜೂರು ಮಾಡಿ, ಹಕ್ಕುಪತ್ರ ನೀಡಿ’ ಎಂದು ಎಚ್.ಡಿ.ಕುಮಾರಸ್ವಾಮಿ ಮುಡಾ ಆಯುಕ್ತರಿಗೆ ಬರೆದ ಪತ್ರ

‘ಪಿಟಿಸಿಎಲ್ ಕಾಯ್ದೆ ಅನ್ವಯ ಆಗುವುದಿಲ್ಲ’

‘ಮೈಸೂರು ತಾಲ್ಲೂಕಿನ ಕಸಬಾ ಹೋಬಳಿಯ ಕೆಸರೆ ಗ್ರಾಮದ ಸರ್ವೆ ನಂಬರ್ 464ರಲ್ಲಿನ 3 ಎಕರೆ 16 ಗುಂಟೆ ಜಮೀನನ್ನು ಪರಿಶಿಷ್ಟ ಜಾತಿಯ ಜವರ ಬಿನ್ ನಿಂಗ ಎಂಬುವವರು ಸರ್ಕಾರದ ಹರಾಜು ಪ್ರಕ್ರಿಯೆಯಲ್ಲಿ 1935ರಲ್ಲಿ ಖರೀದಿಸಿದ್ದರು. ಅದು ಸ್ವಯಾರ್ಜಿತವಾಗಿ ಬಂದ ಆಸ್ತಿ ಆಗಿರುವ ಕಾರಣದಿಂದ ಕರ್ನಾಟಕ ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್‌ಟಿ) (ಕೆಲವು ಭೂಮಿಗಳ ವರ್ಗಾವಣೆ ನಿಷೇಧ– ಪಿಟಿಸಿಎಲ್) ಕಾಯ್ದೆ ಅನ್ವಯವಾಗುವುದಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ದಲಿತರ ಜಮೀನು ಖರೀದಿಸಿ, ಅಕ್ರಮ ನಡೆಸಿದ್ದಾರೆ ಎಂದು ವಿರೋಧ ಪಕ್ಷಗಳವರು ಆರೋಪಿಸಿದ್ದಾರೆ. ಪರಿಶಿಷ್ಟರಿಗೆ ಸರ್ಕಾರದಿಂದ ಮಂಜೂರು ಮಾಡುವ ಜಮೀನುಗಳಿಗೆ ಮಾತ್ರ ಪಿಟಿಸಿಎಲ್ ಕಾಯ್ದೆ ಅನ್ವಯವಾಗುತ್ತದೆ. ಹರಾಜಿನಲ್ಲಿ ಖರೀದಿಸಿದ ಜಮೀನಿಗೆ ಅನ್ವಯ ಆಗುವುದಿಲ್ಲ’ ಎಂದರು.

‘ಕುಟುಂಬದ ಎಲ್ಲ ಸದಸ್ಯರ ಒಪ್ಪಿಗೆ ಪಡೆದ ಬಳಿಕವೇ ದೇವರಾಜು ಎಂಬುವವರು 3 ಎಕರೆ 16 ಗುಂಟೆ ಜಮೀನನ್ನು ನಮ್ಮ ಬಾಮೈದ ಮಲ್ಲಿಕಾರ್ಜುನ ಸ್ವಾಮಿ ಅವರಿಗೆ ಮಾರಾಟ ಮಾಡಿದ್ದರು. ಆದರೆ, ಬಿಜೆಪಿ, ಜೆಡಿಎಸ್‌ನವರು ಅವರ ಕುಟುಂಬದವರನ್ನೇ ಎತ್ತಿಕಟ್ಟಿ ದೂರು ಕೊಡಿಸಿದ್ದಾರೆ. ಮನೆ ಒಡೆಯುವ ಮನೆಮುರುಕ ರಾಜಕೀಯ ಮಾಡುತ್ತಿದ್ದಾರೆ’ ಎಂದು ಟೀಕಾಪ್ರಹಾರ ನಡೆಸಿದರು.

‘ಅರಸು, ಧರ್ಮಸಿಂಗ್‌ಗೂ ಹೀಗೆಯೇ ಮಾಡಿದ್ದರು’

ಬೆಂಗಳೂರು: ‘ನಾಲ್ಕು ದಶಕಗಳಿಂದ ಪ್ರಾಮಾಣಿಕವಾಗಿ ಹಿಂದುಳಿದ ವರ್ಗಗಳು, ದಲಿತರು, ಅಲ್ಪ ಸಂಖ್ಯಾತರು, ಬಡವರು, ಕೂಲಿ ಕಾರ್ಮಿಕರು, ಶೋಷಿತ ವರ್ಗಗಳ ಪರ ಯಾವುದೇ ಕಳಂಕವಿಲ್ಲದೆ ಕೆಲಸ ಮಾಡಿದ್ದ ನನ್ನ ವ್ಯಕ್ತಿತ್ವಕ್ಕೆ ಮಸಿ ಬಳಿಯಲು ಅಂಥ ಮನೋಸ್ಥಿತಿಯ ಜನರು ಪ್ರಯತ್ನಿಸುತ್ತಿದ್ದಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ಹಿಂದುಳಿದ ವರ್ಗಗಳ ನಾಯಕ ಎಂದೇ ಖ್ಯಾತರಾಗಿದ್ದ, ನಾಡು ಕಂಡ ಧೀಮಂತ ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸರು, ಧರ್ಮಸಿಂಗ್ ಅವರ ವಿಚಾರದಲ್ಲೂ ಹೀಗೆ ಆಗಿತ್ತು. ಈಗ ನನ್ನ ವಿಚಾರಕ್ಕೂ ಬಂದಿದ್ದಾರೆ. ಅಡ್ಡಿಯಿಲ್ಲ ಬನ್ನಿ. ಬಂದದ್ದು ಒಳ್ಳೆಯದೆ ಆಯಿತು. ರಾಜ್ಯದ ಜನ ನೋಡುತ್ತಿದ್ದಾರೆ. ದಮನಿತ ವರ್ಗಗಳ ಜನಸಮೂಹದಿಂದ ಬಂದವರು ರಾಜಕಾರಣವನ್ನೆ ಮಾಡಬಾರದೆಂಬ ನಿಲುವು ಇವರದು. ಆದ್ದರಿಂದಲೇ ಈ ರೀತಿ ‘ಮುಡಾ’ ವಿಚಾರದಲ್ಲಿ ಒಂದು ಗುಲಗಂಜಿಯಷ್ಟು ನ್ಯೂನತೆಯಿಲ್ಲದಿದ್ದರೂ ಕೆಟ್ಟ ರಾಜಕಾರಣ ಮಾಡುತ್ತಿದ್ದಾರೆ’ ಎಂದು ಸಿದ್ದರಾಮಯ್ಯ ಭಾವುಕರಾದರು.

‘ಬಿಜೆಪಿ–ಜೆಡಿಎಸ್‌ಗಳೆರಡೂ ಸೇರಿಕೊಂಡು ನನ್ನ ಜೀವಮಾನದಲ್ಲೆ ಕಾಣದಷ್ಟು ಕೆಟ್ಟ ರಾಜಕಾರಣವನ್ನು ಮಾಡುತ್ತಿವೆ. ವಿಚಾರವೇ ಇಲ್ಲದೆ ವೈಯಕ್ತಿಕವಾಗಿ ತೇಜೋವಧೆ ಮಾಡುವ ಕೆಲಸವನ್ನು ಮಾಡುತ್ತಿವೆ. ಕರ್ನಾಟಕದಲ್ಲಿ ಕುಸಿದು ಹೋಗುತ್ತಿರುವ ಜನಪ್ರಿಯತೆಯನ್ನು ಮರುಸ್ಥಾಪಿಸಿಕೊಳ್ಳಲು ಸಾವಿರ ಸಲ ಸುಳ್ಳು ಹೇಳಲು ಹೊರಟಿದ್ದಾರೆ. ಸಾವಿರ ಸುಳ್ಳು ಹೇಳಿದರೆ ನಿಜವೂ ಸುಳ್ಳಿನಂತೆ ಆಗುತ್ತದೆ ಎಂಬ ಜಾಗತಿಕ ಹಿಟ್ಲರ್‌ವಾದಿ ಹಾಗೂ ಭಾರತದ ಪೇಶ್ವೆವಾದಿ ಮನಸ್ಥಿತಿಯನ್ನು ಬಿಜೆಪಿಯವರು ಹೊಂದಿದ್ದಾರೆ. ಅದನ್ನು ಮುಡಾ ವಿಚಾರದಲ್ಲಿ ಪ್ರತಿಪಾದಿಸುತ್ತಿದ್ದಾರೆ’ ಎಂದರು.

‘ಜನ ದೇಶದಲ್ಲಿ ಹಾಗೂ ರಾಜ್ಯದಲ್ಲಿ ಮನುವಾದವನ್ನು ತಿರಸ್ಕರಿಸಲು ಪ್ರಾರಂಭಿಸಿದ್ದಾರೆ. ಇದು ಬಿಜೆಪಿ ನಾಯಕರಿಗೂ ಅರ್ಥವಾಗುತ್ತಿದೆ. ದಿನದಿಂದ ದಿನಕ್ಕೆ ಆ ಪಕ್ಷದ ಮತಗಳಿಕೆ ಪ್ರಮಾಣ ಕಡಿಮೆಯಾಗುತ್ತಿದೆ. ಹಾಗಾಗಿಯೆ, ಮುಖ್ಯಮಂತ್ರಿಯನ್ನು ಕೇಂದ್ರವಾಗಿಟ್ಟುಕೊಂಡು ವೈಯಕ್ತಿಕ ದಾಳಿ ಪ್ರಾರಂಭಿಸಿದ್ದಾರೆ’ ಎಂದು ಗದ್ಗತಿತರಾದರು.

‘ಯಾವುದೂ ಗಾಯದ ರೂಪದಲ್ಲೆ ಉಳಿಯಬಾರದು. ಗಾಯದ ಒಳಗಿರುವ ಕೆಟ್ಟ ರಕ್ತ ಒಡೆದು ಹೊರಬರಬೇಕು. ಆಗಲೇ ಮನುಷ್ಯ ಆರೋಗ್ಯವಂತನಾಗುವುದು. ಹಾಗೆಯೆ ಬಿಜೆಪಿ-ಜೆಡಿಎಸ್‌ನವರ ಕೋಮುವಾದಿ-ಫ್ಯೂಡಲ್ ತಲೆಯೊಳಗೂ ದ್ವೇಷ, ಅಸಹನೆ ಎಂಬ ಕೀವು-ಕೆಟ್ಟ ರಕ್ತ ತುಂಬಿದೆ. ಅದು ಒಡೆದು ಹೊರಬರಬೇಕು. ಆ ದಿನಗಳು ಹತ್ತಿರ ಬಂದಿವೆ’ ಎಂದು ಮಾರ್ಮಿಕವಾಗಿ ಪ್ರತಿಕ್ರಿಯಿಸಿದರು.

ಹೆಣ್ಣುಮಕ್ಕಳಿಗೆ ತವರಿನ ಉಡುಗೊರೆಯ ಮೋಹ

ಪತ್ನಿ ಪಾರ್ವತಿಗೆ ತವರು ಮನೆಯವರು ದಾನವಾಗಿ ನೀಡಿದ್ದ ಜಮೀನನ್ನು ತಿರಸ್ಕರಿಸಬೇಕಿತ್ತು, ಒಪ್ಪಿಕೊಳ್ಳಬಾರದಿತ್ತು ಎಂಬ ಪ್ರಶ್ನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡದ ಉತ್ತರ ಹೀಗಿದೆ..

‘ನಾನು ಸಮಾಜವಾದದ ಹಿನ್ನೆಲೆಯಿಂದ ಬಂದವನು. ನನಗೆ ತಿಳಿವಳಿಕೆ ನೀಡಿದವರು ಜನ ಹಾಗೂ ರೈತ ಸಂಘದ ಮುಖಂಡ ನಂಜುಂಡಸ್ವಾಮಿ, ವಿಚಾರವಾದಿ ರಾಮದಾಸ್. ನನಗೆ ಜನರೇ ವಿಶ್ವವಿದ್ಯಾಲಯ. ಈ ಜನತಾ ವಿಶ್ವವಿದ್ಯಾಲಯ ಮತ್ತು ನನಗೆ ತಿಳಿವಳಿಕೆ ನೀಡಿದವರಿಂದ ನಾನು ಕಲಿತದ್ದು ಮನೆಯಲ್ಲಿ ನಾವು ಹೆಚ್ಚು ಪ್ರಜಾಸತ್ತಾತ್ಮಕವಾಗಿ ಇರಬೇಕು ಎನ್ನುವುದು.

‘ನಿಮ್ಮ ಪತ್ನಿಗೆ ಅವರ ಅಣ್ಣ ನೀಡಿದ ದಾನವನ್ನು ತಿರಸ್ಕರಿಸಬೇಕಿತ್ತು. ಅವಕಾಶ ಕೊಡಬಾರದಿತ್ತು ಎಂದು ಹಲವರು ಹೇಳಿದರು. ಆದರೆ, ನಾವೆಷ್ಟೆ ಪ್ರಗತಿಪರವಾಗಿ ಯೋಚನೆ ಮಾಡಿದರೂ, ಊಟ ಬಟ್ಟೆಗೆ ಯಾವ ಸಮಸ್ಯೆ ಇಲ್ಲದಿದ್ದರೂ ಸಹ ತವರುಮನೆ ಎನ್ನುವುದು ಎಂದೂ ತೀರದ ಮೋಹವಾಗಿರುತ್ತದೆ. ಪ್ರತಿ ವರ್ಷ ತವರುಮನೆಯವರು ಕೊಡುವ ಅರಿಶಿನ ಕುಂಕುಮವೆ ಹೆಣ್ಣುಮಕ್ಕಳಿಗೆ ಅತಿ ದೊಡ್ಡ ಭಾವನಾತ್ಮಕ ಸಂಗತಿ. ಹಾಗಾಗಿ, ತವರು ಮನೆಯವರು ಕೊಟ್ಟ ಉಡುಗೊರೆಯನ್ನು ತಿರಸ್ಕರಿಸು ಎಂದು ಜಬರ್ದಸ್ತು ಮಾಡಿ ಹೇಳುವಷ್ಟು ಅಸೂಕ್ಷ್ಮತೆ ನನಗೆ ಇರಲಿಲ್ಲ.

‘ಅಣ್ಣ-ತಮ್ಮಂದಿರು, ತಂದೆ-ತಾಯಿ ತಮ್ಮ ಹೆಣ್ಣು ಮಕ್ಕಳಿಗೆ ದಾನಪತ್ರದ ಮೂಲಕ ಆಸ್ತಿ ಕೊಡುವುದು ತಪ್ಪು ಎಂದು ದೇಶದ ಯಾವ ಕಾನೂನು ಹೇಳಿದೆ? ಕಾನೂನು ಹೋಗಲಿ, ಕರ್ನಾಟಕದ ಸಂಸ್ಕೃತಿಯಾದರೂ ಇದನ್ನು ತಪ್ಪು ಎಂದು ಭಾವಿಸಿದೆಯೆ? ತಪ್ಪು ಎಂದು ನಾಡಿನ ಹೆಣ್ಣು ಮಕ್ಕಳು, ಜನರು ಹೇಳಿದರೆ ನಾನು ಒಪ್ಪುತ್ತೇನೆ. ಸಂಸ್ಕೃತಿಯ ಬಗ್ಗೆ ಬಹಳ ಮಾತನಾಡುವ ಬಿಜೆಪಿಯವರು ಮಾತ್ರ ಇದನ್ನು ತಪ್ಪು ಎನ್ನುತ್ತಾರೆ. ಇದು ದುರಂತ’ ಎಂದು ಬೇಸರ ವ್ಯಕ್ತಪಡಿಸಿದರು.

‘ಬಿಜೆಪಿ, ಜೆಡಿಎಸ್ ನಾಯಕರಿಗೂ ಮುಡಾ ನಿವೇಶನ’

ಬೆಂಗಳೂರು: ‘ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ (ಮುಡಾ) ವಿರೋಧ ಪಕ್ಷಗಳ ನಾಯಕರಿಗೂ ಹಲವು ನಿವೇಶನಗಳನ್ನು ಮಂಜೂರು ಮಾಡಲಾಗಿದೆ’ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಿಜೆಪಿ ಮತ್ತು ಜೆಡಿಎಸ್ ನಾಯಕರು ಮತ್ತವರ ಬೆಂಬಲಿಗರಿಗೆ ಹಲವು ನಿವೇಶನಗಳನ್ನು ಮಂಜೂರು ಮಾಡಲಾಗಿದೆ’ ಎಂದರು. ಈ ಸಂಬಂಧ ದಾಖಲೆಗಳನ್ನು ಮಾಧ್ಯಮಗೋಷ್ಠಿಯ ಮುಂದೆ ಇಟ್ಟರು. ವಿರೋಧ ಪಕ್ಷಗಳ ಯಾವೆಲ್ಲಾ ನಾಯಕರಿಗೆ, ಅವರ ಕುಟುಂಬದವರಿಗೆ ಮತ್ತು ಆಪ್ತರಿಗೆ ನಿವೇಶನಗಳನ್ನು ಮಂಜೂರು ಮಾಡಲಾಗಿದೆ ಎಂಬ ವಿವರ ಇದ್ದ ಪಟ್ಟಿಯನ್ನು ಓದಿ ಹೇಳಿದರು.



ಬೈರತಿ ಸುರೇಶ್

ಎಚ್.ಡಿ.ದೇವೇಗೌಡ ಕುಟುಂಬ, ಆಪ್ತರಿಗೆ ಮಂಜೂರಾದ ನಿವೇಶನಗಳು

1984ರ ಅವಧಿಯಲ್ಲಿ ಎಚ್.ಡಿ.ದೇವೇಗೌಡ ಅವರ ಕುಟುಂಬದ ಸದಸ್ಯರು ಮತ್ತು ಆಪ್ತರಿಗೆ ಮುಡಾದಿಂದ ಹಲವು ನಿವೇಶಗಳು ಮಂಜೂರಾಗಿವೆ ಎಂದು ಸಚಿವ ಬೈರತಿ ಸುರೇಶ್ ಅವರು ಹೇಳಿದರು. ಯಾರಿಗೆಲ್ಲಾ ನಿವೇಶನಗಳು ಮಂಜೂರಾಗಿವೆ ಎಂಬುದಕ್ಕೆ ಸಂಬಂಧಿಸಿದ ಪಟ್ಟಿಯನ್ನು ಅವರು ಮಾಧ್ಯಮಗೋಷ್ಠಿಯಲ್ಲಿ ಬಿಡುಗಡೆ ಮಾಡಿದರು.

ಹೆಸರು	ಸಂಬಂಧ	ನಿವೇಶನದ ಸ್ಥಳ	ನಿವೇಶನದ ಸಂಖ್ಯೆ	ಅಳತೆ	ಮಂಜೂರಾದ ವರ್ಷ
ಎಚ್.ಡಿ.ಕುಮಾರಸ್ವಾಮಿ	ಮಗ	ಕೈಗಾರಿಕಾ ಪ್ರದೇಶ 3ನೇ ಹಂತ	17ಬಿ	300x200 ಅಡಿ	1984
ಜಯಮ್ಮ ವೈಫ್ ಆಫ್ ಹೊನ್ನಪ್ಪ	ಮೊದಲ ಮಗನ ಅತ್ತೆ	ಸರಸ್ವತಿಪುರ	1796	50x70 ಅಡಿ	1984
ಪ್ರಮೀಳ ಡಾಟರ್ ಆಫ್ ಜವರೇಗೌಡ	ತಂಗಿ	ಸರಸ್ವತಿಪುರ 4ನೇ ಬ್ಲಾಕ್	211	40x50	1984
ಸುಶೀಲಮ್ಮ	ಪತ್ನಿಯ ಸೋದರಿಯ ಮಗಳು (ಮೈನರ್)	ಸರಸ್ವತಿಪುರ 4ನೇ ಬ್ಲಾಕ್	726/ಎಚ್	40x60	1984
ಧರ್ಮಪಾಲ್	ಹತ್ತಿರದ ಸಂಬಂಧಿ	ಸರಸ್ವತಿಪುರ 4ನೇ ಬ್ಲಾಕ್	935, 932	40x60	1984
ಬಿ.ಸಿ.ಹೇಮಾವತಿ	ಹತ್ತಿರದ ಸಂಬಂಧಿ	ಸರಸ್ವತಿಪುರ 4ನೇ ಬ್ಲಾಕ್	79	40x60	1984
ಬಿ.ಎಲ್.ಶಂಕರ್	ಬೆಂಬಲಿಗ	ಬನ್ನಿಮಂಟಪ	1199	50x80	1984
ಎಂ.ರಾಜೇಂದ್ರ	ಹತ್ತಿರದ ಸಂಬಂಧಿ	ಮೈಸೂರು	1799	50x80	1984
ಕೆ..ಪಿ.ಸುಶೀಲ	ಹತ್ತಿರದ ಸಂಬಂಧಿ	ಟಿ ಬ್ಲಾಕ್, ಜಯನಗರ	352/ಎನ್	50x60	1984
ಪುಷ್ಪವತಿ	ಹತ್ತಿರದ ಸಂಬಂಧಿ	ಟಿ.ಕೊಪ್ಪಲು, ಮೈಸೂರು	158	30x40	1984

‘ಬಿಜೆಪಿ, ಜೆಡಿಎಸ್ ಕೊಟ್ಟಿದ್ದು ಸುಳ್ಳು ದಾಖಲೆ’

ಇಲ್ಲಿವೆ ನೋಡಿ ಮುಡಾದ ಅಧಿಕೃತ ದಾಖಲೆ-ಸಿಎಂ

ಬೆಂಗಳೂರು: ‘ಮುಡಾ ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ಬಿಜೆಪಿ, ಜೆಡಿಎಸ್‌ನವರ ಮಾಡಿರುವ ಆರೋಪಗಳು, ಬಿಡುಗಡೆ ಮಾಡಿರುವ ದಾಖಲೆಗಳೆಲ್ಲ ಅಪ್ಪಟ ಸುಳ್ಳು. ಅಧಿಕೃತ ದಾಖಲೆಗಳು ಇಲ್ಲಿವೆ ನೋಡಿ... ಇವುಗಳು ಬಿಜೆಪಿ– ಜೆಡಿಎಸ್‌ನ ನಾಟಕಗಳನ್ನು ಬಯಲು ಮಾಡುತ್ತವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಏರಿದ ಧ್ವನಿಯಲ್ಲಿ ಹೇಳಿದರು. ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ, ಜೆಡಿಎಸ್‌ನವರು ಮಾಡಿದ ಆರೋಪಗಳನ್ನು ಸಾರಾಸಗಟಾಗಿ ತಳ್ಳಿ ಹಾಕಿದರು.

‘ಯಾವುದೇ ಅಧಿಕೃತ ದಾಖಲೆಗಳಿಲ್ಲದೆ ಅರೆ ಬರೆ ಪತ್ರಗಳನ್ನು ತೋರಿಸಿದ ಬಿಜೆಪಿ, ಜೆಡಿಎಸ್‌ನವರು ರಾಜ್ಯದ ಜನರ ಮುಂದೆ ಜಂಟಿ ಡ್ರಾಮಾ ನಡೆಸಿವೆ’ ಎಂದು ಹರಿಹಾಯ್ದರು. ಬಿಜೆಪಿ–ಜೆಡಿಎಸ್ ನಾಯಕರು ಎತ್ತಿರುವ ಪ್ರತಿಯೊಂದೂ ಪ್ರಶ್ನೆಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಾಖಲೆ ಸಮೇತ ನೀಡಿದ ಉತ್ತರ ಹೀಗಿದೆ.

- **ಈ ಜಮೀನುಗಳನ್ನು ಖರೀದಿ ಮಾಡುವಾಗ ವಾರಸುದಾರರನ್ನು ಈ ಭೂ ಕ್ರಯದಿಂದ ಏಕೆ ಹೊರಗಿಡಲಾಗಿತ್ತು?**

ಪ್ರತಿಕ್ರಿಯೆ: 1993ರ ಏಪ್ರಿಲ್ 10ರಂದು ಒಂದು ವಂಶವೃಕ್ಷ ಮಾಡಿಸಿದ್ದಾರೆ. ಅದರ ಪ್ರಕಾರ ನಿಂಗ ಬಿನ್ ಜವರ ಇವರಿಗೆ ಮೂರು ಜನ ಮಕ್ಕಳು. ಮೊದಲನೆಯವರು ಮಲ್ಲಯ್ಯ, ಎರಡನೆಯವರು ಮೈಲಾರಯ್ಯ ಮತ್ತು ಮೂರನೆಯವರು ಜೆ. ದೇವರಾಜು. ವಂಶವೃಕ್ಷದ ಪ್ರಕಾರ ಮಲ್ಲಯ್ಯ ಎನ್ನುವವರಿಗೆ ವಾರಸುದಾರರನ್ನು ತೋರಿಸಿಲ್ಲ. ಮೈಲಾರಯ್ಯ ಇವರಿಗೆ ಮಂಜುನಾಥ್‌ಸ್ವಾಮಿ ಎಂ ಎನ್ನುವವರಿದ್ದಾರೆ. ಆಗ ಅವರಿಗೆ 29 ವರ್ಷ ಎಂದು ನಮೂದಿಸಲಾಗಿದೆ. ಮೂರನೆಯವರು ದೇವರಾಜು ಎನ್ನುವವರು. (ಈ ದೇವರಾಜು ಎನ್ನುವವರೆ ಮಲ್ಲಿಕಾರ್ಜುನಸ್ವಾಮಿಯವರಿಗೆ ಜಮೀನು ಮಾರಾಟ ಮಾಡಿರುವುದು). ಈ ವಂಶವೃಕ್ಷದಲ್ಲಿ ಮಲ್ಲಯ್ಯ, ದೇವರಾಜು, ಮೈಲಾರಯ್ಯನವರ ಪತ್ನಿ ಪುಟ್ಟಗೌರಮ್ಮ, ಎಂ ಮಂಜುನಾಥಸ್ವಾಮಿ ಸಹಿ ಮಾಡಿದ್ದಾರೆ.

ಜೆ. ದೇವರಾಜು ಅವರ ಹೆಸರಿಗೆ ಖಾತೆ ಮಾಡಿಕೊಡಲು ಈ ಮೇಲಿನ ಎಲ್ಲರೂ ಸಹಿ ಮಾಡಿ ಹೇಳಿಕೆ ಕೊಟ್ಟಿದ್ದಾರೆ. ಸದರಿ ಜಮೀನು ನಿಂಗ ಬಿನ್ ಜವರರವರಿಗೆ ಸೇರಿದ್ದು, ಅವರು ಪೌತಿಯಾಗಿ ನಮಗೆ ಸದರಿ ಜಮೀನಿನಲ್ಲಿ ಭಾಗ ಬರಬೇಕಾಗಿರುವುದಿಲ್ಲ. ಆದ್ದರಿಂದ ಅರ್ಜಿದಾರರಾದ ಜೆ. ದೇವರಾಜುರವರಿಗೆ ಸದರಿ ಜಮೀನುಗಳನ್ನು ಖಾತೆ ಮಾಡುವುದರಲ್ಲಿ ನಮ್ಮಗಳ ತಕರಾರು ಏನೂ ಇರುವುದಿಲ್ಲ’ ಎಂದು ಹೇಳಿಕೆ ಬರೆಯಿಸಿ ಸಹಿ ಮಾಡಿದ್ದಾರೆ. ಇದರ ಆಧಾರದ ಮೇಲೆ ಜೆ.ದೇವರಾಜು ಅವರ ಹೆಸರಿಗೆ ಈ ಜಮೀನುಗಳು ವರ್ಗಾವಣೆಯಾಗಿವೆ. ಕ್ರಯದಾರರ ವಾಸರಸುದಾರರ ಒಪ್ಪಿಗೆ ಇಲ್ಲದೆ ಖರೀದಿ ನಡೆದಿದೆ ಎಂಬ ಬಿಜೆಪಿಯವರ ಆರೋಪ ಸುಳ್ಳು.

- **ಭೂಮಿಯನ್ನು ಸಂಪೂರ್ಣವಾಗಿ ಸರ್ಕಾರ ಸ್ವಾಧೀನಪಡಿಸಿಕೊಂಡಾಗ ಡಿ-ನೋಟಿಫಿಕೇಶನ್ ಮಾಡಬಹುದೇ? ಅಂತಹ ಅಭಿವೃದ್ಧಿ ಹೊಂದಿದ ಅಥವಾ ಭಾಗಶಃ ಅಭಿವೃದ್ಧಿಪಡಿಸಿದ ಭೂಮಿಯನ್ನು ಮಾರಾಟ ಮಾಡಬಹುದೇ?**

ಪ್ರತಿಕ್ರಿಯೆ: ಯಾವುದೇ ಜಾಗವನ್ನು ಭೂಸ್ವಾಧೀನ ಮಾಡಿ ಭೂಮಿಯ ಪರಿಹಾರ ಪಾವತಿಸಿ ಆ ಭೂಮಿಯ ಸಂಪೂರ್ಣ ಸ್ವಾಧೀನವನ್ನು ತೆಗೆದುಕೊಳ್ಳದ ಹೊರತು ಭೂಸ್ವಾಧೀನ ಪ್ರಕ್ರಿಯೆಯು ಪೂರ್ಣವಾಗುವುದಿಲ್ಲ ಎಂಬುದರ ಕುರಿತು ಅನೇಕ ತೀರ್ಪುಗಳು ಇವೆ ಮತ್ತು ಸರ್ಕಾರದ ಕ್ರಮವೂ ಆಗಿದೆ. ಈ ಜಮೀನುಗಳನ್ನು 1998ರ ಮೇ 18ರಲ್ಲಿ ಕೈಬಿಡಲಾಗಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ 1984ರಿಂದ ಒಟ್ಟು 13 ಬಡಾವಣೆಗಳಲ್ಲಿ 235 ಎಕರೆ 30 ಗುಂಟೆ ಭೂಮಿಯನ್ನು ಭೂ ಸ್ವಾಧೀನದಿಂದ ಕೈ ಬಿಡಲಾಗಿದೆ. ಹಾಗಾಗಿ ಭೂಸ್ವಾಧೀನದಿಂದ ಭೂಮಿಗಳನ್ನು ಕೈಬಿಟ್ಟಾಗ ಈ ಜಮೀನುಗಳನ್ನು ಮುಡಾ ಸ್ವಾಧೀನ ತೆಗೆದುಕೊಳ್ಳದಿರುವುದು ಕಂಡುಬರುತ್ತದೆ. ಹಾಗಾಗಿ ಬಿಜೆಪಿಯವರು ಎತ್ತಿರುವ ಈ ಪ್ರಶ್ನೆಯೇ ಅಸಂಗತ

- **ಸರ್ಕಾರದ ಅನುಮತಿಯಿಲ್ಲದೆ 50:50 ಯೋಜನೆಯನ್ನು ಹೇಗೆ ಜಾರಿಗೆ ಬಂತು?**

ಪ್ರತಿಕ್ರಿಯೆ: ನಮ್ಮ ಕುಟುಂಬಕ್ಕೆ ಈ ಜಮೀನುಗಳು ಬರುವ ವೇಳೆಗಾಗಲೆ 2005ರ ಜುಲೈ 15ರಲ್ಲಿ ಅವೆಲ್ಲ ಕೃಷಿ ಉದ್ದೇಶದಿಂದ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿವೆ. 2014ರ ಜೂನ್ 23 ಮತ್ತು 2021ರ ಅಕ್ಟೋಬರ್ 25ರಂದು ಭೂ ಪರಿಹಾರಕ್ಕೆ ಬದಲಾಗಿ ಪರ್ಯಾಯ ಜಾಗವನ್ನು ಕೊಡಬೇಕೆಂದು ಅರ್ಜಿ ಹಾಕಲಾಗಿದೆ.

–‘ತನ್ನ ನಿವೇಶನ/ ಜಾಗ ಜಾಗವನ್ನು ಮುಡಾ ಬಳಸಿಕೊಂಡಿದೆ. ಅದಕ್ಕೆ ಪರ್ಯಾಯ ಜಾಗ ಕೊಡಿ’ ಎಂದು ನನ್ನ ಪತ್ನಿ ಕೇಳಿದ್ದಾರೆ. ಮುಡಾದವರು ಕೊಟ್ಟಿದ್ದಾರೆ ಅಷ್ಟೆ.

–ಭೂ ಸ್ವಾಧೀನಪಡಿಸದೇ ಭೂಮಿಯನ್ನು ಉಪಯೋಗಿಸಿಕೊಂಡ ಪ್ರಕರಣಗಳಲ್ಲಿ ಉಪಯೋಗಿಸಲಾದ ಭೂಮಿಗೆ ಪರ್ಯಾಯವಾಗಿ ಶೇ 50:50ರ ಅನುಪಾತದಲ್ಲಿ ಜಾಗವನ್ನು ಕೊಡಬೇಕೆಂದು ಪ್ರಾಧಿಕಾರದವರು 2020ರ ಸೆಪ್ಟೆಂಬರ್ 14ರಂದು ನಿರ್ಣಯ ಮಾಡಿದ್ದಾರೆ. ಈ ನಿರ್ಣಯವನ್ನು ಸರ್ಕಾರ ರದ್ದು ಮಾಡಿದೆ. 2020ರ ಡಿಸೆಂಬರ್ 7ರಂದು ಮತ್ತೆ ಚರ್ಚೆ ಮಾಡಿ ಇನ್ನೊಂದು ನಿರ್ಣಯ ಮಾಡಿದ್ದಾರೆ. ಆ ಸಭೆಯಲ್ಲಿ ಜೆಡಿಎಸ್ ಶಾಸಕರಾದ ಜಿ. ಟಿ. ದೇವೇಗೌಡ ಅವರು ‘ಶೇ 50:50ರ ಅನುಪಾತದಲ್ಲಿ ಒಪ್ಪಿಕೊಳ್ಳುವ ರೈತರಿಗೆ ಅದೇ ರೀತಿ ಸೂಕ್ತ ನಿರ್ಣಯಗಳನ್ನು ಕೈಗೊಳ್ಳಲು, ಶೇ 50:50 ರ ಅನುಪಾತಕ್ಕೆ ಒಪ್ಪಿಕೊಳ್ಳದ ಹಾಗೂ ಸಹಮತ ಸೂಚಿಸದ ಪ್ರಕರಣಗಳಲ್ಲಿ ಪ್ರತ್ಯೇಕ ಸಭೆ ಕರೆಯಲು ಸೂಚಿಸಿದರು’ ಎಂದು ದಾಖಲಾಗಿದೆ. ಮರಿತಿಬ್ಬೇಗೌಡ ಅವರು, ‘ಶೇ 50:50 ಅನುಪಾತದಲ್ಲಿ ರೈತರನ್ನು ಬಲವಂತಪಡಿಸಲು ಬರುವುದಿಲ್ಲವೆಂದು ಈ ಕಾರಣ ರೈತರ ಕೋರಿಕೆಯನ್ನು ಪರಿಗಣಿಸಬೇಕು, ಭೂ ಸ್ವಾಧೀನಪಡಿಸದೇ ಉಪಯೋಗಿಸಿಕೊಂಡಿರುವ ಸ್ವತ್ತುಗಳಿಗೆ ಅಷ್ಟೇ ವಿಸ್ತೀರ್ಣದ ಸ್ವತ್ತುಗಳನ್ನು ನೀಡುವುದು ಸೂಕ್ತವೆಂದು’ ಹೇಳಿದ್ದಾರೆ. ಸಭೆಯಲ್ಲಿ ಅಂದು ಬಿಜೆಪಿ ಶಾಸಕರಾಗಿದ್ದ ಎಸ್.ಎ.ರಾಮದಾಸ್, ಎಲ್. ನಾಗೇಂದ್ರ, ಜೆಡಿಎಸ್‌ನ ಸಂದೇಶ್ ನಾಗರಾಜ್ ಮಾತನಾಡಿದ್ದಾರೆ.

–‘ಅಂತಿಮ ಚರ್ಚೆ ನಡೆದು, ಇನ್ನು ಮುಂದೆ ಪ್ರಾಧಿಕಾರ ಭೂ ಸ್ವಾಧೀನಪಡಿಸದೇ ಉಪಯೋಗಿಸಿಕೊಂಡಿರುವಂತಹ ಪ್ರಕರಣಗಳಲ್ಲಿ ಭೂ ಪರಿಹಾರ ರೂಪದಲ್ಲಿ ಪರಿಹಾರವಾಗಿ ಅಭಿವೃದ್ಧಿಪಡಿಸಿದ ಒಟ್ಟು ವಿಸ್ತೀರ್ಣದ ಪೈಕಿ ಶೇ 50 ವಿಸ್ತೀರ್ಣದ ಅಭಿವೃದ್ಧಿಪಡಿಸಿದ ಜಾಗವನ್ನು ಒಪ್ಪುವ ಪ್ರಕರಣಗಳಲ್ಲಿ ನೀಡಬಹುದು’ ಎಂದು ಅಂತಿಮವಾಗಿ ನಿರ್ಣಯಿಸಲಾಗಿದೆ.



– ‘ಇದೆಲ್ಲ ಆದ ಮೇಲೆ ನನ್ನ ಪತ್ನಿ 2021ರ ಅಕ್ಟೋಬರ್ 23ರಂದು ಮತ್ತೆ ಅರ್ಜಿ ಸಲ್ಲಿಸಿದ್ದಾರೆ. ಅದರಲ್ಲಿ, ‘ನನ್ನ ಜಮೀನನ್ನು ಪ್ರಾಧಿಕಾರವು ಉಪಯೋಗಿಸಿಕೊಂಡಿರುವ ಬಾಬ್ತು ಇದುವರೆವಿಗೂ ಯಾವುದೇ ಪರಿಹಾರವನ್ನು ನೀಡಿರುವುದಿಲ್ಲ. ಆದ್ದರಿಂದ ನನಗೆ ಮೇಲಿನ ಜಮೀನಿಗೆ ಪರಿಹಾರವಾಗಿ ಪ್ರಸ್ತುತ ಶೇ 50:50ರ ಅನುಪಾತದಲ್ಲಿ ಕೊಡಿ’ ಎಂದು ಕೇಳಿದ್ದಾರೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದವರು ಇದನ್ನೆಲ್ಲ ಪರಿಶೀಲಿಸಿ ನನ್ನ ಪತ್ನಿಯಿಂದ ಪರಿತ್ಯಾಜನ ಪತ್ರ ಬರೆಸಿಕೊಂಡು, ಕೆಸರೆ ಗ್ರಾಮದ ಸ.ನಂ. 464ರ 3 ಎಕರೆ 16 ಗುಂಟೆ ಜಮೀನುಗಳ ಹಕ್ಕುಗಳನ್ನು ಪ್ರಾಧಿಕಾರದ ಹೆಸರಿಗೆ ವರ್ಗಾಯಿಸಿಕೊಂಡು, 2021ರ ಡಿಸೆಂಬರ್ 30ರಂದು ಬದಲಿ ಜಾಗ ನೀಡುವ ಬಗ್ಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಆಯುಕ್ತರು ಅಧಿಕೃತ ಜ್ಞಾಪನ ಆದೇಶ ಹೊರಡಿಸಿದ್ದಾರೆ. 38,284 ಚದರ ಅಡಿ ಅಳತೆಗೆ ನಿವೇಶನಗಳನ್ನು ಪರಿಹಾರ ರೂಪದಲ್ಲಿ ಮಂಜೂರು ಮಾಡಿರುತ್ತಾರೆ’ ಎಂದು ಸಿದ್ದರಾಮಯ್ಯ ವಿವರಣೆ ನೀಡಿದರು. ❖

‘ನಯಾಪೈಸೆ ತಪ್ಪಿಲ್ಲ; ಅದಕ್ಕಾಗಿಯೇ ಈ ದಾಖಲೆ’

‘ಕಾನೂನು ವಿದ್ಯಾರ್ಥಿಯಾದ ನಾನು ಹಾಗೂ 40 ವರ್ಷಗಳಿಂದ ಸುದೀರ್ಘ ರಾಜಕಾರಣದಲ್ಲಿ ಇರುವ ನನಗೆ ಈ ಪ್ರಕರಣದಲ್ಲಿ ಒಂದು ನಯಾಪೈಸೆಯಷ್ಟು ತಪ್ಪುಗಳೂ ಕಂಡುಬರುತ್ತಿಲ್ಲ. ಇದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಕೂಡ ಮಾಧ್ಯಮದ ಮೂಲಕ ಈ ನಾಡಿನ ಜನರ ಮುಂದೆ ಇಡುತ್ತಿದ್ದೇನೆ. ಈ ವಿಚಾರಗಳನ್ನೆಲ್ಲಾ ಪರಿಶೀಲಿಸಲು ನ್ಯಾಯಮೂರ್ತಿ ಪಿ.ಎನ್. ದೇಸಾಯಿಯವರ ಅಧ್ಯಕ್ಷತೆಯಲ್ಲಿ ವಿಚಾರಣಾ ಆಯೋಗವನ್ನು ರಚಿಸಲಾಗಿದೆ. ವಿಚಾರಣಾ ಆಯೋಗವು ಈ ಕುರಿತು ತನಿಖೆ ಪ್ರಾರಂಭಿಸಿದೆ. ಬಿಜೆಪಿ, ಜೆಡಿಎಸ್‌ನವರು ಮುಡಾದ ವಿಚಾರದಲ್ಲೂ, ವಾಲ್ಮೀಕಿ ಹಗರಣದಲ್ಲೂ ನನ್ನ ವ್ಯಕ್ತಿತ್ವಕ್ಕೆ ಮಸಿ ಬಳಿಯಲು ಪ್ರಯತ್ನಿಸುತ್ತಿದ್ದಾರೆ’ ಎಂದು ಸಿದ್ದರಾಮಯ್ಯ ದೂರಿದರು.

5 ವರ್ಷಗಳಲ್ಲಿ 628 ಹುಲಿಗಳ ಸಾವು

ನವದೆಹಲಿ(ಪಿಟಿಐ): ಬೇಟೆ ಸೇರಿದಂತೆ ನೈಸರ್ಗಿಕ ಕಾರಣಗಳು ಮತ್ತು ಇತರ ಕಾರಣಗಳಿಂದಾಗಿ ಕಳೆದ ಐದು ವರ್ಷಗಳಲ್ಲಿ ದೇಶದಲ್ಲಿ ಒಟ್ಟು 628 ಹುಲಿಗಳು ಸಾವಿಗೀಡಾಗಿವೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ (ಎನ್‌ಟಿಸಿಎ) ಪ್ರಕಾರ, ಈ ಅವಧಿಯಲ್ಲಿ ಹುಲಿ ದಾಳಿಯಲ್ಲಿ 349 ಜನರು ಮೃತಪಟ್ಟಿದ್ದಾರೆ. ಮಹಾರಾಷ್ಟ್ರವೊಂದರಲ್ಲೇ 200 ಸಾವುಗಳು ದಾಖಲಾಗಿವೆ.

ದೇಶದಲ್ಲಿ 2019ರಲ್ಲಿ 96, 2020ರಲ್ಲಿ 106, 2021ರಲ್ಲಿ 127, 2022ರಲ್ಲಿ 121 ಮತ್ತು 2023ರಲ್ಲಿ 178 ಹುಲಿಗಳು ಸಾವಿಗೀಡಾಗಿವೆ ಎಂದು ಸರ್ಕಾರದ ಅಂಕಿ ಅಂಶ ಹೇಳಿದೆ.

ರಾಜ್ಯಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಕೇಂದ್ರ ಪರಿಸರ ಖಾತೆ ರಾಜ್ಯ ಸಚಿವ ಕೀರ್ತಿ ವರ್ಧನ್ ಸಿಂಗ್, 2019 ಮತ್ತು 2020 ರಲ್ಲಿ ತಲಾ 49 ಜನರು, 2021ರಲ್ಲಿ 59 ಜನರು, 2022ರಲ್ಲಿ 110 ಮತ್ತು 2023ರಲ್ಲಿ 82 ಜನರು ಹುಲಿ ದಾಳಿಯಲ್ಲಿ ಸಿಕ್ಕಿ ಮೃತಪಟ್ಟಿದ್ದಾರೆ ಎಂದು ಹೇಳಿದ್ದಾರೆ.

ಕನ್ನಡ ಕಲಿಕೆಗೆ ಅನ್ಯಭಾಷಿಕರ ಆಸಕ್ತಿ

ಸಂಘ–ಸಂಸ್ಥೆಗಳಿಂದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಂಪರ್ಕ • 36 ಗಂಟೆಗಳ ಕಲಿಕಾ ತರಗತಿ

• ವರುಣ ಹೆಗಡೆ

ಬೆಂಗಳೂರು: ಅನ್ಯ ಭಾಷಿಕರಿಗೆ ಕನ್ನಡ ಕಲಿಸುವ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಪ್ರಯತ್ನಕ್ಕೆ ನಗರದಲ್ಲಿ ಉತ್ತಮ ಸ್ಪಂದನ ವ್ಯಕ್ತವಾಗಿದ್ದು, ವಿವಿಧ ಸಂಘ–ಸಂಸ್ಥೆಗಳು ಕನ್ನಡ ಕಲಿಕಾ ತರಗತಿಗಳನ್ನು ನಡೆಸಲು ಮುಂದೆ ಬಂದಿವೆ.

ಖಾಸಗಿ ವಲಯ, ಅಪಾರ್ಟ್‌ಮೆಂಟ್, ವೈದ್ಯಕೀಯ ಕಾಲೇಜುಗಳು ಹಾಗೂ ಇತರ ಸಂಸ್ಥೆಯಲ್ಲಿನ ಅನ್ಯ ಭಾಷಿಕರು ಕನ್ನಡ ಕಲಿಕೆ, ಇಲ್ಲಿಯವರೊಂದಿಗಿನ ಸಂವಹನ ನಡೆಸಲು ಪ್ರಾಧಿಕಾರವು 'ಕನ್ನಡೇತರರಿಗೆ ಕನ್ನಡ ಕಲಿಸುವ ಯೋಜನೆ'ಯನ್ನು ಪ್ರಾರಂಭಿಸಿದೆ. ಇದಕ್ಕಾಗಿ ಸಂವಹನ ಕೇಂದ್ರಿತವಾದ ಹೊಸ ಪಠ್ಯಕ್ರಮವನ್ನು ಸಿದ್ಧಪಡಿಸಲಾಗಿದೆ.

ಈಗಾಗಲೇ ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಪ್ರಾದೇಶಿಕ ಕಚೇರಿಯಲ್ಲಿ ತರಗತಿಗಳನ್ನು ಪ್ರಾರಂಭ ಮಾಡಲಾಗಿದೆ. ಕನ್ನಡ ಕಲಿಕೆಗೆ ಸಂಬಂಧಿಸಿದಂತೆ ಕ್ರೈಸ್ಟ್ ಕಾಲೇಜು, ಆದಿಚುಂಚನಗಿರಿ ವೈದ್ಯಕೀಯ ಕಾಲೇಜು ಸೇರಿ ವಿವಿಧ ಸಂಸ್ಥೆಗಳು ಪ್ರಾಧಿಕಾರವನ್ನು ಸಂಪರ್ಕಿಸಿದ್ದು, ಕನಿಷ್ಠ 20 ಅಭ್ಯರ್ಥಿಗಳಿದ್ದಲ್ಲಿ ತರಗತಿ ನಡೆಸಲಾಗುತ್ತಿದೆ. ಕಲಿಕೆಗೆ ಸಂಬಂಧಿಸಿದಂತೆ ಈಗಾಗಲೇ ಪ್ರಾಧಿಕಾರಕ್ಕೆ 180 ಅರ್ಜಿಗಳು ಸಲ್ಲಿಕೆಯಾಗಿವೆ.

ಆರ್‌ಬಿಐನಲ್ಲಿ ಸದ್ಯ 40 ಅಧಿಕಾರಿಗಳು ಕನ್ನಡ ಕಲಿಯುತ್ತಿದ್ದಾರೆ. ಮಲಯಾಳ ವಿಷನ್ ಸಹಯೋಗದಲ್ಲಿ 140 ಮಲಯಾಳಿಗಳು, ಕ್ರೈಸ್ಟ್ ಕಾಲೇಜಿನಲ್ಲಿ 90 ಅಭ್ಯರ್ಥಿಗಳು ಸೇರಿ ವಿವಿಧ ಸಂಸ್ಥೆಗಳಿಂದ ಕನ್ನಡ ಕಲಿಸಲು ಮನವಿ ಬಂದಿದೆ. ಇವರನ್ನು 20 ಅಥವಾ 30 ಅಭ್ಯರ್ಥಿಗಳ ಗುಂಪು ಮಾಡಿ, ತರಗತಿಗಳನ್ನು ನಡೆಸಲಾಗುತ್ತದೆ.

36 ಗಂಟೆಗಳ ಕಲಿಕೆ: ಕನ್ನಡ ಕಲಿಕೆಗೆ ಸಂಬಂಧಿಸಿದಂತೆ ಪ್ರಾಧಿಕಾರದ ಅಧ್ಯಕ್ಷರಾದ ಪುರುಷೋತ್ತಮ ಬಿಳಿಮಲೆ ಅವರ ನೇತೃತ್ವದಲ್ಲಿ ಪ್ರತ್ಯೇಕ ಪಠ್ಯವನ್ನು ಸಿದ್ಧಪಡಿಸಲಾಗಿದ್ದು, 36 ಗಂಟೆಗಳ ತರಗತಿ ನಡೆಸಲಾಗುತ್ತದೆ. ಸಂವಹನಕ್ಕೆ ಸಹಕಾರಿಯಾದ ಸರಳ ಕನ್ನಡದ ಪಠ್ಯ ಇದಾಗಿದೆ. ಸಂಜೆ 6ರಿಂದ 7 ಗಂಟೆಯ ಅವಧಿಯಲ್ಲಿ ತರಗತಿಗಳು ನಡೆಯಲಿವೆ. ಪ್ರಾಧಿಕಾರವು ಐಟಿ–ಬಿಟಿ ಕಂಪನಿಗಳ ಕನ್ನಡ ಸಂಘಗಳನ್ನೂ ಸಂಪರ್ಕಿಸಿ, ಅಲ್ಲಿಯವರಿಗೆ ಕನ್ನಡ ಕಲಿಸಲು ಮುಂದಾಗಿದೆ.

'ಕನ್ನಡವು ಮುಕ್ತ ಭಾಷೆಯಾಗಿದೆ. ಕಲಿಯುವವರು ಯಾವ ಕ್ಷೇತ್ರದಿಂದ ಬಂದಿದ್ದಾರೆ ಎಂದು ತಿಳಿದು, ಅಲ್ಲಿನ ಉದಾಹರಣೆ ಸಹಿತ ಕನ್ನಡ ಕಲಿಸಲಾಗುತ್ತದೆ. ಆರ್‌ಬಿಐ ಅಧಿಕಾರಿಗಳು ಉತ್ಸಾಹದಿಂದ ಕನ್ನಡ ಕಲಿಯುತ್ತಿದ್ದಾರೆ. ಸೂಕ್ತ ಪರಿಸರ ಹಾಗೂ ಕಲಿಸುವವರು ಇರದಿದ್ದರಿಂದ ಕೆಲವರು ಕನ್ನಡ ಕಲಿಯಲು ಮುಂದಾಗಿರಲಿಲ್ಲ. ಈಗ ಆ ಕೊರತೆಯನ್ನು ನಿವಾರಿಸಲು ಕಾರ್ಯಪ್ರವೃತ್ತರಾಗಿದ್ದೇವೆ' ಎಂದು ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ತಿಳಿಸಿದರು.



ಕನ್ನಡ ಕಲಿಕೆಗೆ ಅನ್ಯಭಾಷಿಕರಿಂದ ಉತ್ತಮ ಸ್ಪಂದನ ವ್ಯಕ್ತವಾಗಿದೆ. ನಮ್ಮಲ್ಲಿನ ಸಂಪನ್ಮೂಲ ಬಳಸಿಕೊಂಡು ಕನ್ನಡ ಕಲಿಸಲಾಗುತ್ತಿದೆ

ಪುರುಷೋತ್ತಮ ಬಿಳಿಮಲೆ
ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ

ಪ್ರಾಧಿಕಾರದಿಂದಲೇ ಶಿಕ್ಷಕರು

ಕನ್ನಡ ಕಲಿಕೆಗೆ ಸಂಬಂಧಿಸಿದಂತೆ ಪ್ರಾಧಿಕಾರವೇ ಶಿಕ್ಷಕರನ್ನು ಒದಗಿಸಿ, ಅವರಿಗೆ ವೇತನವನ್ನೂ ನೀಡಲಿದೆ. 20 ಅಭ್ಯರ್ಥಿಗಳಿಗೆ ಒಬ್ಬರು ಶಿಕ್ಷಕರನ್ನು ಒದಗಿಸಲಾಗುತ್ತದೆ. ಸಂಘ–ಸಂಸ್ಥೆಗಳು ತರಗತಿಗಳಿಗೆ ಸ್ಥಳಾವಕಾಶವನ್ನು ಗುರುತಿಸಿ, ಕಲಿಕೆಗೆ ಅವಕಾಶ ಮಾಡಿಕೊಡಬೇಕಿದೆ. 36 ಗಂಟೆಗಳ ತರಗತಿಗೆ ₹30 ಸಾವಿರ ಗೌರವ ಸಂಭಾವನೆ ನೀಡಲಾಗುತ್ತದೆ. ವಾರಕ್ಕೆ ಮೂರು ದಿನಗಳು ಮಾತ್ರ ಈ ತರಗತಿಗಳು ಇರಲಿವೆ.

ಕನ್ನಡ ಕಲಿಕಾ ಕೇಂದ್ರಗಳನ್ನು ನಡೆಸಲು ಇಚ್ಛಿಸುವವರು ಪ್ರಾಧಿಕಾರದ ಇ–ಮೇಲ್ ವಿಳಾಸ secretary.kanpra@gmail.com ಅಥವಾ chairman.kanpra@gmail.comಗೆ ಸಂಪರ್ಕಿಸಬಹುದು. ವಿವರಕ್ಕೆ ದೂರವಾಣಿ ಸಂಖ್ಯೆ 080 22286773ಕ್ಕೆ ಕರೆ ಮಾಡಬಹುದು.

ಸುದ್ದಿ 2 ನಿಮಿಷ

ಡಿಸೆಂಬರ್‌ನಲ್ಲಿ ಬ್ರಾಹ್ಮಣ ಮಹಾಸಭಾ ಸಮಾವೇಶ

ಬೆಂಗಳೂರು: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆ ಸ್ಥಾಪನೆಯಾಗಿ 50 ವರ್ಷಗಳು ತುಂಬಿರುವುದರಿಂದ ಡಿಸೆಂಬರ್‌ನಲ್ಲಿ ಬೃಹತ್ ಸಮಾವೇಶ ನಡೆಸಲು ನಿರ್ಧರಿಸಲಾಗಿದೆ.

ಮಹಾಸಭಾ ಕೇಂದ್ರ ಕಚೇರಿ ಗಾಯತ್ರಿ ಭವನದಲ್ಲಿ ಶುಕ್ರವಾರ ನಡೆದ ಪ್ರಮುಖ ಪದಾಧಿಕಾರಿಗಳು ಹಾಗೂ ಸಮಾಜದ ಹಿರಿಯ ಮುಖಂಡರ ಸಭೆಯಲ್ಲಿ ಈ ತೀರ್ಮಾನವನ್ನು ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಪ್ರಕಟಿಸಿದರು.

ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಬೃಹತ್ ಸಮಾರಂಭ ನಡೆಸಲು ಉದ್ದೇಶಿಸಲಾಗಿದೆ. ವಿವಿಧ ಕ್ಷೇತ್ರಗಳಲ್ಲಿ ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿರುವವರನ್ನು ಸನ್ಮಾನಿಸಲಾಗುವುದು. ಸಮಾಜದ ಎಲ್ಲರೂ ನೆರವು ನೀಡಬೇಕು ಎಂದು ಅಶೋಕ್ ಹಾರನಹಳ್ಳಿ ಮನವಿ ಮಾಡಿದರು.

ಸಮಾವೇಶದ ಅಗತ್ಯ ಸಿದ್ಧತೆಗಳು, ರೂಪುರೇಷೆಗಳಿಗೆ ಸಂಬಂಧಿಸಿದಂತೆ ಸದ್ಯದಲ್ಲೇ ಇನ್ನೊಂದು ಸಭೆ ಕರೆದು ಚರ್ಚಿಸಲಾಗುವುದು, ಸ್ವಾಗತ ಸಮಿತಿ ರಚಿಸಲಾಗುವುದು ಎಂದು ತಿಳಿಸಿದರು.

ಸಮಾವೇಶಕ್ಕೆ ಎಲ್ಲ ರೀತಿಯ ಸಹಕಾರ ನೀಡುವುದಾಗಿ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಸಗೋಡು ಜಯಸಿಂಹ ತಿಳಿಸಿದರು.

ಜಯನಗರ ಶಾಸಕ ಸಿ.ಕೆ. ರಾಮಮೂರ್ತಿ, ಬೆಂಗಳೂರಿನ ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೃಷ್ಣ, ಮಹಾಸಭಾದ ಸಂಘಟನಾ ಪದಾಧಿಕಾರಿ ಲಕ್ಷ್ಮಿನಾರಾಯಣ ಭಟ್ಟ ಪಾಲ್ಗೊಂಡಿದ್ದರು.

ನಾಲೆ ತಡೆಗೋಡೆ ಧ್ವಂಸ: ದೂರು



ಕೆ.ಆರ್.ಪುರ: ಕೌದೇನಹಳ್ಳಿ ಕೆರೆಯಿಂದ ಕೆ.ಆರ್.ಪುರದ ವೆಂಗಯ್ಯನ ಕೆರೆಗೆ ಸೇರುವ ನಾಲೆಯ ತಡೆಗೋಡೆಯನ್ನು ಒಡೆದು ಹಾಕಿರುವ ಕೆ.ಟಿ.ರಾಜ್ ಕುಮಾರ್ ವಿರುದ್ಧ ಮಹದೇವಪುರ ವಲಯ ಬೃಹತ್ ನೀರುಗಾಲುವೆ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ದೂರು ನೀಡಿದ್ದಾರೆ.

ಕೆ.ಆರ್.ಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕೆ.ಆರ್. ಪುರ ಕ್ಷೇತ್ರದ ವಿನಾಯಕ ಬಡಾವಣೆಯಲ್ಲಿ ಅಭಿವೃದ್ಧಿಪಡಿಸಿರುವ ಮಳೆ ನೀರುಗಾಲುವೆಯ ಎರಡೂ ಬದಿಯ ತಡೆಗೋಡೆಗಳನ್ನು ಹನುಮಾನ್ ಅರ್ಥ್ ಮೂವರ್ಸ್‌ಗೆ ಸೇರಿದ ಜೆಸಿಬಿ ಯಂತ್ರಗಳನ್ನು ಬಳಸಿ ಒಡೆದು ಹಾಕಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಪಾಲಿಕೆಗೆ ಸಂಬಂಧಿಸಿದ ಸರ್ಕಾರಿ ಆಸ್ತಿಗೆ ಹಾನಿ ಮಾಡಿದ್ದು, ಆರೋಪಿ ಕೆ.ಟಿ.ರಾಜ್ ಕುಮಾರ್ ಮತ್ತು ಮಳೆ ನೀರುಗಾಲುವೆಯನ್ನು ನಾಶಪಡಿಸಲು ಬಳಸಿರುವ ಎರಡು ಜೆಸಿಬಿಗಳ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೆ.ಆರ್.ಪುರ ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ಕೋರಿದ್ದಾರೆ.

ಉತ್ತಮ ಭವಿಷ್ಯಕ್ಕೆ ಸಲಹೆ

ಪ್ರಜಾವಾಣಿ ವಾರ್ತೆ



ಶೇಕ್ ಲತೀಫ್

ಬೆಂಗಳೂರು: ಶಿಕ್ಷಣ ತಜ್ಞ ಎಚ್. ನರಸಿಂಹಯ್ಯ ಅವರ ಆಶಯಗಳೊಂದಿಗೆ ದೇಶಕ್ಕೆ ಮಾದರಿ ವ್ಯಕ್ತಿಗಳನ್ನು ನೀಡಿರುವ ನ್ಯಾಷನಲ್ ಕಾಲೇಜು ಮುಂದಿನ ದಿನಗಳಲ್ಲಿ ವಿಶ್ವವಿದ್ಯಾಲಯವಾಗಿ ಬೆಳೆಯಲಿ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವ ಶೇಕ್ ಲತೀಫ್ ಹೇಳಿದರು.

ಜಯನಗರ ನ್ಯಾಷನಲ್ ಕಾಲೇಜಿನ ವಾರ್ಷಿಕೋತ್ಸವದಲ್ಲಿ ಮಾತನಾಡಿದ ಅವರು, 'ವಿದ್ಯಾರ್ಥಿಗಳಿಗೆ ಮುಂದೆ ಅನೇಕ ಸವಾಲುಗಳಿವೆ. ಸಕಾರಾತ್ಮಕ ನಡವಳಿಕೆಗಳಿಂದ ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು' ಎಂದರು.

ಇದೇ ವೇಳೆ ಕಾರ್ಗಿಲ್ ವಿಜಯೋತ್ಸವವನ್ನು ಆಚರಿಸಿ, ಪುಷ್ಪಗುಚ್ಛ ಇರಿಸಿ ಹುತಾತ್ಮ ಸೈನಿಕರಿಗೆ ಗೌರವ ಸಲ್ಲಿಸ ಲಾಯಿತು. ರಾಷ್ಟ್ರೀಯ ಶಿಕ್ಷಣ ಸಮಿತಿ (ಎನ್‌ಇಎಸ್) ಅಧ್ಯಕ್ಷ ಎಚ್. ಎನ್.ಸುಬ್ರಮಣ್ಯ ಮಾತನಾಡಿ, 'ವಿದ್ಯಾರ್ಥಿಗಳು ಪುಸ್ತಕ ಓದುವುದನ್ನು ರೂಢಿಸಿಕೊಳ್ಳಬೇಕು' ಎಂದು ಕಿವಿಮಾತು ಹೇಳಿದರು.

ಅಧಿಕ ಅಂಕ ಪಡೆದ ವಿದ್ಯಾರ್ಥಿಗಳಿಗೆ ದತ್ತಿ ಬಹುಮಾನ ವಿತರಿಸಲಾಯಿತು. ಎನ್‌ಇಎಸ್ ಗೌರವ ಕಾರ್ಯದರ್ಶಿ ವಿ.ವೆಂಕಟಾ ಶಿವಾರೆಡ್ಡಿ, ನ್ಯಾಷನಲ್ ಕಾಲೇಜು ಆಡಳಿತ ಮಂಡಳಿ ಚೇರ್‌ಮನ್ ಪಿ.ಎಲ್.ವೆಂಕಟರಾಮ ರೆಡ್ಡಿ, ಕಾರ್ಯದರ್ಶಿ ಬಿ.ಎಸ್.ಅರುಣ್ ಕುಮಾರ್, ಪ್ರಾಂಶುಪಾಲರಾದ ಡಾ. ಪಿ.ಎಲ್.ರಮೇಶ್, ಉಪ ಪ್ರಾಂಶುಪಾಲ ಪ್ರೊ.ಚೆಲುವಪ್ಪ, ಡಾ. ವೈ.ಸಿ. ಕಮಲಾ ಭಾಗವಹಿಸಿದ್ದರು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಶ್ಲಾಘನೀಯ ಕಾರ್ಯ

ಕ್ಯಾನ್ಸರ್ ಪೀಡಿತ ಬಾಲಕಿಗೆ ಅಸ್ಥಿಮಜ್ಜೆ ಕಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಕ್ತದ ಕ್ಯಾನ್ಸರ್‌ನಿಂದ (ಲ್ಯುಕೇಮಿಯಾ) ಬಳಲುತ್ತಿದ್ದ 14 ವರ್ಷದ ಬಾಲಕಿಯೊಬ್ಬಳಿಗೆ ಇಲ್ಲಿನ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ನಡೆಸಲಾದ ಅಸ್ಥಿಮಜ್ಜೆ (ಬೋನ್ ಮ್ಯಾರೊ) ಕಸಿ ಯಶಸ್ವಿಯಾಗಿದೆ.

ಸಂಸ್ಥೆಯ ಬೋನ್ ಮ್ಯಾರೊ ಘಟಕಕ್ಕೆ (ಬಿಎಂಟಿ) ಶುಕ್ರವಾರ ಭೇಟಿ ನೀಡಿದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ, ಕಸಿಗೆ ಒಳಗಾದ ಬಾಲಕಿಯ ಆರೋಗ್ಯ ವಿಚಾರಿಸಿದರು. ಸಂಸ್ಥೆಯ ನೂತನ ಘಟಕದಲ್ಲಿ ನಡೆದ ಪ್ರಥಮ ಯಶಸ್ವಿ ಶಸ್ತ್ರಚಿಕಿತ್ಸೆ ಇದಾಗಿದ್ದು, ಸಚಿವರು ವೈದ್ಯರ ಕಾರ್ಯಕ್ಕೆ ಶ್ಲಾಘಿಸಿದರು.



ಅಸ್ಥಿ ಮಜ್ಜೆ ಕಸಿಗೆ ಒಳಗಾದ ಬಾಲಕಿಯೊಂದಿಗೆ ಡಾ.ಶರಣ ಪ್ರಕಾಶ್ ಪಾಟೀಲ, ಸಂಸ್ಥೆಯ ಆಡಳಿತಾಧಿಕಾರಿ ಎನ್‌.ಮಂಜುಶ್ರೀ ಹಾಗೂ ವೈದ್ಯರು ಉಪಸ್ಥಿತರಿದ್ದಾರೆ.

ಎರಡು ತಿಂಗಳ ಹಿಂದೆ ಸಂಸ್ಥೆಯ ಬೋನ್ ಮ್ಯಾರೊ ಘಟಕಕ್ಕೆ ಚಿಕಿತ್ಸೆಗೆ ದಾಖಲಾಗಿದ್ದ ಬಾಲಕಿಗೆ, ಆಕೆಯ ಕಿರಿಯ ಸಹೋದರನ ರಕ್ತದ ಆಕರ ಕೋಶ ಬಳಸಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಬಾಲಕಿಯ ಕುಟುಂಬ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದರಿಂದ ಇಎಸ್‌ಐ ಯೋಜನೆ ಅಡಿ ಉಚಿತವಾಗಿ ಚಿಕಿತ್ಸೆ ಒದಗಿಸಲಾಗಿದೆ. ಬಿಎಂಟಿ ಮಕ್ಕಳ ವೈದ್ಯೆ ಡಾ.ವಸುಂಧರಾ ಕೈಲಾಸನಾಥ್ ನೇತೃತ್ವದ ವೈದ್ಯರ ತಂಡ ಈ ಕಸಿ ನಡೆಸಿದೆ.

'ಬಾಲಕಿ ಈಗ ಚೇತರಿಸಿಕೊಂಡಿದ್ದು, ಶೀಘ್ರದಲ್ಲಿಯೇ ಮನೆಗೆ ತೆರಳುತ್ತಾಳೆ' ಎಂದು ಸಂಸ್ಥೆಯ ವೈದ್ಯರು ತಿಳಿಸಿದ್ದಾರೆ.

ಸಂಸ್ಥೆಯ ಘಟಕವು ಈವರೆಗೆ ವಯಸ್ಕರು ಸೇರಿದಂತೆ 90 ಮಂದಿಗೆ ಅಸ್ಥಿಮಜ್ಜೆ ಶಸ್ತ್ರಚಿಕಿತ್ಸೆ ನಡೆಸಿದ್ದು, ಅವರಿಗೆ ಚಿಕಿತ್ಸೆ ಮುಂದುವರಿದಿದೆ ಎಂದು ಸಂಸ್ಥೆ ತಿಳಿಸಿದೆ.

ರವಿ ಕೊಲೆ ಪ್ರಕರಣ: ಇಬ್ಬರು ಕೋರ್ಟ್‌ಗೆ ಶರಣು

ಪ್ರಜಾವಾಣಿ ವಾರ್ತೆ

ಆನೇಕಲ್: ಪಟ್ಟಣದ ಪುರಸಭೆ ಸದಸ್ಯ ರವಿ ಹತ್ಯೆ ಮಾಡಿದ ಇಬ್ಬರು ಆರೋಪಿಗಳು ಬೆಂಗಳೂರಿನ 2ನೇ ಎಸಿಎಂಎಂ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಮುಂದೆ ಶುಕ್ರವಾರ ಶರಣಾದರು.

ಆರೋಪಿಗಳನ್ನು ಹರೀಶ್ ಅಲಿಯಾಸ್ ಹಂದಿ ಹರೀಶ್, ವಿನಯ್ ಅಲಿಯಾಸ್ ವಿನಿ ಎಂದು ಗುರುತಿಸಲಾಗಿದೆ. ಬುಧವಾರ ರಾತ್ರಿ ರವಿ ಮನೆ ಬಳಿಯೇ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಹತ್ಯೆ ಮಾಡಲಾಗಿತ್ತು. ಆರೋಪಿಗಳ ಪತ್ತೆಗಾಗಿ ಪೊಲೀಸರ ಎರಡು ತಂಡಗಳನ್ನು ರಚಿಸಲಾಗಿತ್ತು. ಮತ್ತೊಬ್ಬ ಆರೋಪಿ ತಲೆ ಮರೆಸಿಕೊಂಡಿದ್ದು ಪೊಲೀಸರು ಕಾರ್ಯಾಚರಣೆ ಕೈಗೊಂಡಿದ್ದಾರೆ.

ಮಣ್ಣು ಕುಸಿತ: ರೈಲು ಸಂಚಾರ ಸ್ಥಗಿತ

ಪ್ರಜಾವಾಣಿ ವಾರ್ತೆ

ಸುಬ್ರಹ್ಮಣ್ಯ: ನಿರಂತರ ಮಳೆಯಿಂದಾಗಿ ಹಳಿಯ ಕೆಳಭಾಗದಲ್ಲಿ ಮಣ್ಣು ಕುಸಿತ ಉಂಟಾದ ಪರಿಣಾಮ ಮಂಗಳೂರು–ಬೆಂಗಳೂರು ನಡುವಿನ ರೈಲು ಶುಕ್ರವಾರ ಸಂಜೆ ಸ್ವಲ್ಪ ಹೊತ್ತು ಸ್ಥಗಿತಗೊಂಡಿತು. ನಂತರ ಬದಲಿ ಮಾರ್ಗದ ಮೂಲಕ ಸಾಗಿದವು.

ರೈಲು ಹಳಿಯ ಸುಬ್ರಹ್ಮಣ್ಯ ರೋಡ್ ರೈಲು ನಿಲ್ದಾಣ ಸಮೀಪದ ಎಡಕುಮೇರಿ-ಕಡಗರವಳ್ಳಿ ನಡುವಿನ ದೋಣಿಗಲ್ ಎಂಬಲ್ಲಿ ಮಣ್ಣು ಕುಸಿದಿದೆ. ಸಂಜೆ 5.30ಕ್ಕೆ ಸುಬ್ರಹ್ಮಣ್ಯ ರೋಡ್ ರೈಲು ನಿಲ್ದಾಣದಿಂದ ಹೊರಟಿದ್ದ ವಿಜಯಪುರ ಎಕ್ಸ್‌ಪ್ರೆಸ್ ಈ ಘಟನೆಯಿಂದಾಗಿ ವಾಪಸಾಯಿತು. ನಂತರ ಕಾರವಾರ, ಮಡಗಾಂವ್ ಜಂಕ್ಷನ್, ಕುಳೆಮ್, ಕ್ಯಾಸಲ್‌ರಾಕ್, ಲೋಂಡ ಜಂಕ್ಷನ್ ಮೂಲಕ ಹುಬ್ಬಳ್ಳಿಗೆ ತೆರಳಿತು. ಕಾರವಾರ, ಕಣ್ಣೂರು, ಮುರುಡೇಶ್ವರಕ್ಕೆ ಬೆಂಗಳೂರಿನಿಂದ ಹೊರಟ ರೈಲುಗಳ ಮಾರ್ಗವನ್ನೂ ಬದಲಿಸಲಾಯಿತು.

ಹಿರಿಯ ಅಧಿಕಾರಿಗಳು ಮತ್ತು ಎಂಜಿನಿಯರ್‌ಗಳು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು ದುರಸ್ತಿ ಕಾರ್ಯ ನಡೆಯುತ್ತಿರುವುದಾಗಿ ತಿಳಿಸಿದ್ದಾರೆ.

ಗೊಂದಲಕ್ಕೀಡಾದ ಪ್ರಯಾಣಿಕರು: ದಿಢೀರ್ ಆಗಿ ರೈಲು ಸ್ಥಗಿತಗೊಂಡ ಮಾಹಿತಿ ಲಭಿಸುತ್ತಿದ್ದಂತೆ ಪ್ರಯಾಣಿಕರು ಗೊಂದಲಕ್ಕೀಡಾದರು. ಸ್ಪಷ್ಟ ಮಾಹಿತಿಗಾಗಿ ಪರದಾಡಿದರು. ಕೆಲವರು ನಿಲ್ದಾಣದಲ್ಲೇ ಉಳಿದರು. ಕೆಲವರು ಬದಲಿ ವ್ಯವಸ್ಥೆ ಮಾಡಿ ಪ್ರಯಾಣ ಮುಂದುವರಿಸಿದರು.

ಮೂವರು ಬಾಲಕರ ರಕ್ಷಣೆ

ಬೆಂಗಳೂರು: ಕೆಎಸ್‌ಆರ್ ಬೆಂಗಳೂರು ರೈಲು ನಿಲ್ದಾಣದ ಪ್ಲಾಟ್‌ಫಾರ್ಮ್ 1ರಲ್ಲಿ ಅನುಮಾನಾಸ್ಪದವಾಗಿ ತಿರುಗಾಡುತ್ತಿದ್ದ ಇಬ್ಬರು ಬಾಲಕರನ್ನು ಮತ್ತು ರೈಲಿನಲ್ಲಿ ಒಂಟಿಯಾಗಿ ಬಂದ ಬಾಲಕನನ್ನು ರೈಲ್ವೆ ರಕ್ಷಣಾ ದಳವು (ಆರ್‌ಪಿಎಫ್) ರಕ್ಷಿಸಿದೆ.

ಪೋಷಕರಿಗೆ ತಿಳಿಸದೇ ಉದ್ಯೋಗ ಅರಸಿ ಬೆಂಗಳೂರಿಗೆ ಬುಧವಾರ ಬಂದಿರುವುದಾಗಿ ಪ್ಲಾಟ್‌ಫಾರ್ಮ್‌ನಲ್ಲಿದ್ದ ಬಾಲಕರು ತಿಳಿಸಿದ್ದಾರೆ. ಲೋಕಮಾನ್ಯ ತಿಲಕ್ ಟರ್ಮಿನಲ್–ಕೊಯಮತ್ತೂರು ಮಧ್ಯೆ ಸಂಚರಿಸುವ ರೈಲಿನಲ್ಲಿ ಬಾಲಕನೊಬ್ಬನನ್ನು ರೈಲ್ವೆ ರಕ್ಷಣಾ ದಳವು ಪತ್ತೆಹಚ್ಚಿದೆ. ಈ ಬಾಲಕ ಕೂಡ ಪೋಷಕರಿಗೆ ತಿಳಿಸದೇ ಮನೆ ಬಿಟ್ಟು ಬಂದಿರುವುದು ಗೊತ್ತಾಗಿದೆ. ಈ ಮೂವರನ್ನೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಹಸ್ತಾಂತರಿಸಲಾಗಿದೆ. ಏಪ್ರಿಲ್‌ನಿಂದ ಈವರೆಗೆ ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದಲ್ಲಿ 75 ಬಾಲಕರು, 13 ಬಾಲಕಿಯರನ್ನು ರೈಲ್ವೆ ರಕ್ಷಣಾ ದಳ ರಕ್ಷಿಸಿದೆ. ಮಕ್ಕಳನ್ನು ಕುಟುಂಬದವರ ಜತೆ ಸೇರಿಸಲು ಮಕ್ಕಳ ರಕ್ಷಣಾ ಘಟಕ ಮತ್ತು ಸರ್ಕಾರೇತರ ಸಂಸ್ಥೆಗಳಿಗೆ ಒಪ್ಪಿಸಲಾಗಿದೆ.

ಏರ್ ಪಾಡ್: ಕೊಯಮತ್ತೂರು-ಬೆಂಗಳೂರು ಕಂಟೋನ್ಮೆಂಟ್ ವಂದೇ ಭಾರತ್ ರೈಲಿನಲ್ಲಿ ಪ್ರಯಾಣಿಕರೊಬ್ಬರು ತಮ್ಮ ಏರ್ ಪಾಡ್ ಅನ್ನು ಮರೆತು ಇಳಿದಿದ್ದರು. ಈ ಬಗ್ಗೆ ಜುಲೈ 23ರಂದು 'ರೈಲ್ ಮದದ್' ಮೂಲಕ ದೂರು ನೀಡಿದ್ದರು. ಆರ್‌ಪಿಎಫ್ ತಂಡ ಏರ್ ಪಾಡ್ ಅನ್ನು ಪತ್ತೆ ಹಚ್ಚಿ ಪ್ರಯಾಣಿಕರಿಗೆ ಹಸ್ತಾಂತರಿಸಿದೆ.

56 ಲಗೇಜ್ ಪತ್ತೆ: ಈ ಆರ್ಥಿಕ ವರ್ಷದಲ್ಲಿ ಒಟ್ಟು ₹18.73 ಲಕ್ಷ ಮೌಲ್ಯದ 56 ಲಗೇಜ್‌ಗಳನ್ನು ಪತ್ತೆ ಹಚ್ಚಿ ಮಾಲೀಕರಿಗೆ ಹಿಂತಿರುಗಿಸಲಾಗಿದೆ ಎಂದು ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

'ಡೆಂಗಿ ಪೀಡಿತರ ಮೇಲೆ ನಿಗಾ ವಹಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡೆಂಗಿ ದೃಢಪಟ್ಟ ಪ್ರತಿಯೊಬ್ಬರ ಮೇಲೂ 14 ದಿನಗಳವರೆಗೆ ನಿಗಾ ವಹಿಸಬೇಕು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅಧಿಕಾರಿಗಳಿಗೆ ಸೂಚಿಸಿದರು.

ಯಲಹಂಕದ ಶಿಂಗೇನಹಳ್ಳಿಯಲ್ಲಿ ಶುಕ್ರವಾರ ನಡೆದ ಈಡಿಸ್ ಸೊಳ್ಳೆಯ ಲಾರ್ವಾ ನಾಶಪಡಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸಚಿವರು, ಸ್ಥಳೀಯ ಶಾಲೆಗಳಲ್ಲಿ ಡೆಂಗಿ ಬಗ್ಗೆ ಜಾಗೃತಿ ಮೂಡಿಸಿದರು. ಇದೇ ವೇಳೆ ಡೆಂಗಿ 'ಹಾಟ್ ಸ್ಪಾಟ್'ಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಬಳಿಕ ಮಾತನಾಡಿದ ಅವರು, 'ಡೆಂಗಿ ನಿಯಂತ್ರಣಕ್ಕೆ ಬೆಂಗಳೂರಿನಲ್ಲಿ ಹೆಚ್ಚಿನ ನಿಗಾ ಇರಿಸಲಾಗಿದೆ. ಕೆಲವು ಜಿಲ್ಲೆಗಳಲ್ಲಿ ಈಗಾಗಲೇ ಡೆಂಗಿ ಪ್ರಕರಣಗಳು ಇಳಿಮುಖವಾಗಿವೆ' ಎಂದರು.

ರಾಜ್ಯದಲ್ಲಿ ಈವರೆಗೆ ನಿಫಾ ಪ್ರಕರಣ ಪತ್ತೆಯಾಗಿಲ್ಲ ಎಂದು ತಿಳಿಸಿದರು.

ಸಿಎಂಆರ್ ವಿ.ವಿ: ಪದವಿ ತರಗತಿಗಳ ಉದ್ಘಾಟನೆ



ಕಾರ್ಯಕ್ರಮದಲ್ಲಿ ಪ್ರೊ.ಚಂಬಿ ಪುರಾಣಿಕ್ ಅವರನ್ನು ಗೌರವಿಸಲಾಯಿತು. ಸಿಎಂಆರ್ ವಿಶ್ವವಿದ್ಯಾಲಯದ ಕುಲಪತಿ ಎಚ್‌.ಬಿ.ರಾಘವೇಂದ್ರ, ಕುಲಸಚಿವ ಪ್ರವೀಣ್‌.ಆರ್, ಶಿಕ್ಷಣ ವಿಭಾಗಗಳ ಡೀನ್ ಮತ್ತು ನಿರ್ದೇಶಕರು ಉಪಸ್ಥಿತರಿದ್ದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಲಿಕೆಯ ದಿಕ್ಸೂಚಿ ಸರಿಯಾದ ಮಾರ್ಗದಲ್ಲಿ ಸಾಗಿದಾಗ ಮಾತ್ರ ಸಾಧನೆ ಎಂಬ ಗುರಿ ಮುಟ್ಟಲು ಸಾಧ್ಯ' ಎಂದು ಶಿಕ್ಷಣ ತಜ್ಞ ಪ್ರೊ.ಚಂಬಿ ಪುರಾಣಿಕ್ ತಿಳಿಸಿದರು.

ಸಿಎಂಆರ್ ವಿಶ್ವವಿದ್ಯಾಲಯದ 2024ನೇ ಸಾಲಿನ ಶೈಕ್ಷಣಿಕ ವರ್ಷದ ಪದವಿ ತರಗತಿಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

'ಬದುಕಿನಲ್ಲಿ ಮೌಲ್ಯಗಳು ಮತ್ತು ಸಾಮಾಜಿಕ ಹೊಣೆಗಾರಿಕೆ ಅಳವಡಿಸಿಕೊಳ್ಳಬೇಕು. ಆ ಮೂಲಕ ಸಂವಿಧಾನದ ಆಶಯಗಳನ್ನು ಯಶಸ್ವಿಗೊಳಿಸಲು ಕೈಜೋಡಿಸಬೇಕು. ದೇಶದ ಸರ್ವಾಂಗೀಣ ಪ್ರಗತಿ ಯುವಜನಾಂಗದ ಕೈಯಲ್ಲಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಕಲಿಕೆಯ ಜತೆಗೆ ನಾಯಕತ್ವ, ಕಾರ್ಯಕ್ಷಮತೆ, ನ್ಯಾಯಪರತೆ ಮತ್ತು ಜೀವನ ಮೌಲ್ಯಗಳನ್ನು ಗೌರವಿಸುವ ಹಾಗೂ ಬದುಕಿನಲ್ಲಿ ಅಳವಡಿಸಿಕೊಳ್ಳುವ ಮೂಲಕ ಪರಿಪೂರ್ಣರಾಗಬೇಕು' ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

2024ನೇ ಶೈಕ್ಷಣಿಕ ಸಾಲಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳನ್ನು ಸ್ವಾಗತಿಸಿದ ಸಿಎಂಆರ್ ವಿಶ್ವವಿದ್ಯಾಲಯದ ಕುಲಪತಿ ಎಚ್.ಬಿ.ರಾಘವೇಂದ್ರ, 'ವಿದ್ಯಾರ್ಥಿಗಳ ಮಹತ್ವಾಕಾಂಕ್ಷೆಗಳನ್ನು ಪೂರೈಸುವ ಮತ್ತು ಸರ್ವತೋಮುಖ ಬೆಳವಣಿಗೆಗೆ ಬೇಕಾದ ಅತ್ಯುತ್ತಮ ಕಲಿಕಾ ವಾತಾವರಣವನ್ನು ಸಿಎಂಆರ್ ವಿಶ್ವವಿದ್ಯಾಲಯ ಕಲ್ಪಿಸಿಕೊಟ್ಟಿದೆ. ಇದನ್ನು ಸದ್ಬಳಕೆ ಮಾಡಿಕೊಳ್ಳುವ ಮೂಲಕ ವಿದ್ಯಾರ್ಥಿಗಳು ಜೀವನವನ್ನು ಉಜ್ವಲಗೊಳಿಸಿಕೊಳ್ಳಬೇಕು' ಎಂದು ಹೇಳಿದರು.

ನಗರದಲ್ಲಿ ಇಂದು

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in


ವಿಶ್ವ ಹೆಪಟೈಟಿಸ್ ದಿನದ ಪ್ರಯುಕ್ತ 'ಹೆಪಟೈಟಿಸ್' ರೋಗದ ಬಗ್ಗೆ ಜಾಗೃತಿ ಹಾಗೂ ಉಚಿತ ಆರೋಗ್ಯ ಶಿಬಿರ: 'ಪ್ರಾರಂಭಿಕ ಹಂತದಲ್ಲಿಯೇ ರೋಗದ ಪತ್ತೆ ಮತ್ತು ಚಿಕಿತ್ಸೆ ಬಗ್ಗೆ' ಉಪನ್ಯಾಸ: ಡಾ. ನವೀನ್ ಗಂಜೂ, ಆಯೋಜನೆ: ನಾಲೆಡ್ಜಿಯಮ್ ಅಕಾಡೆಮಿ, ಜೈನ್ ಗ್ರೂಪ್, ಆಸ್ಟರ್ ಆರ್.ವಿ ಆಸ್ಪತ್ರೆ, ಸ್ಥಳ: ನಾಲೆಡ್ಜಿಯಮ್ ಅಕಾಡೆಮಿ, ಜೆಎಸ್‌ಎಸ್ ಸಭಾಂಗಣದ ಎದುರು, ಜಯನಗರ 8ನೇ ಬ್ಲಾಕ್, ಬೆಳಿಗ್ಗೆ 9ರಿಂದ

ಕೆ.ಎಸ್.ನಾರಾಯಣಾಚಾರ್ಯರ ಸ್ಮರಣಾರ್ಥ ದ್ವಿತೀಯ ವಾರ್ಷಿಕ ಡಾ. ಕೆ.ಎಸ್ ನಾರಾಯಣಾಚಾರ್ಯ ಸಮ್ಮಾನ-ಸಭೆ: 'ಡಾ.ಕೆ.ಎಸ್. ನಾರಾಯಣಾಚಾರ್ಯ ಸಮ್ಮಾನ' ಪ್ರಶಸ್ತಿ: ಬಾಬು ಕೃಷ್ಣಮೂರ್ತಿ, 'ಭಾರತೀಯ ಇತಿಹಾಸದ ಪ್ರಾಚೀನತೆ' ವಿಷಯದ ಬಗ್ಗೆ ಉಪನ್ಯಾಸ: ನೀಲೇಶ್ ಓಕ್, 'ಕೆ.ಎಸ್. ನಾರಾಯಣಾಚಾರ್ಯರ ಮಹಾಭಾರತದ ಆ 18 ದಿನಗಳು' ವಿಷಯದ ಬಗ್ಗೆ ಉಪನ್ಯಾಸ: ದೀಪಕ್ ಎಂ.ಆರ್., 'ಸಂಸ್ಕೃತವು ಭಾರತದ ಹೊರಗಿನಿಂದ ಬಂದಿದೆಯೇ?' ವಿಷಯದ ಬಗ್ಗೆ ಉಪನ್ಯಾಸ: ಶಿವಶಂಕರ ಶಾಸ್ತ್ರಿ, 'ರಾಮಾಯಣ-ಒಂದು ಅದ್ಭುತ' ವಿಷಯದ ಬಗ್ಗೆ ಉಪನ್ಯಾಸ: ಯಶೋದೀಪ್ ದೇವಧರ್, ಆಯೋಜನೆ: ಉದ್ಭವಃ, ಸಾಹಿತ್ಯ ಪ್ರಕಾಶನ, ಸುಬ್ಬು ಪಬ್ಲಿಕೇಷನ್ಸ್, ಸ್ಥಳ: ಪತ್ತಿ ಸಭಾಂಗಣ, ಎನ್.ಆರ್. ಕಾಲೊನಿ, ಬೆಳಿಗ್ಗೆ 9.30

ಸಾಹಿತ್ಯ–ಸಂಸ್ಕೃತಿ ಸಮಾಗಮ: 'ಉದಯಭಾವ ಸಂಭ್ರಮ' ಗೀತ ಗಾಯನ ಸಮಾರಂಭ, ಉದ್ಘಾಟನೆ: ಎಚ್.ಎಸ್. ಜಯರಾಮ, ರಾಜ್ಯಮಟ್ಟದ ಪ್ರಶಸ್ತಿ, ಕವಿ ಸಂಭ್ರಮ ಮತ್ತು ಗೀತ ಗಾಯನ ಪ್ರಶಸ್ತಿ ಪ್ರದಾನ ಸಮಾರಂಭ, ಅಧ್ಯಕ್ಷತೆ: ಸಿ. ಜಯಲಕ್ಷ್ಮಿ, ಪ್ರಶಸ್ತಿ ಪ್ರದಾನ: ಗೋವಿಂದಹಳ್ಳಿ ಕೃಷ್ಣೇಗೌಡ, ಆಯೋಜನೆ: ವಿಶ್ವಮಾನವ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಮಹಿಳಾ ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 9.30

5ನೇ ಕನ್ನಡ ಸಾಹಿತ್ಯ ಸಮ್ಮೇಳನ: ಉದ್ಘಾಟನೆ: ದಿನೇಶ್ ಗುಂಡೂರಾವ್, ಸಮ್ಮೇಳನಾಧ್ಯಕ್ಷತೆ: ವಿ. ರಾಣಿ ಗೋವಿಂದರಾಜು, ಮುಖ್ಯ ಅತಿಥಿಗಳು: ವೂಡೇ ಪಿ. ಕೃಷ್ಣ, ಧರಣೀದೇವಿ ಮಾಲಗತ್ತಿ, ಅಧ್ಯಕ್ಷತೆ: ಎಂ. ಪ್ರಕಾಶಮೂರ್ತಿ, ಉಪಸ್ಥಿತಿ: ಗೌಡಗೆರೆ ಮಾಯುಶ್ರೀ, ಆಯೋಜನೆ: ಗಾಂಧಿನಗರ ವಿಧಾನಸಭೆ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 10

ವಿಶ್ವ ತಂಬಾಕು ರಹಿತ ದಿನ ಸಮಾರಂಭ: ಉದ್ಘಾಟನೆ: ದಿನೇಶ್ ಗುಂಡೂರಾವ್, ಮುಖ್ಯ ಅತಿಥಿಗಳು: ಬಿಷಪ್ ಮಾರ್ಟಿನ್ ಚಾರ್ಲಸ್ ಬೋರ್ಗಿ, ಹರ್ಷ ಗುಪ್ತ, ಡಿ. ರಂದೀಪ್, ನವೀನ್ ಭಟ್, ಡಾ.ಶ್ರೀನಿವಾಸ್ ಜಿ.ಎನ್., ಡಾ. ರಜನಿ ಎಂ., ಆಯೋಜನೆ: ಆರೋಗ್ಯ ಇಲಾಖೆ, ಸ್ಥಳ: ಬಿಷಪ್ ಕಾಟನ್ ಮಹಿಳಾ ಕ್ರಿಶ್ಚಿಯನ್ ಕಾನೂನು ಕಾಲೇಜು, ಮಿಷನ್ ರಸ್ತೆ, ಬೆಳಿಗ್ಗೆ 10



ದಿನೇಶ್ ಗುಂಡೂರಾವ್

ಕಣ್ಣಿನ ಉಚಿತ ಪರೀಕ್ಷೆ ಹಾಗೂ ಕನ್ನಡಕ ವಿತರಣೆ: ಚಾಲನೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ: ನಂಜನಗೂಡು ಶ್ರೀಕಂಠೇಶ್ವರ ಸೇವಾ ಸಂಘ, ಸ್ಥಳ: ಶ್ರೀಕಂಠೇಶ್ವರ ಭವನ, 5ನೇ ಅಡ್ಡ ರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 10

ರಾಷ್ಟ್ರೀಯ ವಿಚಾರಸಂಕಿರಣ ಹಾಗೂ ರಾಜ್ಯಗಳ ಅಂಗವಿಕಲ ಆಯುಕ್ತರ ಸಮಾವೇಶ: ಮುಖ್ಯ ಅತಿಥಿ: ನ್ಯಾ.ಡಿ.ವೈ. ಚಂದ್ರಚೂಡ್, ಗೌರವ ಅತಿಥಿಗಳು: ನ್ಯಾ.ಬಿ.ವಿ. ನಾಗರತ್ನ, ನ್ಯಾ.ಎನ್.ವಿ.ಅಂಜರಿಯಾ, ಉಪಸ್ಥಿತಿ: ಶೊಂಬಿ ಶಾರ್ಪ್, ಲಕ್ಷ್ಮಿ ಹೆಬ್ಬಾಳ್ಕರ್, ರಾಜೇಶ್ ಅಗರವಾಲ್, ಎ.ಆರ್. ಆನಂದರಾಮ್, ಆಯೋಜನೆ: ಕರ್ನಾಟಕ ಸರ್ಕಾರ, ರಾಮಯ್ಯ ಕಾಲೇಜ್ ಆಫ್ ಲಾ, ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ, ಸ್ಥಳ: ವೆಸ್ಟ್ ಎಂಡ್ ಕೋರ್ಟ್, ದಿ ತಾಜ್ ವೆಸ್ಟ್ ಎಂಡ್, ರೇಸ್ ಕೋರ್ಸ್ ರಸ್ತೆ, ಬೆಳಿಗ್ಗೆ 10.30

ಪದವಿ ಪ್ರದಾನ ಸಮಾರಂಭ: ಮುಖ್ಯ ಅತಿಥಿ: ಪಿ.ಬಿ. ಕೋಟೂರ್, ಅಧ್ಯಕ್ಷತೆ: ಎಸ್.ಎನ್.ವಿ.ಎಲ್. ನರಸಿಂಹ ರಾಜು, ಆಯೋಜನೆ ಹಾಗೂ ಸ್ಥಳ: ದಿ ಆಕ್ಸ್‌ಫರ್ಡ್ ಕಾಲೇಜ್ ಆಫ್ ಎಂಜಿನಿಯರಿಂಗ್, ಬೊಮ್ಮನಹಳ್ಳಿ, ಬೆಳಿಗ್ಗೆ 10

ದಿನಕರ ದೇಸಾಯಿ ಸ್ಮರಣಾರ್ಥ 'ಚುಟುಕು ಚಿತ್ತಾರ' ಕವಿಗೋಷ್ಠಿ, ಟ್ರಸ್ಟ್ ಉದ್ಘಾಟನೆ: ಸಾನ್ನಿಧ್ಯ: ಬಸವರಾಜ ಸ್ವಾಮೀಜಿ, ಚಾಲನೆ: ಅಜಯ್ ಸಾರಥಿ, ಅಧ್ಯಕ್ಷತೆ: ಅಂಬರೀಷ್ ಜಿ., ಆಯೋಜನೆ: ಮಂದಗೆರೆ ಕಲೆ–ಸಾಹಿತ್ಯ–ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ರಾಜರಾಜೇಶ್ವರಿ ಇಂಗ್ಲಿಷ್ ಸ್ಕೂಲ್, ಯಶವಂತಪುರ, ಮಧ್ಯಾಹ್ನ 3.30

ಕುವೆಂಪು ಸಾಹಿತ್ಯ ವಿಚಾರ ಸಂಕಿರಣ ಹಾಗೂ ವಿ.ಟಿ. ರಾಮಕೃಷ್ಣಯ್ಯ ಅವರು ಬರೆದಿರುವ 'ಕಥೆ ಬೇಕೆ ಕಥೆ' ಹಾಗೂ 'ಗಿಳಿ ಹೇಳಿದ ಕಥೆ' ಪುಸ್ತಕ ಬಿಡುಗಡೆ: ಎಸ್.ಎ. ಚಿನ್ನೇಗೌಡ, ಕೃತಿ ಬಗ್ಗೆ ಮಾತು: ವ.ಚ. ಚನ್ನೇಗೌಡ, ಆಯೋಜನೆ: ಕುವೆಂಪು ಸಿರಿಗನ್ನಡ ವೇದಿಕೆ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 3.30

ನಿರಂಜನ 100 ಮರು ಓದು: 'ಧ್ವನಿ ನಿರಂಜನ ಕಥಾ ಸಮುಚ್ಚಯ-1', 'ಧ್ವನಿ ನಿರಂಜನ ಕಥಾ ಸಮುಚ್ಚಯ-2', 'ಕನಸು', 'ಮೃತ್ಯುಂಜಯ' ಪುಸ್ತಕಗಳ ಬಿಡುಗಡೆ: ತೇಜಸ್ವಿನಿ ನಿರಂಜನ, ಮರು ಓದು–ಮಾತುಕತೆ: ಬಿ.ಆರ್. ಮಂಜುನಾಥ್, ಚ.ಹ. ರಘುನಾಥ, ಬಿ. ಸುರೇಶ, ಉಪಸ್ಥಿತಿ: ಎಂ.ಜಿ. ಹೆಗಡೆ, ಆಯೋಜನೆ: ಐಬಿಎಚ್ ಪ್ರಕಾಶನ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4

ಚಿಣ್ಣರ ಚಿಲಿಪಿಲಿ ಹಾಗೂ ಸುಗಮ ಸಂಗೀತ–ವಾದ್ಯ ಸಂಗೀತ ವೈಭವ: ಉದ್ಘಾಟನೆ: ನರಸಿಂಹ, ಅಧ್ಯಕ್ಷತೆ: ಕಿಕ್ಕೇರಿ ಕೃಷ್ಣಮೂರ್ತಿ, ಆಯೋಜನೆ: ಆದರ್ಶ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್, ಸ್ಥಳ: ಉದಯಭಾನು ಕಲಾ ಸಂಘ, ಗವೀಪುರ ಗುಟ್ಟಹಳ್ಳಿ, ಸಂಜೆ 5

ಎಸ್. ಗಂಗಾಧರಯ್ಯ ಅವರು ಅನುವಾದಿಸಿರುವ 'ಫ್ರೇಗ್ರನ್ಸ್ ಆಫ್ ಗ್ವಾವ' ಪುಸ್ತಕ ಬಿಡುಗಡೆ: ಉಪಸ್ಥಿತಿ: ಎನ್.ಎ.ಎಂ ಇಸ್ಮಾಯಿಲ್, ಸಂಧ್ಯಾರಾಣಿ, ಆಯೋಜನೆ: ಜೀರುಂಡೆ ಪುಸ್ತಕ, ಸ್ಥಳ: ಬೀಟಲ್ ಬುಕ್ ಶಾಪ್, ವಿಜಯನಗರ ಮೆಟ್ರೊ ನಿಲ್ದಾಣದ ಹತ್ತಿರ, ಬಸವೇಶ್ವರ ಕಾಲೇಜು ಎದುರು, ಸಂಜೆ 5

ಅಪರೂಪಿ ಅನುರೂಪಿಗಳು ಹಡಪದ ಅಪ್ಪಣ್ಣ ಲಿಂಗಮ್ಮನವರ ಜಯಂತಿ: ಉದ್ಘಾಟನೆ: ಸಂಗಮೇಶ ಉಪಾಸೆ, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಅನುಭಾವ: ಬಜ್ಜಿ ವೀರಣ್ಣ, ಆಯೋಜನೆ: ವಚನ ಜ್ಯೋತಿ, ಸ್ಥಳ: ಬಸವ ಬೆಳಕು, #533, 7ನೇ ಮುಖ್ಯ ರಸ್ತೆ, ಕಲ್ಯಾಣ ಗೃಹ ನಿರ್ಮಾಣ ಸಹಕಾರ ಸಂಘ ಬಡಾವಣೆ, ದೊಡ್ಡಬಸ್ತಿ ಮುಖ್ಯರಸ್ತೆ, ಕೆಂಚನಪುರ ಕ್ರಾಸ್, ಸಂಜೆ 5

ವಿಶ್ವವಾಣಿ ಪುಸ್ತಕ ಪ್ರಕಾಶನದ ಒಂಬತ್ತು ಪುಸ್ತಕಗಳ ಬಿಡುಗಡೆ: ಅಧ್ಯಕ್ಷತೆ: ಗುರುರಾಜ ಕರಜಗಿ, ಮುಖ್ಯ ಅತಿಥಿಗಳು: ಉಲ್ಲಾಸ್ ಕಾರಂತ, ಪ್ರತಾಪ ಸಿಂಹ, ಅಜಿತ್ ಹನುಮಕ್ಕನವರ, ಪ್ರದೀಪ ಈಶ್ವರ, ಆಯೋಜನೆ: ಶ್ರೀ ವಾಗ್ದೇವಿ ವಿದ್ಯಾವರ್ಧಕ ಟ್ರಸ್ಟ್, ವಿಶ್ವವಾಣಿ ಪುಸ್ತಕ, ಪರಿಶ್ರಮ ನೀಟ್ ಅಕಾಡೆಮಿ, ಸ್ಥಳ: ಎಫ್‌ಕೆಸಿಸಿ ಸಭಾಂಗಣ, ಮೈಸೂರು ಬ್ಯಾಂಕ್ ಬಳಿ, ಕೆ.ಜಿ. ರಸ್ತೆ, ಸಂಜೆ 5

'ಮಳೆ ಬರುವ ಹಾಗಿದೆ...' ಜಯಂತ ಕಾಯ್ಕಿಣಿ ಅವರೊಂದಿಗೆ ಕನ್ನಡ, ಹಿಂದಿ ಮಳೆಯ ಹಾಡುಗಳ ಸಿಂಚನ: ಗಾಯಕರು: ರಾಮಚಂದ್ರ ಹಡಪದ್, ಸ್ಪರ್ಶ ಆರ್.ಕೆ., ಶರಧಿ ಪಾಟೀಲ, ವಿಕಾಸ್ ವಸಿಷ್ಠ, ಆಯೋಜನೆ: ನ್ಯೂಸ್ ಫಸ್ಟ್, ಪರಮಪದ, ಸ್ಥಳ: ಪತ್ತಿ ಸಭಾಂಗಣ, ಎನ್.ಆರ್. ಕಾಲೊನಿ, ಸಂಜೆ 5.30

ಕರ್ನಾಟಕ ಶಾಸ್ತ್ರೀಯ ಸಂಗೀತ: ಹಂಸಿನಿ ನಾಗೇಂದ್ರ, ವಾದ್ಯ ಸಹಕಾರ: ಬಿ.ಕೆ. ರಘು, ಬಿ.ಎಸ್. ಪ್ರಶಾಂತ್, ಎನ್. ಗುರುಮೂರ್ತಿ, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ರಾಮ ಮಂದಿರ, ಮಲ್ಲೇಶ್ವರ, ಸಂಜೆ 6

ಬಿಬಿಎಂಪಿಯಲ್ಲಿ ಕಾನೂನುಬಾಹಿರ ನಿಯೋಜನೆ: ಹೋರಾಟದ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿಗೆ ಕಂದಾಯ ಪರಿವೀಕ್ಷಕರನ್ನು ವೃಂದ ಮತ್ತು ನೇಮಕಾತಿ ನಿಯಮಾವಳಿಗೆ ವಿರುದ್ಧವಾಗಿ ನಗರಾಭಿವೃದ್ಧಿ ಇಲಾಖೆಯಿಂದ ನಿಯೋಜಿಸಲಾಗಿದೆ. ಈ ಕಾನೂನುಬಾಹಿರ ಆದೇಶವನ್ನು ವಾಪಸ್ ಪಡೆಯಬೇಕು' ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಒತ್ತಾಯಿಸಿದೆ.

ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಅವರು ಜುಲೈ 26ರಂದು ಪತ್ರ ಬರೆದಿದ್ದಾರೆ. 'ಮೈಸೂರು ಮಹಾನಗರ ಪಾಲಿಕೆಯಿಂದ ಅಶ್ವಿನಿ, ರೇಷ್ಮೆ ಇಲಾಖೆಯಿಂದ ನಿತಿನ್, ರಾಮನಗರ ನಗರಸಭೆಯಿಂದ ರಕ್ಷಿತ್ ಅವರನ್ನು ಬಿಬಿಎಂಪಿಯ ಕಂದಾಯ ಪರಿವೀಕ್ಷಕರಾಗಿ ನಿಯೋಜಿಸಲಾಗಿದೆ. ಇದು ಕಾನೂನುಬಾಹಿರ' ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ. '2020ರ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ಶೇ 25ರಷ್ಟು ಕಂದಾಯ ಪರಿವೀಕ್ಷಕರ ಹುದ್ದೆಯನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಮೀಸಲಿಡಲಾಗಿದೆ. ಕಂದಾಯ ವಸೂಲಿಗಾರರು/ದ್ವಿತೀಯ ದರ್ಜೆ ಗುಮಾಸ್ತರು ಅಧಿಕ ಪ್ರಭಾರದ ಮೇಲೆ ಕಂದಾಯ ಪರಿವೀಕ್ಷಕರ ಹುದ್ದೆಯಲ್ಲಿದ್ದರೂ 27 ಮಂದಿ ಆರ್ಥಿಕ ಸೌಲಭ್ಯ ಪಡೆಯಲು ವಂಚಿತರಾಗಿದ್ದಾರೆ. ಈ ಮಧ್ಯೆ ಕಂದಾಯ ಪರಿವೀಕ್ಷಕರನ್ನು ನಿಯೋಜನೆ ಮೇರೆಗೆ ಇತರೆ ಇಲಾಖೆಗಳಿಂದ ಬಿಬಿಎಂಪಿಗೆ ಕರೆತರುತ್ತಿರುವುದು ಸರಿಯಲ್ಲ' ಎಂದಿದ್ದಾರೆ.

'ಈ ಆದೇಶವನ್ನು ಹಿಂಪಡೆಯ ಬೇಕು. ಇಲ್ಲದಿದ್ದಲ್ಲಿ ಹೋರಾಟ ನಡೆಸಲಾಗುತ್ತದೆ' ಎಂದು ತಿಳಿಸಿದ್ದಾರೆ.

ಆರೋಗ್ಯ ಸಮಸ್ಯೆಯನ್ನು ಆಪ್ತರಲ್ಲಷ್ಟೆ ಹಂಚಿಕೊಂಡಿದ್ದ ನಿರೂಪಕಿ: ಮುದ್ದುಕೃಷ್ಣ

ಅಪರ್ಣಾಗೆ ನುಡಿ ನಮನ, ಗೀತ ಗೌರವ


ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರೂಪಕಿ, ನಟಿ ಅಪರ್ಣಾ ಅವರಿಗೆ ಕರ್ನಾಟಕ ಸುಗಮ ಸಂಗೀತ ಪರಿಷತ್ತು ಹಾಗೂ ಕಟ್ಟೆ ಸತ್ಯ ಫೌಂಡೇಶನ್ ವತಿಯಿಂದ ಶುಕ್ರವಾರ 'ಅಪರ್ಣಾ–ನಿಮಗಿದೋ ನಮ್ಮ ನುಡಿ ನಮನ–ಗೀತ ಗೌರವ' ಸಲ್ಲಿಸಲಾಯಿತು.

'ಅಪರ್ಣಾ ಅವರು ತನ್ನ ಆರೋಗ್ಯ ಸಮಸ್ಯೆಯನ್ನು ತೀರ ಹತ್ತಿರದವರನ್ನು ಹೊರತುಪಡಿಸಿ ಯಾರೊಂದಿಗೂ ಹಂಚಿಕೊಂಡವರಲ್ಲ. ಕೆಲವು ಸಮಯದ ಹಿಂದೆ ನಮ್ಮ ಮನೆಗೆ ಬಂದು ವಿಚಾರ ತಿಳಿಸಿದ್ದರು. ವಸ್ತಾರೆ ಅವರು ಅಪರ್ಣಾರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು' ಎಂದು ಸುಗಮ ಸಂಗೀತ ಪರಿಷತ್ತು ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ ನೆನಪು ಮಾಡಿದರು.

'ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕನಾಗಿದ್ದಾಗ ಮತ್ತು ಸುಗಮ ಸಂಗೀತ ಪರಿಷತ್ತು ಅಧ್ಯಕ್ಷರಾದ ಮೇಲೆಯೂ ಅನೇಕ ಕಾರ್ಯಕ್ರಮಗಳಿಗೆ ಅಪರ್ಣಾ ಅವರನ್ನೇ ನಿರೂಪಕಿಯಾಗಿ ಆಹ್ವಾನಿಸುತ್ತಿದ್ದೆ' ಎಂದರು.

ಕಟ್ಟೆ ಸತ್ಯ ಫೌಂಡೇಶನ್‌ನ ಕಟ್ಟೆ ಸತ್ಯನಾರಾಯಣ, ನಾಗರಾಜ್ ವಸ್ತಾರೆ, ಹರೀಶ್ ನಾಗರಾಜ್, ಕಲಾ ಕ್ಷೇತ್ರ ವಿವಿಧ ರಂಗದಲ್ಲಿ ಕೆಲಸ ಮಾಡಿರುವ ಸಿ. ಸೋಮಶೇಖರ್, ಶ್ರೀನಿವಾಸ್ ಜಿ. ಕಪ್ಪಣ್ಣ, ನಾ.ದಾಮೋದರ ಶೆಟ್ಟಿ, ಎಚ್. ಎನ್. ನೀಲಕಂಠ, ಕಿಕ್ಕೇರಿ ಕೃಷ್ಣಮೂರ್ತಿ, ಶಂಕರ್ ಪ್ರಕಾಶ್, ವನಮಾಲ ವಿಶ್ವನಾಥ್, ಸಂಧ್ಯಾ ಕುಮಾರ್, ಪೂರ್ಣಿಮಾ ಕೃಷ್ಣಮೂರ್ತಿ, ಎಸ್. ಸುನಿತಾ ಅವರು ಅಪರ್ಣಾ ಜೊತೆಗಿನ ಒಡನಾಟವನ್ನು ಹಂಚಿಕೊಂಡರು.



'ಅಪರ್ಣಾ–ನಿಮಗಿದೋ ನಮ್ಮ ನುಡಿ ನಮನ – ಗೀತ ಗೌರವ' ಕಾರ್ಯಕ್ರಮದಲ್ಲಿ ಹರೀಶ್ ನಾಗರಾಜು, ಕಿಕ್ಕೇರಿ ಕೃಷ್ಣಮೂರ್ತಿ, ವೈ.ಕೆ ಮುದ್ದುಕೃಷ್ಣ ಮತ್ತು ಕಟ್ಟೆ ಸತ್ಯನಾರಾಯಣ ಅವರು ಅಪರ್ಣಾ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು

ಪ್ರಜಾವಾಣಿ ಚಿತ್ರ

ಬಿಗುವಿನ ವಾತಾವರಣ– ಆಹಾರ ಸುರಕ್ಷತೆ ಇಲಾಖೆ ಅಧಿಕಾರಿಯಿಂದ ಮಾದರಿ ಸಂಗ್ರಹ

ನಾಯಿ ಮಾಂಸ ಮಾರಾಟ ಆರೋಪ

ಪ್ರಜಾವಾಣಿ ವಾರ್ತೆ



ಮಾಂಸದ ಮಾದರಿಯನ್ನು ಆಹಾರ ಸುರಕ್ಷತೆ ಇಲಾಖೆ ಅಧಿಕಾರಿಗಳು ಸಂಗ್ರಹಿಸಿದರು – ಪ್ರಜಾವಾಣಿ ಚಿತ್ರ ರಂಜು.ಪಿ

ಬೆಂಗಳೂರು: 'ನಾಯಿ ಮಾಂಸವನ್ನು ರೈಲಿನ ಮೂಲಕ ನಗರಕ್ಕೆ ತಂದು ಹೋಟೆಲ್‌ಗಳಿಗೆ ಪೂರೈಕೆ ಮಾಡಲಾಗುತ್ತಿದೆ' ಎಂದು ಆರೋಪಿಸಿ ಪುನೀತ್ ಕೆರೆಹಳ್ಳಿ ಅವರ ನೇತೃತ್ವದ ಗುಂಪೊಂದು ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಲ್ಲಿ ಶುಕ್ರವಾರ ರಾತ್ರಿ ಪ್ರತಿಭಟನೆ ನಡೆಸಿತು. ಇದರಿಂದ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

'ನಗರಕ್ಕೆ ಬಂದ ಜೈಪುರ–ಮೈಸೂರು ಎಕ್ಸ್‌ಪ್ರೆಸ್ ರೈಲಿನಲ್ಲಿ 120 ಬಾಕ್ಸ್‌ಗಳಲ್ಲಿ 4,500 ಕೆ.ಜಿಯಷ್ಟು ನಾಯಿಯ ಮಾಂಸ ತರಲಾಗಿದೆ. ಇದನ್ನು ಅಬ್ದುಲ್ ರಜಾಕ್ ಮಾಲೀಕತ್ವದ ಮಾಂಸದ ಅಂಗಡಿಗಳಲ್ಲಿ ಮಾರಾಟ ಮಾಡಲಾಗುತ್ತಿದೆ. ನಿತ್ಯ ನೂರಾರು ಬಾಕ್ಸ್‌ನಲ್ಲಿ ಮಾಂಸ ತರಲಾಗುತ್ತಿದೆ' ಎಂದು ಪುನೀತ್ ಕೆರೆಹಳ್ಳಿ ಆರೋಪಿಸಿದರು. ಅದಾದ ಮೇಲೆ ಸ್ಥಳಕ್ಕೆ ಉದ್ಯಮಿ ಅಬ್ದುಲ್ ರಜಾಕ್ ಬಂದರು. ಆಗ ವಾಗ್ವಾದ ಮತ್ತಷ್ಟು ತೀವ್ರಗೊಂಡಿತು.

'ಬಾಕ್ಸ್‌ಗಳಲ್ಲಿ ತಂದಿರುವ ಮಾಂಸವನ್ನು ತೆರೆದು ತೋರಿಸಬೇಕು' ಎಂದು ಪ್ರತಿಭಟನಕಾರರು ಪಟ್ಟು ಹಿಡಿದರು. ಈ ವಿಚಾರಕ್ಕೆ ಸಂಬಂಧಿಸಿದಂತೆ ಎರಡೂ ಕಡೆಯವರ ಮಧ್ಯೆ ಮಾತಿನ ಚಕಮಕಿ, ವಾಗ್ವಾದ ನಡೆಯಿತು.

ಪುನೀತ್ ಆರೋಪವನ್ನು ನಿರಾಕರಿಸಿದ ಅಬ್ದುಲ್ ರಜಾಕ್, 'ಪುನೀತ್ ಹಣ ಕೇಳಲು ಬಂದಿದ್ದರು. ನಯಾಪೈಸೆ ಕೊಡುವುದಿಲ್ಲ ಎಂದು ಹೇಳಿ ಕಳುಹಿಸಿದ್ದೆ. ಅದಕ್ಕೆ ಈ ರೀತಿ ಗಲಾಟೆ ಮಾಡುತ್ತಿದ್ದಾರೆ. ನಾಯಿ ಮಾಂಸವನ್ನು ತಂದಿಲ್ಲ. ಬಾಕ್ಸ್‌ನಲ್ಲಿ ತಂದಿರುವುದು ಕುರಿಯ ಮಾಂಸ. ಪುನೀತ್ ಮಾಡಿರುವ ಆರೋಪ ಸುಳ್ಳು' ಎಂದು ಅವರು ಹೇಳಿದರು.

ನನ್ನ ಬಳಿ ಪರವಾನಗಿ ಇದೆ. 12 ವರ್ಷದಿಂದ ಮಾಂಸದ ವ್ಯಾಪಾರ ಮಾಡುತ್ತಿದ್ದೇನೆ. ನಿಯಮದ ಪ್ರಕಾರವೇ ಹೊರ ರಾಜ್ಯದಿಂದ ಕುರಿ ಮಾಂಸ ತರಿಸಲಾಗಿದೆ. ಯಾರು ಬೇಕಾದರೂ ಪರಿಶೀಲನೆ ನಡೆಸಬಹುದು' ಎಂದು ರಜಾಕ್ ಹೇಳಿದರು.

ನಂತರ, ಕಾಟನ್‌ಪೇಟೆ ಹಾಗೂ ಉಪ್ಪಾರಪೇಟೆ ಪೊಲೀಸರು ಸ್ಥಳಕ್ಕೆ ಬಂದು ಪರಿಸ್ಥಿತಿ ನಿಯಂತ್ರಿಸಿದರು.

ಮಲ್ಲೇಶ್ವರ ವಲಯದ ಆಹಾರ ಸುರಕ್ಷತೆ ಅಧಿಕಾರಿ ಅಂಬರೀಷ್ ಅವರು ಸ್ಥಳಕ್ಕೆ ಬಂದು ನಾಲ್ಕು ಬಾಕ್ಸ್‌ಗಳಲ್ಲಿದ್ದ ಮಾಂಸದ ಮಾದರಿಯನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ರವಾನೆ ಮಾಡಿದರು.

'ಪ್ರಯೋಗಾಲಯದ ವರದಿ ಬಂದ ನಂತರ ಯಾವ ಮಾಂಸ ಎಂಬುದು ತಿಳಿಯಲಿದೆ' ಎಂದು ಅಧಿಕಾರಿಗಳು ಹೇಳಿದರು. ನಂತರ, ಪುನೀತ್ ಕೆರೆಹಳ್ಳಿ ಅವರನ್ನು ಪೊಲೀಸರು ವಶಕ್ಕೆ ಪಡೆದುಕೊಂಡರು.

'ಗ್ಯಾರಂಟಿಗೆ ಎಸ್‌ಸಿಎಸ್‌ಪಿ–ಟಿಎಸ್‌ಪಿ ಹಣ ಬಳಸಬೇಡಿ'

ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಕ್ಕೂಟ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ (ಟಿಎಸ್‌ಪಿ) ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳದಂತೆ ಆಗ್ರಹಿಸಿ 'ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಕ್ಕೂಟ'ದಿಂದ ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ ಅವರಿಗೆ ಶುಕ್ರವಾರ ಮನವಿ ಸಲ್ಲಿಸಲಾಯಿತು.

ಪರಿಶಿಷ್ಟರ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಈ ಸಮುದಾಯಗಳು ಇಲ್ಲದ ಪ್ರದೇಶಗಳಲ್ಲಿ ಕಟ್ಟಡಗಳನ್ನು, ವಿವಿಧ ಕಾಮಗಾರಿಗಳನ್ನು ಮಾಡಿದ ಇಲಾಖೆಯ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕು. ಶಿಕ್ಷಣ, ಆರೋಗ್ಯ, ಕಾರ್ಮಿಕ, ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಅಂಗವಿಕಲರ ಅಭಿವೃದ್ಧಿ ಇಲಾಖೆಗಳನ್ನು ಹೊರತುಪಡಿಸಿ ಇತರ 29 ಇಲಾಖೆಗಳಲ್ಲಿ ಎಸ್‌ಸಿಎಸ್ಪಿ ಮತ್ತು ಟಿಎಸ್‌ಪಿ ಹಣ ಬಳಸುವುದನ್ನು ನಿಲ್ಲಿಸಬೇಕು ಎಂದು ಒಕ್ಕೂಟದ ರಾಜ್ಯ ಸಮಿತಿ ಮುಖಂಡರು ಆಗ್ರಹಿಸಿದರು.

ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ ಜಾತಿಗಳ ಜನಸಂಖ್ಯೆಗೆ ಅನುಗುಣವಾಗಿ ಅನುದಾನವನ್ನು ಹಂಚಿಕೆಯಲ್ಲೂ ಒಳ ಮೀಸಲಾತಿ ಕಲ್ಪಿಸಬೇಕು. ಗ್ಯಾರಂಟಿಗಳಿಗೆ ಸಾಮಾನ್ಯ ನಿಧಿಯಿಂದ ಖರ್ಚು ಮಾಡಬೇಕು. ಎಸ್‌ಸಿಎಸ್‌ಪಿ–ಟಿಎಸ್‌ಪಿ ಹಣ ಬಳಸಬಾರದು. ಕಳೆದ 10 ವರ್ಷಗಳಲ್ಲಿ ಎಸ್‌ಸಿಎಸ್‌ಪಿ–ಟಿಎಸ್‌ಪಿ ಹಣವನ್ನು ಬಳಸಿ ಅಭಿವೃದ್ಧಿಯಾಗಿರುವ ಕುಟುಂಬಗಳು ಮತ್ತು ಪ್ರದೇಶಗಳ ವಿವರಗಳನ್ನು ನೀಡಬೇಕು ಎಂದು ಒತ್ತಾಯಿಸಿದರು.

ಒಕ್ಕೂಟದ ರಾಜ್ಯ ಪ್ರಧಾನ ಸಂಚಾಲಕ ಬಸವರಾಜ ಕೌತಾಳ್, ಮುಖಂಡರಾದ ಕರಿಯಪ್ಪ, ಸೋಮಶೇಖರ್ ಎಚ್‌.ಸಿ. ಭಾಗವಹಿಸಿದ್ದರು.

ಒಟಿಎಸ್: ಪಾಲಿಕೆ ಇಂದು ಕಾರ್ಯನಿರ್ವಹಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ಬಾರಿ ಪರಿಹಾರ (ಒಟಿಎಸ್) ಯೋಜನೆಯು ಜುಲೈ 31 ರಂದು ಕೊನೆಗೊಳ್ಳಲಿದ್ದು, ನಾಗರಿಕರಿಗೆ ಅನುಕೂಲವಾಗಲು ನಾಲ್ಕನೇ ಶನಿವಾರ ಜುಲೈ 27ರಂದೂ ಪಾಲಿಕೆಯ ಕಂದಾಯ ಅಧಿಕಾರಿಗಳು ಕಾರ್ಯನಿರ್ವಹಿಸಲಿದ್ದಾರೆ. ವಲಯ ಜಂಟಿ ಆಯುಕ್ತರ ಕಚೇರಿಗಳು ಸ್ಥಾಪಿಸಿರುವ 'ಹೆಲ್ಪ್ ಡೆಸ್ಕ್' ಹಾಗೂ ಎಲ್ಲಾ ಸಹಾಯಕ ಕಂದಾಯ ಅಧಿಕಾರಿ ಕಚೇರಿಗಳು ಕಾರ್ಯನಿರ್ವಹಿಸಲಿವೆ. ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಬಾಕಿ ಆಸ್ತಿತೆರಿಗೆ ಪಾವತಿದಾರರು ಹಾಗೂ ಶೈಕ್ಷಣಿಕ ಸಂಸ್ಥೆಗಳು ಒಟಿಎಸ್ ಯೋಜನೆಯ ಸದುಪಯೋಗ ಪಡೆದುಕೊಳ್ಳಲು ಕಂದಾಯ ವಿಭಾಗದ ಜಂಟಿ ಆಯುಕ್ತರು ಪ್ರಕಟಣೆಯಲ್ಲಿ ಕೋರಿದ್ದಾರೆ.

'ಆನ್‌ಲೈನ್ ಪಾವತಿ': ಬೆಸ್ಕಾಂಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಡೀ ಜಗತ್ತು ಡಿಜಿಟಲ್ ಕ್ಷೇತ್ರದಲ್ಲಿ ದಾಪುಗಾಲಿಡುತ್ತಿರುವಾಗ, ನೀವು ಮಾತ್ರ ಆನ್‌ಲೈನ್ ಪಾವತಿಗಳನ್ನು ಯಾಕೆ ಸ್ವೀಕರಿಸುತ್ತಿಲ್ಲ ಎಂಬ ಬಗ್ಗೆ ಪ್ರಮಾಣಪತ್ರ ಸಲ್ಲಿಸಿ' ಎಂದು ಹೈಕೋರ್ಟ್, ಬೆಂಗಳೂರು ವಿದ್ಯುತ್ ಸರಬರಾಜು ನಿಗಮದ (ಬೆಸ್ಕಾಂ) ವ್ಯವಸ್ಥಾಪಕ ನಿರ್ದೇಶಕರಿಗೆ ಆದೇಶಿಸಿದೆ.

ಈ ಸಂಬಂಧ ಹೊಸಕೋಟೆ ನಿವಾಸಿ ಸೀತಾಲಕ್ಷ್ಮಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎನ್‌.ಎಸ್.ಸಂಜಯಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದ್ದು, ವಿಚಾರಣೆಯನ್ನು ಆಗಸ್ಟ್ 9ಕ್ಕೆ ಮುಂದೂಡಿದೆ.

ಪ್ರಕರಣವೇನು?: 'ವಾಣಿಜ್ಯ ವಿದ್ಯುತ್ ಬಳಕೆ ಪ್ರಮಾಣ ಹೆಚ್ಚಾಗಿರುವ ಕಾರಣ ಸಾಮರ್ಥ್ಯ ಪ್ರಮಾಣವನ್ನು ಹೆಚ್ಚಿಸಿ' ಎಂದು ಅರ್ಜಿದಾರರು ಸಹಾಯಕ ಎಕ್ಸಿಕ್ಯೂಟಿವ್ ಎಂಜಿನಿಯರ್ ಅವರಿಗೆ ಮನವಿ ಮಾಡಿದ್ದರು. ಇದಕ್ಕೆ ಎಂಜಿನಿಯರ್, ₹16 ಸಾವಿರ ಪಾವತಿಸುವಂತೆ ತಿಳಿಸಿದ್ದರು. ಇದರನ್ವಯ ಅರ್ಜಿದಾರರು ನಗದು ಪಾವತಿಸಲು ಕಚೇರಿಗೆ ತೆರಳಿದಾಗ, ಡಿಡಿ ಅಥವಾ ಆರ್‌ಟಿಜಿಎಸ್ ಮೂಲಕ ಹಣ ಪಾವತಿಸುವಂತೆ ಸೂಚಿಸಿದ್ದರು. 'ನನಗೆ 65 ವರ್ಷವಾಗಿದ್ದು, ಓಡಾಡಲು ಸಾಧ್ಯವಿಲ್ಲ. ಹಾಗಾಗಿ, ಆನ್‌ಲೈನ್ ಮೂಲಕ ಹಣ ಪಾವತಿಸುತ್ತೇನೆ' ಎಂದು ಅರ್ಜಿದಾರರು ತಿಳಿಸಿದ್ದರು. ಆದರೆ ಎಂಜಿನಿಯರ್, ಇದಕ್ಕೆ ಅವಕಾಶ ನೀಡಿರಲಿಲ್ಲ.

ಇದಕ್ಕೆ ಅರ್ಜಿದಾರರು ಪ್ರೀ–ಪೇಯ್ಡ್ ಮೀಟರ್ ನೀಡುವಂತೆ ಮನವಿ ಮಾಡಿದ್ದರು. ಅಧಿಕಾರಿಗಳು ಅರ್ಜಿದಾರರ ಮನವಿ ತಿರಸ್ಕರಿಸಿದ್ದರು. ಇದನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದ ಅರ್ಜಿದಾರರು, 'ವಿದ್ಯುತ್ ಸರಬರಾಜು ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ತಿರಸ್ಕರಿಸಿ ಹಾಗೂ ಪ್ರೀ–ಪೇಯ್ಡ್ ಮೀಟರ್ ಕೊಡಲು ನಿರಾಕರಿಸಿ ಬೆಸ್ಕಾಂ ಹೊಸಕೋಟೆ ವೃತ್ತದ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಎಂಜಿನಿಯರ್ 2024ರ ಮೇ 8ರಂದು ಹೊರಡಿಸಿರುವ ಆದೇಶವನ್ನು ರದ್ದುಪಡಿಸಬೇಕು' ಎಂದು ಕೋರಿದ್ದರು.

'ಪ್ರೀಪೇಯ್ಡ್ ಮೀಟರ್ ನೀಡಬೇಕು, ಆರ್‌ಬಿಐ ಮಾರ್ಗಸೂಚಿ ಹಾಗೂ ಕೆಇಆರ್‌ಸಿ ನಿಯಮಗಳಪ್ರಕಾರಯುಪಿಐ,ಡಿಜಿಟಲ್‌ಪಾವತಿಗಳನ್ನು ಸ್ವೀಕರಿಸುವಂತೆ ಬೆಸ್ಕಾಂ ಹಾಗೂ ಇತರ ಅಧಿಕಾರಿಗಳಿಗೆ ನಿರ್ದೇಶಿಸಬೇಕು' ಎಂದು ಮನವಿ ಮಾಡಿದ್ದರು. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಶ್ರೀಧರ ಪ್ರಭು ವಾದ ಮಂಡಿಸಿದರು.

ಅಕ್ರಮ ಜಾಹೀರಾತು: ಹೈಕೋರ್ಟ್ ಕಿಡಿ

ಬಿಬಿಎಂಪಿ ಆಯುಕ್ತ, ಪೊಲೀಸ್ ಕಮಿಷನರ್‌ಗೆ ನ್ಯಾಯಾಂಗ ನಿಂದನೆ ಕ್ರಮದ ಎಚ್ಚರಿಕೆ

ಪ್ರಜಾವಾಣಿ ವಾರ್ತೆ



ಮುಖ್ಯಾಂಶಗಳು

- ಅನಧಿಕೃತ ಜಾಹೀರಾತುಗಳಿಂದ ಜನರಿಗೆ ತೊಂದರೆ: ವಕೀಲ
- ಕ್ರಮ ಎಂದರೆ ಹೋರ್ಡಿಂಗ್ ಹಾಕಲು ಅನುಮತಿ ಕೊಡುವುದೇ: ಹೈಕೋರ್ಟ್ ತರಾಟೆ
- ಆಗಸ್ಟ್ 12ಕ್ಕೆ ವಿಚಾರಣೆ ಮುಂದೂಡಿಕೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಅಕ್ರಮ ಜಾಹೀರಾತು ಫಲಕಗಳ ಹಾವಳಿ ಹೆಚ್ಚಾಗುತ್ತಿದೆ' ಎಂದು ಕಿಡಿ ಕಾರಿರುವ ಹೈಕೋರ್ಟ್, 'ನ್ಯಾಯಾಲಯದ ಆದೇಶ ಪಾಲಿಸುವಲ್ಲಿ ವಿಫಲವಾಗಿರುವ ಪಾಲಿಕೆಯ ಮುಖ್ಯ ಆಯುಕ್ತ ಹಾಗೂ ನಗರ ಪೊಲೀಸ್ ಕಮಿಷನರ್ ವಿರುದ್ಧ ಯಾಕೆ ನ್ಯಾಯಾಂಗ ನಿಂದನೆಯಡಿ ಕ್ರಮ ಜರುಗಿಸಬಾರದು' ಎಂದು ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ.

'ಅನಧಿಕೃತ ಜಾಹೀರಾತು ಫಲಕಗಳ ಹಾವಳಿ ತಡೆಯಲು ಬಿಬಿಎಂಪಿಗೆ ನಿರ್ದೇಶಿಸಬೇಕು' ಎಂದು ಕೋರಿ ಸಾಮಾಜಿಕ ಕಾರ್ಯಕರ್ತ ಮಾಯಿಗೇಗೌಡ ಸಲ್ಲಿಸಿರುವ ಅರ್ಜಿ ಹಾಗೂ ಹೈಕೋರ್ಟ್ ಸ್ವಯಂಪ್ರೇರಣೆಯಿಂದ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್‌.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಜಿ.ಆರ್.ಮೋಹನ್, 'ಬಿಬಿಎಂಪಿ ವ್ಯಾಪ್ತಿಯಲ್ಲಿನ ಸಾರ್ವಜನಿಕ ರಸ್ತೆ, ಪಾದಚಾರಿ ಮಾರ್ಗಗಳಲ್ಲಿ ಅನಧಿಕೃತ ಬ್ಯಾನರ್, ಫ್ಲೆಕ್ಸ್ ಹಾಕುವ ಪ್ರವೃತ್ತಿ ಎಗ್ಗಿಲ್ಲದೆ ಮುಂದುವರಿದೆ. ಇದರಿಂದಾಗಿ ವಾಹನ ಸಂಚಾರ ದಟ್ಟಣೆಯೂ ಸೇರಿದಂತೆ ಸಾರ್ವಜನಿಕರು ಹಲವು ತೊಂದರೆಗಳಿಗೆ ಈಡಾಗಿದ್ದಾರೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

'ಪ್ರಕರಣಕ್ಕೆ ಸಂಬಂಧಿಸಿದಂತೆ 2017ರಿಂದಲೂ ನ್ಯಾಯಾಲಯ ಸೂಕ್ತ ಆದೇಶ ಮತ್ತು ನಿರ್ದೇಶನಗಳನ್ನು ನೀಡುತ್ತಾ ಬಂದಿದೆ. ಆದರೂ ಪಾಲಿಕೆಯಾಗಲಿ ಅಥವಾ ಸರ್ಕಾರವಾಗಲಿ ಯಾವುದೇ ರೀತಿಯ ಕ್ರಮ ಜರುಗಿಸಿಲ್ಲ' ಎಂದು ಆಕ್ಷೇಪಿಸಿದರು.

ಇದಕ್ಕೆ ಸರ್ಕಾರಿ ವಕೀಲರು, 'ಅನಧಿಕೃತ ಫ್ಲೆಕ್ಸ್, ಬ್ಯಾನರ್ ಮತ್ತು ಹೋರ್ಡಿಂಗ್‌ಗಳನ್ನು ಅಳವಡಿಸಿದವರ ವಿರುದ್ಧ ಕ್ರಮ ಜರುಗಿಸಲು ಪೊಲೀಸ್ ಕಮಿಷನರ್ ಅವರು ಇನ್‌ಸ್ಪೆಕ್ಟರ್‌ಗಳನ್ನು ನೇಮಕ ಮಾಡಿದ್ದಾರೆ. ಇಂತಹ ಕೃತ್ಯಗಳಲ್ಲಿ ತೊಡಗಿದವರಿಗೆ ಸೂಕ್ತ ರೀತಿಯ ದಂಡ ವಿಧಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಕ್ರಮಗಳ ಅನುಷ್ಠಾನದ ಅವಶ್ಯಕತೆಯಿದ್ದು, ಅದಕ್ಕೆ ಕಾಲಾವಕಾಶ ನೀಡಬೇಕು' ಎಂದು ಕೋರಿದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, 'ನಿಮ್ಮ ಪ್ರಕಾರ ಕ್ರಮ ಎಂದರೆ ಮತ್ತಷ್ಟು ಅನಧಿಕೃತ ಜಾಹೀರಾತು ಫಲಕಗಳು, ಫ್ಲೆಕ್ಸ್‌ಗಳು ಮತ್ತು ಹೋರ್ಡಿಂಗ್‌ಗಳ ಅಳವಡಿಕೆಗೆ ಅನುಮತಿ ನೀಡುವುದೇ' ಎಂದು ಸರ್ಕಾರಿ ವಕೀಲರನ್ನು ಖಾರವಾಗಿ ಪ್ರಶ್ನಿಸಿತು. 'ಇನ್ನೂ ಕಾಲಾವಕಾಶ ಬೇಕು ಎಂದಾದರೆ ಇಷ್ಟು ದಿನ ಏನು ಮಾಡಿದ್ದೀರಿ' ಎಂದು ಅಸಮಾಧಾನ ವ್ಯಕ್ತಪಡಿಸಿತು.

'ಅನಧಿಕೃತ ಜಾಹಿರಾತು ಫಲಕಗಳ ಅಳವಡಿಕೆ ತಡೆಯುವ ಬಗ್ಗೆ ಏನೆಲ್ಲಾ ಕ್ರಮ ಕೈಗೊಂಡಿದ್ದೀರಿ ಎಂಬುದರ ಮಾಹಿತಿ ನೀಡಿ' ಎಂದು ಖಡಕ್ ತಾಕೀತು ಮಾಡಿ ವಿಚಾರಣೆಯನ್ನು ಆಗಸ್ಟ್ 12ಕ್ಕೆ ಮುಂದೂಡಿತು.

ಸ್ವಯಂ ಪ್ರೇರಿತ ಪಿಐಎಲ್: ಇದೇ 11ರಂದು ಪ್ರಕರಣದ ವಿಚಾರಣೆ ನಡೆದಿತ್ತು. ಆಗ ಇಂಗ್ಲಿಷ್ ದಿನಪತ್ರಿಕೆಯೊಂದರಲ್ಲಿ ಪ್ರಕಟವಾದ ಸುದ್ದಿ ಆಧರಿಸಿ ಅನಧಿಕೃತ ಜಾಹೀರಾತು ಫಲಕಗಳ ಹಾವಳಿ ಕುರಿತಂತೆ ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿಕೊಂಡಿತ್ತು.

'ಹೈಕೋರ್ಟ್‌ನ ಹಲವು ಆದೇಶಗಳ ಹೊರತಾಗಿಯೂ ಬೆಂಗಳೂರು ಮಹಾನಗರದಲ್ಲಿ ಅನಧಿಕೃತ ಜಾಹೀರಾತು ಫಲಕಗಳು, ಫ್ಲೆಕ್ಸ್ ಹಾಗೂ ಹೋರ್ಡಿಂಗ್‌ಗಳ ಹಾವಳಿ ಮುಂದುವರಿದಿದೆ. ನ್ಯಾಯಾಲಯದ ಆದೇಶಗಳ ಬಗ್ಗೆ ಪಾಲಿಕೆ, ನಗರ ಪೊಲೀಸರು ನಿರ್ಲಕ್ಷ್ಯ ತೋರಿಸುತ್ತಿದ್ದಾರೆ ಎಂಬುದನ್ನು ಪತ್ರಿಕೆಯ ವರದಿ ಪುಷ್ಟೀಕರಿಸುತ್ತದೆ. ಹಾಗಾಗಿ, ಸ್ವಯಂಪ್ರೇರಿತ ಪಿಐಎಲ್ ದಾಖಲಿಸಿಕೊಳ್ಳಲಾಗುತ್ತಿದೆ' ಎಂದು ತಿಳಿಸಿತ್ತು.

ಫ್ಲೆಕ್ಸ್ ಮುದ್ರಿಸಿದರೆ ಪರವಾನಗಿ ರದ್ದು: ಬಿಬಿಎಂಪಿ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಲಿಕೆಯ ಅನುಮತಿ ಪತ್ರ ಇಲ್ಲದೆ ಫ್ಲೆಕ್ಸ್, ಬ್ಯಾನರ್‌ಗಳನ್ನು ಮುದ್ರಿಸಿದರೆ ಅಂತಹ ವ್ಯಾಪಾರಸ್ಥರ ಪರವಾನಗಿಯನ್ನು ರದ್ದುಪಡಿಸುವುದಾಗಿ ಬಿಬಿಎಂಪಿ ಎಚ್ಚರಿಕೆ ನೀಡಿದೆ.

ಫ್ಲೆಕ್ಸ್, ಬ್ಯಾನರ್ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ಶುಕ್ರವಾರ ನೀಡಿರುವ ಆದೇಶದಿಂದ ಎಚ್ಚೆತ್ತಿರುವ ಬಿಬಿಎಂಪಿ, ಕಂದಾಯ ಹಾಗೂ ಜಾಹೀರಾತು ವಿಭಾಗದ ಸಿಬ್ಬಂದಿಗೆ ಮಾರ್ಗಸೂಚಿಗಳನ್ನು ಜಾರಿ ಮಾಡಿದೆ.

ಜಾಹೀರಾತು ಪೋಸ್ಟರ್ಸ್, ಫ್ಲೆಕ್ಸ್, ಬ್ಯಾನರ್ಸ್ ಇತ್ಯಾದಿಗಳನ್ನು ಮುದ್ರಣ ಮಾಡಲು ಕೋರುವ ವ್ಯಕ್ತಿ ಅಥವಾ ಸಂಸ್ಥೆಗಳ ವಿಳಾಸ, ವಿವರಗಳನ್ನು ಪಡೆದುಕೊಳ್ಳಬೇಕು. ಜಾಹೀರಾತು ಮುದ್ರಿಸುವ ಮುನ್ನ ಪಾಲಿಕೆ ವತಿಯಿಂದ ಪ್ರದರ್ಶನಕ್ಕೆ ಅನುಮತಿ ಪಡೆದುಕೊಳ್ಳಬೇಕು ಎಂದು ಮಾರ್ಗಸೂಚಿಯಲ್ಲಿ ತಿಳಿಸಿದೆ.

ಪ್ಲಾಸ್ಟಿಕ್ ನಿಷೇಧವಿದ್ದು, ಪರಿಸರಕ್ಕೆ ಮಾರಕವಾಗದ ವಸ್ತುಗಳನ್ನು ಬಳಸಿ ಫ್ಲೆಕ್ಸ್, ಬ್ಯಾನರ್‌ಗಳನ್ನು ಮುದ್ರಿಸಬೇಕು. ಮುದ್ರಣಕ್ಕೆ ಪಾಲಿಕೆಯಿಂದ ಅನುಮತಿ ಪಡೆದಿರುವ ಪತ್ರವನ್ನು ನೀಡಿದರೆ ಮಾತ್ರ ಮುದ್ರಿಸಬೇಕು ಎಂದು ಎಲ್ಲ ಮುದ್ರಕರಿಗೆ ಸೂಚಿಸಬೇಕು ಎಂದು ಜಾಹೀರಾತು ವಿಭಾಗದ ವಿಶೇಷ ಆಯುಕ್ತರು ಶುಕ್ರವಾರ ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

ಬಿಬಿಎಂಪಿಯ ಹೊರಾಂಗಣ ಜಾಹೀರಾತು ಫಲಕ ಮತ್ತು ಸಾರ್ವಜನಿಕ ಸಂದೇಶ ಉಪವಿಧಿಗಳು–2018ರಂತೆ ಸ್ವ–ಜಾಹೀರಾತುಗಳಿಗೆ ಮಾತ್ರ ಅನುಮತಿ ನೀಡಲಾಗುತ್ತಿದೆ. ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಯೋಜನೆಗಳ ಹೊರತಾಗಿ ಯಾವುದೇ ರೀತಿಯ ವಾಣಿಜ್ಯ ಜಾಹೀರಾತುಗಳಿಗೆ ಅವಕಾಶ ಇಲ್ಲ. ಸಾರ್ವಜನಿಕ, ವೈಯಕ್ತಿಕ ಜಾಹೀರಾತುಗಳು, ಶುಭಾಶಯಗಳು, ಸಭೆ–ಸಮಾರಂಭಗಳ ಕುರಿತ ಜಾಹೀರಾತು/ ಪ್ರಕಟಣೆಗಳ ಫ್ಲೆಕ್ಸ್, ಬ್ಯಾನರ್ಸ್, ಬಂಟಿಂಗ್ಸ್, ಭಿತ್ತಿಪತ್ರ, ಬಾವುಟ ಸೇರಿದಂತೆ ಯಾವುದೇ ರೀತಿಯ ಫಲಕಗಳ ಪ್ರದರ್ಶನವನ್ನು ನಿಷೇಧಿಸಲಾಗಿದೆ. ಆದರೂ ಇಂತಹ ಪ್ರದರ್ಶನಗಳನ್ನು ಅನಧಿಕೃತವಾಗಿ ಅಳವಡಿಸಲಾಗುತ್ತಿದೆ. ಇಂತಹವರ ಮೇಲೆ ಕಾರ್ಯಾಚರಣೆ ಮಾಡಿ, ದಂಡ ವಿಧಿಸಿ ಎಫ್‌ಐಆರ್ ದಾಖಲಿಸಲಾಗುತ್ತಿದೆ. ಈ ಕಾರ್ಯಾಚರಣೆಯನ್ನು ಮುಂದುವರಿಸಬೇಕು ಎಂದು ಸೂಚಿಸಿದ್ದಾರೆ.



ಗಾಯನ...

ಪಂಡಿತ್ ಬಿಮಲೇಂದು ಮುಖರ್ಜಿ ಅವರ ಜನ್ಮ ಶತಮಾನೋತ್ಸವದ ಪ್ರಯುಕ್ತ ಕೈಲಾಸ್ ಸಂಗೀತ ಟ್ರಸ್ಟ್ ನಗರದ ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ 'ಆಚಾರ್ಯ ದೇವೋ ಭವ' ಸಂಗೀತ ಕಛೇರಿಯಲ್ಲಿ ಕೌಶಿಕಿ ಚಕ್ರವರ್ತಿ ಅವರು ಗಾಯನ ಹಾಗೂ ಅನುಪಮಾ ಭಾಗವತ್ ಅವರು ಸಿತಾರ್ ವಾದನ ಪ್ರಸ್ತುತ ಪಡಿಸಿದರು

–ಪ್ರಜಾವಾಣಿ ಚಿತ್ರ /ಕಿಶೋರ್ ಕುಮಾರ್ ಬೋಳಾರ್

ಸಿ.ಎಂ ವಿರುದ್ಧ ಪ್ರಕರಣ ದಾಖಲಿಸಲು ಅನುಮತಿಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಡಾದಲ್ಲಿ ಬದಲಿ ನಿವೇಶನ ಹಂಚಿಕೆಯಲ್ಲಿ ಅಧಿಕಾರ ದುರ್ಬಳಕೆ ಮಾಡಿಕೊಂಡು, ಅಕ್ರಮ ನಡೆಸಿದ ಆರೋಪದಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಅನುಮತಿ ಕೋರಿ ರಾಜ್ಯಪಾಲರಿಗೆ ವಕೀಲ ಟಿ.ಜೆ. ಅಬ್ರಹಾಂ ಮನವಿ ಸಲ್ಲಿಸಿದ್ದಾರೆ.

ಬದಲಿ ನಿವೇಶನ ಹಂಚಿಕೆ ಸಂಬಂಧ ಸಿದ್ದರಾಮಯ್ಯ ವಿರುದ್ಧ ಮೈಸೂರು ಲೋಕಾಯುಕ್ತ ಪೊಲೀಸರಲ್ಲಿ ಅಬ್ರಹಾಂ ಅವರು ಇದೇ 18ರಂದು ದೂರು ದಾಖಲಿಸಿದ್ದರು. ಆದರೆ ಮುಖ್ಯಮಂತ್ರಿಯವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ರಾಜ್ಯಪಾಲರ ಅನುಮತಿ ಅಗತ್ಯವಿದೆ.

ಅಬ್ರಹಾಂ ಅವರು 22 ಪುಟಗಳ ವಿಸ್ತೃತ ಮನವಿ ಪತ್ರವನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಶುಕ್ರವಾರ ಸಲ್ಲಿಸಿದ್ದಾರೆ. 'ಅಧಿಕಾರ ದುರುಪಯೋಗ ಪಡಿಸಿಕೊಂಡು ಅಕ್ರಮ ನಡೆಸಿದ್ದಾರೆ. ಇದರಿಂದ ರಾಜ್ಯದ ಬೊಕ್ಕಸಕ್ಕೆ ₹55.80 ಕೋಟಿ ನಷ್ಟವಾಗಿದೆ. ಈ ಬಗ್ಗೆ ಹೆಚ್ಚಿನ ತನಿಖೆಗಾಗಿ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವ ಅಗತ್ಯವಿದೆ' ಎಂದು ವಿವರಿಸಿದ್ದಾರೆ.

'ಡಿ – ನೋಟಿಫಿಕೇಷನ್ ಮಾಡಲಾದ ಕೆಸರೆ ಗ್ರಾಮದ 3 ಎಕರೆ 16 ಗುಂಟೆ ಜಮೀನನ್ನು ವಂಚನೆ ಮೂಲಕ ಕಬಳಿಸಲಾಗಿದೆ. ತಮ್ಮ ಹೆಸರಿನಲ್ಲಿ ಇಲ್ಲದೇ ಇದ್ದ ಮತ್ತು ತಾವು ಯಾವ ರೀತಿಯಲ್ಲೂ ಹಕ್ಕು ಹೊಂದಿಲ್ಲದ ಈ ಜಮೀನನ್ನು ಜೆ.ದೇವರಾಜ ಅವರು ಮಾರಾಟ ಮಾಡಿದ್ದಾರೆ. ಅದನ್ನು ಸಿದ್ದರಾಮಯ್ಯ ಅವರ ಮೌಖಿಕ ಸೂಚನೆಯ ಆಧಾರದ ಮೇಲೆ, ಅವರ ಬಾಮೈದುನ ಮಲ್ಲಿಕಾರ್ಜುನ ಸ್ವಾಮಿ ಖರೀದಿಸಿದ್ದಾರೆ' ಎಂದು ಅವರು ಆರೋಪಿಸಿದ್ದಾರೆ.

ಸಿದ್ದರಾಮಯ್ಯ ಪಾರದರ್ಶಕ ನಡೆ: ಎಚ್‌.ಕೆ.ಪಾಟೀಲ

ಬೆಂಗಳೂರು: ಮುಡಾ ಪ್ರಕರಣದಲ್ಲಿ ತಮ್ಮ ಕುಟುಂಬದ ಮೇಲೆ ಆರೋಪ ಕೇಳಿ ಬಂದ ತಕ್ಷಣವೇ ನ್ಯಾಯಾಂಗ ತನಿಖೆಗೆ ಒಪ್ಪಿಸುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪಾರದರ್ಶಕವಾಗಿ ನಡೆದುಕೊಂಡಿದ್ದಾರೆ ಎಂದು ಕಾನೂನು ಸಚಿವ ಎಚ್‌.ಕೆ.ಪಾಟೀಲ ಹೇಳಿದರು.

ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಸಾಕಷ್ಟು ಮುಖ್ಯಮಂತ್ರಿಗಳ ಮೇಲೆ ಆರೋಪ ಕೇಳಿ ಬಂದಾಗ ಯಾರೂ ಇಷ್ಟು ಪಾರದರ್ಶಕವಾಗಿ ನ್ಯಾಯಾಂಗ ತನಿಖೆಗೆ ಆದೇಶ ಮಾಡಿರಲಿಲ್ಲ ಎಂದು ತಿಳಿಸಿದರು.


ಒಮ್ಮೆ ತನಿಖೆಗೆ ಆದೇಶ ಮಾಡಿದ ಮೇಲೆ ಅದರ ಮೇಲೆ ವಿಧಾನಮಂಡಲದಲ್ಲಿ ಚರ್ಚೆಯ ಅಗತ್ಯವೇನಿದೆ. ಬಿಜೆಪಿಯವರು ತುರ್ತಾಗಿ ನಿಲುವಳಿ ಸೂಚನೆ ತರುವ ಅಗತ್ಯವೇನಿತ್ತು? ಹತ್ತಾರು ವಿಷಯಗಳನ್ನು ಒಟ್ಟುಗೂಡಿಸಿ ನಿಲುವಳಿ ಸೂಚನೆ ಮಂಡಿಸಿದ್ದರಿಂದ ಸಭಾಧ್ಯಕ್ಷರು ನಿಯಮದ ಪ್ರಕಾರ ಅವಕಾಶ ನೀಡಲಿಲ್ಲ ಎಂದು ಪಾಟೀಲ ಹೇಳಿದರು.

ವಿಧಾನಮಂಡಲದಲ್ಲಿ ಯಾವುದೇ ಚರ್ಚೆಯ ಉದ್ದೇಶ ತನಿಖೆ ಅಥವಾ ವಿಚಾರಣೆಗೆ ಒಪ್ಪಿಸಬೇಕು ಎನ್ನುವುದೇ ಆಗಿರುತ್ತದೆ. ಆದರೆ, ಸಿದ್ದರಾಮಯ್ಯ ಅವರು ಮೊದಲೇ ತನಿಖಾ ಆಯೋಗ ರಚಿಸಿದರು. ಹಿಂದಿನ ಯಾವ ಮುಖ್ಯಮಂತ್ರಿಗಳು ಅವರ ಕುಟುಂಬದ ಮೇಲೆ ಆಪಾದನೆ ಕೇಳಿ ಬಂದಾಗ ತನಿಖೆಗೆ ಆದೇಶಿಸಿದ್ದರು ಎಂದು ಪ್ರಶ್ನಿಸಿದರು.

ರಾಜ್ಯದ 56 ಶಾಸಕರಿಗೆ ಸಂಪುಟ ದರ್ಜೆ ಸ್ಥಾನಮಾನ

'91ನೇ ತಿದ್ದುಪಡಿಯ ಸ್ಪಷ್ಟ ಉಲ್ಲಂಘನೆ'

ಪ್ರಜಾವಾಣಿ ವಾರ್ತೆ



ಲಹರ್ ಸಿಂಗ್


ನವದೆಹಲಿ: 'ಶಾಸಕರನ್ನು ಓಲೈಸಲು ಹಲವು ರಾಜ್ಯಗಳು ಮಿತಿಮೀರಿದ ಸಚಿವ ಸಂಪುಟ ದರ್ಜೆ ಸ್ಥಾನಗಳನ್ನು ಕಲ್ಪಿಸುತ್ತಿವೆ. ಇದು ಸಂವಿಧಾನದ 91ನೇ ತಿದ್ದುಪಡಿಯ ಸ್ಪಷ್ಟ ಉಲ್ಲಂಘನೆ ಹಾಗೂ ಸರ್ಕಾರಿ ಖಜಾನೆಗೆ ಹೊರೆ' ಎಂದು ರಾಜ್ಯಸಭೆಯ ಬಿಜೆಪಿ ಸದಸ್ಯ ಲಹರ್ ಸಿಂಗ್ ಸರೋಯಾ ಪ್ರತಿಪಾದಿಸಿದರು.

ರಾಜ್ಯಸಭೆಯಲ್ಲಿ ವಿಶೇಷ ಪ್ರಸ್ತಾವ ಮಂಡಿಸಿದ ಲಹರ್ ಸಿಂಗ್, 'ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರವು ಸಚಿವ ಸಂಪುಟದ ಹೊರತಾಗಿ 56 ಮಂದಿಗೆ ಸಂಪುಟ ದರ್ಜೆ ಸ್ಥಾನಮಾನ ನೀಡಿದ್ದು, ಇದು ಸಂವಿಧಾನದ ಸದಾಶಯಗಳಿಗೆ ವಿರುದ್ಧ. ಜೊತೆಗೆ ಇದು ಆರ್ಥಿಕ ಅಶಿಸ್ತಿಗೆ ಕಾರಣವಾಗಿದೆ' ಎಂದು ಗಮನ ಸೆಳೆದರು.

'2003ರ 91ನೇ ಸಾಂವಿಧಾನಿಕ ತಿದ್ದುಪಡಿಯ ಪ್ರಕಾರ, ಯಾವುದೇ ಸರ್ಕಾರದಲ್ಲಿ ಪ್ರಧಾನಮಂತ್ರಿ/ ಮುಖ್ಯಮಂತ್ರಿ ಸೇರಿದಂತೆ ಒಟ್ಟು ಸಂಪುಟ ಸಚಿವರ ಸಂಖ್ಯೆ, ಲೋಕಸಭೆ ಅಥವಾ ರಾಜ್ಯ ಶಾಸಕಾಂಗದ ಒಟ್ಟು ಬಲದ ಶೇ 15ಕ್ಕೆ ಸೀಮಿತವಾಗಿರಬೇಕು. ಆದರೆ, ಕೆಲವು ರಾಜ್ಯಗಳಲ್ಲಿ ಈ ಸಾಂವಿಧಾನಿಕ ಮಿತಿಯನ್ನು ಮೀರಿ ಸಂಪುಟ ದರ್ಜೆ ನೇಮಕಾತಿಗಳು ನಡೆದಿರುವ ಉದಾಹರಣೆಗಳನ್ನು ನೋಡುತ್ತಿದ್ದೇವೆ' ಎಂದರು.

'ಸಾಂವಿಧಾನಿಕ ಆಶಯಗಳನ್ನು ಮೀರಿ, ಯಾವುದೇ ಕಾರಣಕ್ಕೂ ಕೂಡ ಸಂಪುಟ ದರ್ಜೆ ನೀಡುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸುವ ಅವಶ್ಯಕತೆಯಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಕಾನೂನಿಗೆ ತಿದ್ದುಪಡಿ ತರಬೇಕು' ಎಂದು ಅವರು ಆಗ್ರಹಿಸಿದರು.

'ಜಗನ್ ಸರ್ಕಾರದಿಂದ ₹7 ಲಕ್ಷ ಕೋಟಿ ಆದಾಯ ನಷ್ಟ'



ಚಂದ್ರಬಾಬು ನಾಯ್ಡು

ಅಮರಾವತಿ, ಆಂಧ್ರಪ್ರದೇಶ (ಪಿಟಿಐ): ಐದು ವರ್ಷಗಳ ವೈಎಸ್‌ಆರ್‌ಸಿಪಿ ಆಡಳಿತವು ರಾಜ್ಯದ ಆರ್ಥಿಕತೆಯನ್ನು ಹಾಳುಗೆಡವಿದೆ. ಇದರಿಂದಾಗಿ ರಾಜ್ಯಕ್ಕೆ ₹7 ಲಕ್ಷ ಕೋಟಿ ಆದಾಯ ನಷ್ಟವಾಗಿದೆ ಎಂದು ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ಶುಕ್ರವಾರ ಆರೋಪಿಸಿದರು.

ವಿಧಾನಸಭೆಯಲ್ಲಿ ರಾಜ್ಯದ ಹಣಕಾಸು ಸ್ಥಿತಿ ಕುರಿತು ಅವರು ಶ್ವೇತಪತ್ರ ಹೊರಡಿಸಿದರು. ಈ ವೇಳೆ ಮಾತನಾಡಿದ ಅವರು, 2014–19ರ ವರೆಗಿನ ಟಿಡಿಪಿ ಸರ್ಕಾರದ ಅವಧಿಯಲ್ಲಿ ಕೃಷಿ ವಲಯದ ಬೆಳವಣಿಗೆ ದರವು ಶೇ 16 ಇತ್ತು. ಜಗನ್‌ಮೋಹನ್ ರೆಡ್ಡಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಅದು ಶೇ 10.3ಕ್ಕೆ ಇಳಿದಿದೆ. ಸೇವಾ ವಲಯದ ಬೆಳವಣಿಗೆ ದರವು ಶೇ 10.3ರಿಂದ ಶೇ 9.9ಗೆ ಇಳಿದಿದೆ ಎಂದು ದೂರಿದರು.

'ಹಣವೇ ಇಲ್ಲದೇ ನಮ್ಮಿಂದ ಏನನ್ನೂ ಮಾಡಲು ಸಾಧ್ಯವಿಲ್ಲ. 2014– 19ರ ನಡುವೆ ಆಂಧ್ರಪ್ರದೇಶವು ತೆಲಂಗಾಣಕ್ಕಿಂತ ವೇಗದಲ್ಲಿ ಅಭಿವೃದ್ಧಿ ಹೊಂದುತ್ತಿತ್ತು. ಆದರೆ 2019– 24ರ ನಡುವೆ ಆರ್ಥಿಕತೆಗೆ ಹಾನಿಯುಂಟಾಯಿತು. ರೈತರ ಆದಾಯ ಕಡಿಮೆಯಾಗಿ ಸಾಲ ಹೆಚ್ಚಾಯಿತು. ಸಂಪತ್ತನ್ನು ಸೃಷ್ಟಿಸಿದರೆ ಜನರ ಆದಾಯವೂ ವೃದ್ಧಿಯಾಗುತ್ತದೆ' ಎಂದು ಸದನಕ್ಕೆ ತಿಳಿಸಿದರು.

ಜಗನ್‌ಮೋಹನ್ ರೆಡ್ಡಿ ಆಡಳಿತದಲ್ಲಿ ವಿದ್ಯುತ್ ದರವೂ ಹೆಚ್ಚಾಗಿತ್ತು. ಅಲ್ಪಕಾಲಕ್ಕಾಗಿ ವಿದ್ಯುತ್ ಖರೀದಿಸುವುದರಿಂದ ₹12,250 ಕೋಟಿ ಹೆಚ್ಚುವರಿ ಹೊರೆ ರಾಜ್ಯದ ಮೇಲೆ ಬಿದ್ದಿದೆ. ಖನಿಜ ಸಂಪತ್ತನ್ನು ಲೂಟಿ ಮಾಡಿದ್ದಕ್ಕಾಗಿ ₹9,750 ಕೋಟಿ ಆದಾಯ ನಷ್ಟ ಆಗಿದೆ. ಅಮರಾವತಿ ನಗರ, ಪೋಲವಾರಮ್ ಯೋಜನೆ ಮತ್ತು ಇಂಧನ ಗುತ್ತಿಗೆಗಳಲ್ಲಿ ನಡೆದಿರುವ ಅವ್ಯವಹಾರಗಳಿಂದ ಹೂಡಿಕೆದಾರರ ವಿಶ್ವಾಸವನ್ನೂ ರಾಜ್ಯ ಸರ್ಕಾರ ಕಳೆದುಕೊಂಡಿದೆ ಎಂದರು.

ರಾಜ್ಯದ ಸಾಲವು 2019ರ ಮಾರ್ಚ್ 31ರಂದು ₹3.75 ಲಕ್ಷ ಕೋಟಿಗೆ ಏರಿತ್ತು. 2024ರ ಜೂನ್ 12ರ ವೇಳೆಗೆ ₹9.74 ಲಕ್ಷ ಕೋಟಿಗೆ ಏರಿಕೆಯಾಗಿದೆ ಎಂದು ಹೇಳಿದರು.

ಪ್ರವಾಸಿಗರ ಸೆಳೆಯಲು ರೋಡ್ ಶೋ: ಪುದುಚೇರಿ ಸಚಿವ ನಾರಾಯಣ

ವಿದೇಶಿ ಪ್ರವಾಸಿಗರ ಸಂಖ್ಯೆ ಹೆಚ್ಚಳ

ಪ್ರಜಾವಾಣಿ ವಾರ್ತೆ



ನಗರದ ಅರಮನೆ ಮೈದಾನದಲ್ಲಿ ಶುಕ್ರವಾರ ಆರಂಭಗೊಂಡ ಐಐಟಿಎಂ ಪ್ರವಾಸೋದ್ಯಮ ಮೇಳದಲ್ಲಿ ಪ್ರವಾಸಿ ಸ್ಥಳಗಳ ಬಗ್ಗೆ ಮಹಿಳೆಯರಿಗೆ ಮಾಹಿತಿ ನೀಡಲಾಯಿತು–ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಬೆಂಗಳೂರು: ಕೋವಿಡ್ ಬಳಿಕ ಪ್ರವಾಸೋದ್ಯಮ ಕ್ಷೇತ್ರ ಚೇತರಿಸಿಕೊಂಡಿದ್ದು, ಪ್ರತಿ ವರ್ಷ ಸರಾಸರಿ 19 ಲಕ್ಷ ಪ್ರವಾಸಿಗರು ಪುದುಚೇರಿಗೆ ಭೇಟಿ ನೀಡುತ್ತಿದ್ದಾರೆ ಎಂದು ಪುದುಚೇರಿಯ ಪ್ರವಾಸೋದ್ಯಮ ಇಲಾಖೆ ಸಚಿವ ಕೆ.ಲಕ್ಷ್ಮೀನಾರಾಯಣ ಹೇಳಿದರು.

ಅರಮನೆ ಮೈದಾನದಲ್ಲಿ ಶುಕ್ರವಾರ ಆರಂಭಗೊಂಡ 25ನೇ ವರ್ಷದ ಐಐಟಿಎಂ ಪ್ರವಾಸೋದ್ಯಮ ಮೇಳವನ್ನು ಉದ್ಘಾಟಿಸಿ ಮಾತನಾಡಿದರು. ಈ ಮೇಳ ಮೂರು ದಿನಗಳ ಕಾಲ ನಡೆಯಲಿದೆ.

ಭಾರತಕ್ಕೆ ಭೇಟಿ ನೀಡುವ ವಿದೇಶಿ ಪ್ರವಾಸಿಗರ ಸಂಖ್ಯೆ ಹೆಚ್ಚುತ್ತಲೇ ಇದೆ. ದೇಸಿ ಪ್ರವಾಸಿಗರ ಪ್ರಮಾಣವೂ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಹೆಚ್ಚಿನ ಅನುದಾನ ದೊರೆತರೆ ಪ್ರವಾಸೋದ್ಯಮ ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿ ಪಡಿಸಬಹುದು ಎಂದು ಅಭಿಪ್ರಾಯಪಟ್ಟರು.

ಪುದುಚೇರಿಗೆ ಪ್ರವಾಸಿಗರನ್ನು ಆಕರ್ಷಿಸಲು ರಾಜ್ಯ ಸರ್ಕಾರ ದೇಶದ ಪ್ರಮುಖ ನಗರಗಳಲ್ಲಿ ರೋಡ್ ಶೋ ನಡೆಸುತ್ತಿದೆ. ಎಲ್ಲಾ ಬಗೆಯ ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ. ವಿಶೇಷವಾಗಿ ಕರ್ನಾಟಕದಿಂದ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಪುದುಚೇರಿಗೆ ಭೇಟಿ ನೀಡುತ್ತಿದ್ದಾರೆ ಎಂದು ಸಚಿವರು ಹೇಳಿದರು.

ಪ್ರವಾಸಿ ಸ್ಥಳಗಳ ಮಾಹಿತಿ: ಸ್ಪಿಯರ್ ಟ್ರಾವೆಲ್ ಮೀಡಿಯಾ ಮತ್ತು ಎಕ್ಸಿಬಿಷನ್ಸ್ ಆಯೋಜಿಸಿರುವ ಐಐಟಿಎಂ ಪ್ರವಾಸೋದ್ಯಮ ಮೇಳದಲ್ಲಿ ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ ಪ್ರವಾಸೋದ್ಯಮ ಇಲಾಖೆಗಳು, ಖಾಸಗಿ ಪ್ರವಾಸಿ ಸಂಸ್ಥೆಗಳು ಮತ್ತು ಆತಿಥ್ಯ ಕ್ಷೇತ್ರದ ಸಂಸ್ಥೆಗಳು ಪಾಲ್ಗೊಂಡಿವೆ.

25 ರಾಜ್ಯಗಳು ಮತ್ತು 15 ವಿವಿಧ ರಾಷ್ಟ್ರಗಳ 600ಕ್ಕೂ ಹೆಚ್ಚು ಪ್ರದರ್ಶಕರು ಮೇಳದಲ್ಲಿ ಭಾಗವಹಿಸಿದ್ದಾರೆ. ಕರ್ನಾಟಕ, ಉತ್ತರ ಪ್ರದೇಶ, ಗುಜರಾತ್, ಮಧ್ಯಪ್ರದೇಶ, ರಾಜಸ್ಥಾನ, ಹಿಮಾಚಲ ಪ್ರದೇಶ, ದೆಹಲಿ, ತಮಿಳುನಾಡು, ಕೇರಳ ಸೇರಿದಂತೆ 25 ರಾಜ್ಯಗಳ ಪ್ರವಾಸೋದ್ಯಮ ಪಾಲುದಾದರು ಹಾಗೂ ಶ್ರೀಲಂಕಾ, ಮಲೇಷ್ಯಾ, ಇಸ್ರೇಲ್ , ಇಂಗ್ಲೆಂಡ್, ನೇಪಾಳ, ದುಬೈ, ಟರ್ಕಿ, ಸಿಂಗಪುರ, ಭೂತಾನ್, ಇಂಡೊನೇಷ್ಯಾ ಮುಂತಾದ 15ಕ್ಕೂ ಹೆಚ್ಚು ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದಾರೆ. ಮೇಳದಲ್ಲಿ ಪ್ರವಾಸಿಗಳ ಸ್ಥಳಗಳ ಬಗ್ಗೆ ಮಾಹಿತಿ ಒದಗಿಸುವ ವ್ಯವಸ್ಥೆ ಮಾಡಲಾಗಿದೆ.

ಸ್ಪಿಯರ್ ಟ್ರಾವೆಲ್ ಮೀಡಿಯಾ ನಿರ್ದೇಶಕ ರೋಹಿತ್ ಹಂಗಲ್, ಕರ್ನಾಟಕ ಪ್ರವಾಸೋದ್ಯಮ ಇಲಾಖೆ ನಿರ್ದೇಶಕ ಡಾ.ಕೆ.ವಿ. ರಾಜೇಂದ್ರ, ಸ್ಪಿಯರ್ ಟ್ರಾವೆಲ್ ಮೀಡಿಯಾ ನಿರ್ದೇಶಕ ಸಂಜಯ್ ಹಖು ಪಾಲ್ಗೊಂಡಿದ್ದರು.




ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬೆಂಗಳೂರು ಬ್ಯೂಟಿಷಿಯನ್ಸ್ ಟ್ರಸ್ಟ್ ಸದಸ್ಯರು ಶುಕ್ರವಾರ ಪ್ರತಿಭಟಿಸಿದರು– ಪ್ರಜಾವಾಣಿ ಚಿತ್ರ



ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ ಅನುದಾನ ದುರ್ಬಳಕೆ ಖಂಡಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬಹುಜನ ಸಮಾಜ ಪಕ್ಷದ ಸದಸ್ಯರು ಶುಕ್ರವಾರ ಪ್ರತಿಭಟನೆ ಮಾಡಿದರು –ಪ್ರಜಾವಾಣಿ ಚಿತ್ರ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಯಶಸ್ವಿ ವ್ಯಕ್ತಿಯಾಗುವುದಕ್ಕಿಂತ ಮೌಲ್ಯವುಳ್ಳ ವ್ಯಕ್ತಿಯಾಗಲು ಪ್ರಯತ್ನಿಸಬೇಕು.

–ಆಲ್ಬರ್ಟ್ ಐನ್‌ಸ್ಟೀನ್

ವಿಧಾನಮಂಡಲ: ಚರ್ಚೆಗೆ ನಕಾರ ಸಮರ್ಥನೀಯ ನಡೆ ಅಲ್ಲ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆ ಹಗರಣದ ಕುರಿತು ಚರ್ಚೆಯನ್ನು ನಡೆಸಲು ಅವಕಾಶ ಕಲ್ಪಿಸದೇ ಇರುವ ಮೂಲಕ ರಾಜ್ಯ ವಿಧಾನಸಭೆಯ ಸ್ಪೀಕರ್ ಹಾಗೂ ವಿಧಾನ ಪರಿಷತ್ತಿನ ಸಭಾಪತಿಯವರು ತಪ್ಪು ಮಾದರಿಯನ್ನು ಅನುಸರಿಸಿದ್ದಾರೆ. ಇದು, ಲೋಕಸಭಾ ಸ್ಪೀಕರ್ ಹಾಗೂ ರಾಜ್ಯಸಭೆಯ ಸಭಾಪತಿ ಅನುಸರಿಸಿದ ಕೆಲವು ತಪ್ಪು ಮಾದರಿಗಳಂತೆಯೇ ಇದೆ. ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರು ಕೂಡ ತಳುಕು ಹಾಕಿಕೊಂಡಿದೆ. ಕೆಲವು ವಾರಗಳಿಂದ ಮುನ್ನೆಲೆಗೆ ಬಂದಿರುವ ಈ ಹಗರಣಕ್ಕೆ ಸಂಬಂಧಿಸಿದಂತೆ ಕೆಲವು ಪ್ರಶ್ನೆಗಳು ಮೂಡಿವೆ. ಸಾರ್ವಜನಿಕವಾಗಿ ಮಹತ್ವದ್ದಾಗಿರುವ ಈ ಪ್ರಶ್ನೆಗಳಿಗೆ ಉತ್ತರ ಸಿಗಬೇಕಿದೆ. ಹಗರಣದ ಬಗ್ಗೆ ಚರ್ಚೆಗೆ ಅವಕಾಶ ಸಿಗಬೇಕು ಎಂದು ವಿರೋಧ ಪಕ್ಷಗಳಾದ ಬಿಜೆಪಿ, ಜೆಡಿಎಸ್ ಸದಸ್ಯರು ಆಗ್ರಹಿಸಿದ್ದರು. ಆದರೆ ಇದು ತೀರಾ ಈಚೆಗಿನ ವಿಷಯ ಅಲ್ಲ, ಇದರ ಬಗ್ಗೆ ತನಿಖೆ ನಡೆಸಲು ನಿವೃತ್ತ ನ್ಯಾಯಮೂರ್ತಿಯೊಬ್ಬರ ನೇತೃತ್ವದಲ್ಲಿ ಆಯೋಗವೊಂದನ್ನು ರಚಿಸಲಾಗಿದೆ ಎಂಬ ಕಾರಣವನ್ನು ಮುಂದೊಡ್ಡಿ, 'ಚರ್ಚೆಗೆ ಅವಕಾಶ ನೀಡಬೇಕು' ಎಂಬ ಬೇಡಿಕೆಯನ್ನು ವಿಧಾನಸಭೆಯ ಸ್ಪೀಕರ್ ಯು.ಟಿ. ಖಾದರ್ ಅವರು ತಿರಸ್ಕರಿಸಿದರು. ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅವರೂ ಚರ್ಚೆಗೆ ಅವಕಾಶ ಕಲ್ಪಿಸಲಿಲ್ಲ. ಸ್ಪೀಕರ್ ಅವರ ನಿಲುವನ್ನು ಸಮರ್ಥಿಸಿ, ಕಾನೂನು ಸಚಿವ ಎಚ್.ಕೆ. ಪಾಟೀಲ ಅವರು ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಗಳ ಪುಸ್ತಕವನ್ನು ಪ್ರದರ್ಶಿಸಿದರು.



ಸದನದಲ್ಲಿ ಚರ್ಚೆಗೆ ಹಿಂದೇಟು ಹಾಕಿ, ಹೊರಗಡೆ ಅದರ ಬಗ್ಗೆ ಮಾತನಾಡುವುದು ಎಷ್ಟರಮಟ್ಟಿಗೆ ಸಮರ್ಥನೀಯ?

ಚರ್ಚೆಗೆ ಅವಕಾಶ ಕಲ್ಪಿಸದೇ ಇರುವುದರ ಪರವಾಗಿರುವ ವಾದಗಳು ಸಮರ್ಥನೀಯವಾಗಿಲ್ಲ. ಸಿದ್ದರಾಮಯ್ಯ ಅವರ ಪತ್ನಿಗೆ ಬದಲಿ ನಿವೇಶನಗಳನ್ನು ಹಂಚಿಕೆ ಮಾಡಲು ಮುಡಾ ಕೈಗೊಂಡ ತೀರ್ಮಾನವು ಬಹಳ ಹಿಂದಿನದೇ ಆಗಿರಬಹುದು. ಆದರೆ, ಈ ವಿಚಾರವು ಬಹಿರಂಗವಾಗಿರುವುದು ಈಚೆಗೆ. ಸರ್ಕಾರವು ಈ ಬಗ್ಗೆ ನ್ಯಾಯಾಂಗ ತನಿಖೆಗೆ ಆದೇಶಿಸಿದೆ ಎಂದಮಾತ್ರಕ್ಕೆ ಅದರ ಬಗ್ಗೆ ಸದನದಲ್ಲಿ ಚರ್ಚೆಯಾಗಬಾರದು ಎಂದೇನೂ ಇಲ್ಲ. ಪ್ರಕರಣವೊಂದರ ಕುರಿತು ಚರ್ಚೆ ಆಗದಂತೆ ನೋಡಿಕೊಳ್ಳುವುದಕ್ಕಾಗಿಯೇ, ವಿಷಯವನ್ನು ತೆರೆಯ ಹಿಂದಕ್ಕೆ ಸರಿಸುವ ಉದ್ದೇಶದಿಂದಲೇ ತನಿಖೆಗೆ ಆದೇಶ ನೀಡಿದ ನಿದರ್ಶನಗಳೂ ಇವೆ. ತನಿಖೆಯ ಮೇಲೆ ಪರಿಣಾಮ ಉಂಟಾಗದಂತೆ ಚರ್ಚೆ ನಡೆಸುವುದಾಗಿ ವಿರೋಧ ಪಕ್ಷಗಳ ಸದಸ್ಯರು ಹೇಳಿದ್ದರು. ಚರ್ಚೆ ಆಗದಂತೆ ನೋಡಿಕೊಳ್ಳುವುದಕ್ಕಾಗಿ ನಿಯಮಗಳನ್ನು ಆಶ್ರಯಿಸುವುದು ಸರಿಯಾದ ಕ್ರಮ ಅಲ್ಲ. ಹಾಗೆ ಮಾಡುವುದು, ಯಾವುದೋ ಒಂದು ಸಂಗತಿಯನ್ನು ಮರೆಮಾಚಲು ತಾಂತ್ರಿಕ ಅಂಶಗಳ ಆಶ್ರಯ ಪಡೆಯುವುದಕ್ಕೆ ಸಮನಾಗುತ್ತದೆ. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಹಗರಣದ ವಿಚಾರವಾಗಿ ಕಾಂಗ್ರೆಸ್ ಪಕ್ಷದ ನಾಯಕರು ಹಾಗೂ ಸರ್ಕಾರದ ನೇತೃತ್ವ ವಹಿಸಿರುವವರು ವಿವರಣೆ ನೀಡಿದ್ದಾರೆ. 'ತನಿಖೆ ನಡೆಯುತ್ತಿದೆ' ಎಂಬ ಕಾರಣವನ್ನು ಮುಂದಿಟ್ಟಿದ್ದಾರೆ. ಆದರೆ ಈ ವಿವರಣೆಯು ಸಾರ್ವಜನಿಕರಲ್ಲಿ ಮೂಡಿರುವ ಸಂಶಯವನ್ನು ನಿವಾರಿಸುವ ರೀತಿಯಲ್ಲಿ ಇಲ್ಲ. ವಾಲ್ಮೀಕಿ ಅಭಿವೃದ್ಧಿ ನಿಗಮದ ಖಾತೆಗಳಿಂದ ಹಣವನ್ನು ಅಕ್ರಮವಾಗಿ ಬೇರೆ ಖಾತೆಗಳಿಗೆ ವರ್ಗಾಯಿಸಲಾಗಿದೆ ಎಂಬುದನ್ನು ಸರ್ಕಾರ ಒಪ್ಪಿಕೊಂಡಿದೆ. ಆದರೆ ಈ ಹಗರಣದಲ್ಲಿ ಕೇಂದ್ರ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಹಾಗೂ ನಿಗಮದ ಅಧಿಕಾರಿಗಳ ಮೇಲೆ ಸರ್ಕಾರ ಬೊಟ್ಟು ಮಾಡಿದೆ. ಇದರಲ್ಲಿ ರಾಜ್ಯ ಸರ್ಕಾರದ ಪಾತ್ರ ಏನೂ ಇಲ್ಲ ಎಂಬುದು ನಿಜವೇ ಆಗಿದ್ದರೆ, ಅದನ್ನು ಜನರಿಗೆ ಮನವರಿಕೆ ಮಾಡಿಕೊಡಲು ಸದನವನ್ನು ಬಳಸಿಕೊಳ್ಳಲು ಅವಕಾಶ ಇತ್ತು.

ಮುಡಾ ಹಗರಣದ ಬಗ್ಗೆ ಚರ್ಚೆಗೆ ಅವಕಾಶ ನಿರಾಕರಿಸಿದ ಕಾರಣಕ್ಕೆ ವಿರೋಧ ಪಕ್ಷಗಳು ಪ್ರತಿಭಟನೆಯ ಬೇರೆ ಬೇರೆ ಮಾರ್ಗಗಳನ್ನು ತುಳಿದವು. ವಿರೋಧ ಪಕ್ಷಗಳ ಸದಸ್ಯರು ಸದನದಲ್ಲಿ ಅಹೋರಾತ್ರಿ ಧರಣಿ ನಡೆಸಿದರು. ಸದನದ ಹೊರಗೆ ಹಾಗೂ ಸಾರ್ವಜನಿಕ ವೇದಿಕೆಗಳಲ್ಲಿ ಪ್ರತಿಭಟನೆಗಳು ಆಗಿವೆ. ಆ ಮೂಲಕ ಮುಡಾ ಹಗರಣವು ಸಾರ್ವಜನಿಕರ ಗಮನವನ್ನು ಹೆಚ್ಚು ಸೆಳೆದಿದೆ. ತಮ್ಮ ವಿರುದ್ಧದ ಹಾಗೂ ತಮ್ಮ ಕುಟುಂಬದ ಸದಸ್ಯರ ವಿರುದ್ಧದ ಆರೋಪಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಲ್ಲಗಳೆದಿದ್ದಾರೆ. ಸುದ್ದಿಗೋಷ್ಠಿಯೊಂದನ್ನು ನಡೆಸಿರುವ ಅವರು, ತಮ್ಮ ವಾದಕ್ಕೆ ಪೂರಕವಾಗಿ ಒಂದಿಷ್ಟು ದಾಖಲೆಗಳನ್ನು ಸಹ ಬಿಡುಗಡೆ ಮಾಡಿದ್ದಾರೆ. ಈ ಕೆಲಸವನ್ನು ಅವರು ವಿಧಾನಸಭೆಯಲ್ಲಿ ಹಾಗೂ ವಿಧಾನ ಪರಿಷತ್ತಿನಲ್ಲಿ ಮಾಡಬೇಕಿತ್ತು. ಏಕೆಂದರೆ, ರಾಜ್ಯದಲ್ಲಿ ಮಹತ್ವದ ವಿಷಯಗಳ ಕುರಿತು ಅತ್ಯಂತ ಹೆಚ್ಚು ಪ್ರಜಾಸತ್ತಾತ್ಮಕವಾದ ಚರ್ಚೆಗಳಿಗೆ ಅವಕಾಶ ಕಲ್ಪಿಸುವ ಸಾಂವಿಧಾನಿಕ ವೇದಿಕೆಗಳು ಅವು. ಸದನದಲ್ಲಿ ಚರ್ಚೆಗೆ ಹಿಂದೇಟು ಹಾಕಿ, ಹೊರಗಡೆ ಅದರ ಬಗ್ಗೆ ಮಾತನಾಡುವುದು ಎಷ್ಟರಮಟ್ಟಿಗೆ ಸಮರ್ಥನೀಯ? ಹಿಂದೆ ಹಲವು ಸಂದರ್ಭಗಳಲ್ಲಿ ಲೋಕಸಭೆ, ರಾಜ್ಯಸಭೆಯಲ್ಲಿ ಮಹತ್ವದ ವಿಷಯಗಳ ಬಗ್ಗೆ ಚರ್ಚೆಗೆ ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳ ಸದಸ್ಯರು ಮಂಡಿಸಿದ್ದ ಕೋರಿಕೆಯನ್ನು ಸಕಾರಣವಿಲ್ಲದೆ ತಿರಸ್ಕರಿಸಿದ ಹಾಗೂ ಸಂಸದರನ್ನು ಅಮಾನತು ಮಾಡಿದ ನಿದರ್ಶನಗಳು ಇವೆ. ಅಲ್ಲಿ ಕೈಗೊಂಡ ಅಂತಹ ತೀರ್ಮಾನಗಳನ್ನು ಇಲ್ಲಿಯೂ ಕೈಗೊಳ್ಳಬಾರದು ಎಂಬ ಪಾಠವನ್ನು ಕಲಿಯಬೇಕಿತ್ತು. ನಿಯಮಗಳೇ ಅಡ್ಡಿಪಡಿಸಿದರೂ ಅವುಗಳನ್ನು ಮೀರಿ ಮಾತುಕತೆಗೆ ಸಿದ್ಧವಿರುವ, ಮುಕ್ತ ವಾತಾವರಣವನ್ನು ಕಲ್ಪಿಸುವ ಮಾದರಿಯನ್ನು ಅನುಸರಿಸಬೇಕಿತ್ತು.

ದಿನದ ಟ್ವೀಟ್

ಕಲಾಪ ವೀಕ್ಷಣೆಗೆ ಇರಲಿ ಆದ್ಯತೆ



ಕ್ರಿಕೆಟ್ ಪಂದ್ಯದ ನೇರ ಪ್ರಸಾರವನ್ನು ವೀಕ್ಷಿಸಿದಂತೆಯೇ ಲೋಕಸಭೆಯ ಕಲಾಪಗಳನ್ನು ವೀಕ್ಷಿಸಲು ಜನ ಎಂದು ಆರಂಭಿಸುವರೋ ಅಂದು ಭಾರತದಲ್ಲಿ ಹೊಸ ಯುಗ ಆರಂಭವಾಗುತ್ತದೆ.

ವಿಜಯ್ ಕುಮಾರ್ ಜಿ., ಸಂಸ್ಥಾಪಕ ಮತ್ತು ನಿರ್ದೇಶಕ, ಗುರು ದೀಕ್ಷಾ ಅಕಾಡೆಮಿ

ಕಿಡಿನುಡಿ



ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಪಾಕಿಸ್ತಾನ ಸೇನೆಯು ತನ್ನ ಸೈನಿಕರ ಮೃತದೇಹಗಳನ್ನು ಪಡೆಯಲು ನಿರಾಕರಿಸಿತ್ತು. ಅವರ ಅಂತ್ಯಸಂಸ್ಕಾರ ನಡೆಸಿದ್ದು ಭಾರತೀಯ ಸೇನೆ. ಕಾರ್ಗಿಲ್ ಯುದ್ಧದಲ್ಲಿ ಮೃತಪಟ್ಟ ತನ್ನ 450ಕ್ಕೂ ಹೆಚ್ಚು ಸೈನಿಕರ ಹೆಸರನ್ನು ಪಾಕಿಸ್ತಾನವು 2010ರಲ್ಲಿ ಬಹಿರಂಗಪಡಿಸುವ ಮೂಲಕ ಯುದ್ಧದಲ್ಲಿನ ತನ್ನ ಪಾತ್ರವನ್ನು 11 ವರ್ಷಗಳ ಬಳಿಕ ಒಪ್ಪಿಕೊಂಡಿತು.

ಅನ್ಷುಲ್ ಸಕ್ಸೇನ, ಸುದ್ದಿ ವಿಶ್ಲೇಷಕ

25 ವರ್ಷಗಳ ಹಿಂದೆ

ಮಂಗಳವಾರ, 27-7-1999

● **ಪಟೇಲ್ ಬಣದ ದಳ ಜತೆ ಮೈತ್ರಿಗೆ ಬಿಜೆಪಿ ಒಲವು**

ನವದೆಹಲಿ, ಜುಲೈ 26– ಕರ್ನಾಟಕದಲ್ಲಿ ಬಿಜೆಪಿಯು ಲೋಕಶಕ್ತಿ ಹಾಗೂ ಜನತಾದಳದ ಜೆ.ಎಚ್. ಪಟೇಲ್ ಬಣದ ಜತೆಗೆ ಮುಂಬರುವ ಚುನಾವಣೆಯಲ್ಲಿ ಸ್ಥಾನ ಹೊಂದಾಣಿಕೆ ಮಾಡಿಕೊಳ್ಳಲು ಬಿಜೆಪಿ ಅಧ್ಯಕ್ಷ ಕುಶಭಾವು ಠಾಕ್ರೆ ಅವರು ಅನುಕೂಲಕರ ಪ್ರತಿಕ್ರಿಯೆ ವ್ಯಕ್ತಪಡಿಸಿರುವುದಾಗಿ ತಿಳಿದುಬಂದಿದೆ.

ಲೋಕಸಭೆ ಹಾಗೂ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ಸನ್ನು ಸೋಲಿಸುವುದೇ ಮುಖ್ಯವಾಗಿರುವ ಬಗ್ಗೆ ಇಂದು ಕುಶಭಾವು ಜತೆ ಸಮತಾ ಪಕ್ಷದ ಜಾರ್ಜ್ ಫರ್ನಾಂಡಿಸ್, ಲೋಕಶಕ್ತಿಯ ರಾಮಕೃಷ್ಣ ಹೆಗಡೆ ಹಾಗೂ ಲೋಕಶಕ್ತಿಯ ಕಾರ್ಯಾಧ್ಯಕ್ಷ ಡಾ. ಜೀವರಾಜ ಆಳ್ವ ಅವರು ಮಾತುಕತೆ ನಡೆಸಿದರು.

● **ಕಾರ್ಗಿಲ್: ಆಕ್ರಮಣಕಾರರಿಂದ ಮುಕ್ತ**

ನವದೆಹಲಿ, ಜುಲೈ 26 (ಪಿಟಿಐ)– ಎರಡೂವರೆ ತಿಂಗಳ ಕಾರ್ಯಾಚರಣೆ ನಂತರ, ಕಾರ್ಗಿಲ್ ವಲಯದೊಳಕ್ಕೆ ನುಸುಳಿದ್ದ ಪಾಕಿಸ್ತಾನದ ಕಟ್ಟಕಡೆಯ ಅತಿಕ್ರಮಣಕಾರರನ್ನು ಭಾರತೀಯ ಪಡೆಗಳು ಇಂದು ಹೊರದಬ್ಬಿದವಾದರೂ, ವಾಸ್ತವ ಹತೋಟಿ ರೇಖೆಯುದ್ದಕ್ಕೂ ಜಮಾಯಿಸಿರುವ ಎರಡೂ ರಾಷ್ಟ್ರಗಳ ಪಡೆಗಳ ನಡುವೆ ಭಾರಿ ಷೆಲ್ ದಾಳಿ ನಡೆಯಿತು.

50 ವರ್ಷಗಳ ಹಿಂದೆ

ಶನಿವಾರ, 27-7-1974

● **ಬಾಕು ಸಮೇತ ಲೋಕಸಭೆ ಪ್ರವೇಶಿಸಿದ ಯುವಕನಿಗೆ ಶಿಕ್ಷೆ**

ನವದೆಹಲಿ, ಜುಲೈ 26– ಬಾಕುವೊಂದನ್ನು ಮುಚ್ಚಿಟ್ಟುಕೊಂಡು ಪ್ರೇಕ್ಷಕರ ಗ್ಯಾಲರಿ ಪ್ರವೇಶಿಸಲು ಪ್ರಯತ್ನಿಸಿದ ಕಲ್ಕತ್ತೆಯ 24 ವರ್ಷದ ಯುವಕ ಬಿಪ್ಲ ಬಸು ಎಂಬುವವನಿಗೆ ಲೋಕಸಭೆ ಇಂದು ಒಂದು ತಿಂಗಳ ಕಠಿಣ ಶಿಕ್ಷೆ ವಿಧಿಸಿತು.

ಲೋಕಸಭಾಧ್ಯಕ್ಷ ಜಿ.ಎಸ್. ಧಿಲೋನ್ ಅವರು 'ಇದು ತೀವ್ರ ಘಟನೆ' ಎಂದರು. ಪ್ರೇಕ್ಷಕರ ಗ್ಯಾಲರಿ ದ್ವಾರದ ಬಳಿಯ ಭದ್ರತಾ ಸಿಬ್ಬಂದಿಯೊಬ್ಬನನ್ನು ಆ ಯುವಕ ಜೋರಾಗಿ ಒದ್ದಿದ್ದರಿಂದ, ಆತ ಹೆಚ್ಚು– ಕಡಿಮೆ ಪ್ರಜ್ಞಾಹೀನನಾದ. ಸಮಾಜವಾದಿ ಪಕ್ಷದ ಸಮರಗುಹ ಅವರ ಮುಖಾಂತರ ಈತ ಪ್ರೇಕ್ಷಕರ ಗ್ಯಾಲರಿ ಪಾಸ್ ಪಡೆದಿದ್ದ.

● **ನಾಡಪಿಸ್ತೂಲು ಕಾರ್ಖಾನೆ ಪತ್ತೆ**

ಬೆಳಗಾವಿ, ಜುಲೈ 26– ಬೈಲಹೊಂಗಲ ತಾಲ್ಲೂಕಿನ ಸೀಗಿಹಳ್ಳಿಯಲ್ಲಿ ನಾಡ ಪಿಸ್ತೂಲುಗಳನ್ನು ತಯಾರಿಸುತ್ತಿದ್ದ 'ಕಾರ್ಖಾನೆ'ಯೊಂದನ್ನು ಪತ್ತೆ ಮಾಡಿರುವ ಪೊಲೀಸರು, 12 ಪಿಸ್ತೂಲುಗಳನ್ನು ವಶಪಡಿಸಿಕೊಂಡಿದ್ದಾರೆ.

ರಾಜಧಾನಿ ಬೆಂಗಳೂರಿಗೆ ಇನ್ನೊಂದು ವಿಮಾನ ನಿಲ್ದಾಣ ಏಕೆ ಬೇಕು?

ಹೆಚ್ಚು ನಿಲ್ದಾಣ, ಗುಣಮಟ್ಟದ ಸ್ಪರ್ಧೆಗೆ ಆಹ್ವಾನ



ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್. ಗೋಪಿನಾಥ್

ಬೆಂಗಳೂರಿನ ಸನಿಹದಲ್ಲಿ ಇನ್ನೊಂದು ವಿಮಾನ ನಿಲ್ದಾಣ ನಿರ್ಮಿಸುವ ಮಹತ್ವಾಕಾಂಕ್ಷೆಯನ್ನು ರಾಜ್ಯ ಸರ್ಕಾರ ಹೊಂದಿರುವುದು ಸ್ವಾಗತಾರ್ಹ. ವಿಮಾನಯಾನ ಕಂಪನಿಗಳು ಪರಸ್ಪರ ಸ್ಪರ್ಧೆಯಲ್ಲಿ ಇರುವ ಮಾದರಿಯಲ್ಲೇ, ವಿಮಾನ ನಿಲ್ದಾಣಗಳ ನಡುವೆ ಕೂಡ ಸ್ಪರ್ಧೆ ಇರಬೇಕು. ಲಂಡನ್, ನ್ಯೂಯಾರ್ಕ್, ಪ್ಯಾರಿಸ್ ಮಹಾನಗರಗಳಲ್ಲಿ ಈ ರೀತಿಯ ಸ್ಪರ್ಧೆ ಇದೆ. ಬೆಂಗಳೂರು ಕೂಡ ಒಂದು ಕಾಸ್ಮೊಪಾಲಿಟನ್ ಮಹಾನಗರ. ಇದು ಅತ್ಯುತ್ತಮ ಪ್ರತಿಭೆಗಳು, ಉದ್ಯಮಿಗಳನ್ನು ಆಕರ್ಷಿಸುತ್ತಿದೆ.

ವಿಮಾನ ನಿಲ್ದಾಣಗಳ ಸಂಖ್ಯೆ ಹೆಚ್ಚಾಗುವುದೆಂದರೆ, ಆರೋಗ್ಯಕರ ಸ್ಪರ್ಧೆ ಸೃಷ್ಟಿಯಾದಂತೆ. ಇದರಿಂದ ಉತ್ತಮ ಗುಣಮಟ್ಟದ, ಕಡಿಮೆ ವೆಚ್ಚದ ಸೇವೆಗಳು ಲಭ್ಯವಾಗುತ್ತವೆ. ವಿಮಾನಯಾನ ಹೆಚ್ಚುತ್ತದೆ. ಮಹಾನಗರಗಳು ಭಾರಿ ಪ್ರಮಾಣದಲ್ಲಿ ಬೆಳವಣಿಗೆ ಕಾಣುತ್ತಿವೆ. ದೇಶದ ಬೇರೆ ಬೇರೆ ಪ್ರದೇಶಗಳ ಜನ ಬೆಂಗಳೂರಿಗೆ ಪ್ರತಿದಿನ ಬಂದಿಳಿಯುತ್ತಿದ್ದಾರೆ. ಲಕ್ಷಾಂತರ ಮಂದಿ ಯುವಕರು ಉದ್ಯೋಗ ಅರಸುತ್ತ, ಹೂಡಿಕೆದಾರರು ಹಣ ತೊಡಗಿಸಲು ಅವಕಾಶ ಅರಸುತ್ತ ಇಲ್ಲಿಗೆ ಬರುತ್ತಿದ್ದಾರೆ. ಈ ಜನಪ್ರವಾಹವು ಮುಂದಿನ ದಿನಗಳಲ್ಲಿಯೂ ಮುಂದುವರಿಯುತ್ತದೆ.

ಈ ನಗರವು ಎರಡು ವಿಮಾನ ನಿಲ್ದಾಣಗಳನ್ನು ಮಾತ್ರವೇ ಅಲ್ಲ, ಮುಂದಿನ ವರ್ಷಗಳಲ್ಲಿ ಮೂರು ಅಥವಾ ನಾಲ್ಕು ವಿಮಾನ ನಿಲ್ದಾಣಗಳನ್ನು ಹೊಂದುವ ಅಗತ್ಯ ಇದೆ. ಉದಾಹರಣೆಗೆ ಹೇಳುವುದಾದರೆ, ಲಂಡನ್ ಮಹಾನಗರವು ನಾಲ್ಕೂ ದಿಕ್ಕುಗಳಲ್ಲಿ ಒಟ್ಟು ಆರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನು ಹೊಂದಿದೆ. ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣವನ್ನು ಮುಚ್ಚಿದ್ದು ಒಳ್ಳೆಯ ನಿರ್ಧಾರವಾಗಿರಲಿಲ್ಲ. ಈ ನಿಲ್ದಾಣವು ನಗರಕ್ಕೆ 60 ವರ್ಷಕ್ಕೂ ಹೆಚ್ಚಿನ ಅವಧಿಗೆ ಸೇವೆ ಒದಗಿಸಿತ್ತು. ಆದರೆ ರಕ್ಷಣಾ ಉದ್ದೇಶದ ಈ ವಿಮಾನ ನಿಲ್ದಾಣದಲ್ಲಿ ಇರುವ ನಾಗರಿಕ ಉದ್ದೇಶದ ನಿಲ್ದಾಣ ಪ್ರದೇಶವನ್ನು ಖಾಸಗಿಯವರಿಗೆ ಒಪ್ಪಿಸಬಹುದಿತ್ತು. ಅದು, ಹೊಸದಾಗಿ ನಿರ್ಮಿಸಿರುವ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಜೊತೆ ಸ್ಪರ್ಧಿಸುವಂತಾಗಬೇಕಿತ್ತು. ಪ್ರತಿ ಬೆಂಗಳೂರಿಗನೂ ಹೆಮ್ಮೆಪಡುವಂತಹ ವಿಮಾನ ನಿಲ್ದಾಣವೊಂದನ್ನು ನಿರ್ಮಿಸಿಯಾಗಿದೆ. ಹೀಗಿದ್ದರೂ, ಎಚ್‌ಎಎಲ್ ವಿಮಾನ ನಿಲ್ದಾಣವನ್ನು ಮತ್ತೆ ಆರಂಭಿಸಿ, ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ಈಗ ಗಂಭೀರವಾಗಿ ಪ್ರಸ್ತಾವಿಸಿರುವಂತೆ ಹೊಸದಾಗಿ ಇನ್ನೂ ಒಂದು ವಿಮಾನ ನಿಲ್ದಾಣ ಹೊಂದುವುದು ಬಹಳ ಒಳ್ಳೆಯ ಆಲೋಚನೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ 150 ಕಿ.ಮೀ. ಸುತ್ತಳತೆಯಲ್ಲಿ ಇನ್ನೊಂದು ವಿಮಾನ ನಿಲ್ದಾಣವನ್ನು ನಿರ್ಮಿಸಬಾರದು ಎಂಬ ಒಪ್ಪಂದವು 2033ರವರೆಗೆ ಚಾಲ್ತಿಯಲ್ಲಿರುತ್ತದೆ. ಹೀಗಾಗಿ, ಹೊಸ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಈಗ ಆಲೋಚನೆ ಶುರುಮಾಡಬೇಕು. ಹೊಸೂರಿನಲ್ಲಿ ಹೊಸದೊಂದು ವಿಮಾನ ನಿಲ್ದಾಣ ನಿರ್ಮಿಸುವ ಯೋಜನೆಯನ್ನು ತಮಿಳುನಾಡು ಸರ್ಕಾರ ಹೊಂದಿದೆ. ಹೊಸೂರು ಕೈಗಾರಿಕಾ ಚಟುವಟಿಕೆಗಳ ಕೇಂದ್ರ. ಅಲ್ಲಿ ಟಿವಿಎಸ್, ಟೈಟನ್, ಅಶೋಕ್ ಲೇಲ್ಯಾಂಡ್‌ನಂತಹ ದೈತ್ಯ ಕಂಪನಿಗಳ ಜಾಲ ಇದೆ. ಅದಕ್ಕೆ ಸನಿಹದಲ್ಲೇ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಮತ್ತು ಜಿಗಣಿ ಕೈಗಾರಿಕಾ ಪ್ರದೇಶ ಇವೆ. ಈ ಪ್ರದೇಶಗಳು ಹೊಸೂರಿಗೆ ಪೂರಕವಾಗಿವೆ. ಈ ಮೂರೂ ಪ್ರದೇಶಗಳಿಂದಾಗಿ ಎರಡೂ ರಾಜ್ಯಗಳಲ್ಲಿ ಲಕ್ಷಾಂತರ ಉದ್ಯೋಗ ಸೃಷ್ಟಿಯಾಗಿದೆ. ಹೊಸೂರು ವಿಮಾನ ನಿಲ್ದಾಣ ಯೋಜನೆಯನ್ನು ಕರ್ನಾಟಕವು ಸ್ವಾಗತಿಸಬೇಕು.

ನಗರಗಳು ಎಲ್ಲ ದಿಕ್ಕುಗಳಲ್ಲಿಯೂ ಬೆಳೆಯಬೇಕು. ಈಗ ಎಲೆಕ್ಟ್ರಾನಿಕ್ ಸಿಟಿ ಅಥವಾ ಜಿಗಣಿ ಕೈಗಾರಿಕಾ ಪ್ರದೇಶದಲ್ಲಿ ವಾಸಿಸುವ ವ್ಯಕ್ತಿಯು ವಿಮಾನದಲ್ಲಿ ಪ್ರಯಾಣಿಸಬೇಕು ಎಂದಾದರೆ, ಮೂರು ತಾಸು ಪ್ರಯಾಣಿಸಿ ಕೆಐಎಎಲ್ ತಲುಪಬೇಕು. ವಿಮಾನ ನಿಲ್ದಾಣ ತಲುಪಲು ಬೇಕಿರುವ ಸಮಯ ಹಾಗೂ ವಿಮಾನಯಾನದ ವೆಚ್ಚವು ಸಾಮಾನ್ಯ ಜನರಿಗೆ ಕೈಗೆಟುಕದಂತೆ ಇವೆ. ನಗರವು ಎಲ್ಲ ದಿಕ್ಕುಗಳಲ್ಲಿಯೂ ಬೆಳವಣಿಗೆ ಕಂಡಾಗ ಆರ್ಥಿಕ ಬೆಳವಣಿಗೆಯೂ ಸಮಾನವಾಗಿರುತ್ತದೆ. ಒಂದಕ್ಕಿಂತ ಹೆಚ್ಚಿನ ವಿಮಾನ ನಿಲ್ದಾಣಗಳು ಇದ್ದಾಗ, ನಗರದ ಹತ್ತಿರವಿರುವ ಸಣ್ಣ ಉಪನಗರಗಳ ಜನ ಕೂಡ ವಿಮಾನಯಾನಕ್ಕೆ ಮುಂದಾಗುತ್ತಾರೆ. ಆಗ ಉಪನಗರಗಳಲ್ಲಿಯೂ ಹೂಡಿಕೆ ಆಗುತ್ತದೆ, ಆರ್ಥಿಕ ಬೆಳವಣಿಗೆ ಸಮತೋಲನದಲ್ಲಿ ಇರುತ್ತದೆ.

ಅಮೃತಶಿಲೆಯಲ್ಲಿ ನಿರ್ಮಿಸಿದ ಅರಮನೆಯನ್ನು ಹೋಲುವಂತಹ ವಿಮಾನ ನಿಲ್ದಾಣಗಳು ಬೇಕು. ಆದರೆ, ಕಡಿಮೆ ವೆಚ್ಚದ ವಿಮಾನ ನಿಲ್ದಾಣಗಳೂ ನಮಗೆ ಬೇಕು. ಆಗ ಜನರು ತಿಂಡಿ–ತಿನಿಸು ಅಥವಾ ಇತರ ಅಗತ್ಯ ವಸ್ತುಗಳಿಗೆ ಭಾರಿ ಮೊತ್ತ ಪಾವತಿಸದೆಯೇ ವಿಮಾನಯಾನ ಮಾಡಬಹುದು. ಕಡಿಮೆ ವೆಚ್ಚದಲ್ಲಿ ವಿಮಾನಯಾನ ಸೇವೆ ಒದಗಿಸುವ ಕಂಪನಿಗಳಿಗೆ ಕಡಿಮೆ ಶುಲ್ಕದ, ಸ್ವಚ್ಛವಾಗಿರುವ, ದಕ್ಷವಾಗಿರುವ ಟರ್ಮಿನಲ್‌ಗಳ ಅಗತ್ಯ ಇರುತ್ತದೆ. ಆಗ ವಿದೇಶಗಳಲ್ಲಿ ಇರುವಂತೆಯೇ ನಮ್ಮಲ್ಲಿಯೂ ಹೆಚ್ಚಿನ ಜನ ಕಡಿಮೆ ವೆಚ್ಚಕ್ಕೆ ವಿಮಾನಯಾನ ಸೇವೆ ಪಡೆಯಬಹುದು. ಅಭಿವೃದ್ಧಿ ಹೊಂದಿದ ಅರ್ಥ ವ್ಯವಸ್ಥೆಗಳಲ್ಲಿ 500 ಕಿ.ಮೀ.ಗಿಂತ ಹೆಚ್ಚಿನ ದೂರ ಪ್ರಯಾಣಿಸುವುದಿದ್ದರೆ, ವಿಮಾನದ ಮೂಲಕ ಪ್ರಯಾಣಿಸುವುದು ರೈಲು ಅಥವಾ ಕಾರಿನಲ್ಲಿ ಪ್ರಯಾಣಿಸುವುದಕ್ಕಿಂತ ಕಡಿಮೆ ವೆಚ್ಚದ್ದಾಗಿರುತ್ತದೆ. ಭಾರತವೂ ಮುಂದೊಂದು ದಿನ ಆ ಹಂತ ತಲುಪಬೇಕು. ಇಂದು ಭಾರತದಲ್ಲಿ ವಿಮಾನಯಾನ ಕೈಗೊಳ್ಳುವ ಸಾಮರ್ಥ್ಯ ಇರುವವರ ಪ್ರಮಾಣ ಶೇ 5ಕ್ಕಿಂತ ಕಡಿಮೆ. ಹಿಂದೆ ಒಮ್ಮೆ ಏರ್ ಡೆಕ್ಕನ್ ಕಂಪನಿಯು ಅಂದಿನ ಮುಖ್ಯಮಂತ್ರಿಯವರ ಕೋರಿಕೆ ಆಧರಿಸಿ, ಬೆಂಗಳೂರಿನಿಂದ ಬೀದರ್‌ಗೆ ವಿಮಾನಯಾನ ಸೇವೆ ಆರಂಭಿಸಲು ಬಯಸಿತ್ತು. ಭಾರತೀಯ ವಾಯುಪಡೆಯು ಬೀದರ್‌ನಲ್ಲಿ ಒಂದೆಡೆ, ನಾಗರಿಕ ವಿಮಾನಗಳಿಗೆ ಅವಕಾಶ ಕಲ್ಪಿಸುವುದಾಗಿ ತಿಳಿಸಿತ್ತು. ಆದರೆ, ಹೈದರಾಬಾದ್‌ನ ವಿಮಾನ ನಿಲ್ದಾಣದ ನಿರ್ವಹಣೆ ಹೊತ್ತಿದ್ದ ಕಂಪನಿಯು ಹೈದರಾಬಾದ್‌ನಿಂದ 150 ಕಿ.ಮೀ. ಸುತ್ತಳತೆಯಲ್ಲಿ ಹೊಸ ವಿಮಾನ ನಿಲ್ದಾಣಕ್ಕೆ ಯಾವ ಕಂಪನಿಯೂ ವಿಮಾನಯಾನ ಸೇವೆ ಒದಗಿಸುವಂತಿಲ್ಲ ಎಂದು ತಕರಾರು ತೆಗೆಯಿತು. ಏರ್ ಡೆಕ್ಕನ್ ಕಂಪನಿಗೆ ಬೀದರ್‌ಗೆ ವಿಮಾನಯಾನ ಸೇವೆ ಒದಗಿಸಲು ಸಾಧ್ಯವಾಗಲಿಲ್ಲ.



ಬೃಹತ್ ಪ್ರಮಾಣದ ಖಾಸಗಿ ವಿಮಾನ ನಿಲ್ದಾಣಗಳು ಬೋಯಿಂಗ್, ಏರ್‌ಬಸ್‌ನಂತಹ ಕಂಪನಿಗಳು ತಯಾರಿಸಿದ ಅಗಲ ದೇಹದ ವಿಮಾನಗಳನ್ನು ಖುಷಿಯಿಂದ ಸ್ವಾಗತಿಸುತ್ತವೆ. ಗರಿಷ್ಠ 450 ಪ್ರಯಾಣಿಕರನ್ನು ಹೊತ್ತೊಯ್ಯುವ ಇಂತಹ ವಿಮಾನಗಳು ನಿಲ್ದಾಣಗಳಿಗೆ ಭಾರಿ ವರಮಾನ ತಂದುಕೊಡುತ್ತವೆ. ಈ ನಿಲ್ದಾಣಗಳು 20 ಅಥವಾ 75 ಪ್ರಯಾಣಿಕರನ್ನು ಕರೆದೊಯ್ಯುವ ಪ್ರಾದೇಶಿಕ ವಿಮಾನಯಾನ ಕಂಪನಿಗಳಿಗೆ ಆದ್ಯತೆ ಕೊಡುವುದಿಲ್ಲ. ಸರ್ಕಾರಗಳ ಒತ್ತಡಕ್ಕೆ ಮಣಿದು ಅವುಗಳಿಗೆ ಅವಕಾಶ ನೀಡಿದರೂ ಅವು ಪ್ರಾದೇಶಿಕ ವಿಮಾನಯಾನ ಕಂಪನಿಗಳಿಗೆ ಭಾರಿ ಶುಲ್ಕ ವಿಧಿಸುತ್ತವೆ. ಹೀಗಾಗಿ, ಕಡಿಮೆ ವೆಚ್ಚಕ್ಕೆ ಟರ್ಮಿನಲ್ ಸೇವೆಗಳನ್ನು ಒದಗಿಸುವ ಒಂದಕ್ಕಿಂತ ಹೆಚ್ಚಿನ ವಿಮಾನ ನಿಲ್ದಾಣಗಳನ್ನು ಹೊಂದಬೇಕಿರುವುದು ರಾಜ್ಯದ ಅರ್ಥ ವ್ಯವಸ್ಥೆಗೆ ಮಹತ್ವದ್ದು. ಇಂತಹ ವಿಮಾನ ನಿಲ್ದಾಣಗಳು ಕಡಿಮೆ ವೆಚ್ಚದಲ್ಲಿ ಪ್ರಾದೇಶಿಕವಾಗಿ ವಿಮಾನ ಸಂಪರ್ಕ ಕಲ್ಪಿಸಲು ನೆರವಾಗುತ್ತವೆ.

ದೆಹಲಿಯು ಒಂದು ಉತ್ತಮ ಉದಾಹರಣೆಯನ್ನು ಒದಗಿಸಿದೆ. ಅಲ್ಲಿ ವಿಮಾನ ನಿಲ್ದಾಣಗಳ ನಿರ್ವಹಣೆಯ ಹೊಣೆಯನ್ನು ಬೇರೆ ಬೇರೆ ಖಾಸಗಿ ಕಂಪನಿಗಳು ಹೊತ್ತಿವೆ. ಇದರಿಂದಾಗಿ ಪರಸ್ಪರರ ನಡುವೆ ಉತ್ತಮ ಸ್ಪರ್ಧೆ ಏರ್ಪಡುತ್ತದೆ. ನೊಯಿಡಾದಲ್ಲಿ ವಿಮಾನ ನಿಲ್ದಾಣವನ್ನು ಜ್ಯೂರಿಕ್ ವಿಮಾನ ನಿಲ್ದಾಣವು ಅಭಿವೃದ್ಧಿಪಡಿಸುತ್ತಿದೆ. ದೆಹಲಿ ಪಾಲಮ್ ಪ್ರದೇಶದಲ್ಲಿನ ವಿಮಾನ ನಿಲ್ದಾಣವನ್ನು ಜಿಎಂಆರ್ ಕಂಪನಿಯು ನಿರ್ವಹಿಸುತ್ತಿದೆ.

ನಾವು ರಾಜಕಾರಣಿಗಳನ್ನು ದೂಷಿಸುವುದಕ್ಕೂ ಮೊದಲು ಆಳವಾದ ನೆಲೆ ಕಂಡುಕೊಂಡಿರುವ ಕೆಲವು ಉದ್ದಿಮೆಗಳನ್ನು ದೂಷಿಸಬೇಕಾಗುತ್ತದೆ. ಹೊಸ ಉದ್ದಿಮೆಗಳು ತಮಗೆ ಸ್ಪರ್ಧೆ ಒಡ್ಡುವುದನ್ನು ತಡೆಯುವ ಕೆಲಸವನ್ನು ಅಥವಾ ಹೊಸ ಉದ್ದಿಮೆಗಳಿಗೆ ಅಡ್ಡಿ ಸೃಷ್ಟಿಸುವ ಕೆಲಸವನ್ನು ಮಾಡುವುದು ಇಂತಹ ಉದ್ದಿಮೆಗಳೇ. ನಮಗೆ ಬಹಳ ಚೈತನ್ಯಶಾಲಿಯಾದ ಖಾಸಗಿ ವಲಯದ ಅಗತ್ಯ ಇದೆ. ಆದರೆ ಇಲ್ಲಿ ಏಕಸ್ವಾಮ್ಯವಾಗಲೀ ಹಿತಾಸಕ್ತಿಗಳನ್ನು ಮಾತ್ರ ಪೋಷಿಸುವ ಗುಂಪುಗಳಾಗಲೀ ಇರಕೂಡದು. ಹಲವು ವಿಮಾನ ನಿಲ್ದಾಣಗಳು ಹುಟ್ಟು ಪಡೆಯಲಿ. ಆಗ ಇನ್ನಷ್ಟು ಉದ್ಯೋಗ ಸೃಷ್ಟಿಯಾಗುತ್ತದೆ. ಅದರಿಂದ ಸಂಪತ್ತು ಹೆಚ್ಚುತ್ತದೆ. ಲಕ್ಷಾಂತರ ಮಂದಿ ವಿಮಾನಯಾನ ಮಾಡಲು ಸಾಧ್ಯವಾಗುತ್ತದೆ.

ಲೇಖಕ: 'ಏರ್ ಡೆಕ್ಕನ್' ವಿಮಾನಯಾನ ಕಂಪನಿಯ ಸಂಸ್ಥಾಪಕ

ಚುರುಮುರಿ



ಆಯವೋ ವ್ಯಯವೋ!

● ಚಂದ್ರಕಾಂತ ವಡ್ಡು

'ನೀವು ಹೆಸರಿಗಷ್ಟೇ ಸಂಪಾದಕ, ನಿಮ್ಮ ಸಂಪಾದನೆ ನಂಬಿಕೊಂಡಿದ್ದರೆ ನಮ್ಮ ಜೀವನ ರದ್ದಿಪೇಪರ್ ಆಗುತ್ತಿತ್ತು. ಏನೋ ಮಾವನವರ ಪಿಂಚಣಿ ಬರುತ್ತೇಂತ ಬದುಕಿದ್ದೇವೆ...' ಬೆಳಗಿನ ಸಮಾಚಾರ ಓದತೊಡಗಿದಳು ತಿಂಗಳೇಶನ ಪೂರ್ಣಾಂಗಿ!

'ಅಯ್ತು ಮಾರಾಯ್ತಿ... ಜೀವನವನ್ನು ಮುಂಜಾವಿನ ತಾಜಾ ಪೇಪರ್ ಥರ ಮಾಡುವುದು ಹೇಗೆ ಹೇಳುವಂತವಳಾಗು'.

'ನಿಮಗಿಂತ ನಿಮ್ಮ ಕಚೇರಿಯ ಜವಾನನೇ ಮೇಲು. ಆತ ಎಷ್ಟೊಂದು ಉಪಸಂಪಾದನೆ ಮಾಡಿಕೊಂಡು ಆದಾಯ ತೆರಿಗೆ ಕಟ್ಟುವಷ್ಟು ಬೆಳೆದಿದ್ದಾನೆ'.

'ಅಂದ್ರೆ... ನಾನು 'ಉಪ-ಸಂಪಾದಕ' ಆಗಬೇಕು ಅನ್ನೋದೇ ನಿನ್ನಾಸೆ'.

'ಏನಾದ್ರೂ ಆಗಿ, ಶೂನ್ಯ ಸಂಪಾದಕ ಮಾತ್ರ ಆಗೋದು ಬೇಡ'.

'ಹೇರಳ ಸಂಪಾದನೆ ಮಾಡಿದರೆ ಆದಾಯ ತೆರಿಗೆ ಲೆಕ್ಕ ಹಾಕುವುದು ರಗಳೆ ಕಣೇ... ಸುಮ್ಮನೆ ಆದಾಯ ಮಿತಿಯೊಳಗೆ ಇರುವುದು ನೆಮ್ಮದಿ'.

'ಹನೀಫಣ್ಣ ಲೆಕ್ಕ ಹಾಕಿದ್ದಾರಲ್ಲ, ಆದಾಯಗಳಿಕೆಗಿಂತ ಹಣ ಖರ್ಚು ಮಾಡಿದಾಗ ಹೆಚ್ಚು ತೆರಿಗೆ ಬೀಳೋದು. ನೂರು ರೂಪಾಯಿ ಖರ್ಚಿಗೆ 63 ರೂಪಾಯಿ ತೆರಿಗೆ ನಿರ್ಮಲಕ್ಕನ ಖಾತೆಗೆ ಜಮಾ ಆಗುತ್ತದಂತೆ. ನೀವು ತೆರಿಗೆ ಬಗ್ಗೆ ತಲೆ ಕೆಡಿಸಿಕೊಳ್ಳದೇ ಆದಾಯದ ಬಗ್ಗೆ ಯೋಚಿಸಿ'.

'ನಿನ್ನ ಮಾತು ಯಾವತ್ತೂ 'ಆಯ' ತಪ್ಪುವುದಿಲ್ಲ ಬಿಡು. ನಿನ್ನಂಥವರು ಸರ್ಕಾರದ 'ಆಯ'ಕಟ್ಟಿನ ಜಾಗದಲ್ಲಿ ಇದ್ದರೆ ಗ್ಯಾರಂಟಿ ಜೊತೆಗೇನೇ ಶಾಸಕರ ಅನುದಾನದ ಬರ ಕೂಡ ನೀಗಿಸಬಹುದಿತ್ತು'.

'ಹೌದಲ್ಲವೇ ಮತ್ತೆ, ಅನುದಾನವಿಲ್ಲದೆ ಶಾಸಕರ ಕ್ಷೇತ್ರ ಅಭಿವೃದ್ಧಿ ಆಗುವುದಾದರೂ ಹೇಗೆ, ಅವರು ಚುನಾವಣೆಗೆ ಮಾಡಿದ ಸಾಲ ತೀರಿಸುವುದಾದರೂ ಹೇಗೆ?'

'ಅನುದಾನದಿಂದ ಸರ್ಕಾರಕ್ಕೂ ಸಕತ್ ಆದಾಯ! 'ವ್ಯಯ' ಎಲ್ಲಾ 'ಆಯ' ಎಂದು ಹಣಕಾಸು ಇಲಾಖೆ ಸಂಭ್ರಮಿಸಬಹುದು'.

'ಅನುಮಾನವೇ ಇಲ್ಲ ಬಿಡಿ. ಅಭಿವೃದ್ಧಿಗೆ ಅನುದಾನ ಸಿಕ್ಕಷ್ಟೂ ಶಾಸಕರ ಕುಟುಂಬಸ್ಥರ 'ವ್ಯಯ' ಸಾಮರ್ಥ್ಯಕ್ಕೆ ಶಕ್ತಿ, ಸರ್ಕಾರಕ್ಕೆ 'ಆಯೋಮಯ' ಸ್ಥಿತಿ!

ಸಂಗತ

ನೀನಾರಿಗಲ್ಲವೋ ಎಲೆ ದೇಹ?

ಅಂಗಾಂಗ ರಚನೆಯ ಅಧ್ಯಯನ ಮತ್ತು ಸಂಶೋಧನೆಗೆ ಅಗತ್ಯವಾದ ದೇಹದಾನಕ್ಕೆ ಮುಂದಾಗುವ ಉದಾತ್ತ ಗುಣ ಗೌರವಾರ್ಹವಾದುದು

● ಡಾ. ವಿನಯ ಶ್ರೀನಿವಾಸ್

ಅಂಗಾಂಗ ದಾನಿಗಳ ಕುಟುಂಬದ ಸದಸ್ಯರಿಗೆ ಪ್ರತಿವರ್ಷ ಸ್ವಾತಂತ್ರ್ಯೋತ್ಸವ ಮತ್ತು ಗಣರಾಜ್ಯೋತ್ಸವ ಸಮಾರಂಭದಲ್ಲಿ ಪ್ರಶಂಸಾ ಪತ್ರಗಳನ್ನು ನೀಡಿ ಗೌರವಿಸಬೇಕು ಎಂದು ರಾಜ್ಯ ಆರೋಗ್ಯ ಇಲಾಖೆ ಸುತ್ತೋಲೆ ಹೊರಡಿಸಿರುವುದು ಶ್ಲಾಘನೀಯ. ಸರ್ಕಾರದ ಈ ಹೆಜ್ಜೆ ದಾನಿಯ ಕುಟುಂಬದವರಿಗೆ ಕೃತಜ್ಞತೆ ಸಲ್ಲಿಸುವುದರ ಜೊತೆಯಲ್ಲಿಯೇ ಅಂಗಾಂಗ ದಾನದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವಲ್ಲಿಯೂ ಸಫಲವಾಗಬಹುದು.

ಅಂಗಾಂಗ ದಾನವು ಮಿದುಳು ನಿಷ್ಕ್ರಿಯವಾದ ವ್ಯಕ್ತಿಯಿಂದ ಮಾತ್ರ ಸಾಧ್ಯ. ಸಾವಿನ ಹಾಸಿಗೆಯಲ್ಲಿರುವ ಹತ್ತಿರದ ಸಂಬಂಧಿಯ ಅಂಗಾಂಗವನ್ನು ದಾನ ಮಾಡಲು ಕುಟುಂಬದವರಿಗೆ ಉದಾತ್ತ ಮನಃಸ್ಥಿತಿ ಬೇಕು. ತಮ್ಮ ಬಂಧುವನ್ನು ಕಳೆದುಕೊಳ್ಳುವ ನೋವಿನಲ್ಲಿರುವ ಅವರು ಇನ್ನೊಂದು ಜೀವವನ್ನು ಉಳಿಸುವಂತಹ ವಿಚಾರ ಮಾಡುವುದೇ ಒಂದು ಶ್ರೇಷ್ಠ ಸಂಗತಿ. ಪ್ರಜ್ಞಾಹೀನ ಸ್ಥಿತಿಯಲ್ಲಿರುವ ವ್ಯಕ್ತಿಯ ಶ್ವಾಸಕೋಶ, ಹೃದಯದಂತಹ ಅಂಗಾಂಗಗಳು ಕ್ಷಮತೆಯಿಂದಲೇ ಕಾರ್ಯನಿರ್ವಹಿಸುತ್ತಿರುತ್ತವೆ.

ಅಪಘಾತವಾದಾಗ ಇಂತಹ ಸನ್ನಿವೇಶ ಸಾಮಾನ್ಯ. ನಟ ಸಂಚಾರಿ ವಿಜಯ್ ಮತ್ತು ಚಿಕ್ಕಮಗಳೂರಿನ ಬಾಲಕಿ ರಕ್ಷಿತಾಳನ್ನು ಇಲ್ಲಿ ಸ್ಮರಿಸಬಹುದು. ಮಿದುಳಿಗೆ ಶಾಶ್ವತ ಪೆಟ್ಟಾಗಿ ಅದು ಪುನಃ ಮೊದಲಿನಂತೆ ಕಾರ್ಯನಿರ್ವಹಿಸುವ ಸಾಧ್ಯತೆ ಶೂನ್ಯ ಎಂದು ನರ ಶಸ್ತ್ರಚಿಕಿತ್ಸಕರ ತಂಡವು ದೃಢೀಕರಿಸಿದ ಮೇಲೆಯೇ ಅಂಗಾಂಗ ದಾನದ ಪ್ರಶ್ನೆ ಬರುವುದು. ರೋಗಿಯ ಸಂಬಂಧಿಗಳು ಅನುಮತಿ ಕೊಟ್ಟರೆ ಆಸ್ಪತ್ರೆಯವರು ಆ ದಿಕ್ಕಿನಲ್ಲಿ ಮುಂದುವರಿಯಬಹುದು. ಒಂದು ವೇಳೆ ಅವರು ನಿರಾಕರಿಸಿದರೆ ಅದು ಸಾಧ್ಯವಾಗುವುದಿಲ್ಲ.

ಬದಲಿ ಅಂಗಾಂಗ ಜೋಡಣೆಯ ಅವಶ್ಯಕತೆ ಇರುವ ರೋಗಿಗಳು ರಾಜ್ಯ ಮತ್ತು ರಾಷ್ಟ್ರ ಮಟ್ಟದ ಅಂಗಾಂಗ ಮತ್ತು ಅಂಗಾಂಗ ಕಸಿ ಸಂಸ್ಥೆಯಲ್ಲಿ (ಸೊಟ್ಟೊ / ನೊಟ್ಟೊ) ಹೆಸರು ನೋಂದಣಿ ಮಾಡಿಸಿರುತ್ತಾರೆ. ಅಂಗಾಂಗಗಳು ಲಭ್ಯ ಎಂದು ಗೊತ್ತಾದ ಕೂಡಲೇ ವೈದ್ಯರ ತಂಡವು ಸಂಸ್ಥೆಯ ಪಟ್ಟಿಯಲ್ಲಿರುವ ರೋಗಿಗಳನ್ನು ಬದಲಿ ಜೋಡಣೆಗಾಗಿ ಸರದಿಯ ಪ್ರಕಾರ ಆಯ್ದುಕೊಳ್ಳುತ್ತದೆ. ರೋಗಿಯ ದೇಹದ ಕ್ಷಮತೆಯನ್ನು ಪರಿಗಣನೆಯಲ್ಲಿ ಇಟ್ಟುಕೊಂಡು ಅಂಗಾಂಗ, ರಕ್ತ ಮತ್ತು ಇತರ ಅಂಶಗಳು ಹೊಂದಾಣಿಕೆಯಾದರೆ ಶಸ್ತ್ರಚಿಕಿತ್ಸೆಗೆ ಮುಂದಾಗುತ್ತದೆ. ದಾನಿಯಿಂದ ಅಂಗಾಂಗಗಳನ್ನು ತೆಗೆಯುವ ಪ್ರಕ್ರಿಯೆಯನ್ನು ಒಂದು ತಂಡ ನಡೆಸುತ್ತಿದ್ದರೆ, ಮತ್ತೊಂದು ತಂಡ ಅದನ್ನು ರೋಗಿಗೆ ಅಳವಡಿಸಲು ಸಿದ್ಧತೆ ಆರಂಭಿಸಿರುತ್ತದೆ. ಏಕೆಂದರೆ ಮುಖ್ಯ ಅಂಗಾಂಗಗಳಾದ ಹೃದಯ, ಯಕೃತ್ತು, ಮೂತ್ರಪಿಂಡದಂತಹವನ್ನು ದಾನಿಯಿಂದ ಬೇರ್ಪಡಿಸಿದ ಕೆಲವೇ ಗಂಟೆಗಳಲ್ಲಿ ರೋಗಿಗೆ ಅಳವಡಿಸಬೇಕು. ಈ ದಿಸೆಯಲ್ಲಿ ಜೀರೊ ಟ್ರಾಫಿಕ್ ವ್ಯವಸ್ಥೆಯ ಪಾತ್ರ ಕೂಡ ಮಹತ್ವದ್ದು.

ಅಂಗಾಂಗ ಬೇರ್ಪಡಿಸುವವರೆಗೂ ದಾನಿಗೆ ಕೃತಕ ಉಸಿರಾಟದ ವ್ಯವಸ್ಥೆ, ದ್ರವಾಂಶ ಹಾಗೂ ಇನ್ನಿತರ ಪೌಷ್ಟಿಕಾಂಶಗಳ ಪೂರೈಕೆ ನಡೆಯುತ್ತಲೇ ಇರಬೇಕು. ಏಕೆಂದರೆ, ಬೇರ್ಪಡುವ ಅಂಗಾಂಗಗಳು ಆರೋಗ್ಯವಾಗಿದ್ದು ರೋಗಿಗೆ ಕಸಿ ಮಾಡಿದ ನಂತರವೂ ಅಷ್ಟೇ ಕ್ಷಮತೆಯಿಂದ ಕಾರ್ಯನಿರ್ವಹಿಸುವುದು ಬಹಳ ಮುಖ್ಯ. ಇಂತಹ ಸೌಲಭ್ಯಗಳು ಕೆಲವೇ ಆಸ್ಪತ್ರೆಗಳಲ್ಲಿ ಇರುವುದರಿಂದ ಇದೊಂದು ಸಂಕೀರ್ಣ ಪ್ರಕ್ರಿಯೆ.

ಸಹಜ ಮರಣಾನಂತರ ನೇತ್ರದಾನ ಮತ್ತು ದೇಹದಾನ ಮಾತ್ರ ಸಾಧ್ಯ. ಈ ಪ್ರಕ್ರಿಯೆಯ ಬಗ್ಗೆ ಜನರಲ್ಲಿ ಅರಿವು ಕಡಿಮೆ ಎಂದೇ ಹೇಳಬಹುದು. ಇತ್ತೀಚೆಗೆ ಮರಣ ಹೊಂದಿದ ಆತ್ಮೀಯರೊಬ್ಬರ ದೇಹವನ್ನು ಹೊರದೇಶದಿಂದ ಬರಲಿದ್ದ ಅವರ ಪುತ್ರನಿಗೆ ಕಾಯಬೇಕಾಗಿದ್ದ ಸಲುವಾಗಿ ಶೀತಲ ಶೇಖರಣಾ ವ್ಯವಸ್ಥೆಯಲ್ಲಿ ಇಡಲಾಗಿತ್ತು. ಆ ರೀತಿ ಇರಿಸಿದ ದೇಹವನ್ನು ಮೃತ ವ್ಯಕ್ತಿಯ ಆಶಯದಂತೆ ವೈದ್ಯಕೀಯ ಕಾಲೇಜಿಗೆ ದಾನ ಮಾಡಬಹುದು ಎಂದೇ ಸಂಬಂಧಿಗಳು ತಿಳಿದಿದ್ದರು. ಸಮೀಪದ ಕಾಲೇಜಿನ ಅಂಗರಚನಾಶಾಸ್ತ್ರದ ಮುಖ್ಯಸ್ಥರಲ್ಲಿ ವಿಚಾರಿಸಿದಾಗ, ಮರಣ ಹೊಂದಿದ ಆರು ತಾಸುಗಳ ಒಳಗಾಗಿಯೇ ದೇಹವನ್ನು ಅಧ್ಯಯನಕ್ಕೆ ಬೇಕಾಗುವಂತೆ ವಿಶೇಷ ಪ್ರಕ್ರಿಯೆಗೆ ಒಳಪಡಿಸಬೇಕಾಗಿತ್ತು, ಈಗ ಅದು ಸಾಧ್ಯವಾಗದು ಎಂಬ ಉತ್ತರ ಬಂತು. ಇದರಿಂದ ಸಂಬಂಧಿಗಳು ಬೇಸರಗೊಂಡರು.



ತಮ್ಮ ದೇಹವನ್ನು ವೈದ್ಯಕೀಯ ವಿದ್ಯಾಲಯಗಳಿಗೆ ದಾನ ಮಾಡಲು ಇಚ್ಛಿಸುವವರು ಹತ್ತಿರದ ವೈದ್ಯಕೀಯ ಸಂಸ್ಥೆಯನ್ನು ಮೊದಲೇ ಸಂಪರ್ಕ ಮಾಡಿ ಆ ಬಗ್ಗೆ ತಿಳಿಸಿರಬೇಕು. ಮರಣ ಸಂಭವಿಸಿದ ಕೂಡಲೇ ಸಂಸ್ಥೆಯ ಸಂಬಂಧಪಟ್ಟ ಸಿಬ್ಬಂದಿಗೆ ಕರೆ ಮಾಡಿ ತಿಳಿಸಬೇಕು. ಸಹಜ ಸಾವಿನ ನಂತರ ಹೆಚ್ಚು ಜನರು ನೇತ್ರದಾನಕ್ಕೆ ಮುಂದಾಗುತ್ತಿರುವುದು ಒಳ್ಳೆಯ ಬೆಳವಣಿಗೆ. ಆದರೆ ದೇಹದಾನ ಮಾಡುವವರ ಸಂಖ್ಯೆ ತೀರಾ ಕಡಿಮೆ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಶರೀರದ ಅಂಗಾಂಗ ರಚನೆಯ ಅಧ್ಯಯನಕ್ಕೆ, ಸಂಶೋಧನೆಗೆ ಮತ್ತು ವಸ್ತುಸಂಗ್ರಹಾಲಯದಲ್ಲಿ ಅಂಗಾಂಗ ಮಾದರಿಗಳನ್ನು ಸಂಗ್ರಹಿಸಲು ಈ ರೀತಿ ದಾನ ಮಾಡಿದ ದೇಹಗಳು ಅವಶ್ಯ.

3ಡಿ ತಂತ್ರಜ್ಞಾನದ 'ವರ್ಚುವಲ್ ಡಿಸೆಕ್ಷನ್ ಟೇಬಲ್' ಇತ್ತೀಚಿನ ದಿನಗಳಲ್ಲಿ ಕೆಲವು ವಿದ್ಯಾಲಯಗಳಲ್ಲಿ ಲಭ್ಯವಿದ್ದರೂ ಶವಛೇದನ ಮಾಡಿ ಅಧ್ಯಯನ ಮಾಡಿದಾಗ ಸಿಗುವ ಆಳದ ಜ್ಞಾನ ವಿಭಿನ್ನವಾದದ್ದು. ಆದ್ದರಿಂದ, ದೇಹದಾನಕ್ಕೆ ಮುಂದಾದ ಕುಟುಂಬದ ಸದಸ್ಯರಿಗೆ ದಾನ ಪಡೆದ ವೈದ್ಯಕೀಯ ಸಂಸ್ಥೆ ಮತ್ತು ಜಿಲ್ಲಾಡಳಿತವು ಸಾರ್ವಜನಿಕ ಸಮಾರಂಭಗಳಲ್ಲಿ ಗೌರವ ಸೂಚಿಸುವ ಪರಿಪಾಟವನ್ನು ಬೆಳೆಸಿಕೊಳ್ಳಬೇಕು.

ಲೇಖಕಿ: ರೋಗಲಕ್ಷಣ ಶಾಸ್ತ್ರಜ್ಞೆ

ವಾಚಕರ ವಾಣಿ

ವಿರೋಧಕ್ಕಾಗಿ ವಿರೋಧ ಸಲ್ಲ

ಧರಣಿ, ಪ್ರತಿಭಟನೆಯು ಸಂಸತ್ ಮತ್ತು ವಿಧಾನಮಂಡಲ ಈ ಎರಡೂ ಕಡೆಯ ಸದನಗಳಲ್ಲಿ ಇತ್ತೀಚಿನ ದಿನಗಳಲ್ಲಿ ಸಾಮಾನ್ಯ ಎಂಬಂತಾಗಿದೆ. ಆಡಳಿತ ಹಾಗೂ ವಿರೋಧ ಪಕ್ಷಗಳು ಸದನವನ್ನು ಕದನಕ್ಕಾಗಿಯೇ ಇರುವುದು ಎಂಬಂತೆ ಭಾವಿಸಿ, ಪ್ರತಿ ವಿಷಯಕ್ಕೂ ಗಲಾಟೆ, ವಾಕ್ಸಮರ, ಪ್ರತಿಭಟನೆ ಹಾಗೂ ಸಭಾತ್ಯಾಗ ಮಾಡುತ್ತಿರುತ್ತವೆ. ಆದರೆ ಈ ಧೋರಣೆಯಲ್ಲಿ ಸಾಮಾಜಿಕ ಹಿತಕ್ಕಿಂತ ಪಕ್ಷಹಿತವೇ ಮುಖ್ಯವಾದಂತೆ ಕಾಣುತ್ತದೆ.

ಇಂತಹ ಪ್ರತಿಭಟನೆಗಳನ್ನು ಒಂದೆರಡು ದಿನಗಳಲ್ಲಿ ಮುಗಿಸಿ, ದೇಶ ಹಾಗೂ ರಾಜ್ಯದ ಪ್ರಗತಿಯ ಬಗ್ಗೆ ಚರ್ಚಿಸಬೇಕಾದುದು ಅತ್ಯಂತ ಅವಶ್ಯ. ದೇಶದಲ್ಲಿ ಮಾಡಬೇಕಿರುವ ಕೆಲಸ, ಪರಿಹರಿಸಬೇಕಾದ ಸಮಸ್ಯೆಗಳು ಬಹಳಷ್ಟಿವೆ. ಆದರೆ ನಮ್ಮ ಜನನಾಯಕರಿಗೆ ಇವುಗಳ ಬಗ್ಗೆ ಹೆಚ್ಚಿನ ಕಾಳಜಿ ಇದ್ದಂತೆ ಕಾಣುವುದಿಲ್ಲ. 'ನಾವು ನಡೆದದ್ದೇ ದಾರಿ' ಎಂದು ಆಡಳಿತ ಪಕ್ಷ ಪಟ್ಟು ಹಿಡಿಯುವುದು, ವಿರೋಧಕ್ಕಾಗಿ ವಿರೋಧ ಎಂಬಂತೆ ವಿರೋಧ ಪಕ್ಷಗಳು ಹಟಕ್ಕೆ ಬಿದ್ದಂತೆ ವಿರೋಧಿಸುವುದು ಸರಿಯಲ್ಲ.

ಕಡೂರು ಫಣಿಶಂಕರ್, ಬೆಂಗಳೂರು

ಬಡ್ತಿ ತಾರತಮ್ಯ: ಪ್ರಯೋಜನವಾಗದ ಹೋರಾಟ

ಸ್ನಾತಕೋತ್ತರ ಪದವಿ ಪಡೆದ ಸಹಶಿಕ್ಷಕರ ಜ್ಯೇಷ್ಠತಾ ಪಟ್ಟಿ ಸಿದ್ಧಗೊಳಿಸಲು ಶಿಕ್ಷಣ ಸಚಿವರು ಸೂಚಿಸಿರುವ ಪ್ರೌಢಶಾಲಾ ಶಿಕ್ಷಕರಿಗೆ ಮುಂಬಡ್ತಿ ಭಾಗ್ಯ ಎಂಬ ಪತ್ರಿಕಾ ವರದಿಯನ್ನು ನೋಡಿದೆ. ಇದನ್ನು ಭಾಗ್ಯ ಎನ್ನುವುದಕ್ಕಿಂತ ದೌರ್ಭಾಗ್ಯ ಎನ್ನಬಹುದು ಎಂಬುದು ನನ್ನ ಅನುಭವದ ಮಾತು. ನಾನು ಪದವಿಪೂರ್ವ ಶಿಕ್ಷಣ ಇಲಾಖೆಗೆ ಮುಂಬಡ್ತಿ ಪಡೆಯದೆ ಪ್ರೌಢಶಾಲೆಯಲ್ಲಿಯೇ ಉಳಿದಿದ್ದರೆ ಕಾಲಮಿತಿ ವೇತನ ಬಡ್ತಿಗಳನ್ನು ಪಡೆಯಬಹುದಿತ್ತು. ಜೊತೆಗೆ ಪ್ರೌಢಶಾಲಾ ಮುಖ್ಯ ಶಿಕ್ಷಕನಾಗಿಯೂ ಮುಂಬಡ್ತಿ ಹೊಂದುವ ಅವಕಾಶವಿತ್ತು. ಆದರೆ ಪ್ರೌಢಶಾಲೆಯಿಂದ ಬಡ್ತಿ ಹೊಂದಿ ಪದವಿಪೂರ್ವ ಕಾಲೇಜಿಗೆ ಬಂದ ನಾನು, 20, 25 ವರ್ಷಗಳ ಕಾಲಮಿತಿ ಬಡ್ತಿಗಳಿಂದ ವಂಚಿತನಾಗಿದ್ದೇನೆ. ಜೊತೆಗೆ ಕಾಲೇಜಿನ ಪ್ರಾಂಶುಪಾಲನಾಗುವ ಅವಕಾಶವೂ ಇಲ್ಲ. ಆದರೆ ನನ್ನೊಂದಿಗೆ ಸಹಶಿಕ್ಷಕರಾಗಿ ನೇಮಕಗೊಂಡು ಸ್ನಾತಕೋತ್ತರ ಪದವಿ ಪಡೆದಿದ್ದರೂ ಉಪನ್ಯಾಸಕರಾಗಿ ಬಡ್ತಿ ಪಡೆಯಲು ಆಸಕ್ತಿ ತೋರದೆ ಸದರಿ ಹುದ್ದೆಯಲ್ಲಿಯೇ ಇರುವವರು ಕಾಲಮಿತಿ ಬಡ್ತಿ ಜೊತೆಗೆ ಮುಂಬಡ್ತಿ ಪಡೆದು ನನಗಿಂತಲೂ ಹೆಚ್ಚಿನ ಆರ್ಥಿಕ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಸುಮಾರು ಹತ್ತು ವರ್ಷಗಳಿಂದ ಈ ತಾರತಮ್ಯದ ಬಗ್ಗೆ ಹೋರಾಟ ಮಾಡುತ್ತಿದ್ದರೂ ಪ್ರಯೋಜನವಾಗಿಲ್ಲ.

ಆರನೇ ವೇತನ ಆಯೋಗದ ವರದಿ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಮೂರು ವರದಿಗಳು, ಸದನದಲ್ಲಿನ ಚರ್ಚೆ ಹಾಗೂ ಸರ್ಕಾರದ ಆದೇಶಗಳು ಬಡ್ತಿ ಉಪನ್ಯಾಸಕರ ಪರವಾಗಿದ್ದರೂ ಈ ಸಮಸ್ಯೆ ಇತ್ಯರ್ಥವಾಗಿಲ್ಲ. ಹಾಗಾಗಿ ಮುಖ್ಯಮಂತ್ರಿ, ಶಿಕ್ಷಣ ಸಚಿವರು, ಆರ್ಥಿಕ ಇಲಾಖೆ ಹಾಗೂ ಶಿಕ್ಷಣ ಕ್ಷೇತ್ರವನ್ನು ಪ್ರತಿನಿಧಿಸುವ ವಿಧಾನಪರಿಷತ್ ಸದಸ್ಯರು ಸಮಸ್ಯೆಯನ್ನು ಸರಿಪಡಿಸುವ ದಿಸೆಯಲ್ಲಿ ಅಗತ್ಯ ಕ್ರಮ ಕೈಗೊಂಡು, ಬಡ್ತಿ ಉಪನ್ಯಾಸಕರು ಹಾಗೂ ಮುಂದೆ ಮುಂಬಡ್ತಿ ಹೊಂದುವ ಸಹಶಿಕ್ಷಕರಿಗೆ ಅನುಕೂಲ ಮಾಡಿಕೊಡಬೇಕು.

ರಮೇಶ್ ಡಿ.ಆರ್., ಕೃಷ್ಣರಾಜಪೇಟೆ, ಮಂಡ್ಯ

ಅಶುದ್ಧ ರಾಗಿ ಕೊಡುವುದೇಕೆ?

ನ್ಯಾಯಬೆಲೆ ಅಂಗಡಿಗಳಲ್ಲಿ ಅಕ್ಕಿಯ ಜೊತೆಗೆ ರಾಗಿಯನ್ನೂ ನೀಡಲಾಗುತ್ತಿದೆ. ಆದರೆ ಸುಮಾರು ವರ್ಷಗಳಿಂದ ಆ ರಾಗಿಯಲ್ಲಿ ಮಣ್ಣು, ಕಸ-ಕಡ್ಡಿ ಬೆರೆತಿರುತ್ತದೆ. ಸರ್ಕಾರ ಪ್ರತಿ ವರ್ಷವೂ ರೈತರಿಂದ ಅಂತಹ ರಾಗಿಯನ್ನೇ ಕೊಳ್ಳುತ್ತದೆಯೇ? ಗುಣಮಟ್ಟದ ರಾಗಿಯನ್ನು ಕೊಳ್ಳುವುದಿಲ್ಲವೇಕೆ?

ರೈತರು ಮಾರುಕಟ್ಟೆಗೆ ಅಂತಹ ರಾಗಿಯನ್ನು ತಂದಿರುವುದನ್ನು ನಾನು ಇಲ್ಲಿಯವರೆಗೆ ಎಂದೂ ನೋಡಿಲ್ಲ. ಆದರೂ ನ್ಯಾಯಬೆಲೆ ಅಂಗಡಿಗೆ ಮಾತ್ರ ಅಂತಹದ್ದು ಹೇಗೆ ಪೂರೈಕೆ ಆಗುತ್ತದೆ? ಸರ್ಕಾರ ಇತ್ತ ಗಮನಹರಿಸಿ, ಒಳ್ಳೆಯ ರಾಗಿಯನ್ನು ಪೂರೈಕೆ ಮಾಡಬೇಕು.

ಸಣ್ಣಮಾರಪ್ಪ, ಚಂಗಾವರ, ಶಿರಾ

ನಿರ್ಬಂಧ ಹಿಂತೆಗೆತ: ಅಸಮಂಜಸ ಕ್ರಮ

ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಚಟುವಟಿಕೆಗಳಲ್ಲಿ ಕೇಂದ್ರ ಸರ್ಕಾರದ ನೌಕರರು ಭಾಗವಹಿಸುವುದು ಮತ್ತು ಸದಸ್ಯತ್ವ ಪಡೆಯುವುದಕ್ಕೆ ದಶಕಗಳ ಹಿಂದೆ ವಿಧಿಸಲಾಗಿದ್ದ ನಿರ್ಬಂಧವನ್ನು ಕೇಂದ್ರ ಸರ್ಕಾರ ತೆಗೆದುಹಾಕಿರುವುದು ಆಧುನಿಕೋತ್ತರ ಭಾರತದ ಬಹುದೊಡ್ಡ ದುರಂತವೇ ಆಗಿದೆ. ಈ ಸಂಘಟನೆಯು ದೇಶದಲ್ಲಿ ಮೂರು ಬಾರಿ ನಿಷೇಧಕ್ಕೆ ಒಳಗಾಗಿದ್ದನ್ನು ಯಾರೂ ಮರೆತಿಲ್ಲ. ಮೊದಲ ಬಾರಿ, ಹಿಂದೂ ಧರ್ಮದ ರಕ್ಷಣೆ ಹೆಸರಿನಲ್ಲಿ ನಾಥೂರಾಮ್ ಗೋಡ್ಸೆಯು ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರನ್ನು ಗುಂಡಿಟ್ಟು ಕೊಂದಾಗ. ಎರಡನೇ ಬಾರಿ, ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿದಾಗ. ಮೂರನೇ ಬಾರಿ, ಬಾಬರಿ ಮಸೀದಿ ಧ್ವಂಸವಾದಾಗ. ಈ ಮೂರರಲ್ಲಿ, ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ನಿಷೇಧಿಸಿದ್ದು ಮಾತ್ರ ಅಸಮಂಜಸವಾಗಿತ್ತು. ಗಾಂಧಿ ಹತ್ಯೆ ಮತ್ತು ಬಾಬರಿ ಮಸೀದಿ ಧ್ವಂಸ ಪ್ರಕರಣಗಳು ಭಾರತದ ಇತಿಹಾಸಕ್ಕೆ ಇಂದಿಗೂ ಅಂಟಿಕೊಂಡಿರುವ ಕರಾಳ ಮುಖಗಳು. ಮೊದಲ ಬಾರಿಯಂತೂ ಗೃಹ ಸಚಿವರಾಗಿದ್ದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ಸಂಘದ ನಡೆಯನ್ನು ತೀವ್ರವಾಗಿ ಖಂಡಿಸಿ ಅದನ್ನು ನಿಷೇಧಿಸಿದ್ದರು. ಆದರೆ ಕೇಂದ್ರದ ಈಗಿನ ನಡೆ ಪಟೇಲರನ್ನು ಅವಮಾನಿಸಿದೆ.

ಇದೇ ರೀತಿ ಜಮಾತ್- ಎ- ಇಸ್ಲಾಮಿ ಸಂಘಟನೆಯ ಸದಸ್ಯತ್ವ ಪಡೆಯುವುದರ ಮೇಲಿನ ನಿರ್ಬಂಧವನ್ನೂ ತೆರವುಗೊಳಿಸಿದರೆ ದೇಶದ ಪರಿಸ್ಥಿತಿ ಏನಾಗಬಹುದು ಎಂಬುದು ಊಹಿಸಲಸಾಧ್ಯ. ಏಕೆಂದರೆ ಇವೆರಡೂ ಮತಾಂಧತೆಯನ್ನೇ ತಮ್ಮ ತತ್ವವನ್ನಾಗಿಸಿಕೊಂಡಿರುವ ಸಂಘಟನೆಗಳು. ಈಗಾಗಲೇ ದೇಶದ ಹಲವಾರು ಉನ್ನತ ಶಿಕ್ಷಣ ಸಂಸ್ಥೆ, ತನಿಖಾ ಸಂಸ್ಥೆ ಮತ್ತು ಆಡಳಿತಾತ್ಮಕ ಇಲಾಖೆಗಳು ಆರ್‌ಎಸ್‌ಎಸ್ ಅಡ್ಡೆಗಳಂತೆ ವರ್ತಿಸುತ್ತಿವೆ. ಜನರ ಹಸಿವಿನ ಮುಂದೆ ಧರ್ಮ, ಸಂಸ್ಕೃತಿಯಂತಹ ಭಾವನಾತ್ಮಕ ಅಂಶಗಳು ಬಹಳ ಮುಂದೆ ಹೋಗಲಾರವು. ಕ್ಷಣ ಹೊತ್ತು ಧರ್ಮಾಂಧತೆಯಲ್ಲಿ ಕಳೆದುಹೋಗಿರುವ ಯುವ ಭಾರತ ಒಂದಿಲ್ಲೊಂದು ದಿನ ಹಸಿವಿನ ಬೆಂಕಿಯನ್ನು ಆರಿಸಿಕೊಳ್ಳಲು ತಿಳಿ ನೀರಿನ ಪ್ರಶಾಂತ ಸರೋವರವನ್ನು ಹುಡುಕಿಕೊಂಡು ಬಂದೇ ಬರುತ್ತದೆ. ಹೀಗೆ ಆಗುವಷ್ಟರಲ್ಲಿ ದೇಶ ಬಹು ದೊಡ್ಡ ಬೆಲೆಯನ್ನು ತೆರಬೇಕಾಗುತ್ತದೆ.

ಮೀನಾಕ್ಷಿ ಬಾಳಿ, ಕಲಬುರಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ವೈದ್ಯಕೀಯ ನಿರ್ಲಕ್ಷ್ಯ

ನ್ಯಾಯದ ದಾರಿ ದೂರ

ಚಿಕಿತ್ಸೆಗಾಗಿ ತಮ್ಮ ಬಳಿ ಬಂದ ರೋಗಿಗಳಿಗೆ ಪ್ರೀತಿ, ಶ್ರದ್ಧೆ, ಕಾಳಜಿಯಿಂದ ಆರೈಕೆ ಮಾಡಿ, ಅವರ ಕಾಯಿಲೆ ಗುಣಪಡಿಸಿ, ಪ್ರಾಣ ಉಳಿಸುವ ವೈದ್ಯರ ಸಂಖ್ಯೆ ದೊಡ್ಡದಿದೆ. ಆದರೆ, ವೈದ್ಯಕೀಯ ನಿರ್ಲಕ್ಷ್ಯದ ಪ್ರಕರಣಗಳು ವೈದ್ಯಕೀಯ ರಂಗದ ಮತ್ತೊಂದು ಮಗ್ಗುಲನ್ನು ತೆರೆದಿಡುತ್ತವೆ. ನಿರ್ಲಕ್ಷ್ಯದ ಪ್ರಕರಣಗಳು ವರದಿಯಾಗುತ್ತಿರುವ ರೀತಿ ಮತ್ತು ಈ ವಿಚಾರದಲ್ಲಿ ನೊಂದವರು ನ್ಯಾಯ ಪಡೆಯಲು ಇರುವ ತೊಡಕುಗಳನ್ನು ಗಮನಿಸಿದರೆ ಆತಂಕ ಉಂಟಾಗುತ್ತದೆ...

ಶಿಕ್ಷೆ ಇಳಿಕೆಗೆ ವೈದ್ಯರ ಬೇಡಿಕೆ

ವೈದ್ಯಕೀಯ ನಿರ್ಲಕ್ಷ್ಯಕ್ಕೆ ಶಿಕ್ಷೆ ವಿಧಿಸುವ ಸಂಬಂಧದ ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ಸೆಕ್ಷನ್ 106 (1) ಬಗ್ಗೆ ಭಾರತೀಯ ವೈದ್ಯಕೀಯ ಮಂಡಳಿ (ಐಎಂಎ) ಆಕ್ಷೇಪಣೆ ವ್ಯಕ್ತಪಡಿಸಿತ್ತು. ಚಿಕಿತ್ಸೆ ನೀಡುವಾಗ ವೈದ್ಯರ ನಿರ್ಲಕ್ಷ್ಯದಿಂದ ಒಂದು ವೇಳೆ ರೋಗಿ ಸಾವಿಗೀಡಾದರೆ, ಈ ಸೆಕ್ಷನ್ ಅನ್ವಯ ವೈದ್ಯರಿಗೆ ಎರಡು ವರ್ಷ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲು ಕಾನೂನಿನಲ್ಲಿ ಅವಕಾಶವಿದೆ.

ವೈದ್ಯಕೀಯ ನಿರ್ಲಕ್ಷ್ಯದಿಂದ ಸಾವು ಸಂಭವಿಸಿದರೆ, ಹಿಂದಿನ ಭಾರತೀಯ ದಂಡ ಸಂಹಿತೆಯ (ಐಪಿಸಿ) 304ಎ ಅಡಿಯಲ್ಲಿಯೂ ವೈದ್ಯರಿಗೆ ಎರಡು ವರ್ಷ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲಾಗುತ್ತಿತ್ತು. ಬಿಎನ್‌ಎಸ್ ಮಸೂದೆಯಲ್ಲಿ ಜೈಲು ಶಿಕ್ಷೆಯ ಅವಧಿಯನ್ನು ಐದು ವರ್ಷಕ್ಕೆ ಹೆಚ್ಚಿಸಲಾಗಿತ್ತು. ನಂತರ ವೈದ್ಯರ ಒತ್ತಾಯದ ಮೇರೆಗೆ ಅದನ್ನು ಎರಡು ವರ್ಷಕ್ಕೆ ಇಳಿಸಲಾಗಿದೆ.

ಬಿಎನ್‌ಎಸ್‌ನ ಸೆಕ್ಷನ್ 26 ಅನ್ವಯ ಕ್ರಿಮಿನಲ್ ವಿಚಾರಣೆಯಿಂದ ವೈದ್ಯರಿಗೆ ರಕ್ಷಣೆ ಒದಗಿಸಬೇಕು ಎನ್ನುವುದು ವೈದ್ಯರ ಬೇಡಿಕೆ. ಈ ನಿಟ್ಟಿನಲ್ಲಿ ತಿದ್ದುಪಡಿ ತರಬೇಕು ಎಂದು ಐಎಂಎ ಕೇಂದ್ರ ಸರ್ಕಾರವನ್ನು ಒತ್ತಾಯಿಸಿತ್ತು. ಆದರೆ, ಕೇಂದ್ರವು ವೈದ್ಯರ ಬೇಡಿಕೆಯನ್ನು ತಿರಸ್ಕರಿಸಿದೆ.

ಗ್ರಾಹಕ ಕಾಯ್ದೆಯ ವ್ಯಾಪ್ತಿಗೆ ವೈದ್ಯಕೀಯ ಲೋಪ

ವೈದ್ಯಕೀಯ ನಿರ್ಲಕ್ಷ್ಯ ಪ್ರಕರಣಗಳು ಗ್ರಾಹಕ ಕಾಯ್ದೆಯ ವ್ಯಾಪ್ತಿಯಡಿ ಬರುತ್ತವೆಯೇ ಎನ್ನುವುದು ಹಲವು ವರ್ಷಗಳ ಕಾಲ ಚರ್ಚೆಯ ವಿಚಾರವಾಗಿತ್ತು. ಈ ಸಂಬಂಧ ವಸಂತ ಪಿ.ನಾಯರ್ ಮತ್ತು ಶ್ರೀಮತಿ ನಾಯರ್ ಪ್ರಕರಣದಲ್ಲಿ ಕೇರಳ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು ನೀಡಿರುವ ತೀರ್ಪನ್ನು ಎತ್ತಿಹಿಡಿದ ರಾಷ್ಟ್ರೀಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗವು, ವೈದ್ಯಕೀಯ ನಿರ್ಲಕ್ಷ್ಯವು ಗ್ರಾಹಕ ಕಾಯ್ದೆಯ ಅಡಿಯಲ್ಲಿ ಬರುತ್ತದೆ ಎಂದಿತ್ತು. ವೈದ್ಯಕೀಯ ಚಿಕಿತ್ಸೆಯನ್ನು ಒಂದು ಸೇವೆ ಎಂದು, ರೋಗಿಯನ್ನು ಗ್ರಾಹಕ ಎಂದು ಆಯೋಗವು ತಿಳಿಸಿತ್ತು. ಸೇವೆಯಲ್ಲಿ ಏನೇ ವ್ಯತ್ಯಯವಾದರೂ ಅದು ಗ್ರಾಹಕ ನ್ಯಾಯಾಲಯಗಳ ಅಡಿಯಲ್ಲಿ ವಿಚಾರಣೆಗೆ ಅರ್ಹ ಎಂದು ಸ್ಪಷ್ಟಪಡಿಸಿತು.

ನಂತರ 1995ರಲ್ಲಿ, ಭಾರತೀಯ ವೈದ್ಯಕೀಯ ಸಂಘ (ಐಎಂಎ) ಮತ್ತು ವಿ.ಪಿ.ಶಾಂತ ಮತ್ತು ಇತರರ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಗ್ರಾಹಕ ನ್ಯಾಯಾಲಯದ ಆದೇಶವನ್ನು ಪುನರುಚ್ಚರಿಸಿತು. ಖಾಸಗಿ ಆಸ್ಪತ್ರೆಗಳಲ್ಲಾಗಲಿ, ಸರ್ಕಾರಿ ಆಸ್ಪತ್ರೆಗಳಲ್ಲಾಗಲಿ, ರೋಗಿಗೆ ಚಿಕಿತ್ಸೆ ನೀಡುವಾಗ ಯಾವುದೇ ಲೋಪವಾದಲ್ಲಿ, ಅವರು ಗ್ರಾಹಕ ಸಂರಕ್ಷಣಾ ಕಾಯ್ದೆ 1986ರ ಅಡಿ ಪರಿಹಾರಕ್ಕೆ ಅರ್ಹರು ಎಂದಿತು. ಗ್ರಾಹಕ ಸಂರಕ್ಷಣಾ ಕಾಯ್ದೆ –1986 ಅನ್ನು ನಂತರ ಗ್ರಾಹಕ ಸಂರಕ್ಷಣಾ ಕಾಯ್ದೆ –2019 ಎಂದು ಬದಲಾವಣೆ ಮಾಡಲಾಯಿತು.

ಪ್ರಜಾವಾಣಿ ವಾರ್ತೆ

ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಯ ಕರ್ತವ್ಯಲೋಪವು ರೋಗಿಗಳನ್ನು ಶಾಶ್ವತ ಅಂಗವೈಕಲ್ಯಕ್ಕೆ, ಕೆಲವೊಮ್ಮೆ ಸಾವಿಗೂ ಈಡು ಮಾಡುತ್ತಿದೆ. ತಮಗೆ ಆದ ಅನ್ಯಾಯದ ವಿರುದ್ಧ ಹೋರಾಡಿ ನ್ಯಾಯ ಪಡೆಯುವುದು ಕೂಡ ರೋಗಿಗಳ ಪಾಲಿಗೆ ಕಷ್ಟಸಾಧ್ಯವಾಗಿದೆ. ರಾಜ್ಯದ ರಾಜಧಾನಿ ಬೆಂಗಳೂರಿನ ನಿದರ್ಶನವನ್ನೇ ತೆಗೆದುಕೊಂಡರೆ, 2015ರಿಂದ ಇಲ್ಲಿಯರೆಗೆ ವೈದ್ಯಕೀಯ ನಿರ್ಲಕ್ಷ್ಯಕ್ಕೆ ಸಂಬಂಧಿಸಿದಂತೆ 25 ಎಫ್‌ಐಆರ್ ದಾಖಲಾಗಿವೆ. ಆದರೆ, ಯಾವ ಪ್ರಕರಣದಲ್ಲೂ ತಪ್ಪಿತಸ್ಥರಿಗೆ ಶಿಕ್ಷೆಯಾಗಿಲ್ಲ.

ಕಾಯಿಲೆ ಬಂದ ವ್ಯಕ್ತಿ, ರೋಗ ಉಲ್ಬಣಗೊಂಡು, ಇಲ್ಲವೇ ಚಿಕಿತ್ಸೆಗೆ ಸ್ಪಂದಿಸದೇ ಸಾಯಬಹುದು. ಅದನ್ನು ವೈದ್ಯಕೀಯ ನಿರ್ಲಕ್ಷ್ಯ ಎನ್ನಲಾಗುವುದಿಲ್ಲ. ಆದರೆ, ವೈದ್ಯರು ತಮ್ಮ ಕರ್ತವ್ಯದ ನಿರ್ವಹಣೆಯಲ್ಲಿ ತೋರುವ ಉದಾಸೀನತೆ ಅಥವಾ ಲೋಪ ಮತ್ತು ಅದರಿಂದ ರೋಗಿಗೆ ಉಂಟಾಗುವ ಹಾನಿಯನ್ನು ವೈದ್ಯಕೀಯ ನಿರ್ಲಕ್ಷ್ಯ ಎನ್ನಲಾಗುತ್ತದೆ. ವೈದ್ಯರು, ದಾದಿಯರು, ತಂತ್ರಜ್ಞರು, ದಂತವೈದ್ಯರು, ಆಸ್ಪತ್ರೆಯ ಸಿಬ್ಬಂದಿಯ ಕರ್ತವ್ಯಲೋಪಗಳು ಇದರ ವ್ಯಾಪ್ತಿಗೆ ಬರುತ್ತವೆ.

ಬ್ರಿಟಿಷ್ ಮೆಡಿಕಲ್ ಜರ್ನಲ್‌ನ ಅಧ್ಯಯನ ಗುರುತಿಸಿರುವಂತೆ, ಜನರ ಸಾವಿಗೆ ಕಾರಣವಾಗುತ್ತಿರುವ ಅಂಶಗಳಲ್ಲಿ, ವೈದ್ಯಕೀಯ ನಿರ್ಲಕ್ಷ್ಯವು ಮೂರನೇ ಅತಿ ದೊಡ್ಡ ಕಾರಣವಾಗಿದೆ. ‘ಫೋಬ್ಸ್’ ವರದಿಯ ಪ್ರಕಾರ, ಅಮೆರಿಕದಲ್ಲಿ ಪ್ರತಿವರ್ಷ 2.51 ಲಕ್ಷ ಮಂದಿ ವೈದ್ಯಕೀಯ ನಿರ್ಲಕ್ಷ್ಯಕ್ಕೆ ಬಲಿಯಾಗುತ್ತಿದ್ದಾರೆ. ಅಮೆರಿಕದಲ್ಲಿ ಸಂಭವಿಸುತ್ತಿರುವ ಸಾವುಗಳ ಪೈಕಿ ಶೇ 9.5ರಷ್ಟು ಸಾವುಗಳಿಗೆ ಇದುವೇ ಕಾರಣವಾಗಿದೆ.



ರೋಗಿಗಳ ಹಕ್ಕು ಮತ್ತು ಸುರಕ್ಷತೆ ಬಗ್ಗೆ ಅರಿವು ಮೂಡಿಸುವುದಕ್ಕಾಗಿ ಪ್ರತಿವರ್ಷ ಸೆಪ್ಟೆಂಬರ್ 17ರಂದು ವಿಶ್ವ ಆರೋಗ್ಯ ಸಂಸ್ಥೆಯು ರೋಗಿಗಳ ಜಾಗತಿಕ ಸುರಕ್ಷತಾ ದಿನವನ್ನು ಆಚರಿಸುತ್ತಿದೆ. ಜತೆಗೆ, ರೋಗಿಗಳ ಸುರಕ್ಷತೆಗೆ 2021–2030ರ ಅವಧಿಗಾಗಿ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿದೆ.

ನ್ಯಾಯ ದುರ್ಲಭ: ಒಂದೆಡೆ, ವೈದ್ಯಕೀಯ ನಿರ್ಲಕ್ಷ್ಯದ ಹೆಚ್ಚು ಪ್ರಕರಣಗಳು ವರದಿಯಾಗುತ್ತಿದ್ದರೆ, ಮತ್ತೊಂದೆಡೆ, ಅದರಿಂದ ತೊಂದರೆಗೊಳಗಾದವರಿಗೆ ಸುಲಭವಾಗಿ ನ್ಯಾಯ ಸಿಗುತ್ತಿಲ್ಲ. ಕರ್ನಾಟಕದಾದ್ಯಂತ 319 ವೈದ್ಯಕೀಯ ನಿರ್ಲಕ್ಷ್ಯದ ಪ್ರಕರಣಗಳು ಕರ್ನಾಟಕ ವೈದ್ಯಕೀಯ ಮಂಡಳಿಯಲ್ಲಿ (ಕೆಎಂಸಿ) ದಾಖಲಾಗಿವೆ. ಬೆಂಗಳೂರಿನಲ್ಲಿ ದಾಖಲಾಗಿರುವ 25 ಪ್ರಕರಣಗಳ ಪೈಕಿ 10 ಪ್ರಕರಣಗಳು ವಜಾಗೊಂಡಿವೆ. ಉಳಿದ 15 ಪ್ರಕರಣಗಳ ವಿಚಾರಣೆ ವಿಪರೀತ ಎನ್ನುವಷ್ಟು ವಿಳಂಬವಾಗುತ್ತಿದೆ. ಗಮನಿಸಬೇಕಾದ ಅಂಶ ಎಂದರೆ, ಈ 15 ಪ್ರಕರಣಗಳ ಪೈಕಿ 9 ಪ್ರಕರಣಗಳು ರೋಗಿ ಮೃತಪಟ್ಟ ಗಂಭೀರ ಸ್ವರೂಪದ್ದಾಗಿವೆ. 2015ರಿಂದ 2021ರವರೆಗೆ 12 ಪ್ರಕರಣಗಳು ದಾಖಲಾಗಿದ್ದರೆ, ಕಳೆದ ಮೂರು ವರ್ಷಗಳಲ್ಲಿ ವರ್ಷಕ್ಕೊಂದು ಪ್ರಕರಣ ದಾಖಲಾಗಿದೆ. ಇವುಗಳಲ್ಲಿ ಸರ್ಕಾರದ ಸ್ವಾಧೀನದಲ್ಲಿರುವ ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ 2019ರಲ್ಲಿ ವರದಿಯಾದ ಪ್ರಕರಣಗಳೂ ಸೇರಿವೆ. ರೋಗಿ ಸಾವಿಗೆ ಸಂಬಂಧಿಸಿದ ಕೆಲವು ಪ್ರಕರಣಗಳು ಖಾಸಗಿ ಆಸ್ಪತ್ರೆಗಳಿಂದ ವರದಿಯಾಗಿವೆ.

ಕರ್ನಾಟಕ ವೈದ್ಯಕೀಯ ನೋಂದಣಿ ಕಾಯ್ದೆಯ ಪ್ರಕಾರ, ವೈದ್ಯಕೀಯ ನಿರ್ಲಕ್ಷ್ಯ ಪ್ರಕರಣಗಳನ್ನು ತನಿಖೆ ಮಾಡುವ ಅಧಿಕಾರ ಪೊಲೀಸರಿಗೆ ಇಲ್ಲ. ಆ ಅಧಿಕಾರ ಇರುವುದು ಕೆಎಂಸಿಯ 16 ಮಂದಿ ಸದಸ್ಯರ ಅರೆನ್ಯಾಯಿಕ ಮಂಡಳಿಗೆ. ಇದರಲ್ಲಿ ವೈದ್ಯಕೀಯ ವೃತ್ತಿಗೆ ಸಂಬಂಧಿಸಿದವರು 15 ಮಂದಿ ಇದ್ದರೆ, ಒಬ್ಬರು ಮಾತ್ರ ನ್ಯಾಯಾಂಗಕ್ಕೆ ಸೇರಿದವರಾಗಿರುತ್ತಾರೆ. ಮಂಡಳಿಯ ಅಭಿಪ್ರಾಯ ಪಡೆದು ಪೊಲೀಸರು ದೋಷಾರೋಪ ಪಟ್ಟಿ ಸಲ್ಲಿಸುತ್ತಾರೆ. ಪ್ರಕರಣದ ತನಿಖೆಗೆ ಯಾವುದೇ ಗಡುವು ಇಲ್ಲದಿರುವುದರಿಂದ ಮಂಡಳಿಯು ವರ್ಷಾನುಗಟ್ಟಲೇ ವಿಚಾರಣೆ ನಡೆಸುತ್ತದೆ.

‘ಕೆಎಂಸಿಯು ಉದ್ದೇಶಪೂರ್ವಕವಾಗಿ ಪ್ರಕರಣಗಳ ವಿಚಾರಣೆಯನ್ನು ವಿಳಂಬ ಮಾಡುತ್ತಿದೆ. ದೂರುದಾರರು ವಿಳಂಬದಿಂದ ಬೇಸತ್ತು ಹಾಜರಾಗುವುದನ್ನು ನಿಲ್ಲಿಸಿದರೆ, ಆಗ ಕೆಎಂಸಿಯು ಪ್ರಕರಣವನ್ನು ವಜಾಗೊಳಿಸುತ್ತದೆ’ ಎಂದು ಇಂಥ ಪ್ರಕರಣಗಳ ಬಗ್ಗೆ ತಿಳಿವಳಿಕೆ ಇರುವ ಬೆಂಗಳೂರಿನ ಪೊಲೀಸ್ ಅಧಿಕಾರಿಯೊಬ್ಬರು ಹೇಳುತ್ತಾರೆ. ಪ್ರಕರಣಗಳ ವಿಚಾರಣೆಯ ವ್ಯವಸ್ಥೆಯಲ್ಲಿ ಪಾರದರ್ಶಕತೆ ಇಲ್ಲ. ಪೊಲೀಸ್ ಅಧಿಕಾರಿಗಳನ್ನೂ ವಿಚಾರಣೆಯಲ್ಲಿ ಸೇರಿಸಿಕೊಂಡರೆ, ಪಾರದರ್ಶಕತೆ ಸಾಧ್ಯ ಎನ್ನುವುದು ಅವರ ಅಭಿಪ್ರಾಯ. ಶನಿವಾರ ಮಾತ್ರ ನಡೆಯುವ ಪ್ರಕರಣಗಳ ವಿಚಾರಣೆಗೆ ದೂರುದಾರರು ಮತ್ತು ಪ್ರತಿವಾದಿಗಳು ಸರಿಯಾಗಿ ಹಾಜರಾಗದಿರುವುದು ವಿಳಂಬಕ್ಕೆ ಕಾರಣ ಎನ್ನುವುದು ಕೆಎಂಸಿಯ ವಾದ.

ಕೆಎಂಸಿ ಒಂದು ಸ್ವತಂತ್ರ, ಅರೆ ನ್ಯಾಯಿಕ ಸಂಸ್ಥೆ ಆಗಿರುವುದರಿಂದ ಏನೂ ಮಾಡಲಾಗದು ಎಂದು ರಾಜ್ಯ ಸರ್ಕಾರವೂ ಅಸಹಾಯಕತೆ ವ್ಯಕ್ತಪಡಿಸುತ್ತದೆ. ಈ ವಿಚಾರದಲ್ಲಿ ಸರ್ಕಾರಕ್ಕೆ ಇರುವ ಅಧಿಕಾರ ಎಂದರೆ, ವಿಚಾರಣಾ ಮಂಡಳಿಗೆ ಒಬ್ಬರನ್ನು ನೇಮಿಸುವುದು ಮಾತ್ರ ಆಗಿದೆ.



ಎಐ ಚಿತ್ರ: ಕಣಕಾಲಮಠ

ಶಸ್ತ್ರಚಿಕಿತ್ಸೆ ವಿಭಾಗದಲ್ಲಿ ಹೆಚ್ಚು ಪ್ರಕರಣ

ಭಾರತದಲ್ಲಿ ವೈದ್ಯಕೀಯ ನಿರ್ಲಕ್ಷ್ಯ ಪ್ರಕರಣಗಳು ವರದಿಯಾಗುತ್ತಿರುವ ಪ್ರಮಾಣ ಗಾಬರಿ ಹುಟ್ಟಿಸುವಂತಿದೆ. ಪ್ರೊ. ಅಶೀಶ್ ಝಾ ಅವರ ಅಧ್ಯಯನ ವರದಿಯ ಪ್ರಕಾರ, ಭಾರತದಲ್ಲಿ ವಾರ್ಷಿಕವಾಗಿ 52 ಲಕ್ಷ ವೈದ್ಯಕೀಯ ನಿರ್ಲಕ್ಷ್ಯದ ಪ್ರಕರಣಗಳು ವರದಿಯಾಗುತ್ತಿವೆ. ಬ್ರಿಟಿಷ್ ಮೆಡಿಕಲ್ ಜರ್ನಲ್ ಕೂಡ ಭಾರತದಲ್ಲಿ ವೈದ್ಯಕೀಯ ನಿರ್ಲಕ್ಷ್ಯದ ಪ್ರಕರಣಗಳು ಹೆಚ್ಚಾಗುತ್ತಿವೆ ಎಂದು ಹೇಳಿದೆ.

ರಾಷ್ಟ್ರೀಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು 2015ರಿಂದ 2019ರ ನಡುವೆ ವಿಚಾರಣೆಗೆ ಒಳಪಡಿಸಿದ 253 ವೈದ್ಯಕೀಯ ನಿರ್ಲಕ್ಷ್ಯ ಪ್ರಕರಣಗಳನ್ನು ಅಧ್ಯಯನ ಮಾಡಿ ಅದರ ವರದಿಯನ್ನು ಇಂಡಿಯನ್ ಜರ್ನಲ್ ಆಫ್ ಮೆಡಿಕಲ್ ಎಥಿಕ್ಸ್ ಪ್ರಕಟಿಸಿದೆ.

- **253** ಅಧ್ಯಯನ ನಡೆಸಲಾದ ವೈದ್ಯಕೀಯ ಪ್ರಕರಣಗಳು
- **37** (ಶೇ 27)–ಶಸ್ತ್ರಚಿಕಿತ್ಸೆ ಅತಿ ಹೆಚ್ಚು ವೈದ್ಯಕೀಯ ನಿರ್ಲಕ್ಷ್ಯದ ಪ್ರಕರಣಗಳು ವರದಿಯಾದ ವಿಭಾಗ
- **135** (ಶೇ 53) ವೈದ್ಯಕೀಯ ನಿರ್ಲಕ್ಷ್ಯ ದೃಢಪಟ್ಟ ಪ್ರಕರಣಗಳು
- **29** (ಶೇ 21) ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗದ (ಒಬಿಜಿ) ವೈದ್ಯಕೀಯ ನಿರ್ಲಕ್ಷ್ಯದ ಪ್ರಕರಣಗಳು
- **62** (ಶೇ 36) ಕೌಶಲ/ಸೇವೆಯ ಕೊರತೆಯಿಂದ ಘಟಿಸಿದ ವೈದ್ಯಕೀಯ ಲೋಪ ಪ್ರಕರಣಗಳು
- **38** (ಶೇ 22) ನಿಖರವಾದ ವೈದ್ಯಕೀಯ ದಾಖಲೆಗಳ ಸರಿಯಾದ ನಿರ್ವಹಣೆಯಿಲ್ಲದೇ ಘಟಿಸಿದ ಪ್ರಕರಣಗಳು

ವೈದ್ಯಕೀಯ ನಿರ್ಲಕ್ಷ್ಯದಿಂದ ಮೃತಪಟ್ಟವರು

ವರ್ಷ	ಭಾರತ	ಕರ್ನಾಟಕ
2017	198	13
2018	218	4
2019	210	7
2020	133	3
2021	142	0
2022	118	3

ಆಧಾರ: ಎನ್‌ಸಿಆರ್‌ಬಿ

ವರ್ಷಕ್ಕೆ 30 ಲಕ್ಷ ಸಾವು

ವೈದ್ಯಕೀಯ ನಿರ್ಲಕ್ಷ್ಯ ಎನ್ನುವುದು ಜಾಗತಿಕ ಸಮಸ್ಯೆಯಾಗಿದೆ. ಈ ದಿಸೆಯಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ಅಂಕಿಅಂಶಗಳು ಸಮಸ್ಯೆಯ ವ್ಯಾಪಕತೆಗೆ ಕನ್ನಡಿ ಹಿಡಿಯುತ್ತವೆ. ವೈದ್ಯಕೀಯ ನಿರ್ಲಕ್ಷ್ಯದ ಪರಿಣಾಮಗಳನ್ನು ಡಬ್ಲ್ಯುಎಚ್‌ಒ ಪಟ್ಟಿ ಮಾಡಿದೆ.

- ಜಾಗತಿಕವಾಗಿ ಪ್ರತಿ ವರ್ಷ 30 ಲಕ್ಷ ಸಾವುಗಳು ಸಂಭವಿಸುತ್ತಿವೆ
- ಪ್ರತಿ 10 ರೋಗಿಗಳ ಪೈಕಿ ಒಬ್ಬರಿಗೆ ಹಾನಿ
- ಕಡಿಮೆ ಆದಾಯದ ದೇಶಗಳಲ್ಲಿ 100ರಲ್ಲಿ 4 ಮಂದಿ ಸಾವು
- ಇಂಥ ಸಾವುಗಳ ಪೈಕಿ ಶೇ 50ರಷ್ಟು ತಡೆಯಬಹುದಾಗಿದೆ
- ರೋಗಿಗಳಿಗೆ ಆಗುತ್ತಿರುವ ಹಾನಿಯಿಂದ ಜಾಗತಿಕ ಆರ್ಥಿಕ ಬೆಳವಣಿಗೆ ಶೇ 0.7ರಷ್ಟು ಕುಂಠಿತ

ಆಧಾರ: ನ್ಯಾಷನಲ್ ಲೈಬ್ರರಿ ಆಫ್ ಮೆಡಿಸಿನ್, ವಿಶ್ವ ಆರೋಗ್ಯ ಸಂಸ್ಥೆ, ಬ್ರಿಟಿಷ್ ಮೆಡಿಕಲ್ ಜರ್ನಲ್, ಫೋಬ್ಸ್, ಇಂಡಿಯನ್ ಜರ್ನಲ್ ಆಫ್ ಮೆಡಿಕಲ್ ಎಥಿಕ್ಸ್



ಬರವಣಿಗೆಯ ಶಕ್ತಿ ಪ್ರದರ್ಶನ ಭಿನ್ನರೂಪದ ಸಂಕಲನ

ನಾವು ನೋಡಿದ ಸಿನಿಮಾ

ಇಲ್ಲಿ ಯಾವ ಪಾತ್ರಗಳ ಹೆಸರೂ ಉಲ್ಲೇಖಗೊಳ್ಳುವುದಿಲ್ಲ. ಕಥೆ ಹೆಣೆದಿರುವ ಶೈಲಿಗೆ ಪಾತ್ರಗಳಿಗೆ ಹೆಸರೂ ಅಮುಖ್ಯ ಎಂದು ಎನಿಸಿಬಿಡುತ್ತದೆ. ಭಾವನೆಗಳಿಗೆ, ಸಂದೇಶಕ್ಕೆ, ರೂಪಾಂತರಗೊಳ್ಳುವ ಪ್ರಕ್ರಿಯೆ; ಘಟನೆಗಳಿಗಷ್ಟೇ ಇಲ್ಲಿ ಆದ್ಯತೆ. ಬರವಣಿಗೆಯ ಶಕ್ತಿ ಪ್ರದರ್ಶಿಸಿರುವ ಈ ಸಿನಿಮಾ ನಾಲ್ಕು ಕಥೆಗಳ ಗುಚ್ಛವಾದರೂ ಪೋಣಿಸಿದ ರೀತಿ ಇದಕ್ಕೆ ಭಿನ್ನರೂಪ ನೀಡಿದೆ. ಸಿನಿಮಾ ಕಥಾಲೋಕದ ‘ರೂಪಾಂತರ’ಕ್ಕೆ ಬೇಕಾದ ನವ್ಯ ಕನಸೊಂದನ್ನು ಬಿತ್ತಿರುವ ಈ ಚಿತ್ರ ಚಂದನವನಕ್ಕೆ ಭಿನ್ನ ಕಲ್ಪನೆಯ ನಿರ್ದೇಶಕರೊಬ್ಬರನ್ನು ನೀಡಿದೆ.

‘ಡಿಸ್ಟೋಪಿಅ’–ಎಂದರೆ ನರಕಸದೃಶವಾದ ಒಂದು ಸಮಾಜ. ಭವಿಷ್ಯದ ಅಂತಹ ಲೋಕದಿಂದ ಸಿನಿಮಾ ಕಥೆ ಆರಂಭವಾಗುತ್ತದೆ. ಅಲ್ಲಿ ನೀರು, ಗಾಳಿ ಮಾರಾಟದ ವಸ್ತುವಾಗಿದೆ. ಜನರ ಮಾರಣಹೋಮ ನಡೆಯುತ್ತಿದೆ. ಇಂತಹ ಸ್ಥಿತಿಯಲ್ಲಿ ಆ ಲೋಕವನ್ನಾಳುತ್ತಿರುವ ದುರುಳರ ಕೈಗೆ ಅಜ್ಜನೊಬ್ಬ ಸಿಕ್ಕಿಬೀಳುತ್ತಾನೆ. ಆತನ ಕೈಯಲ್ಲೊಂದು ಸಣ್ಣ ಪೆಟ್ಟಿಗೆ. ಆ ಪೆಟ್ಟಿಗೆಯೊಳಗೆ ಚಿಟ್ಟೆಯ ಹೊದೆಗೂಡು (ಕಕೂನ್). ತನ್ನ ಜೀವ ರಕ್ಷಿಸಿಕೊಳ್ಳಲು ಆತ ಹೇಳುವ ಕಥೆಯೇ ‘ರೂಪಾಂತರ’. ಅವುಗಳಲ್ಲಿ ಒಬ್ಬ ರೌಡಿಯ ಕಥೆಯಿದೆ, ಉತ್ತರ ಕರ್ನಾಟಕದ ಹಳ್ಳಿಯೊಂದರ ಅಜ್ಜ–ಅಜ್ಜಿಯ ಕನಸಿದೆ, ಓರ್ವ ಭಿಕ್ಷುಕಿಯ ವೇದನೆಯಿದೆ ಮತ್ತು ಮಾದಕವ್ಯಸನಿಯಾದ ಓರ್ವ ಯುವಕನ ಜೀವನದ ಕ್ಷಣಗಳಿವೆ. ಈ ಗುಚ್ಛವನ್ನು ಹೆಣೆಯುತ್ತಾ ಸಾಗಿದಂತೆ ಅವುಗಳೆಲ್ಲವೂ ಒಂದೆಡೆ ಸೇರಿದಾಗ ಕಥೆಗೊಂದು ಅಂತ್ಯ.

‘ರೂಪಾಂತರ’ ಮಿಥಿಲೇಶ್ ಎಡವಲತ್ ಬರೆದು ನಿರ್ದೇಶಿಸಿರುವ ಚಿತ್ರ. ಈ ಅಕ್ಷರಗಳಿಗೆ ಸಂಭಾಷಣೆ ಹಾಗೂ ಹೆಚ್ಚುವರಿ ಚಿತ್ರಕಥೆಯ ಮೂಲಕ ಜೀವತುಂಬಿದವರು ರಾಜ್ ಬಿ.ಶೆಟ್ಟಿ. ಹೀಗಾಗಿ ಒಟ್ಟು ಬರವಣಿಗೆಯಿಂದಲೇ ಸಿನಿಮಾ ನವೀನವಾಗಿದೆ. ಹಿಂದೆ ‘ಕಥಾಸಂಗಮ’ದಂತಹ ಕಥೆಗಳ ಗುಚ್ಛ ಹೊತ್ತ ಸಿನಿಮಾಗಳು ಬಂದಿದ್ದರೂ, ಅಂತ್ಯದಲ್ಲಿ ಎಲ್ಲ ಕಥೆಗಳನ್ನು ಸೇರಿಸಿ ಪೋಣಿಸಿದ ಚಿತ್ರಕಥೆಯಿರಲಿಲ್ಲ. ‘ರೂಪಾಂತರ’ ಈ ನಿಟ್ಟಿನಲ್ಲಿ ಹೊಸ ಪ್ರಯತ್ನ. ಹೀಗಾಗಿಯೇ ಇದು ಅಂತ್ಯದವರೆಗೂ ನೋಡುಗನನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆ. ಈ ಬರವಣಿಗೆಗೆ ತಕ್ಕ ನಟನೆಯೂ ಕಲಾವಿದರಿಂದ ಹೊಮ್ಮಿರುವುದು ಸಿನಿಮಾವನ್ನು ಉತ್ಕೃಷ್ಟವಾಗಿಸಿದೆ. ಸಿನಿಮಾದ ಆರಂಭದಲ್ಲಿ ಚಿತ್ರಕಥೆ ನಿಧಾನವೆನಿಸಿದರೂ, ನಾಲ್ಕು ಕಥೆಗಳಿಗೆ ಸಿನಿಮಾ ಹೊರಳುತ್ತಿದ್ದಂತೆ ಕುತೂಹಲ, ಭಾವನೆಗಳ ಹರಿವು ಹೆಚ್ಚುತ್ತದೆ.

ಅಜ್ಜ–ಅಜ್ಜಿಯ ಪಾತ್ರ ನಿಭಾಯಿಸಿದ ಸೋಮಶೇಖರ್ ಬೋಳೆಗಾಂವ್ ಹಾಗೂ ಹನುಮಕ್ಕ ಅವರು ಇಡೀ ಸಿನಿಮಾದ ಜೀವಾಳ. ಅಪ್ಪಟ ಗ್ರಾಮೀಣ ಭಾಗದ ದಂಪತಿಯಂತೆ ನಗಿಸುತ್ತಾ, ದುಃಖ ಉಮ್ಮಳಿಸುತ್ತಾ ಸಾಗುವ ಇವರು ಸಿನಿಮಾದಲ್ಲಿ ಜೀವಿಸಿದ್ದಾರೆ. ಇವರ ಪಾತ್ರದ ಬರವಣಿಗೆ, ನಿರ್ವಹಣೆ ಮತ್ತು ಸಂಭಾಷಣೆ ಸಿನಿಮಾದಲ್ಲಿ ಮುಖ್ಯಭೂಮಿಕೆ ವಹಿಸಿದೆ. ಉಳಿದಂತೆ ರಾಜ್ ಬಿ.ಶೆಟ್ಟಿ, ಲೇಖಾ ನಾಯ್ಡು, ಭರತ್ ಜಿ.ಬಿ, ಅಂಜನ್ ಭಾರಧ್ವಾಜ್ ತಮ್ಮ ಪಾತ್ರಗಳನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ.

ಒಂದೆರಡು ತರ್ಕಕ್ಕೆ ಸಿಗದ ದೃಶ್ಯಗಳು ಕಂಡರೂ ಅವು ಚಿತ್ರಕಥೆಯ ವೇಗದೊಂದಿಗೆ ಮರೆಯಾಗುತ್ತವೆ.

ಸಿನಿಮಾದಲ್ಲಿ ಗ್ರಾಫಿಕ್ಸ್ ಪ್ರಮುಖ ಪಾತ್ರವಹಿಸಿದ್ದು, ಕಥೆಗಳಿಗೆ ಸೂಕ್ತ ವೇದಿಕೆ ಹಾಕಿಕೊಟ್ಟಿವೆ. ಹಿನ್ನೆಲೆ ಸಂಗೀತವೂ ದೃಶ್ಯಗಳಿಗೆ ಇಂಬು ನೀಡಿದೆ. ರಾಜ್ ಬರೆದ ‘ಕಿತ್ತಾಳೆ..’ ಹಾಡು ಅರ್ಥಗರ್ಭಿತವಾಗಿದ್ದು, ಚೈತ್ರಾ ಜೆ.ಆಚಾರ್ ಧ್ವನಿ ಚಿತ್ರಮಂದಿರದೊಳಗೆ ಪ್ರತಿಧ್ವನಿಸುತ್ತದೆ. ಇಲ್ಲಿ ಯಾವ ಕಥೆಗಳಿಗೂ ಅಂತ್ಯವಿಲ್ಲ. ಪಾತ್ರಗಳು ರೂಪಾಂತರಗೊಳ್ಳುವ ಘಳಿಗೆಯಲ್ಲಿ ಕಥೆಗಳು ಅಂತ್ಯವಾಗುತ್ತದೆ. ಇದು ಸಿನಿಮಾಗೆ ಪೂರ್ಣವಿರಾಮ ನೀಡಿದರೂ ಆಲೋಚನೆಗಳಿಗೆ ಆದಿಯಾಗಿದೆ. ಕೀಟದಂತೆ ಹುಟ್ಟುವ ನಾವು ಹೊದೆಗೂಡು ಸೇರಿ ಅದರೊಳಗೆ ಸಾಯುತ್ತೇವೆಯೋ ಅಥವಾ ರೂಪಾಂತರಗೊಂಡು ಚಿಟ್ಟೆಯಾಗುತ್ತೇವೆಯೋ ಎನ್ನುವುದನ್ನು ಕಲಾತ್ಮಕವಾಗಿ ಇಲ್ಲಿ ಕಟ್ಟಿಕೊಡಲಾಗಿದೆ. ಕಥೆ ಹೇಳಲು ಆರಂಭಿಸಿದ ಆ ಅಜ್ಜನೇ ಕಥೆಯಲ್ಲಿರುವ ರೌಡಿಯೇ ಎಂಬ ಪ್ರಶ್ನೆಯೊಂದನ್ನೂ ಸಿನಿಮಾ ಉಳಿಸುತ್ತದೆ.

ಅಭಿಲಾಷ್ ಪಿ. ಎಸ್.

ಸಿನಿಮಾ: ರೂಪಾಂತರ

- **ನಿರ್ಮಾಪಕರು:** ಸುಹಾನ್ ಪ್ರಸಾದ್, ಪಾರ್ಥ್ ಜನಿ
- **ಬರವಣಿಗೆ ಮತ್ತು ನಿರ್ದೇಶನ:** ಮಿಥಿಲೇಶ್ ಎಡವಲತ್
- **ಸಂಭಾಷಣೆ:** ರಾಜ್ ಬಿ.ಶೆಟ್ಟಿ
- **ತಾರಾಗಣ:** ಸೋಮಶೇಖರ್ ಬೋಳೆಗಾಂವ್, ಹನುಮಕ್ಕ, ರಾಜ್ ಬಿ.ಶೆಟ್ಟಿ, ಲೇಖಾ ನಾಯ್ಡು, ಭರತ್ ಜಿ.ಬಿ, ಅಂಜನ್ ಭಾರಧ್ವಾಜ್ ಮತ್ತಿತರರು

ಪದಬಂಧ 5754


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಕುಪ್ಪಸವಿಲ್ಲಿ ತಿರುವು ಮುರುವಾಗಿಬಿಟ್ಟಿದೆ (3)
5.ತಲೆಮಾರು ಈ ತರ ಕಾಣುತ್ತಿದೆ (4)
7.ಒಳ್ಳೆಯ ವಿಚಾರ (4)
8.ಅಸಂಭವವಾದುದನ್ನು ಹೀಗೂ ಹೇಳುವರು (6)
10.ಕಾಫಿನಾಡು ಎಂದು ಹೆಸರಾಗಿರುವ ಜಿಲ್ಲೆ (6)
13.ಸತ್ತವರನ್ನು ಬದುಕಿಸುವುದೆಂದು ನಂಬಲಾದ ಮೂಲಿಕೆ (4)
15.ಮನ್ಮಥನ ಇನ್ನೊಂದು ಹೆಸರು (4)
16.ಕುಸ್ತಿ ಮಾಡುವ ಕಸುಬಿನವನು (3)

ಮೇಲಿಂದ ಕೆಳಕ್ಕೆ

1.ಇದು ಒಳಮನಸ್ಸು (4)
2.ಕಠೋರವಾದ ಕೈ! (2)
3.ಆವರಣ ಚಿಹ್ನೆ (2)
4.ಅದೇ ತಾನೆ ಅರಳಿದ ಹೊಸ ಹೂವು (4)
6.ಅಂತರಂಗದಲ್ಲಿ ಎದ್ದಿರುವ ಅಲೆ! (3)
9.ಸುಲಭವಲ್ಲದುದು ಉಲ್ಟಾ ಆಗಿದೆ (3)
10.ಮರಣವಿಲ್ಲದೆ ದೀರ್ಘಕಾಲ ಬಾಳುವವನು (4)
11.ರೋಗದೊಡಗೂಡುವ ಜೋಡುನುಡಿ (3)
12.ಮರೀಚಿಕೆ ಇಲ್ಲಿ ಕಾಣುತ್ತಿದೆ (4)
14.ಜನನಿ ನುಡಿದಿರುವ ಸತ್ಯ (2)
15.ಮದುಮಗನಂತೆ ಕಾಣುತ್ತಿರುವ ಪುತ್ರ (2)



5753ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಸಾವಿರ 3.ಕಮಲ
5.ತಿಗರಿ 6.ಕಿಟಕಿ
7.ಕುಶ 8.ಹಾವೇರಿ
10.ವಿಳಾಸ 11.ವಾಗ್ದೇವಿ
13.ನಮಾಜು 15.ಪ್ರತಿ
16.ಜನನ 17.ಚಾಣಕ್ಯ
18.ಚಮ್ಮಾರ 19.ಅಧರ

ಮೇಲಿಂದ ಕೆಳಕ್ಕೆ:

2.ವಿಕಟಕವಿ 3.ಕರಿ
4.ಲಕ್ಷ್ಮೀಶ 5.ತಿದಾಂವೇ
8.ಹಾಸನ 9.ರಿವಾಜು
12.ವಿಧಾನಸೌಧ 14.ಮಾಣಿಕ್ಯ
15.ಪ್ರಪಂಚ 17.ಚಾರ

ಸುಡೊಕು 6139

8				1				
	2	9		5		7		3
	1				3		2	
	4					8		
3			8		1			2
1	9			2				7
	8						7	
2		4	9		7	1		6
	5			3				

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6138 ಸುಡೊಕು

8	7	2	3	4	6	1	9	5
5	1	4	8	2	9	7	6	3
9	3	6	5	1	7	2	8	4
3	8	9	1	6	5	4	2	7
4	2	1	9	7	3	8	5	6
6	5	7	2	8	4	3	1	9
7	4	8	6	9	2	5	3	1
1	9	5	7	3	8	6	4	2
2	6	3	4	5	1	9	7	8

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಶನಿವಾರ ಜುಲೈ 27, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ಸಪ್ತಮಿ ಗಂ. 21-20 ನಕ್ಷತ್ರ: ರೇವತಿ ಗಂ. 13-00 ಯೋಗ: ಧೃತಿ ಗಂ. 22-44 ಕರಣ: ವಿಷ್ಟಿ ಗಂ. 10-23, ಕರ್ಕಾಟಕ ಮಾಸದ 11 ನೇ ದಿನ, ಮಳೆನಕ್ಷತ್ರ: ಪುಷ್ಯ 3.
ರಾಹುಕಾಲ: ಬೆಳಿಗ್ಗೆ 09-00 – 10-30
ಸೂರ್ಯೋದಯ: 06-18 **ಸೂರ್ಯಾಸ್ತ:** 06-56
ಮುಸ್ಲಿಂ ದಿನಾಂಕ: 17 ಮೊಹರಮ್
ಅದೃಷ್ಟ ಸಂಖ್ಯೆ: 4, 9

ಮೇಷ: ಪ್ರಭಾವಿ ವ್ಯಕ್ತಿಗಳೊಂದಿಗೆ ಸಂಪರ್ಕ ಉಪಕಾರಕ್ಕಿಂತ ತೊಂದರೆಗೆ ಕಾರಣವಾಗುವುದು. ದೀನರ ಸೇವೆಯಿಂದ ಅದೃಷ್ಟ ಇಮ್ಮಡಿಗೊಳ್ಳಲಿದೆ. ಆಲಂಕಾರಿಕ ವಸ್ತು ಖರೀದಿಗೆ ಹಣ ವಿನಿಯೋಗಿಸುವಿರಿ.

ವೃಷಭ: ಶ್ರದ್ಧೆ, ತಾಳ್ಮೆ ಹಾಗೂ ಹಿಂದಿನ ಸೋಲು ಹೇಳಿಕೊಟ್ಟ ಪಾಠದಿಂದ ಕಾರ್ಯ ಸಿದ್ಧಿಯಾಗಲಿದೆ. ಕೊಟ್ಟ ಮಾತು ಉಳಿಸಿಕೊಳ್ಳಲು ಶ್ರಮಿಸಿ. ಕುಟುಂಬ ಸದಸ್ಯರ ಆರೋಗ್ಯದ ಬಗೆಗಿನ ಚಿಂತೆ ತಪ್ಪಿದ್ದಲ್ಲ.

ಮಿಥುನ: ದೈವಾನುಗ್ರಹ ನಿಮ್ಮ ಪಾಲಿಗಿದ್ದು, ತೊಂದರೆಗಳನ್ನು ನಿವಾರಿಸಿ ವೃತ್ತಿರಂಗದಲ್ಲಿ ಉತ್ತಮ ರೀತಿಯಲ್ಲಿ ಮುಂದುವರಿಯಲು ಪೂರಕವಾಗುತ್ತದೆ. ಕಾರ್ಖಾನೆ ಕೆಲಸಗಾರರ ಬೇಡಿಕೆಗಳು ಇತ್ಯರ್ಥವಾಗಲಿವೆ.

ಕರ್ಕಾಟಕ: ಗುರಿ ಸಾಧನೆಗೆ ಅವಿರತ ಶ್ರಮ ಹಾಗೂ ಆರ್ಥಿಕ ಬಲ ಅಗತ್ಯ ಮತ್ತು ಅನಿವಾರ್ಯವಾಗುವುದು. ಹಾಗಾಗಿ ಆಲಸ್ಯವನ್ನು ಬಿಟ್ಟು ಶ್ರದ್ಧೆಯಿಂದ ಸಿದ್ಧತೆ ನಡೆಸುವುದು ಒಳಿತು.

ಸಿಂಹ: ಕೋಪವನ್ನು ನಿಯಂತ್ರಿಸದಿದ್ದರೆ ಸಹೋದರರು ಮತ್ತು ಸ್ನೇಹಿತರು ಎದುರಾಳಿಗಳಾಗುವ ಸಂಭವವಿದೆ. ಸ್ವಪ್ರಯತ್ನದಿಂದ ಶ್ರಮಿಸಿದಲ್ಲಿ ಆರ್ಥಿಕ ಬೆಳವಣಿಗೆ ಉಂಟಾಗುವುದು.

ಕನ್ಯಾ: ಕಾರ್ಯಕ್ಷೇತ್ರದಲ್ಲಿ ಶಾಂತಚಿತ್ತದಿಂದ ವ್ಯವಹರಿಸಿದರೆ ಉತ್ತಮ ಫಲಿತಾಂಶ ಸಿಗಲಿದೆ. ವೃತ್ತಿ ಹಾಗೂ ಪ್ರವೃತ್ತಿಗಳಲ್ಲಿ ಸಮತೋಲನ ಕಾಯ್ದುಕೊಳ್ಳಿ. ಮಕ್ಕಳ ಶೈಕ್ಷಣಿಕ ವಿಚಾರದಲ್ಲಿ ಮುತುವರ್ಜಿ ವಹಿಸಿ.

ತುಲಾ: ಮನೆಯಲ್ಲಿನ ಸಂಭ್ರಮಾಚರಣೆಯಿಂದಾಗಿ ಅಥವಾ ವೃಥಾ ತಿರುಗಾಟದಿಂದಾಗಿ ಖರ್ಚು ಹೆಚ್ಚಲಿದೆ. ಏನನ್ನೇ ಆಗಲಿ ಸಾಧಿಸಿ ತೋರಿಸುವ ಶಕ್ತಿ ಸಾಮರ್ಥ್ಯವಿರುವ ನಿಮಗೆ ಉದ್ಯೋಗದಲ್ಲಿ ಪ್ರಗತಿ ಇರುವುದು.

ವೃಶ್ಚಿಕ: ಮಹತ್ವದ ನಿರ್ಧಾರ ತೆಗೆದುಗೊಳ್ಳಲು ತಾಳ್ಮೆ ಅತಿ ಮುಖ್ಯ. ಉದ್ಯೋಗ ಬದಲಿಸುವ ಬಗ್ಗೆ ಆಳವಾಗಿ ಯೋಚಿಸುವುದು ಒಳಿತು. ನವದಂಪತಿಗಳಿಗೆ ಸಂತಾನದ ಶುಭ ಸುದ್ದಿ ಕೇಳಿ ಬರುವುದು.

ಧನು: ಯಾವುದೇ ವಿಷಯವನ್ನು ಸೋಮಾರಿತನದಿಂದಾಗಲೀ, ಆರ್ಥಿಕ ಸಮಸ್ಯೆಯಿಂದಾಗಲೀ ಮುಂದೂಡುವುದು ಸರಿಯಲ್ಲ. ದೈವಬಲವಿರುವ ಕಾರಣ ನಿಮ್ಮ ಆರ್ಥಿಕ ಪರಿಸ್ಥಿತಿ ಸುಧಾರಿಸಲಿದೆ.

ಮಕರ: ಇಟ್ಟ ಗುರಿಯನ್ನು ಸಾಧಿಸಿದ ಸಂತೃಪ್ತಿ ನಿಮಗೆ ಸಿಗಲಿದೆ. ಕನ್ಯೆಯ ವಿವಾಹದ ವಿಚಾರದಲ್ಲಿ ಶುಭವಾಗುವ ಲಕ್ಷಣವಿದೆ. ನಿಮ್ಮ ವಾಸಸ್ಥಾನ ಅಥವಾ ಉದ್ಯೋಗ ಬದಲಾಗುವ ಸಂಭವವಿದೆ.

ಕುಂಭ: ಬೆಳ್ಳಗೆ ಇರುವುದೆಲ್ಲವೂ ಹಾಲು ಎಂದು ನಂಬುವ ಮನೋಧರ್ಮದಿಂದ ಮೋಸ ಹೋಗುವಿರಿ. ಕೆಲಸವನ್ನು ಗುತ್ತಿಗೆ ನೀಡುವ ಆಲೋಚನೆ ಸಮಸ್ಯೆ ಸೃಷ್ಟಿಸಲಿದೆ. ವೃತ್ತಿ ಜೀವನದಲ್ಲಿ ಯಶಸ್ಸು ಸಿಗಲಿದೆ.

ಮೀನ: ಜವಳಿ ಉದ್ಯಮದವರಿಗೆ ರಫ್ತು ವ್ಯಾಪಾರದಿಂದ ಹೆಚ್ಚಿನ ಲಾಭ ದೊರೆಯಲಿದೆ. ಏನನ್ನಾದರೂ ಸಾಧಿಸಲೇ ಬೇಕೆಂದಿರುವ ನಿಮಗೆ ಆತ್ಮವಿಶ್ವಾಸದ ಕೊರತೆ ಕಾಣಿಸದು.

ನಡುಗಡ್ಡೆಯಾದ ಗ್ರಾಮಗಳು, ಕಾಳಜಿ ಕೇಂದ್ರ ಆರಂಭ

ಮುಳುಗಿದ ದೇಗುಲ, ಮಠ ಸುರಕ್ಷಿತ ಸ್ಥಳಕ್ಕೆ ಜನರ ಸ್ಥಳಾಂತರ


ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರದ ಮಠ ಗಲ್ಲಿಗೆ ಹಿರಣ್ಯಕೇಶಿ ನದಿ ನೀರು ನುಗ್ಗಿದ್ದರಿಂದ ಜನರು ಕಾಳಜಿ ಕೇಂದ್ರಕ್ಕೆ ತೆರಳಿದರು —ಪ್ರಜಾವಾಣಿ ಚಿತ್ರ/ಸುರೇಶ ಮಂಜರಗಿ

ಪ್ರಜಾವಾಣಿ ವಾರ್ತೆ

ಬೆಳಗಾವಿ/ಹೊಸಪೇಟೆ (ವಿಜಯನಗರ): ರಾಜ್ಯದ ಬಹುತೇಕ ಕಡೆ ಶುಕ್ರವಾರ ಮಳೆ ಸುರಿಯಿತು. ಬೆಳಗಾವಿಯ ಖಡೇಬಜಾರ್ ಮಾರುಕಟ್ಟೆಗೆ ಹೊಂದಿಕೊಂಡ ತೆಂಗಿನಕೇರಿ ಗಲ್ಲಿಯಲ್ಲಿ ನೆಲ ಮಾಳಿಗೆ ಮಳಿಗೆಗಳಿಗೆ ಅಪಾರ ಪ್ರಮಾಣದ ನೀರು ನುಗ್ಗಿ ನಾಲ್ಕು ಅಂಗಡಿಗಳ ವ್ಯಾಪಾರಸ್ಥರು ಪರದಾಡುವಂತಾಯಿತು.

ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲಿ ಮಳೆ ಮುಂದುವರಿದಿದ್ದು, ಕೃಷ್ಣಾ ನದಿಗೆ 2.16 ಲಕ್ಷ ಕ್ಯುಸೆಕ್ ನೀರು ಹರಿದು ಬರುತ್ತಿದೆ. ಕೊಯ್ನಾ ಜಲಾಶಯದ 6 ಗೇಟ್‌ಗಳ ಮೂಲಕ 40 ಸಾವಿರ ಕ್ಯುಸೆಕ್ ನೀರನ್ನು ಹೊರ ಬಿಡಲಾಗುತ್ತಿದೆ. ರಾಧಾನಗರಿ ಜಲಾಶಯದಿಂದ 10 ಸಾವಿರ ಕ್ಯುಸೆಕ್, ವಾರಣಾ ಜಲಾಶಯದಿಂದ 16 ಸಾವಿರ ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ.

ಘಟಪ್ರಭಾ ನದಿಯಲ್ಲೂ ನೀರಿನ ಪ್ರಮಾಣ ಏರಿದ್ದು ಮೂಡಲಗಿ ತಾಲ್ಲೂಕಿನ ಮಸಗುಪ್ಪಿಯ ಮಹಾಲಕ್ಷ್ಮಿ ದೇವಸ್ಥಾನವು ಶುಕ್ರವಾರ ಜಲಾವೃತಗೊಂಡಿದೆ. ಇದೇ ಗ್ರಾಮದ ಎಸ್‌ಸಿ ಕಾಲೊನಿಯಲ್ಲಿ ನದಿ ನೀರು ನುಗ್ಗಿದ್ದು, ಅಲ್ಲಿನ ನಿವಾಸಿಗಳಿಗೆ ಸರ್ಕಾರಿ ಪ್ರೌಢಶಾಲೆಯ ಕಾಳಜಿ ಕೇಂದ್ರದಲ್ಲಿ ಆಶ್ರಯ ನೀಡಲಾಗಿದೆ. ಸುಣಧೋಳಿ ಮಠದಲ್ಲಿ ಸಹ ನದಿಯ ನೀರು ಹೊಕ್ಕಿದ್ದು, ಜಲಾವೃತವಾಗಿದೆ. ಮಠಾಧೀಶರು ಮಠದ ಎತ್ತರ ಸ್ಥಳದಲ್ಲಿರುವ ಕೊಠಡಿಯಲ್ಲಿ ಆಶ್ರಯ ಪಡೆದಿದ್ದಾರೆ.

ಜನ,ಜಾನುವಾರು ಸ್ಥಳಾಂತರ(ಬಾಗಲಕೋಟೆ ವರದಿ): ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಮುತ್ತೂರು ಗ್ರಾಮ ಮತ್ತು ಮುಧೋಳ ತಾಲ್ಲೂಕಿನ ಮಿರ್ಜಿ ಗ್ರಾಮ ನಡುಗಡ್ಡೆಯಾಗಿವೆ. ಮುತ್ತೂರು ಗ್ರಾಮದ 17 ಕುಟುಂಬಗಳ 108 ಜನರು ಮತ್ತು 86 ಜಾನುವಾರುಗಳನ್ನು ಹಾಗೂ ಮಿರ್ಜಿ ಗ್ರಾಮದ 8 ಕುಟುಂಬಗಳ 32 ಜನರು ಮತ್ತು 8 ಜಾನುವಾರುಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ಮಿರ್ಜಿಯಲ್ಲಿನ ಕಾಳಜಿ ಕೇಂದ್ರದಲ್ಲಿ 32 ಗ್ರಾಮಸ್ಥರು ಉಳಿದಿದ್ದರೆ, ಮುತ್ತೂರು ಕೇಂದ್ರದಲ್ಲಿ ಯಾರೂ ಉಳಿದುಕೊಂಡಿಲ್ಲ.

ಹಂಪಿಯ ಚಕ್ರತೀರ್ಥ ಸಮೀಪದ ಕೋದಂಡರಾಮ, ಯಂತ್ರೋದ್ಧಾರಕ ಆಂಜನೇಯ ದೇವಸ್ಥಾನಕ್ಕೆ ಹೋಗುವ ಕಾಲುದಾರಿ ನೀರಲ್ಲಿ ಮುಳುಗಿದ್ದು, ಬದಲಿ ದಾರಿಯಲ್ಲಿ ಭಕ್ತರು ತೆರಳುತ್ತಿದ್ದಾರೆ.


ಬೆಳಗಾವಿ ಜಿಲ್ಲೆಯ ಗೋಕಾಕದಲ್ಲಿ ಶುಕ್ರವಾರ ಘಟಪ್ರಭಾ ನದಿಯ ನೀರು ಹಳೆ ದನದ ಪೇಟೆಯನ್ನು ಆವರಿಸಿತ್ತು — ಚಿತ್ರ: ಬಿ.ಪ್ರಭಾಕರ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಗಸ್ಟ್ 6ರಂದು ತುಂಗಭದ್ರಾಕ್ಕೆ ಬಾಗಿನ ಅರ್ಪಿಸುವರು. ಹಂಪಿಗೆ ಬರಲು ಪ್ರವಾಸಿಗರಿಗೆ ನಿರ್ಬಂಧ ಇಲ್ಲ. ಆದರೆ, ಜಾಗ್ರತೆ ವಹಿಸಬೇಕು
ಎಂ.ಎಸ್.ದಿವಾಕರ್, ವಿಜಯನಗರ ಜಿಲ್ಲಾಧಿಕಾರಿ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.38	1,03,327	1,02,200
ಹಾರಂಗಿ	2,859	2,855.47	20,000	20,000
ಕಬಿನಿ	2,284.00	2,282.27	27,500	30,000
ಹೇಮಾವತಿ	2,922	2,920.05	52,999	63,580
ಲಿಂಗನಮಕ್ಕಿ	1,819	1,803.27	65,147	1,853.27
ಸೂಪಾ (ಮೀ)	564	548.60	35,789	-
ಮಾಣಿ	595	584.16	7,538	-
ತುಂಗಭದ್ರಾ	1,633	1,631.98	98,702	1,16,026
ಮಲಪ್ರಭಾ	2,079.5	2,069.60	21,606	194
ಘಟಪ್ರಭಾ	2175	2,169.58	33,385	26,900
ಭದ್ರಾ	186	174.3	35,318	202
ಆಲಮಟ್ಟಿ (ಮೀ)	519.6	516.84	2,07,130	2,75,000
ನಾರಾಯಣಪುರ (ಮೀ)	492.25	490.67	2,75,000	2,90,322

*ನೆಲಮಟ್ಟದಿಂದ


ಸಕಲೇಶಪುರ ತಾಲ್ಲೂಕಿನ ಜನಾಪುರ – ವನಗೂರು ರಾಜ್ಯ ಹೆದ್ದಾರಿ 107 ರಲ್ಲಿ ಭೂಕುಸಿತವಾಗಿದ್ದು, ರಸ್ತೆಯೇ ಕೊಚ್ಚಿ ಹೋಗುವ ಆತಂಕ ಎದುರಾಗಿದೆ — ಪ್ರಜಾವಾಣಿ ಚಿತ್ರ/ಜಗದೀಶ್ ಆರ್. ಹೊರಟ್ಟಿ

ಧಾರಾಕಾರ ಮಳೆ: ಕಗ್ಗತ್ತಲಲ್ಲಿ ಮಲೆನಾಡು

ಚಿಕ್ಕಮಗಳೂರು: ಜಿಲ್ಲೆಯಲ್ಲಿ ಧಾರಾಕಾರ ಮಳೆ ಮುಂದುವರಿದಿದ್ದು, ಹಲವೆಡೆ ವಿದ್ಯುತ್ ಕಂಬ ಮತ್ತು ಮರಗಳು ಉರುಳಿ ಬಿದ್ದಿವೆ. ಮಲೆನಾಡಿನ ಗ್ರಾಮೀಣ ಭಾಗ ಕಗ್ಗತ್ತಲಲ್ಲಿ ಮುಳುಗಿದೆ. ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ.

ಮಳೆ ಜತೆಗೆ ವೇಗವಾಗಿ ಗಾಳಿಯೂ ಬೀಸುತ್ತಿದ್ದು, ಇದುವರೆಗೆ 2,443 ವಿದ್ಯುತ್ ಕಂಬಗಳು ಉರುಳಿವೆ ಎಂದು ಮೆಸ್ಕಾಂ ಅಧಿಕಾರಿಗಳು ಅಂದಾಜಿಸಿದ್ದಾರೆ. ಮಳೆ ನಡುವೆಯೂ ದುರಸ್ತಿ ಕಾರ್ಯವನ್ನು ಸಿಬ್ಬಂದಿ ಮುಂದುವರಿಸಿದ್ದಾರೆ. ಆದರೂ, ಬಾಳೆಹೊನ್ನೂರು, ಜಯಪುರ, ಕಳಸ, ಕೊಟ್ಟಿಗೆಹಾರ, ಮಾಗುಂಡಿ, ಕೊಪ್ಪ, ಎನ್.ಆರ್.ಪುರ, ಶೃಂಗೇರಿ ಸುತ್ತಮುತ್ತಲ ಹಳ್ಳಿಗಳಲ್ಲಿ 10 ದಿನಗಳಿಂದ ವಿದ್ಯುತ್ ಸಂಪರ್ಕ ಇಲ್ಲವಾಗಿದೆ. ಸಮೀಪದ ಪಟ್ಟಣಗಳಿಗೆ ತೆರಳಿ ಮೊಬೈಲ್ ಫೋನ್ ಚಾರ್ಜ್ ಮಾಡಿಕೊಳ್ಳುತ್ತಿದ್ದೇವೆ ಎಂದು ಅಲ್ಲಿಯ ಕೆಲವರು ಹೇಳಿದ್ದಾರೆ.

ನದಿಗಳು ಉಕ್ಕಿ ಹರಿಯುತ್ತಿದ್ದು, ಪ್ರವಾಹದ ಪರಿಸ್ಥಿತಿ ನಿರ್ಮಾಣವಾಗಿದೆ. ಹೊಬ್ಬಾಳೆ ಸೇತುವೆಯ ಮೇಲೆ ನೀರು ಹರಿಯುತ್ತಿದ್ದು, ಕಳಸ–ಹೊರನಾಡು ಸಂಪರ್ಕ ಕಡಿತವಾಗಿದೆ. ಕಳಸ- ಕಾರ್ಕಳ ರಾಜ್ಯ ಹೆದ್ದಾರಿಯ ಕುದುರೆಮುಖ ಬಳಿ ಭೂಕುಸಿತದಿಂದ ರಸ್ತೆಗೆ ಹಾನಿ ಆಗಿದೆ. ಹಳೆಯ ಸೇತುವೆ ಪಕ್ಕದಲ್ಲೇ ಕುಸಿತ ಉಂಟಾಗಿದೆ.

ಕಡೂರು ತಾಲ್ಲೂಕಿನ ಐತಿಹಾಸಿಕ ಮಧಗದ ಕೆರೆ ಮತ್ತು ತರೀಕೆರೆಯ ದೊಡ್ಡ ಕೆರೆಗಳು ಭರ್ತಿಯಾಗಿ ಕೋಡಿಯಲ್ಲಿ ನೀರು ಹರಿಯುತ್ತಿದ್ದು, ರೈತರಲ್ಲಿ ಸಂತಸ ಮೂಡಿಸಿದೆ. ಆಲ್ದೂರು ಸಮೀಪದ ಬನ್ನೂರು ಗ್ರಾಮದ ಬಳಿ ಚಿಕ್ಕಮಗಳೂರು–ಶೃಂಗೇರಿ ರಾಜ್ಯ ಹೆದ್ದಾರಿಯಲ್ಲಿ ಚಲಿಸುತ್ತಿದ್ದ ಕಾರಿನ ಮೇಲೆ ಮರ ಬಿದ್ದಿದೆ. ಕಾರಿನಲ್ಲಿ ಪಯಣಿಸುತ್ತಿದ್ದ ಇಬ್ಬರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಕರಾವಳಿಯಲ್ಲೂ ಮಳೆ: ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಶುಕ್ರವಾರ ಇಡೀದಿನ ಆಗಾಗ ಧಾರಾಕಾರ ಮಳೆ ಸುರಿಯಿತು. ಮಳೆಯ ಜೊತೆ ಗಾಳಿ ಅಬ್ಬರ ಜೋರಾಗಿದ್ದರಿಂದ ವಿವಿಧೆಡೆ ಹಾನಿ ಸಂಭವಿಸಿದೆ. ಬಜಪೆ ಸಮೀಪದ ಪದ್ರೆಂಗಿಯಲ್ಲಿ ರತ್ನಾಕರ್ ಎಂಬುವರ ಮನೆಯ ಮೇಲೆ ಮರ ಮುರಿದು ಬಿದ್ದು, ಕೋಣೆಯಲ್ಲಿ ಮಲಗಿದ್ದ ಆಯುಷ್ (6) ಎಂಬ ಬಾಲಕ ಗಂಭೀರವಾಗಿ ಗಾಯಗೊಂಡಿದ್ದಾನೆ. ರತ್ನಾಕರ್ ಅವರ ಸಹೋದರ ಮತ್ತು ಅವರ ಪತ್ನಿಗೂ ಗಾಯಗಳಾಗಿವೆ.

ಉಡುಪಿ ಜಿಲ್ಲೆಯ ಕೆಲವೆಡೆ ಭಾರಿ ಗಾಳಿ ಸಹಿತ ಮಳೆಯಾಗಿದೆ.

ಭೂಕುಸಿತ: ರೈಲು ಮಾರ್ಗ ಬದಲಾವಣೆ

ಹಾಸನ: ಜಿಲ್ಲೆಯ ಯಡಕುಮೇರಿ ಮತ್ತು ಕಡಗರವಳ್ಳಿ ನಡುವೆ ಭೂಕುಸಿತ ಸಂಭವಿಸಿದ್ದು, ಶುಕ್ರವಾರ ಬೆಂಗಳೂರು–ಮಂಗಳೂರು ನಡುವಿನ ಒಂದು ರೈಲು ಸಂಚಾರ ರದ್ದಾಗಿದ್ದು, ಕೆಲವು ರೈಲುಗಳ ಮಾರ್ಗ ಬದಲಾವಣೆ ಮಾಡಲಾಗಿದೆ.

ಕಾರವಾರ–ಎಸ್‌ಎಂವಿಟಿ ಬೆಂಗಳೂರು ವಿಶೇಷ ಎಕ್ಸ್‌ಪ್ರೆಸ್ ಜುಲೈ 26ರಂದು ರದ್ದಾಗಿದೆ.

ಮಂಗಳೂರು ಸೆಂಟ್ರಲ್– ವಿಜಯಪುರ ವಿಶೇಷ ಎಕ್ಸ್‌ಪ್ರೆಸ್ ರೈಲು, ಶುಕ್ರವಾರ ಸುಬ್ರಹ್ಮಣ್ಯ ರಸ್ತೆ, ಪಡೀಲ್, ಸುರತ್ಕಲ್, ಕಾರವಾರ, ಮಡಗಾಂವ್, ಕುಲೆಮ್, ಕ್ಯಾಸಲ್ ರಾಕ್, ಲೋಂಡಾ ಮೂಲಕ ಹುಬ್ಬಳ್ಳಿಗೆ ಸಂಚರಿಸಿದೆ. ಮುರ್ಡೇಶ್ವರ–ಎಸ್‌ಎಂವಿಟಿ ಬೆಂಗಳೂರು ಎಕ್ಸ್‌ಪ್ರೆಸ್, ಕಣ್ಣೂರು–ಕೆಎಸ್‌ಆರ್ ಬೆಂಗಳೂರು ಎಕ್ಸ್‌ಪ್ರೆಸ್ , ಕಾರವಾರ–ಕೆಎಸ್‌ಆರ್ ಬೆಂಗಳೂರು ಪಂಚಗಂಗಾ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲು ಮಂಗಳೂರು ಜಂಕ್ಷನ್, ಶೋರನೂರು, ಸೇಲಂ, ಜೋಲಾರ್‌ಪೆಟ್ಟಿ ಕ್ಯಾಬಿನ್ ಮೂಲಕ ಸಂಚರಿಸಿದೆ. ಕೆಎಸ್‌ಆರ್ ಬೆಂಗಳೂರು–ಕಣ್ಣೂರು ಎಕ್ಸ್‌ಪ್ರೆಸ್ ಎಸ್‌ಎಂವಿಟಿ ಬೆಂಗಳೂರು–ಮುರ್ಡೇಶ್ವರ ಎಕ್ಸ್‌ಪ್ರೆಸ್ ರೈಲು, ಕೆಎಸ್‌ಆರ್ ಬೆಂಗಳೂರು–ಕಾರವಾರ ಪಂಚಗಂಗಾ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲು ಬೆಂಗಳೂರು, ಜೋಲಾರಪೆಟ್ಟಿ ಕ್ಯಾಬಿನ್, ಶೋರನೂರು, ಮಂಗಳೂರು ಜಂಕ್ಷನ್ ಮೂಲಕ ಸಂಚರಿಸಲಿದೆ.

ಪ್ರವಾಹದಲ್ಲಿ ಚಾಲನೆ: ಜೀಪ್ ವಶ

ಮುಖ್ಯಾಂಶಗಳು

- ಕಾವೇರಿ ನಿಸರ್ಗಧಾಮಕ್ಕೆ ಹಾಗೂ ಮಂಡ್ಯ ಜಿಲ್ಲೆಯ ಮುತ್ತತ್ತಿಗೆ ಪ್ರವೇಶ ನಿಷೇಧ
- ಬಸವಸಾಗರ ಜಲಾಶಯದಿಂದ 2.90 ಲಕ್ಷ ಕ್ಯುಸೆಕ್ ನೀರು ನದಿಗೆ
- ಕೊಡಗು: ಅಪಾಯದಮಟ್ಟ ಮೀರಿ ಹರಿಯುತ್ತಿರುವ ನದಿಗಳು

ಕಳಸ (ಚಿಕ್ಕಮಗಳೂರು): ಧಾರಾಕಾರ ಮಳೆಯಿಂದ ಕಳಸ– ಹೊರನಾಡು ರಸ್ತೆಯ ಹೆಬ್ಬೊಳೆ ಸೇತುವೆ ಮೇಲೆ ಭದ್ರಾ ನದಿ ನೀರು ಉಕ್ಕಿ ಹರಿಯುತ್ತಿದ್ದಾಗ, ಅಪಾಯ ಲೆಕ್ಕಿಸದೆ ಸೇತುವೆ ಮೇಲೆ ಜೀಪ್ ಚಲಾಯಿಸಿದ ಚಾಲಕ ಪವನ್ ಕುಮಾರ್ ವಿರುದ್ಧ ಕಳಸ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಜೀಪ್ ವಶಪಡಿಸಿಕೊಳ್ಳಲಾಗಿದೆ.

ಮುಳುಗಿದ ಸೇತುವೆ (ಕಲಬುರಗಿ ವರದಿ): ನಾರಾಯಣಪುರದ ಬಸವಸಾಗರ ಜಲಾಶಯದಿಂದ 2.90 ಲಕ್ಷ ಕ್ಯುಸೆಕ್ ನೀರನ್ನು ಕೃಷ್ಣಾ ನದಿಗೆ ಹರಿಸುತ್ತಿರುವುದರಿಂದ ಯಾದಗಿರಿ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದ್ದು, ಯಾದಗಿರಿ ಜಿಲ್ಲೆಯ ಶಹಾಪುರದಿಂದ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕು ಸಂಪರ್ಕಿಸುವ ಸೇತುವೆ ಮುಳುಗಡೆಯಾಗಿದೆ.

ಮುಂಜಾಗ್ರತಾ ಕ್ರಮವಾಗಿ ಗುರುವಾರ ರಾತ್ರಿಯಿಂದಲೇ ಪೊಲೀಸರು ಸೇತುವೆ ಮೇಲೆ ವಾಹನಗಳ ಸಂಚಾರ ನಿರ್ಬಂಧಿಸಿದ್ದರು. ಶುಕ್ರವಾರ ಮಧ್ಯಾಹ್ನದಿಂದಲೇ ನೀರು ಸೇತುವೆಯನ್ನು ಆವರಿಸಿಕೊಂಡಿತು.

ಶಹಾಪುರ ತಾಲ್ಲೂಕಿನ ಕೊಳ್ಳೂರು (ಎಂ) ಗ್ರಾಮದಿಂದ ದೇವದುರ್ಗ ತಾಲ್ಲೂಕಿನ ಹೂವಿನಹೆಡಗಿ ಮಧ್ಯದ ಸಂಪರ್ಕ ಕಡಿತವಾಗಿದೆ ಎಂದು ಶಹಾಪುರ ತಹಶೀಲ್ದಾರ್ ಉಮಾಕಾಂತ ಹಳ್ಳೆ ಮಾಹಿತಿ ನೀಡಿದ್ದಾರೆ.

ಹತ್ತಿಗೂಡುರು ಬಳಿ ಸೇತುವೆ ಸಂಚಾರ ಬಂದ್ ಆಗಿರುವ ಬಗ್ಗೆ ಬ್ಯಾರಿಕೇಡ್ ಅಳವಡಿ ಸಲಾಗಿದೆ. ಸೇತುವೆ ಮೇಲೆ ನೀರು ಹರಿಯುತ್ತಿದ್ದು, ಅಕ್ಕಪಕ್ಕದ ಜಮೀನುಗಳಿಗೆ ನೀರು ನುಗ್ಗಿದೆ. ಸೇತುವೆ ಮುಳುಗಡೆಯಿಂದಾಗಿ ದೇವದುರ್ಗದ ಮೂಲಕ ಶಹಾಪುರ, ಕಲಬುರಗಿ ಮತ್ತು ಬೀದರ್ ಕಡೆಗೆ ತೆರಳುವ ವಾಹನಗಳು ತಿಂಥಣಿ ಬ್ರಿಜ್ ಮಾರ್ಗವಾಗಿ ಸಂಚರಿಸುತ್ತಿವೆ. ಲಿಂಗಸುಗೂರು ತಾಲ್ಲೂಕಿನಲ್ಲಿ ನಾಲ್ಕು ದಿನಗಳಿಂದ ಮೂರು ಗ್ರಾಮಗಳು ಜಲಾವೃತಗೊಂಡಿವೆ. ನದಿ ತಟದ ಹೊಲಗಳಿಗೆ ನೀರು ನುಗ್ಗಿದೆ.

ತುಂಗಭದ್ರಾ ಜಲಾಶಯದಿಂದ ಸುಮಾರು ಲಕ್ಷಕ್ಕೂ ಅಧಿಕ ಕ್ಯುಸೆಕ್ ನೀರು ನದಿಗೆ ಹರಿಸಲಾಗಿದ್ದು, ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನಲ್ಲಿ ಪ್ರವಾಹ ಭೀತಿ ಇರುವ 11 ಗ್ರಾಮಗಳಲ್ಲಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ.

ರಸ್ತೆ ಕೊಚ್ಚಿಹೋಗುವ ಭೀತಿ (ಮೈಸೂರು ವರದಿ): ಮೈಸೂರು ಭಾಗದ ಮೈಸೂರು, ಕೊಡಗು, ಹಾಸನ ಮತ್ತು ಚಾಮರಾಜನಗರದಲ್ಲಿ ಮಳೆ–ನೆರೆ ಹಾವಳಿ ಮುಂದುವರಿದಿದೆ.

ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಬಿರಡಹಳ್ಳಿಯಲ್ಲಿ ಸೇತುವೆ, ಸಕಲೇಶಪುರ ತಾಲ್ಲೂಕಿನ ಮುಗಲಿ, ಹೆಬ್ಬನಹಳ್ಳಿ ಸೇತುವೆ ಮುಳುಗಡೆಯಾಗಿವೆ. ಹೊಳೆಮಲ್ಲೇಶ್ವರ ದೇವಸ್ಥಾನದ ಗರ್ಭಗುಡಿಗೆ, ಹೊಳೆನರಸೀಪುರದ ಅಗ್ನಿಶಾಮಕ ಠಾಣೆ ಹಾಗೂ ಖಾಸಗಿ ಶಾಲೆಗೆ ನೀರು ನುಗ್ಗಿದೆ. ಚನ್ನರಾಯಪಟ್ಟಣ–ಹೊಳೆನರಸೀಪುರ ರಸ್ತೆ ಜಲಾವೃತವಾಗಿದೆ.

ಗೊರೂರು ಜಲಾಶಯದಿಂದ ಒಂದು ಲಕ್ಷ ಕ್ಯುಸೆಕ್‌ಗೂ ಅಧಿಕ ನೀರನ್ನು ನದಿಗೆ ಹರಿಸುತ್ತಿದ್ದು, ಪ್ರವಾಸಿಗರ ಪ್ರವೇಶವನ್ನು ನಿರ್ಬಂಧಿಸಲಾಗಿದೆ.

ಕೊಡಗು ಜಿಲ್ಲೆಯಲ್ಲಿ ನದಿಗಳೆಲ್ಲವೂ ಅಪಾಯದಮಟ್ಟ ಮೀರಿ ಹರಿಯುತ್ತಿದೆ. ಭಾಗಮಂಡಲದ ತ್ರಿವೇಣಿ ಸಂಗಮದಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ. ಜಿಲ್ಲೆಯ ಅಂಗನವಾಡಿ, ಶಾಲೆ, ಪಿಯು ಕಾಲೇಜುಗಳಿಗೆ ಜುಲೈ 27ರಂದು ರಜೆ ಘೋಷಿಸಿದೆ. ಹಲವು ಗ್ರಾಮಗಳು ಕಗ್ಗತ್ತಲಲ್ಲಿ ಮುಳುಗಿವೆ. ಸೋಮವಾರಪೇಟೆ ಪಟ್ಟಣದಲ್ಲಿ ಕುಡಿಯುವ ನೀರಿಗೂ ಸಮಸ್ಯೆಯಾಗಿದೆ.

ಶಾಂತಳ್ಳಿ ಸಮೀಪ ಜೇಡಿಗುಂಡಿ ಬಳಿಯಲ್ಲಿ ಗುರುವಾರ ಗುಡ್ಡದಿಂದ ಮಣ್ಣು ರಸ್ತೆಗೆ ಕುಸಿದಿದ್ದ ಜಾಗದಲ್ಲೇ ಶುಕ್ರವಾರವೂ ಕೆಸರುಮಿಶ್ರಿತ ಮಣ್ಣು ಜಾರುತ್ತಲೇ ಇದ್ದು, ಶಾಂತಳ್ಳಿ -ಸುಬ್ರಹ್ಮಣ್ಯ ರಸ್ತೆ ಬಂದ್ ಆಗಿದೆ.

ಕೇರಳ- ಕುಟ್ಟ -ಶ್ರೀಮಂಗಲ ಸಂಪರ್ಕಿಸುವ ರಾಜ್ಯ ಹೆದ್ದಾರಿಯಲ್ಲಿ ಶ್ರೀಮಂಗಲದ ಸಮೀಪ ಖಾಸಗಿ ಬಸ್ ಮಣ್ಣಿನಲ್ಲಿ ಸಿಲುಕಿದ್ದು, ಸಂಚಾರ ಸ್ಥಗಿತಗೊಂಡಿದೆ. ಮಡಿಕೇರಿ– ಮೈಸೂರು ರಸ್ತೆಯಲ್ಲಿ ಸಿಂಕೋನಾ ಸಮೀಪ ಮರವೊಂದು ಉರುಳಿ ತಾಸುಗಟ್ಟಲೆ ಕಾಲ ಸಂಚಾರ ಸ್ಥಗಿತಗೊಂಡಿತ್ತು. ಇದರಿಂದ ಕಿ.ಮೀಗಟ್ಟಲೇ ವಾಹನಗಳು ಸಾಲುಗಟ್ಟಿ ನಿಂತಿದ್ದವು.

ವಿರಾಜಪೇಟೆ ತಾಲ್ಲೂಕಿನ ಕಳತ್ಮಾಡು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡಕ್ಕೆ ಮರ ಬಿದ್ದು ಹಾನಿಯಾಗಿದೆ. ಹಾರಂಗಿ ಜಲಾಶಯದಿಂದ 20 ಸಾವಿರ ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ.

ಕಬಿನಿ ಹಾಗೂ ಕಾವೇರಿ ಜಲಾಶಯಗಳಿಂದ ಭಾರಿ ಪ್ರಮಾಣದ ನೀರನ್ನು ನದಿಗಳಿಗೆ ಹರಿಸುತ್ತಿರುವುದರಿಂದ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಹಳೆ ಹಂಪಾಪುರ ಗ್ರಾಮದ ನೂರಾರು ಎಕರೆ ಕೃಷಿಭೂಮಿ ಜಲಾವೃತಗೊಂಡಿದೆ.

ಮೈಸೂರಿನ ತಲಕಾಡಿನಲ್ಲಿ ಪ್ರವಾಹ ತುರ್ತುಸ್ಥಿತಿ ಎದುರಿಸಲು ಮಾಲಂಗಿ ಗ್ರಾಮದ ಸರ್ಕಾರಿ ಶಾಲೆಯ ಎರಡು ಕೊಠಡಿಗಳಲ್ಲಿ ಕಾಳಜಿ ಕೇಂದ್ರ ಆರಂಭಿಸಲಾಗಿದೆ. ನಿಸರ್ಗಧಾಮಕ್ಕೆ ಹಾಗೂ ಮಂಡ್ಯ ಜಿಲ್ಲೆಯ ಮುತ್ತತ್ತಿಗೆ ಪ್ರವೇಶ ನಿಷೇಧಿಸಲಾಗಿದೆ.


ಹಂಪಿಯಲ್ಲಿ ತುಂಗಭದ್ರಾ ನದಿಯಲ್ಲಿ ಪೂರ್ಣ ಮುಳುಗಿರುವ ಪುರಂದರ ಮಂಟಪ. ಮೇಲ್ಭಾಗದ ಧ್ವಜ ಮಾತ್ರ ಕಾಣಿಸುತ್ತಿದೆ —ಪ್ರಜಾವಾಣಿ ಚಿತ್ರ/ ಲವ ಕೆ.


ಯಾದಗಿರಿ ಜಿಲ್ಲೆ ನಾರಾಯಣಪುರದ ಬಸವಸಾಗರ ಜಲಾಶಯದ 30 ಕ್ರಸ್ಟ್‌ಗೇಟ್‌ಗಳಿಂದ ಕೃಷ್ಣಾ ನದಿಗೆ ನೀರನ್ನು ಬಿಡುಗಡೆ ಮಾಡಿದ ಬಳಿಕ ಕಂಡ ಜಲಧಾರೆಯ ಆಕರ್ಷಕ ನೋಟ —ಚಿತ್ರ: ಶಾಂತಿನಾಥ ಪಿ. ವನಕುದರಿ

ಕಾರಿನ ಮೇಲೆ ಮರ ಬಿದ್ದು ವ್ಯಕ್ತಿ ಸಾವು

ಸಿದ್ದಾಪುರ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ಗುಡ್ಡೆಕಣದ ಬಳಿ ಶುಕ್ರವಾರ ಕಾರಿನ ಮೇಲೆ ಮರ ಬಿದ್ದು, ಅದರಲ್ಲಿದ್ದ ದೇವರಾಜ ಅಯ್ಯಪ್ಪ ನಾಯ್ಕ (59) ಎಂಬುವರು ಮೃತಪಟ್ಟಿದ್ದಾರೆ. 'ಅನಾರೋಗ್ಯದಿಂದ ಬಳಲುತ್ತಿದ್ದ ಸಂಬಂಧಿಕರನ್ನು ಭೇಟಿಯಾಗಲು ದೇವರಾಜ ಅವರು ಕಾರಿನಲ್ಲಿ ಹೋಗುತ್ತಿದ್ದ ವೇಳೆ ಅವಘಡ ಸಂಭವಿಸಿದೆ' ಎಂದು ಪೊಲೀಸರು ತಿಳಿಸಿದ್ದಾರೆ.


ಕೊಡಗು ಜಿಲ್ಲೆಯ ಶಾಂತಳ್ಳಿ ಸಮೀಪ ಜೇಡಿಗುಂಡಿ ಬಳಿ ಶುಕ್ರವಾರ ಮತ್ತೆ ಗುಡ್ಡದ ಮಣ್ಣು ರಸ್ತೆಗೆ ಜಾರಿ ಬಿದ್ದಿತ್ತು


ತುಂಗಭದ್ರಾ ಜಲಾಶಯದಿಂದ ನದಿಗೆ ನೀರು ಬಿಟ್ಟಿದ್ದರಿಂದ ಕೊಪ್ಪಳ ಜಿಲ್ಲೆ ಕಾರಟಗಿ ತಾಲ್ಲೂಕಿನ ಬೆನ್ನೂರು ಬಳಿಯ ಹೊಳೆ ಬಸವೇಶ್ವರ ದೇವಸ್ಥಾನವು ಜಲಾವೃತವಾದ ದೃಶ್ಯ

ಭದ್ರೆಗೆ ನೀರು ಸಾರ್ವಜನಿಕರಿಗೆ ಎಚ್ಚರಿಕೆ

ಶಿವಮೊಗ್ಗ: ಲಕ್ಕವಳ್ಳಿ ಬಳಿಯ ಭದ್ರಾ ಜಲಾಶಯ ಶೀಘ್ರ ಭರ್ತಿ ಆಗಬಹುದು. ಯಾವುದೇ ಕ್ಷಣದಲ್ಲಿ ಜಲಾಶಯದಿಂದ ನದಿಗೆ ನೀರು ಹರಿಸುವ ಸಾಧ್ಯತೆ ಇರುವುದರಿಂದ ಭದ್ರಾ ನದಿಪಾತ್ರದಲ್ಲಿನ ತಗ್ಗುಪ್ರದೇಶದ ನಿವಾಸಿಗಳು ಜಾನುವಾರುಗಳೊಂದಿಗೆ ಸುರಕ್ಷಿತ ಪ್ರದೇಶಕ್ಕೆ ತೆರಳುವಂತೆ ಕರ್ನಾಟಕ ನೀರಾವರಿ ನಿಗಮದ ಪ್ರಕಟಣೆ ತಿಳಿಸಿದೆ.

'ನನ್ನ ಅವಧಿಯ ತೀರ್ಮಾನವಲ್ಲ'

ಒಂದನೇ ಪುಟದಿಂದ...

'ಬದಲಿ ನಿವೇಶನ ಹಂಚಿಕೆಯಲ್ಲಿ ನಾನಾಗಲೀ, ನನ್ನ ಪತ್ನಿಯಾಗಲೀ ಅಥವಾ ಬಾಮೈದ ಬಿ.ಎಂ. ಮಲ್ಲಿಕಾರ್ಜುನ ಸ್ವಾಮಿ ಅವರಾಗಲೀ ಯಾವುದೇ ಪಾತ್ರವನ್ನೂ ವಹಿಸಿಲ್ಲ' ಎಂದು ಹೇಳಿದರು.

'ಪಾರ್ವತಿ ಅವರಿಗೆ 3 ಎಕರೆ 16 ಗುಂಟೆ ಜಮೀನಿಗೆ ಶೇಕಡ 50:50ರ ಅನುಪಾತದಲ್ಲಿ ಪರಿಹಾರ ರೂಪದಲ್ಲಿ ಬದಲಿ ನಿವೇಶನ ನೀಡುವ ನಿರ್ಧಾರವನ್ನು ಮುಡಾ ಆಡಳಿತ ಮಂಡಳಿ 2020ರಲ್ಲಿ ಕೈಗೊಂಡಿತ್ತು. ಆಗ, ಬಿಜೆಪಿ ಶಾಸಕರಾಗಿದ್ದ ಎಸ್.ಎ. ರಾಮದಾಸ್, ಎಲ್. ನಾಗೇಂದ್ರ, ಜೆಡಿಎಸ್ ಶಾಸಕರಾದ ಜಿ.ಟಿ. ದೇವೇಗೌಡ, ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯರಾಗಿದ್ದ ಮರಿತಿಬ್ಬೇಗೌಡ ಪ್ರಾಧಿಕಾರದ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ, ನಿರ್ಣಯವನ್ನು ಅನುಮೋದಿಸಿದ್ದರು' ಎಂದು ದಾಖಲೆಗಳನ್ನು ಪ್ರದರ್ಶಿಸಿದರು.

ಅರ್ಧ ಪರಿಹಾರ: 'ಮುಡಾ ಇದೇ ರೀತಿಯಲ್ಲಿ ಸುಂದರಮ್ಮ ಎಂಬವರ 2 ಎಕರೆ 17 ಗುಂಟೆ ಜಮೀನನ್ನು ಒತ್ತುವರಿ ಮಾಡಿ ಬಡಾವಣೆ ನಿರ್ಮಿಸಿತ್ತು. ಅವರಿಗೆ ಜಮೀನಿನ ಪೂರ್ಣ ವಿಸ್ತೀರ್ಣದಷ್ಟು ಬದಲಿ ಜಮೀನು ನೀಡುವಂತೆ ಹೈಕೋರ್ಟ್ ಆದೇಶಿಸಿತ್ತು. ಆ ಪ್ರಕಾರವೇ ಪೂರ್ಣ ವಿಸ್ತೀರ್ಣದಷ್ಟು ಬದಲಿ ನಿವೇಶನ ನೀಡಲಾಗಿತ್ತು. ನಮ್ಮ ಕುಟುಂಬಕ್ಕೆ ಅರ್ಧದಷ್ಟು ಪರಿಹಾರವನ್ನು ಮಾತ್ರ ನೀಡಿದೆ' ಎಂದು ಸಿದ್ದರಾಮಯ್ಯ ಹೇಳಿದರು.

'ಬದಲಿ ನಿವೇಶನವನ್ನು ಯಾವ ಬಡಾವಣೆಯಲ್ಲಿ ನೀಡಬೇಕು ಎಂಬ ಆಯ್ಕೆಯನ್ನು ನಮ್ಮ ಕುಟುಂಬದ ಯಾರೊಬ್ಬರೂ ಮುಡಾ ಮುಂದೆ ಇಟ್ಟಿರಲಿಲ್ಲ. ಬೇರೆ ಬಡಾವಣೆಗಳಲ್ಲಿ ನಿವೇಶನಗಳ ಲಭ್ಯತೆ ಇಲ್ಲದ ಕಾರಣದಿಂದ ವಿಜಯನಗರ ಬಡಾವಣೆಯಲ್ಲಿ ನೀಡಿದ್ದಾರೆ' ಎಂದರು.

ಭೂಸ್ವಾಧೀನ ಪ್ರಕ್ರಿಯೆಯಿಂದ ಜಮೀನನ್ನು ಕೈಬಿಟ್ಟ ಬಳಿಕ ತಮ್ಮ ಬಾಮೈದ ಮಲ್ಲಿಕಾರ್ಜುನಸ್ವಾಮಿ ಖರೀದಿಸಿದ್ದರು. ಬಳಿಕ ಪಾರ್ವತಿ ಅವರಿಗೆ ದಾನಪತ್ರದ ಮೂಲಕ ನೀಡಿದ್ದರು. ಖರೀದಿ, ವರ್ಗಾವಣೆ, ಪರಿಹಾರ ಕೋರಿರುವುದು, ಬದಲಿ ನಿವೇಶನ ಹಂಚಿಕೆ ಯಾವ ಪ್ರಕ್ರಿಯೆಯಲ್ಲೂ ಕಾನೂನು ಉಲ್ಲಂಘಿಸಿಲ್ಲ ಎಂದು ತಿಳಿಸಿದರು.


ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಮಸಗುಪ್ಪಿಯ ಮಹಾಲಕ್ಷ್ಮಿ ದೇವಸ್ಥಾನವು ಶುಕ್ರವಾರ ಘಟಪ್ರಭಾ ನದಿಯಿಂದ ಜಲಾವೃತವಾಗಿತ್ತು – ಪ್ರಜಾವಾಣಿ ಚಿತ್ರ/ಬಾಲಶೇಖರ ಬಂದಿ


ಶಿವಮೊಗ್ಗ ಜಿಲ್ಲೆ ಮುಪ್ಪಾನೆ ಬಳಿಯ ಶರಾವತಿ ಹಿನ್ನೀರಿನಲ್ಲಿ ಭಾರಿ ಗಾಳಿಯಿಂದ ತೇಲಿಹೋಗಿದ್ದ ಲಾಂಚ್ ಅನ್ನು ಸಿಬ್ಬಂದಿ ದಡಕ್ಕೆ ಎಳೆದು ತಂದರು

ಅರ್ಜುನ್ ಪತ್ತೆಗೆ ಕೇರಳ 'ಒತ್ತಡ'

● ಗಣಪತಿ ಹೆಗಡೆ

ಕಾರವಾರ: ಶಿರೂರು ಗುಡ್ಡ ಕುಸಿತ ದುರಂತದಲ್ಲಿ ಗಂಗಾವಳಿ ನದಿಯಲ್ಲಿ ಸಿಲುಕಿದ ಕೇರಳದ ಲಾರಿಯನ್ನು ಹೊರತೆಗೆಯಲು ಮತ್ತು ಚಾಲಕ ಅರ್ಜುನ್ ಪತ್ತೆ ಮಾಡಲು ಸತತ 11 ದಿನಗಳಿಂದ ಪ್ರಯತ್ನ ನಡೆದಿದೆ.

ಆದರೆ, ನದಿ ರಭಸವಾಗಿ ಹರಿಯುತ್ತಿರುವ ಕಾರಣ ಕಾರ್ಯಾಚರಣೆಗೆ ಅಡ್ಡಿಯಾಗಿದೆ. ಈ ನಡುವೆ ತ್ವರಿತ ಕಾರ್ಯಾಚರಣೆಗೆ ಕೇರಳ ಸರ್ಕಾರ ಒತ್ತಡ ಹೆಚ್ಚಿಸುತ್ತಿದ್ದು, ಉತ್ತರ ಕನ್ನಡ ಜಿಲ್ಲಾಡಳಿತ ಇಕ್ಕಟ್ಟಿಗೆ ಸಿಲುಕಿದೆ.

ಜುಲೈ 16ರಂದು ಬೆಳಿಗ್ಗೆ 8.45ಕ್ಕೆ ಶಿರೂರಿನಲ್ಲಿ ಗುಡ್ಡ ಕುಸಿತ ಅವಘಡ ಸಂಭವಿಸಿತ್ತು. ಘಟನೆ ನಡೆದ 10 ದಿನದ ಬಳಿಕ ಲಾರಿಯ ಕ್ಯಾಬಿನ್ ನದಿ ದಡದಿಂದ 60 ಮೀಟರ್ ದೂರ ಮತ್ತು 5 ಮೀಟರ್ ಆಳದಲ್ಲಿ ಸಿಲುಕಿರುವುದು ಡ್ರೋನ್ ತಂತ್ರಜ್ಞಾನ ಆಧಾರಿತ ಶೋಧನ ಯಂತ್ರದಿಂದ ಗೊತ್ತಾಯಿತು. ಆದರೆ, ಚಾಲಕ ಅರ್ಜುನ್ ಸುಳಿವು ಸಿಗಲಿಲ್ಲ. ಅವರನ್ನು ಶೀಘ್ರವೇ ಪತ್ತೆ ಮಾಡುವಂತೆ ಕೇರಳ ಸರ್ಕಾರದ ಸಚಿವರು, ಶಾಸಕರು ಪಟ್ಟು ಹಿಡಿದಿದ್ದಾರೆ.

ಕೇರಳದ ಮಂಜೇಶ್ವರ ಶಾಸಕ ಎ.ಕೆ.ಅಶ್ರಫ್, ಬಾಲಾಸ್ಸೇರಿ ಶಾಸಕ ಸಚಿನ್ ದೇವ, ತಿರುವಾಂಬುಡು ಶಾಸಕ ಲಿಂಡೋ ಜೋಸೆಫ್ ಒಂದು ವಾರದಿಂದ ಶಿರೂರಿನಲ್ಲಿ ಬೀಡುಬಿಟ್ಟಿದ್ದಾರೆ. ಕೋಯಿಕ್ಕೋಡ್ ಸಂಸದ ಎಂ.ಕೆ.ರಾಘವನ್ ಭೇಟಿ ನೀಡಿದರು. ಕೇರಳದ ಲೋಕೋಪಯೋಗಿ ಇಲಾಖೆ ಸಚಿವ ಪಿ.ಎ.ಮೊಹಮ್ಮದ್ ರಿಯಾಜ್ ಸ್ಥಳಕ್ಕೆ ಭೇಟಿ ನೀಡಿ ಕಾರ್ಯಾಚರಣೆ ವೇಗಗೊಳಿಸಲು ಒತ್ತಾಯಿಸಿದ್ದಾರೆ.

'ಲಾರಿ ಮೇಲಕ್ಕೆತ್ತಲು ನೌಕದಳದ ಮುಳುಗುತಜ್ಞರು ಪ್ರಯತ್ನ ನಡೆಸಿದ್ದಾರೆ. ಆದರೆ, ನದಿಯ ರಭಸ ಪ್ರತಿ ಗಂಟೆಗೆ 6 ರಿಂದ 8 ನಾಟಿಕಲ್ ಮೈಲು ವೇಗವಿದೆ. ಕಾರ್ಯಾಚರಣೆಗೆ ಅಡ್ಡಿಯಾಗಿದೆ' ಎಂದು ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ತಿಳಿಸಿದರು.

'ಅರ್ಜುನ್ ಇದ್ದ ಲಾರಿ ನದಿಯಲ್ಲಿ ಸಿಲುಕಿರುವ ಸ್ಥಳ ಶೋಧಿಸಿದ್ದು, ಅದನ್ನು ಮೇಲಕ್ಕೆತ್ತಲು ತ್ವರಿತ ಕೆಲಸವಾಗಬೇಕು' ಎಂದು ಮಂಜೇಶ್ವರ ಶಾಸಕ ಎ.ಕೆ.ಅಶ್ರಫ್ ಹೇಳಿದರು.

ನೀರಿನ ರಭಸ ಕಡಿಮೆ ಆಗುವವರೆಗೆ ಲಾರಿ ಮೇಲೆ ಎತ್ತುವುದು ಕಷ್ಟ ಎಂದು ಮುಳುಗು ತಜ್ಞರು ಹೇಳಿದ್ದಾರೆ. ಆದರೂ, ಕಾರ್ಯಾಚರಣೆ ಮುಂದುವರೆದಿದೆ
ಕೆ.ಲಕ್ಷ್ಮಿಪ್ರಿಯಾ, ಜಿಲ್ಲಾಧಿಕಾರಿ

ದೇಶದಲ್ಲಿ ಎಷ್ಟೋ ದುರಂತ ಘಟಿಸಿದಾಗ ಕಾರ್ಯಾಚರಣೆ ನಡೆದಿದೆ. ನದಿಯಲ್ಲಿ ಸಿಲುಕಿದ ಲಾರಿ ಮತ್ತು ಚಾಲಕ ಅರ್ಜುನ್ ಹುಡುಕಲು ಕಾರ್ಯಾಚರಣೆಯ ಅಗತ್ಯವಿದೆ
ಎ.ಕೆ.ಅಶ್ರಫ್, ಶಾಸಕ, ಮಂಜೇಶ್ವರ

ಧ್ರುವ್ ಎಂ.ಪಾಟೀಲ, ವೈಶಾಲಿ ಕುಲಕರ್ಣಿ ಸದಸ್ಯರಾಗಿ ನೇಮಕ

ವನ್ಯಜೀವಿ ಮಂಡಳಿಗೆ ಪಾಟೀಲ, ಕುಲಕರ್ಣಿ ಮಕ್ಕಳು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ತಜ್ಞರು, ಪರಿಸರವಾದಿಗಳ ಕೋಟಾದಡಿ ಅವಕಾಶ
- ಮೂರು ವರ್ಷಗಳ ಅವಧಿಗೆ ಮಂಡಳಿಯ ಪುನರ್ ರಚನೆ

ಬೆಂಗಳೂರು: ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರ ಮಗ ಧ್ರುವ್ ಎಂ.ಪಾಟೀಲ ಮತ್ತು ಧಾರವಾಡ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಅವರ ಮಗಳು ವೈಶಾಲಿ ಕುಲಕರ್ಣಿ ಅವರನ್ನು ರಾಜ್ಯ ವನ್ಯಜೀವಿ ಮಂಡಳಿ ಸದಸ್ಯರನ್ನಾಗಿ ನೇಮಿಸಲಾಗಿದೆ.

ಮೂರು ವರ್ಷಗಳ ಅವಧಿಗೆ ಮಂಡಳಿಯನ್ನು ಪುನರ್ ರಚನೆ ಮಾಡಲಾಗಿದ್ದು, ತಜ್ಞರು ಮತ್ತು ಪರಿಸರವಾದಿಗಳ ಕೋಟಾದಡಿ ಶಾಸಕ ಮತ್ತು ಸಚಿವರ ಮಕ್ಕಳಿಗೆ ಅವಕಾಶ ಕಲ್ಪಿಸಲಾಗಿದೆ.

ಮುಖ್ಯಮಂತ್ರಿಯು ಮಂಡಳಿಗೆ ಅಧ್ಯಕ್ಷರಾದರೆ, ಅರಣ್ಯ ಸಚಿವರು ಉಪಾಧ್ಯಕ್ಷರಾಗಿದ್ದಾರೆ. ಸದಸ್ಯರ ನೇಮಕಾತಿ ಎಂಟು ತಿಂಗಳಿನಿಂದ ಆಗಿರಲಿಲ್ಲ. ಸದ್ಯ ಹತ್ತು ಸದಸ್ಯರ ನೇಮಿಸಿ ಅರಣ್ಯ ಇಲಾಖೆ ಶುಕ್ರವಾರ ಆದೇಶ ಹೊರಡಿಸಿದೆ.

ಶಾಸಕರ ಕೋಟಾದಡಿ ವಿಧಾನಸಭೆಯ ಮುಖ್ಯ ಸಚೇತಕ ಅಶೋಕ ಎಂ. ಪಟ್ಟಣ, ಗುಂಡ್ಲುಪೇಟೆ ಶಾಸಕ ಎಚ್.ಎಂ.ಗಣೇಶಪ್ರಸಾದ್, ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ, ಸರ್ಕಾರೇತರ ಸಂಸ್ಥೆಗಳ ಕೋಟಾದಡಿ ವೈಲ್ಡ್‌ಲೈಫ್ ಅಸೋಸಿಯೇಷನ್ ಆಫ್ ಸೌತ್ ಇಂಡಿಯಾದ ಸುಶೀಲ್ ಗ್ಯಾನ್‌ಚಂದ್, ಟೈಗರ್ಸ್ ಅನ್‌ಲಿಮಿಟೆಡ್ ವೈಲ್ಡ್‌ಲೈಫ್ ಸೊಸೈಟಿಯ ಸೀಮಾ ಬೇಗಂ ಖಲೀಲ್, ಬೆಂಗಳೂರು ಪರಿಸರ ಟ್ರಸ್ಟ್‌ನ ಡಾ.ಆರ್.ವಿ.ದಿನೇಶ್ ಅವರನ್ನು ಮಂಡಳಿಯ ಸದಸ್ಯರನ್ನಾಗಿ ನೇಮಿಸಲಾಗಿದೆ.

ಸಂರಕ್ಷಣಾ ವಿಶೇಷ ತಜ್ಞರು, ಜೀವಿಶಾಸ್ತ್ರ ತಜ್ಞರು ಹಾಗೂ ಪರಿಸರವಾದಿಗಳ ಕೋಟಾದಡಿ ರವೀಂದ್ರ ರಘುನಾಥ್ ಹಾಗೂ ಚಿಕ್ಕಣ್ಣ (ಪರಿಶಿಷ್ಟ ಪಂಗಡದ ಕೋಟಾ), ಡಾ.ರಾಜ್‌ಕುಮಾರ್ ಎಸ್.ಅಲ್ಲೆ, ಸಂಕೇತ್ ಪೂವಯ್ಯ, ವೈಶಾಲಿ ಕುಲಕರ್ಣಿ, ಅಜಿತ್ ಕರಿಗುಡ್ಡಯ್ಯ, ವಿನಯ್ ಕುಮಾರ್ ಮಾಳಿಗೆ, ಡಾ.ಸಂತೃಪ್ತ್, ಧ್ರುವ್ ಎಂ.ಪಾಟೀಲ, ಮಲ್ಲಪ್ಪ ಎಸ್.ಅಂಗಡಿ ಅವರನ್ನು ನೇಮಕ ಮಾಡಲಾಗಿದೆ.

ಮಂಡಳಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಇಲಾಖೆಗಳು, ಸಂಸ್ಥೆಗಳ ಹತ್ತು ಅಧಿಕಾರಿಗಳು ಪದನಿಮಿತ್ತ ಸದಸ್ಯರಾಗಿದ್ದಾರೆ. ರಾಜ್ಯದ ವನ್ಯಜೀವಿ ವಿಭಾಗದ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು ಮಂಡಳಿಯ ಸದಸ್ಯ ಕಾರ್ಯದರ್ಶಿಯಾಗಿದ್ದಾರೆ.

ಯುವ ಕಾಂಗ್ರೆಸ್: ನಾಮಪತ್ರ ಸಲ್ಲಿಕೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವ ಕಾಂಗ್ರೆಸ್‌ನಲ್ಲಿ ಹೊಸ ನಾಯಕರ ಸೃಷ್ಟಿಗೆ ಆ.16ರಿಂದ ಸೆ.16ರವರೆಗೆ ಸದಸ್ಯತ್ವ ನೋಂದಣಿ ಹಾಗೂ ಪಕ್ಷದ ಆಂತರಿಕ ಚುನಾವಣೆ ನಡೆಸಲಾಗುತ್ತಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಜುಲೈ 24ರಿಂದ ನಾಮಪತ್ರ ಸಲ್ಲಿಕೆ ಆರಂಭವಾಗಿದೆ. ಆ. 2 ನಾಮಪತ್ರ ಸಲ್ಲಿಕೆಗೆ ಅಂತಿಮ ದಿನ. 3ರಿಂದ 8ರವರೆಗೆ ನಾಮಪತ್ರ ಪರಿಶೀಲನೆ. 9ರಂದು ನಾಮಪತ್ರ ಅಂತಿಮಗೊಳಿಸಲಾಗುವುದು. ಆಗಸ್ಟ್ 16ರಿಂದ ಸೆಪ್ಟಂಬರ್ 16ರವರೆ ನೋಂದಣಿ ನಡೆಯಲಿದೆ. ಸದಸ್ಯರಾಗಲು ಇಚ್ಛಿಸುವವರು ಆನ್‌ಲೈನ್ ಮೂಲಕ ಸದಸ್ಯತ್ವ ನೋಂದಣಿ ಮಾಡಿಕೊಳ್ಳಬೇಕು. ಹೆಚ್ಚಿನ ಮತ ಪಡೆಯುವವರು ಅಧ್ಯಕ್ಷರಾಗಿ ಆಯ್ಕೆಯಾಗುತ್ತಾರೆ. ಮತಗಳ ಆಧಾರದ ಮೇಲೆ ನಂತರದ ಸ್ಥಾನಗಳು ಇತರರಿಗೆ ದೊರೆಯಲಿವೆ ಎಂದು ಮಾಹಿತಿ ನೀಡಿದರು.

ಯುವ ಕಾಂಗ್ರೆಸ್ ಸದಸ್ಯತ್ವ ಪಡೆಯುವವರು 35 ವರ್ಷದ ಒಳಗಿನವರಾಗಿರಬೇಕು. ಸದಸ್ಯತ್ವ ನೋಂದಣಿ ಶುಲ್ಕ ₹50 ಕಟ್ಟಬೇಕು. ಮತದಾನ ಮಾಡುವಾಗ ಪಕ್ಷ ನೀಡಿದ ಮತದಾರರ ಗುರುತಿನ ಚೀಟಿ ಕಡ್ಡಾಯ ಎಂದರು.

ಕೊನೊಕಾರ್ಪಸ್ ನಿಷೇಧಕ್ಕೆ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾನವನಿಗೆ ಅಲರ್ಜಿ, ಉಸಿರಾಟದ ತೊಂದರೆ, ಕೆಮ್ಮು, ನೆಗಡಿ, ಅಸ್ತಮಾ ಮುಂತಾದ ತೊಂದರೆ ಉಂಟು ಮಾಡುವ ಕೊನೊಕಾರ್ಪಸ್ (Conocarpus) ಸಸಿ ಬೆಳೆಸುವುದನ್ನು ನಿಷೇಧಿಸಬೇಕು' ಎಂದು ಅರಣ್ಯ ಪಡೆ ಮುಖ್ಯಸ್ಥರಾದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಅವರು ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರೆ.

'ಪ್ರಜಾವಾಣಿ'ಯಲ್ಲಿ ಜೂನ್ 5ರಂದು ಪ್ರಕಟವಾದ 'ಆರೋಗ್ಯಕ್ಕೆ ಮಾರಕ 'ದುಬೈ ಗಿಡ' ವಿಶೇಷ ವರದಿಯನ್ನು ಉಲ್ಲೇಖಿಸಿದ್ದ ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ಅವರು, ಮುಖ್ಯ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ಅವರಿಗೆ ಜುಲೈ 2ರಂದು ಪತ್ರ ಬರೆದಿದ್ದರು. 'ವೈಜ್ಞಾನಿಕವಾಗಿ ದುಷ್ಪರಿಣಾಮ ಕಂಡುಬಂದರೆ ರಾಜ್ಯ ಎಲ್ಲ ಭಾಗದಲ್ಲೂ ಕೊನೊಕಾರ್ಪಸ್ ಸಸಿಗಳನ್ನು ನೆಡದಂತೆ ಸಾಮಾಜಿಕ ಅರಣ್ಯ ವಿಭಾಗಕ್ಕೆ ಸ್ಪಷ್ಟ ಸೂಚನೆ ನೀಡಬೇಕು' ಎಂದು ಸೂಚಿಸಿದ್ದರು.

ಈ ಬಗ್ಗೆ ಪರಿಶೀಲನೆ ನಡೆಸಿರುವ ಅರಣ್ಯ ಪಡೆ ಮುಖ್ಯಸ್ಥರು, 'ಇತರೆ ಕೆಲವು ರಾಜ್ಯಗಳು ಈ ಗಿಡವನ್ನು ನಿಷೇಧಿಸಿವೆ. ಹಲವು ಸಂಶೋಧನಾ ಅಧ್ಯಯನಗಳಲ್ಲಿ ಕೊನೊಕಾರ್ಪಸ್ (ದುಬೈ ಟ್ರೀ) ಋಣಾತ್ಮಕ ಪರಿಣಾಮಗಳನ್ನು ಹೊಂದಿರುವ ವರದಿ ನೀಡಿವೆ. ಅರಣ್ಯ ಸಸ್ಯಕ್ಷೇತ್ರ, ರಸ್ತೆ ಬದಿ, ಅರಣ್ಯ ನೆಡುತೋಪು, ಇತರೆ ಅರಣ್ಯ ಪ್ರದೇಶ ಹಾಗೂ ಇತರೆಡೆ ಕೊನೊಕಾರ್ಪಸ್ ಸಸಿ ಬೆಳೆಸುವುದನ್ನು ನಿಷೇಧಿಸಿ ಸರ್ಕಾರ ಆದೇಶ ಹೊರಡಿಸಬಹುದು' ಎಂದು ಇದೇ 19ರಂದು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

ವೈದ್ಯನಾಗಿದ್ದರೆ ಸಿ.ಎಂ ಆಗ್ತಿರಲಿಲ್ಲ: ಸಿದ್ದರಾಮಯ್ಯ

ಮೈಸೂರು: 'ನಾನೂ ವೈದ್ಯನಾಗಬೇಕು ಅಂದುಕೊಂಡಿದ್ದೆ. ಸೀಟು ಸಿಗದೆ ಆಗಲಿಲ್ಲ. ಹೀಗಾಗಿ ನಾನು ಮುಖ್ಯಮಂತ್ರಿಯಾಗಲು ಸಾಧ್ಯವಾಯಿತು. ವೈದ್ಯನಾಗಿದ್ದರೆ ರಾಜಕೀಯಕ್ಕೆ ಬರಲು ಸಾಧ್ಯವೇ ಆಗುತ್ತಿರಲಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನೆನಪು ಮಾಡಿಕೊಂಡರು.

ಇಲ್ಲಿನ ವಿಶ್ವೇಶ್ವರ ನಗರದ 'ಜಿ.ಸಿ ಸ್ಪೋರ್ಟ್ಸ್ ಮೆಡಿಸಿನ್ ಸೆಂಟರ್ ಹಾಗೂ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ'ಯಲ್ಲಿ ಆರಂಭಿಸಿರುವ 'ರೊಬೊಟಿಕ್ ಮೊಣಕಾಲು ಮತ್ತು ಸೊಂಟದ ಜಾಯಿಂಟ್ ಮರುಜೋಡಣೆ ಕೇಂದ್ರ'ವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

'ಆ.3 ಬಂದರೆ ನನಗೆ 77 ವರ್ಷ ವಯಸ್ಸಾಗುತ್ತದೆ. ಆದ್ದರಿಂದ ಸಹಜವಾಗಿಯೇ ಆಗಾಗ ಮಂಡಿ ನೋವು ಕಾಣಿಸಿಕೊಳ್ಳುತ್ತಿರುತ್ತದೆ. ಒಂದೊಮ್ಮೆ ಚಿಕಿತ್ಸೆಯ ಅಗತ್ಯ ಕಂಡುಬಂದರೆ ಈ ಆಸ್ಪತ್ರೆಗೇ ಬರುತ್ತೇನೆ' ಎಂದು ತಿಳಿಸಿದರು.


ಪಾಲಿಕೆ ಠೇವಣಿಗೆ ಲೈವ್ ಇ-ಬಿಡ್ಡಿಂಗ್

ಪ್ರಜಾವಾಣಿ ವಾರ್ತೆ

ಮಂಗಳೂರು: ಮಂಗಳೂರು ಮಹಾನಗರ ಪಾಲಿಕೆ ವಿವಿಧ ಬ್ಯಾಂಕ್‌ಗಳಲ್ಲಿ ಇಟ್ಟಿದ್ದ ₹110 ಕೋಟಿ ಮೊತ್ತದ ಠೇವಣಿ ಇ- ಬಿಡ್ಡಿಂಗ್ ಮೂಲಕ ಒಂದೇ ಬ್ಯಾಂಕ್‌ಗೆ ವರ್ಗಾವಣೆಯಾಗುತ್ತಿದೆ.

ವಿವಿಧ ಮೂಲಗಳಿಂದ ಸಂಗ್ರಹವಾಗಿದ್ದ ಪಾಲಿಕೆಯ ಆದಾಯವನ್ನು ಹಲವಾರು ರಾಷ್ಟ್ರೀಕೃತ ಮತ್ತು ಖಾಸಗಿ ಬ್ಯಾಂಕ್‌ಗಳಲ್ಲಿ ನಿಶ್ಚಿತ ಠೇವಣಿಯಾಗಿ ಇಡಲಾಗಿತ್ತು. ಎಫ್.ಡಿ ಬಾಂಡ್‌ಗಳನ್ನು ಪರಿಶೀಲಿಸಿದಾಗ ಬಡ್ಡಿದರ ಕಡಿಮೆ ಇರುವುದು ಕಂಡುಬಂತು. ಇದರಿಂದ ಪಾಲಿಕೆಗೆ ಆಗುತ್ತಿರುವ ನಷ್ಟವನ್ನು ತಡೆಯಲು, ಇ- ಬಿಡ್ಡಿಂಗ್ ಮಾಡುವ ನಿರ್ಧಾರ ಕೈಗೊಂಡು, ಜುಲೈ 18ರಂದು ಲೈವ್ ಇ- ಬಿಡ್ಡಿಂಗ್ ನಡೆಸಲಾಯಿತು. ಒಂಬತ್ತು ರಾಷ್ಟ್ರೀಕೃತ ಹಾಗೂ 10 ಖಾಸಗಿ ಬ್ಯಾಂಕ್‌ಗಳು ಬಿಡ್‌ನಲ್ಲಿ ಭಾಗವಹಿಸಿದ್ದವು. ಅತಿ ಹೆಚ್ಚು ಬಡ್ಡಿದರ ನಿಗದಿಪಡಿಸಿದ (ಶೇ 7.9) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಎಲ್ಲ ಹಣ ಠೇವಣಿ ಇಡಲಾಗುತ್ತಿದೆ. ಜುಲೈ 28ರಿಂದ ಖಾತೆ ವರ್ಗಾವಣೆ ಪ್ರಕ್ರಿಯೆಗಳು ಪ್ರಾರಂಭವಾಗಲಿವೆ ಎಂದು ಪಾಲಿಕೆ ಆಯುಕ್ತ ಆನಂದ್ ಸಿ.ಎಲ್. 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಸಿಕ್ಕಿಂನಲ್ಲಿ ಬೀದರ್ ಯೋಧ ಸಾವು


ಅನಿಲ್

ಕಮಲನಗರ (ಬೀದರ್ ಜಿಲ್ಲೆ): ಸಿಕ್ಕಿಂ ಗಡಿ ಭಾಗದ ಹಿಮ ಪ್ರದೇಶದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಆರೋಗ್ಯದಲ್ಲಿ ಏರುಪೇರಾಗಿ ತಾಲ್ಲೂಕಿನ ಕೊರ್ಯಾಳ್ ಗ್ರಾಮದ ಯೋಧ ಅನಿಲ್ ಕುಮಾರ್ ಉಮಾಕಾಂತ ರಾವ್ ನವಾಡೆ (40) ಶುಕ್ರವಾರ ಬೆಳಗಿನ ಜಾವ ಮೃತಪಟ್ಟಿದ್ದಾರೆ.

ಯೋಧನ ಪಾರ್ಥೀವ ಶರೀರ ಭಾನುವಾರ (ಜು.28) ಸ್ವಗ್ರಾಮಕ್ಕೆ ಬರುವ ಸಾಧ್ಯತೆ ಇದೆ ಎಂದು ತಹಶೀಲ್ದಾರ್ ಅಮೀತಕುಮಾರ ಕುಲಕರ್ಣಿ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ. ಯೋಧನಿಗೆ ತಂದೆ-ತಾಯಿ, ನಾಲ್ವರು ಸಹೋದರರು, ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ಅನಿಲ್ ಕುಮಾರ್ ಅವರು 2004ರಲ್ಲಿ ಭಾರತೀಯ ಸೇನೆಗೆ ಸೇರಿದ್ದರು. ಹವಾಲ್ದಾರರಾಗಿ ಸಿಕ್ಕಿಂ ಗಡಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು ಎಂದು ತಿಳಿಸಿದ್ದಾರೆ.

ವಾಲ್ಮೀಕಿ ನಿಗಮದ ಅಕ್ರಮ: ಫ್ಲ್ಯಾಟ್, ಚಿನ್ನ ಖರೀದಿಸಿದ್ದ ಆರೋಪಿ ವರ್ಮಾ

10 ಕೆ.ಜಿ ಚಿನ್ನದ ಬಿಸ್ಕತ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಹಗರಣದ ತನಿಖೆ ಚುರುಕುಗೊಳಿಸಿರುವ ವಿಶೇಷ ತನಿಖಾ ದಳದ(ಎಸ್ಐಟಿ) ಪೊಲೀಸರು, ಹೈದರಾಬಾದ್‌ನಲ್ಲಿ ಆರೋಪಿ ಯಿಂದ ಬರೋಬ್ಬರಿ 10 ಕೆ.ಜಿ ಚಿನ್ನದಗಟ್ಟಿ ಹಾಗೂ ಚಿನ್ನದ ಬಿಸ್ಕತ್‌ಗಳನ್ನು ಜಪ್ತಿ ಮಾಡಿದ್ದಾರೆ.

ಇದೇ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ವಿಚಾರಣೆ ಮುಂದುವರಿಸಿದ್ದರೆ, ಇತ್ತ ಎಸ್ಐಟಿ ಅಧಿಕಾರಿಗಳೂ ತನಿಖೆ ತೀವ್ರಗೊಳಿಸಿದ್ದಾರೆ. ಅಕ್ರಮದ ಹಣದಿಂದ ಆರೋಪಿಗಳು ಖರೀದಿಸಿರುವ ಚಿನ್ನವನ್ನು ಗುರುವಾರ ರಾತ್ರಿ ವಶಕ್ಕೆ ಪಡೆದಿದ್ದಾರೆ.

'ಹೈದರಾಬಾದ್‌ನ ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ (ಎಫ್ಎಫ್‌ಸಿಸಿಎಸ್ಎಲ್) ಅಧ್ಯಕ್ಷ, ಬಂಧಿತ ಆರೋಪಿ ಸತ್ಯನಾರಾಯಣ ವರ್ಮಾ ಅವರ ಫ್ಲ್ಯಾಟ್ ಮೇಲೆ ಗುರುವಾರ ದಾಳಿಮಾಡಿದ ಎಸ್ಐಟಿ ಅಧಿಕಾರಿಗಳು, ಅಲ್ಲಿ ಬಚ್ಚಿಟ್ಟಿದ್ದ 10 ಕೆ.ಜಿ.ಗೂ ಹೆಚ್ಚು ಚಿನ್ನ ಜಪ್ತಿ ಮಾಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.


ಸತ್ಯನಾರಾಯಣ ವರ್ಮಾ

'ವರ್ಮಾ ಅವರನ್ನು ಎಸ್ಐಟಿ ಅಧಿಕಾರಿಗಳು ಜೂನ್ 3ರಂದು ಹೈದರಾಬಾದ್‌ನಲ್ಲಿ ಬಂಧಿಸಿ, ಕಸ್ಟಡಿಗೆ ಪಡೆದಿದ್ದರು. ವಿಚಾರಣೆ ವೇಳೆ ಬ್ಯಾಂಕ್ ಖಾತೆಗೆ ಬಂದಿದ್ದ ಹಣದಿಂದ 35 ಕೆ.ಜಿ ಚಿನ್ನ ಖರೀದಿಸಿ, ಅದರಲ್ಲಿ 20 ಕೆ.ಜಿಯನ್ನು ಅಕ್ರಮದಲ್ಲಿ ಭಾಗಿಯಾದವರಿಗೆ ಹಂಚಿ, ಉಳಿದ 15 ಕೆ.ಜಿಯನ್ನು ಫ್ಲ್ಯಾಟ್‌ನಲ್ಲಿ ಇಟ್ಟಿರುವುದಾಗಿ ಹೇಳಿಕೆ ನೀಡಿದ್ದರು. ಕಾರ್ಯಾಚರಣೆ ನಡೆಸಿದಾಗ ಸದ್ಯ 10 ಕೆ.ಜಿ ಚಿನ್ನ ಪತ್ತೆಯಾಗಿದೆ. ಬಾಕಿ 5 ಕೆ.ಜಿ ಚಿನ್ನಕ್ಕೆ ಶೋಧ ನಡೆಸಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ಹೈದರಾಬಾದ್‌ನಲ್ಲಿ ಫ್ಲ್ಯಾಟ್ ಖರೀದಿ

ಸತ್ಯನಾರಾಯಣ ವರ್ಮಾ ಮತ್ತು ಅವರ ಸಹಚರರು ವಾಲ್ಮೀಕಿ ನಿಗಮದ ಬ್ಯಾಂಕ್ ಖಾತೆಯಿಂದ ವರ್ಗಾವಣೆ ಮಾಡಿಕೊಂಡಿದ್ದ ಹಣದಲ್ಲಿ ಹಲವು ಫ್ಲ್ಯಾಟ್‌ಗಳನ್ನು ಖರೀದಿಸಿರುವ ಮಾಹಿತಿ ಎಸ್ಐಟಿಗೆ ಲಭಿಸಿದೆ.

ಆ ಪೈಕಿ ಹೈದರಾಬಾದ್‌ನ ಸೀಮಾಪೇಟೆ, ಮೀಯಾಪುರದಲ್ಲಿ ವರ್ಮಾ ಅವರು ಎರಡು ಫ್ಲ್ಯಾಟ್ ಖರೀದಿಸಿದ್ದು, ಅದರ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ. ಬಂಧನಕ್ಕೆ ಕೆಲವೇ ದಿನಗಳಿದ್ದಾಗ ವರ್ಮಾ ಅವರು ಫ್ಲ್ಯಾಟ್ ಹಾಗೂ ಚಿನ್ನ ಖರೀದಿಸಿದ್ದರು ಎಂದು ತನಿಖಾಧಿಕಾರಿಯೊಬ್ಬರು ಮಾಹಿತಿ ನೀಡಿದರು.

ವರ್ಮಾ ಅವರ ಫ್ಲ್ಯಾಟ್‌ನಲ್ಲಿ ಈ ಹಿಂದೆ ಪರಿಶೀಲನೆ ನಡೆಸಿದಾಗ ₹8.21 ಕೋಟಿ ನಗದು ಪತ್ತೆಯಾಗಿತ್ತು. ಎಫ್ಎಫ್‌ಸಿಸಿಎಸ್ಎಲ್‌ನ 18 ಖಾತೆಗಳಿಗೆ ನಿಗಮದ ₹ 94.73 ಕೋಟಿ ಜಮೆ ಆಗಿತ್ತು. ಅಲ್ಲಿಂದ 270ಕ್ಕೂ ಹೆಚ್ಚು ನಕಲಿ ಖಾತೆಗಳನ್ನು ತೆರೆದು ಹಣ ವರ್ಗಾವಣೆ ಮಾಡಿಕೊಳ್ಳಲಾಗಿತ್ತು. ಹೈಗ್ರೌಂಡ್ಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವನ್ನು ಎಸ್ಐಟಿಗೆ ವರ್ಗಾವಣೆ ಮಾಡಲಾಗಿತ್ತು. ಇದುವರೆಗೂ 12 ಆರೋಪಿಗಳನ್ನು ಎಸ್ಐಟಿ ಬಂಧಿಸಿದೆ. ಬಂಧಿತರಿಂದ ₹14.49 ಕೋಟಿ ನಗದು ಜಪ್ತಿ ಮಾಡಿಕೊಂಡಿದೆ.

ವಿವಿಧ ಬ್ಯಾಂಕ್‌ಗಳಲ್ಲಿ ತೆರೆಯಲಾಗಿದ್ದ 217 ಖಾತೆ ಗುರುತಿಸಿ ಖಾತೆಯಲ್ಲಿದ್ದ ₹13.72 ಕೋಟಿಯ ವಹಿವಾಟು ಸ್ಥಗಿತಗೊಳಿಸಲಾಗಿದೆ. ವರ್ಮಾ ಸೇರಿ 10 ಆರೋಪಿಗಳು ಬೇರೆ ಬೇರೆ ಖಾತೆಗಳಿಗೆ ವರ್ಗಾಯಿಸಿದ್ದ ₹1.50 ಕೋಟಿಯನ್ನು ಜನರೇ ವಾಪಸ್ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ.

'ತಾವೇ ತೋಡಿದ ಬಾವಿಗೆ ಬೀಳುತ್ತಿದ್ದಾರೆ'

ಬಿಜೆಪಿ ವಿರುದ್ಧ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಡಾ ಪ್ರಕರಣ ಮುಂದಿಟ್ಟು ಮುಖ್ಯಮಂತ್ರಿ ಹಾಗೂ ರಾಜ್ಯ ಸರ್ಕಾರಕ್ಕೆ ಕಳಂಕ ತರಲು ಹೊರಟಿರುವ ಬಿಜೆಪಿ- ಜೆಡಿಎಸ್‌ಗೆ ತಕ್ಕ ಪ್ರತ್ಯುತ್ತರ ನೀಡಲಾಗುವುದು. ಯಾರು, ಯಾರು, ಯಾವ ಅವಧಿಯಲ್ಲಿ ಎಷ್ಟು ನಿವೇಶನ, ಎಲ್ಲೆಲ್ಲಿ ಪಡೆದಿದ್ದಾರೆ ಎನ್ನುವ ವಾಸ್ತವ ಬಿಚ್ಚಿಡಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಬಿಜೆಪಿ ಬೆಂಗಳೂರಿನಿಂದ ಮೈಸೂರಿಗೆ ಹಮ್ಮಿಕೊಂಡಿರುವ ಪಾದಯಾತ್ರೆ ಮೂಲಕ ಅವರು ತೋಡಿಕೊಂಡ ಬಾವಿಗೆ ಅವರೇ ಬೀಳುತ್ತಿದ್ದಾರೆ. ಅವರೇ ಹಗರಣಗಳ ಸರದಾರರು. ಅವರು ಪಾದಯಾತ್ರೆ ಆರಂಭಿಸಿದ ದಿನದಿಂದ ನಿತ್ಯವೂ ಒಂದೊಂದೇ ಹಗರಣ ಬಯಲು ಮಾಡುತ್ತೇವೆ' ಎಂದರು.



'ಪಾದಯಾತ್ರೆ ಪರಿಕಲ್ಪನೆ ಮಹಾತ್ಮ ಗಾಂಧಿ ಅವರ ಕೊಡುಗೆ. ದೇಶದಲ್ಲಿ ಪಾದಯಾತ್ರೆಯ ಹೋರಾಟ ಪರಿಚಯಿಸಿದ್ದೇ ಕಾಂಗ್ರೆಸ್ ಪಕ್ಷ. ಕಾಂಗ್ರೆಸ್ ಅಧ್ಯಕ್ಷರಾಗಿ ಗಾಂಧೀಜಿ ಅವರು ನೀಡಿದ ಕೊಡುಗೆಯನ್ನು ಇವತ್ತಿನವರೆಗೂ ಕಾಂಗ್ರೆಸ್ ಯಶಸ್ವಿಯಾಗಿ ನಿರ್ವಹಿಸಿದೆ. ಈಚೆಗೆ ನಡೆದ ಭಾರತ್ ಜೋಡೊ ನ್ಯಾಯ ಯಾತ್ರೆ ಒಂದು ಉದಾಹರಣೆ. ಬಿಜೆಪಿ ಹಲವು ಯಾತ್ರೆಗಳನ್ನು ತನ್ನ ಸ್ವಾರ್ಥಕ್ಕೆ ಬಳಸಿಕೊಂಡಿದೆ. ರಾಜ್ಯದಲ್ಲಿ ಅಸ್ತಿತ್ವ ಕಳೆದುಕೊಳ್ಳುತ್ತಿರುವ ಎರಡೂ ಪಕ್ಷಗಳು ರಾಜ್ಯ ಸರ್ಕಾರವನ್ನು ಕೆಡವಲು ಷಡ್ಯಂತ್ರ ರೂಪಿಸಿ, ಪಾದಯಾತ್ರೆ ಮಾಡುತ್ತಿದ್ದಾರೆ' ಎಂದರು.

'ದೇಶದಲ್ಲಿ ಕಾಂಗ್ರೆಸ್ ಆಡಳಿತದಲ್ಲಿರುವ ದೊಡ್ಡ ರಾಜ್ಯ ಕರ್ನಾಟಕ. ಹೀಗಾಗಿ ನಮ್ಮ ಸರ್ಕಾರವನ್ನು ಅಸ್ಥಿರಗೊಳಿಸಲು ಬಿಜೆಪಿ ಪ್ರಯತ್ನಿಸುತ್ತಿದೆ' ಎಂದರು. 'ಬಿಜೆಪಿಯವರು ಪಾದಯಾತ್ರೆಗೆ ಮುನ್ನ, ಅವರ ಕಾಲದಲ್ಲಿ ಆಗಿರುವ ಅಕ್ರಮಗಳ ಬಗ್ಗೆ ಉತ್ತರಿಸಲಿ. ಅವರ ಕಾಲದ ಅಕ್ರಮಗಳಲ್ಲಿ ಆಗ ಮುಖ್ಯಮಂತ್ರಿ ಆಗಿದ್ದ ಬಸವರಾಜ ಬೊಮ್ಮಾಯಿ ಭಾಗಿಯಾಗಿದ್ದಾರೋ, ಮಂತ್ರಿಗಳು ಭಾಗಿಯಾಗಿದ್ದರೋ, ಅಧಿಕಾರಿಗಳು ಭಾಗಿಯಾಗಿದ್ದಾರೋ ಎಂಬ ಉತ್ತರ ನೀಡಲಿ. ಬಿಜೆಪಿಯವರು ಈ ಅಕ್ರಮಗಳ ಬಗ್ಗೆ ಬಹಿರಂಗ ಚರ್ಚೆಗೆ ಬರಲಿ. ಕುಮಾರಸ್ವಾಮಿ, ಯಡಿಯೂರಪ್ಪ, ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿ, ಆರ್.ಅಶೋಕ ಯಾರಾದರೂ ಚರ್ಚೆಗೆ ಬರಲಿ. ನಾನು ಚರ್ಚೆಗೆ ಸಿದ್ಧ' ಎಂದು ಸವಾಲೆಸೆದರು.

'ಮುಡಾ' ಚರ್ಚೆಗೆ ಅವಕಾಶ ಕೊಟ್ಟಿದ್ದರೆ ಕೆಟ್ಟ ಸಂಪ್ರದಾಯಕ್ಕೆ ನಾಂದಿಯಾಗುತ್ತಿತ್ತು'

'ಮುಡಾ' ಪ್ರಕರಣದ ಚರ್ಚೆಗೆ ಅವಕಾಶ ನೀಡದ ನಿರ್ಧಾರ ಸರಿಯಾಗಿತ್ತು. ವಿರೋಧ ಪಕ್ಷಗಳು ಮಾಡಿದ ಟೀಕೆಗೆ ಬೇಸರವಾಗಿಲ್ಲ. ಒಂದು ಸ್ಥಾನದಲ್ಲಿ ಕುಳಿತಾಗ ಟೀಕೆ-ಟಿಪ್ಪಣಿ ಸಹಜ' ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮುಡಾ' ನಿವೇಶನ ಹಂಚಿಕೆ ಕುರಿತ ಚರ್ಚೆಯ ವಿಷಯದಲ್ಲಿ ಯಾವುದೇ ಜನಪರ ಕಾಳಜಿ ಇರಲಿಲ್ಲ. ಅಲ್ಲದೇ ನಿವೇಶನ ಹಲವು ವರ್ಷಗಳ ಹಿಂದೆ ಹಂಚಿಕೆಯಾಗಿವೆ. ರಾಜಕೀಯ ಕಾರಣಗಳಿಗಾಗಿ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಕೆಟ್ಟ ಸಂಪ್ರದಾಯಕ್ಕೆ ನಾಂದಿಯಾಗುತ್ತದೆ ಎಂದರು.

ಸುದ್ದಿ 2 ನಿಮಿಷ

'ಬಿಎಸ್‌ವೈ ಬಂಧನ ಬೇಡ' ಆದೇಶ ವಿಸ್ತರಿಸಿದ ಹೈಕೋರ್ಟ್

ಬೆಂಗಳೂರು: 'ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿರುದ್ಧದ ಪೋಕ್ಸೊ ಪ್ರಕರಣದಲ್ಲಿ ಪೊಲೀಸರು ಅವರನ್ನು ಬಂಧಿಸಬಾರದು ಮತ್ತು ವಿಚಾರಣೆಗೆ ಅವರ ಖುದ್ದು ಹಾಜರಾತಿಗೆ ವಿನಾಯಿತಿ ನೀಡಲಾಗಿದೆ' ಎಂಬ ಈ ಹಿಂದಿನ ಮಧ್ಯಂತರ ಆದೇಶವನ್ನು ಹೈಕೋರ್ಟ್ ವಿಸ್ತರಿಸಿದೆ.

ಪ್ರಕರಣ ರದ್ದು ಕೋರಿ ಯಡಿಯೂರಪ್ಪ ಅವರು ಸಲ್ಲಿಸಿರುವ ಅರ್ಜಿಯನ್ನು, 'ಶಾಸಕರು- ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರು ಶುಕ್ರವಾರ ವಿಚಾರಣೆ ನಡೆಸಿದರು. ಇದೇ 29ರಿಂದ ಹೈಕೋರ್ಟ್‌ನ ಜನಪ್ರತಿನಿಧಿಗಳ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣಾ ನ್ಯಾಯಪೀಠದ ರೋಸ್ಟರ್ ಬದಲಾಗುತ್ತಿರುವ ಹಿನ್ನೆಲೆಯಲ್ಲಿ ನ್ಯಾಯಮೂರ್ತಿಗಳು ಪ್ರಕರಣವನ್ನು ಮುಂದೂಡಿ ಆದೇಶಿಸಿದರು.



ಪ್ರಕರಣವೇನು?: 'ನನ್ನ ಮಗಳ ಮೇಲೆ ಅತ್ಯಾಚಾರ ನಡೆದಿದೆ, ನನಗೆ ನ್ಯಾಯ ಕೊಡಿಸಿ' ಎಂದು ಯಡಿಯೂರಪ್ಪ ಬಳಿ ಹೋಗಿದ್ದ 53 ವರ್ಷದ ಮಹಿಳೆಯೊಬ್ಬರು; 'ಯಡಿಯೂರಪ್ಪ ಅವರು ನನ್ನ ಮಗಳಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆ' ಎಂದು ಆರೋಪಿಸಿ 2024ರ ಮಾರ್ಚ್ 14ರಂದು ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು.

ಇದರನ್ವಯ ಪೊಲೀಸರು ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆ-2012ರ ಕಲಂ 8 ಮತ್ತು ಭಾರತೀಯ ದಂಡ ಸಂಹಿತೆ-1860ರ (ಐಪಿಸಿ) ಕಲಂ 354(ಎ) ಅಡಿಯಲ್ಲಿ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ಎಫ್ಐಆರ್ ದಾಖಲಿಸಿದ್ದರು.

ಸುಧಾಕರ್ ಪ್ರಕರಣ: ವಿಚಾರಣೆಯಿಂದ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಹಿಂದಕ್ಕೆ

ಬೆಂಗಳೂರು: 'ಲೋಕಸಭೆ ಚುನಾವಣೆ ವೇಳೆ ಚುನಾವಣಾ ನೀತಿ ಸಂಹಿತೆ ಜಾರಿ ಅಧಿಕಾರಿಗಳು ನೆಲಮಂಗಲದ ಬಳಿ ₹4 ಕೋಟಿ ನಗದು ಜಪ್ತಿ ಮಾಡಿಕೊಂಡಿದ್ದ ಪ್ರಕರಣದಲ್ಲಿ ನನ್ನ ವಿರುದ್ಧ ಪೊಲೀಸರು ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸಿರುವ ದೋಷಾರೋಪ ಪಟ್ಟಿ ರದ್ದುಪಡಿಸಬೇಕು' ಎಂದು ಕೋರಿ ಸಂಸದ ಡಾ.ಕೆ.ಸುಧಾಕರ್ ಸಲ್ಲಿಸಿರುವ ಅರ್ಜಿ ವಿಚಾರಣೆಯಿಂದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಹಿಂದೆ ಸರಿದಿದ್ದಾರೆ.

ಈ ಕುರಿತ ಅರ್ಜಿಯು ಶುಕ್ರವಾರ, 'ಶಾಸಕರು- ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರ ಮುಂದೆ ವಿಚಾರಣೆಗೆ ನಿಗದಿಯಾಗಿತ್ತು. ವಿಚಾರಣೆಗೆ ಕೂಗುತ್ತಿದ್ದಂತೆಯೇ, ಈ ಪ್ರಕರಣದ ವಿಚಾರಣೆಯಿಂದ ಹಿಂದೆ ಸರಿಯುತ್ತಿರುವುದಾಗಿ ನ್ಯಾಯಮೂರ್ತಿ ಹೇಳಿದರು.

ದೇವಿ ದರ್ಶನ



ಮೈಸೂರಿನ ಚಾಮುಂಡಿಬೆಟ್ಟದ ಪಾದದಲ್ಲಿ ಆಷಾಢ ಮಾಸದ ಮೂರನೇ ಶುಕ್ರವಾರದ ವಿಶೇಷ ಪೂಜಾ ಮಹೋತ್ಸವ ಅಂಗವಾಗಿ ಸಾವಿರಾರು ಭಕ್ತದಿಗಳು ಚಾಮುಂಡಿ ದೇವಿಯ ದರ್ಶನ ಪಡೆಯಲು ಮೆಟ್ಟಿಲು ಮೂಲಕ ನಡೆದುಕೊಂಡು ಹೋರಾಟ ಭಕ್ತಾದಿಗಳು ಪ್ರಜಾವಾಣಿ ಚಿತ್ರ/ ಅನೂಪ್ ರಾಘ್.ಟಿ.

ಸಚಿವ ಜಮೀರ್ ವಿರುದ್ಧದ ಪ್ರಕರಣಕ್ಕೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಆರೋಪಕ್ಕೆ ಸಂಬಂಧಿಸಿದಂತೆ ಸಚಿವ ಜಮೀರ್ ಅಹಮದ್ ಖಾನ್ ವಿರುದ್ಧದ ವಿಚಾರಣಾ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.



'ನನ್ನ ವಿರುದ್ಧ ದಾಖಲಿಸಲಾಗಿರುವ ದೋಷಾರೋಪ ಪಟ್ಟಿ ರದ್ದುಪಡಿಸಬೇಕು' ಎಂದು ಕೋರಿ ವಸತಿ ಸಚಿವ ಜಮೀರ್ ಅಹಮದ್ ಖಾನ್ ಸಲ್ಲಿಸಿರುವ ಅರ್ಜಿಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರು ಶುಕ್ರವಾರ ವಿಚಾರಣೆ ನಡೆಸಿದರು.

ಅರ್ಜಿದಾರರ ಪರ ಮನವಿ ಆಲಿಸಿದ ನ್ಯಾಯಪೀಠ, ಪ್ರಕರಣಕ್ಕೆ ಸಂಬಂಧಿಸಿದಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವಾದ 42ನೇ ಎಸಿಎಂಎಂ ಕೋರ್ಟ್‌ನಲ್ಲಿ ಸಲ್ಲಿಸಲಾಗಿರುವ ದೋಷಾರೋಪ ಪಟ್ಟಿಯ ಮುಂದಿನ ವಿಚಾರಣಾ ಪ್ರಕ್ರಿಯೆಗೆ ಮಧ್ಯಂತರ ತಡೆ ನೀಡಿತು.

ಪ್ರಕರಣವೇನು?: 'ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ನವಲಗುಂದದಲ್ಲಿ ಆಯೋಜಿಸಲಾಗಿದ್ದ ಸಾರ್ವಜನಿಕ ಕಾರ್ಯಕ್ರಮಕ್ಕೆ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದಿಲ್ಲ. ಜಮೀರ್ ಅಹಮದ್ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಜಾರಿಯಲ್ಲಿದ್ದ ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ' ಎಂದು ಆರೋಪಿಸಿ 2018ರ ಮೇ 5ರಂದು ಚುನಾವಣಾ ಅಧಿಕಾರಿಗಳು ದೂರು ದಾಖಲಿಸಿದ್ದರು.


ಇದರನ್ವಯ ಜಮೀರ್ ಅಹಮದ್ ವಿರುದ್ಧ ತನಿಖೆ ನಡೆಸಿದ್ದ ಪೊಲೀಸರು ಭಾರತೀಯ ದಂಡ ಸಂಹಿತೆ-1860ರ ಕಲಂ 171(ಎಚ್) ಮತ್ತು 34ನೇ ಅಡಿಯಲ್ಲಿ 42ನೇ ಎಸಿಎಂಎಂನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಯತೀಂದ್ರ ವಿರುದ್ಧದ ಎಫ್ಐಆರ್ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಕೆದಾಟು ಯೋಜನೆ ಜಾರಿಗೆ ಆಗ್ರಹಿಸಿ ರಾಜ್ಯ ಕಾಂಗ್ರೆಸ್ ಹಮ್ಮಿಕೊಂಡಿದ್ದ ಪಾದಯಾತ್ರೆಯಲ್ಲಿ ಭಾಗಿಯಾಗಿ ಕೋವಿಡ್-19ರ ಮಾರ್ಗಸೂಚಿ ಉಲ್ಲಂಘಿಸಿದ ಆರೋಪಕ್ಕೆ ಸಂಬಂಧಿಸಿದಂತೆ ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ವಿರುದ್ಧ ರಾಮನಗರ ಜಿಲ್ಲೆಯ ಸಾತನೂರು ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಎಫ್ಐಆರ್ ಅನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಸಂಬಂಧ ಯತೀಂದ್ರ ಸಿದ್ದರಾಮಯ್ಯ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರು ಶುಕ್ರವಾರ ಪುರಸ್ಕರಿಸಿ ಆದೇಶಿಸಿದ್ದಾರೆ.



ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಮುಖಂಡರ ವಿರುದ್ಧ ದಾಖಲಾಗಿದ್ದ ಎಫ್ಐಆರ್ ಮತ್ತು ಅದಕ್ಕೆ ಸಂಬಂಧಿಸಿದ ವಿಚಾರಣಾ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆಯನ್ನು ಹೈಕೋರ್ಟ್ ಈ ಹಿಂದೆಯೇ ರದ್ದುಪಡಿಸಿತ್ತು. ಇದರನ್ವಯ ಯತೀಂದ್ರ ಅರ್ಜಿಯನ್ನೂ ನ್ಯಾಯಪೀಠ ಪರಿಗಣಿಸಿತು.

ಪ್ರಕರಣವೇನು?: ಮೇಕೆದಾಟು ಅಣೆಕಟ್ಟೆ ಯೋಜನೆ ಜಾರಿಗೆ ಆಗ್ರಹಿಸಿ ಕೆಪಿಸಿಸಿ 2022ರ ಜನವರಿ 9ರಿಂದ 10 ದಿನ ರಾಮನಗರದ ಮೇಕೆದಾಟು ಪ್ರದೇಶದಿಂದ ಬೆಂಗಳೂರಿನ ಬಸವನಗುಡಿ ನ್ಯಾಷನಲ್ ಕಾಲೇಜುವರೆಗೆ ಪಾದಯಾತ್ರೆ ಹಮ್ಮಿಕೊಂಡಿತ್ತು.

ಪಾದಯಾತ್ರೆಯಲ್ಲಿ ಭಾಗಿಯಾಗಿ ಕೋವಿಡ್ ನಿಯಮ ಉಲ್ಲಂಘಿಸಿದ ಆರೋಪಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸಾಂಕ್ರಾಮಿಕ ರೋಗಗಳ ಕಾಯ್ದೆ-2020ರ ಅಡಿಯಲ್ಲಿ ಸಾತನೂರು ಪೊಲೀಸ್ ಠಾಣೆಯಲ್ಲಿ ಯತೀಂದ್ರ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ಪಕ್ಷದ 30 ನಾಯಕರ ವಿರುದ್ಧ 2022ರ ಜನವರಿ 9ರಂದು ಎಫ್ಐಆರ್ ದಾಖಲಿಸಲಾಗಿತ್ತು. ಪ್ರಕರಣದಲ್ಲಿ 20ನೇ ಆರೋಪಿಯಾಗಿದ್ದ ಯತೀಂದ್ರ, 'ನನ್ನ ವಿರುದ್ಧದ ಎಫ್ಐಆರ್ ಹಾಗೂ ಕನಕಪುರದ 1ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ಕೋರ್ಟ್‌ನಲ್ಲಿನ ವಿಚಾರಣೆ ಪ್ರಕ್ರಿಯೆ ರದ್ದುಪಡಿಸಬೇಕು' ಎಂದು ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಶಿರಡಿ ರೈಲಿನಲ್ಲಿ ₹ 25 ಲಕ್ಷ ಮೌಲ್ಯದ ವಸ್ತುಗಳ ದರೋಡೆ

ಪ್ರಜಾವಾಣಿ ವಾರ್ತೆ

ಬೀದರ್: ಕಾಕಿನಾಡ ಪೋರ್ಟ್-ಸಿಕಂದರಾಬಾದ್-ಶಿರಡಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಗುರುವಾರ ತಡರಾತ್ರಿ ದರೋಡೆ ನಡೆದಿದ್ದು, ಪ್ರಯಾಣಿಕರ ₹25 ಲಕ್ಷಕ್ಕೂ ಅಧಿಕ ಮೌಲ್ಯದ ವಸ್ತುಗಳನ್ನು ದೋಚಲಾಗಿದೆ. ಇದನ್ನು ಖಂಡಿಸಿ ಪ್ರಯಾಣಿಕರು ಶುಕ್ರವಾರ ನಸುಕಿನಲ್ಲಿ ಬೀದರ್ ರೈಲು ನಿಲ್ದಾಣದಲ್ಲಿ ಪ್ರತಿಭಟಿಸಿದರು.

ಗುರುವಾರ ತಡರಾತ್ರಿ ಎರಡು ಗಂಟೆ ಸುಮಾರಿಗೆ ಮಹಾರಾಷ್ಟ್ರದ ಪರಳಿ ರೈಲು ನಿಲ್ದಾಣದ ಸಮೀಪ ರೈಲಿನ ಮೂರು ಹವಾನಿಯಂತ್ರಿತ ಬೋಗಿಗಳಿಂದ 30ಕ್ಕೂ ಹೆಚ್ಚು ಪ್ರಯಾಣಿಕರ ಬ್ಯಾಗುಗಳಲ್ಲಿದ್ದ ₹ 25 ಲಕ್ಷಕ್ಕೂ ಅಧಿಕ ಮೌಲ್ಯದ ವಸ್ತುಗಳನ್ನು ದರೋಡೆ ಮಾಡಲಾಗಿದೆ. ಪ್ರಯಾಣಿಕರ ಬ್ಯಾಗುಗಳಲ್ಲಿ ಚಿನ್ನಾಭರಣ, ನಗದು ಹಣ, ಬೆಲೆಬಾಳುವ ವಸ್ತುಗಳು, ಆಧಾರ್ ಕಾರ್ಡ್, ಪಾನ್ ಕಾರ್ಡ್, ಬ್ಯಾಂಕ್ ಎಟಿಎಂ ಹಾಗೂ ಮಧುಮೇಹ ಸೇರಿ ಇತರೆ ಕಾಯಿಲೆಗಳ ಮಾತ್ರೆಗಳು ಇದ್ದವು ಎಂದು ರೈಲ್ವೆ ಪೊಲೀಸರು ತಿಳಿಸಿದ್ದಾರೆ.

ಬ್ಯಾಗುಗಳನ್ನು ದೋಚಿದ ವಿಷಯ ತಿಳಿದ ಪ್ರಯಾಣಿಕರು ನಸುಕಿನ 5.30ರ ಸುಮಾರಿಗೆ ರೈಲು ಬೀದರ್ ರೈಲು ನಿಲ್ದಾಣ ತಲುಪುತ್ತಿದ್ದಂತೆ ಕೆಳಗಿಳಿದು ಪ್ರತಿಭಟನೆ ನಡೆಸಿದರು. ರೈಲ್ವೆ ಪೊಲೀಸರ ನಿರ್ಲಕ್ಷ್ಯದ ವಿರುದ್ಧ ಧಿಕ್ಕಾರ ಕೂಗಿದರು. ಪ್ರಕರಣ ದಾಖಲಿಸಿಕೊಂಡು ವಸ್ತುಗಳನ್ನು ಪತ್ತೆ ಹಚ್ಚಿ ವಾಪಸ್ ಕೊಡಿಸುವಂತೆ ಆಗ್ರಹಿಸಿದರು. ಆದರೆ, ಸ್ಥಳೀಯ ರೈಲ್ವೆ ಪೊಲೀಸರು ನಿರಾಕರಿಸಿದರು. 'ಲಿಖಿತ ದೂರು ಕೊಡಿ, ನಮ್ಮ ಸಿಬ್ಬಂದಿ ಸಿಕಂದರಾಬಾದ್ ರೈಲ್ವೆ ಪೊಲೀಸ್ ಠಾಣೆಗೆ ಅದನ್ನು ತಲುಪಿಸುವರು' ಎಂದು ಹೇಳಿದಾಗ ಪ್ರಯಾಣಿಕರು ಸಮ್ಮತಿಸಿ ಸೂಚಿಸಿದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಇದರಿಂದ ರೈಲು ಸಂಚಾರ ಕೆಲ ಸಮಯ ವಿಳಂಬವಾಯಿತು.

ಆನಂತರ ಪ್ರಯಾಣಿಕರು ಸಿಕಂದರಾಬಾದ್ ರೈಲ್ವೆ ಪೊಲೀಸರಿಗೂ ದೂರು ಸಲ್ಲಿಸಿ, ಪ್ರತಿಭಟನೆ ದಾಖಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ವಸ್ತುಗಳನ್ನು ಕಳೆದುಕೊಂಡ ಪ್ರಯಾಣಿಕರೆಲ್ಲ ತೆಲಂಗಾಣಕ್ಕೆ ಸೇರಿದವರು.

ವಂಶದೊಳಗೆ ತಳಿ ಸಂವರ್ಧನೆ ತಡೆಯಲು ಕ್ರಮ

ಕಾಳಿಂಗ ಸರ್ಪಗಳಿಗೆ ಮೈಕ್ರೊ ಚಿಪ್ ಅಳವಡಿಕೆ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಹೊರವಲಯದಲ್ಲಿರುವ ಪಿಲಿಕುಳ ಜೈವಿಕ ಉದ್ಯಾನದಲ್ಲಿ ಕಾಳಿಂಗ ಸರ್ಪಗಳಿಗೆ ಮೈಕ್ರೊಚಿಪ್ ಅಳವಡಿಸುವ ಕಾರ್ಯ ಆರಂಭಿಸಲಾಗಿದೆ.

'ಒಂದು ವರ್ಗದ ಪ್ರಾಣಿಗಳು ಬರಿಗಣ್ಣಿಗೆ ಸಾಮಾನ್ಯವಾಗಿ ಒಂದೇ ರೀತಿ ಕಾಣಿಸುತ್ತವೆ. ಅವುಗಳನ್ನು ಸುಲಭವಾಗಿ ಪ್ರತ್ಯೇಕಿಸಲು ಸಾಧ್ಯವಾಗಬೇಕು ಎಂಬ ಕಾರಣಕ್ಕೆ ಚಿಪ್ ಅಳವಡಿಸಲಾಗುತ್ತಿದೆ. ಪಂಜರದಲ್ಲೇ ಪ್ರಾಣಿಗಳ ತಳಿ ಸಂವರ್ಧನೆ ಮಾಡುವಾಗ, ಒಂದೇ ವಂಶವಾಹಿಯ ಪ್ರಾಣಿಗಳೊಳಗೆ ತಳಿ ಸಂವರ್ಧನೆಯಾಗುವುದನ್ನು ತಡೆಯಲು ಚಿಪ್ ಅಳವಡಿಸುವುದು ಅಗತ್ಯವಾಗಿದೆ' ಎಂದು ಪಿಲಿಕುಳ ಜೈವಿಕ ಪಾರ್ಕ್‌ನ ನಿರ್ದೇಶಕ ಜಯಪ್ರಕಾಶ ಭಂಡಾರಿ ತಿಳಿಸಿದರು.

ವನ್ಯಪ್ರಾಣಿಗಳ ಅಧ್ಯಯನ, ವೈಜ್ಞಾನಿಕ ಸಂಶೋಧನೆಯ ಜೊತೆಗೆ ಪ್ರಾಣಿಸಂಕುಲದ ಸಂರಕ್ಷಣೆಯೂ ಪಿಲಿಕುಳ ಜೈವಿಕ ಉದ್ಯಾನದ ಉದ್ದೇಶವಾಗಿರುವುದರಿಂದ, ಪಂಜರದಲ್ಲಿಯೇ ಕಾಳಿಂಗಸರ್ಪ ಹಾಗೂ ಇತರ ಹಲವು ಪ್ರಾಣಿಗಳ ತಳಿ ಸಂವರ್ಧನೆ ಮಾಡುವ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ಇದರ ಅಂಗವಾಗಿ ಕಾಳಿಂಗ ಸರ್ಪಗಳಿಗೆ ಮೈಕ್ರೊ ಚಿಪ್ ಅಳವಡಿಸಲಾಗುತ್ತಿದೆ.


ಮಂಗಳೂರಿನ ಪಿಲಿಕುಳ ಜೈವಿಕ ಉದ್ಯಾನದಲ್ಲಿ ಕಾಳಿಂಗ ಸರ್ಪಕ್ಕೆ ಮೈಕ್ರೊಚಿಪ್ ಅಳವಡಿಸಲಾಯಿತು

'ಹಾವುಗಳಷ್ಟೇ ಅಲ್ಲ, ಕಾಡು ಪ್ರಾಣಿಗಳಿಗೂ ಮೈಕ್ರೊಚಿಪ್ ಅಳವಡಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಮೈಕ್ರೊಚಿಪ್ ಹೊಂದಿರುವ ಸಣ್ಣ ಎಲೆಕ್ಟ್ರಾನಿಕ್ ಉಪಕರಣವೊಂದನ್ನು ಪ್ರಾಣಿಯ ಚರ್ಮದಡಿಯಲ್ಲಿ ಅಳವಡಿಸಲಾಗುವುದು. ಇದಕ್ಕೆ ಸ್ಕ್ಯಾನರ್ ಸಹಿತವಾದ ಒಂದು ಸಣ್ಣ ರಿಸೀವರ್ ಇರುತ್ತದೆ. ಪ್ರತಿ ಪ್ರಾಣಿಯ ಹೆಸರು, ಟ್ರಾನ್ಸ್‌ಪಾಂಡರ್ ಸಂಖ್ಯೆ ಹಾಗೂ ವಂಶವಾಹಿಯು ಅದರಲ್ಲಿ ದಾಖಲಾಗಿರುತ್ತದೆ' ಎಂದು ಭಂಡಾರಿ ತಿಳಿಸಿದರು.

ಮೃಗಾಲಯದಲ್ಲಿರುವ ಹುಲಿ, ಸಿಂಹ, ಚಿರತೆ ಹಾಗೂ ಇತರ ಪ್ರಾಣಿಗಳಿಗೆ ಮೈಕ್ರೊ ಚಿಪ್ ಅಳವಡಿಸುವ ಕಾರ್ಯವನ್ನು ಶೀಘ್ರದಲ್ಲೇ ಆರಂಭಿಸಲಾಗುವುದು. ಒಂದು ತಿಂಗಳಲ್ಲಿ ಈ ಕಾರ್ಯ ಪೂರ್ಣಗೊಳ್ಳಲಿದೆ. ಪ್ರಾಣಿಗಳಲ್ಲಿ ಅಳವಡಿಸಲಾಗುವ ಮೈಕ್ರೊ ಚಿಪ್‌ಗಳನ್ನು ವಿದೇಶದಿಂದ ತರಿಸಲಾಗಿದೆ.

ಕತ್ತೆ ಕಿರುಬ, ಕಾಡು ನಾಯಿ, ಭಾರತೀಯ ಬೂದು ತೋಳ, ಕರಡಿ, ಮೊಸಳೆ ಮುಂತಾದ ಆಯ್ದ ತಳಿಯ ಪ್ರಾಣಿಗಳಲ್ಲೂ ಚಿಪ್ ಅಳವಡಿಸಲಾಗುವುದು. ಈ ಸಂದರ್ಭದಲ್ಲೇ ಲಿಂಗಪತ್ತೆ ಉಪಕರಣವನ್ನು ಬಳಸಿ ಆಯಾ ಪ್ರಾಣಿಯ ಲಿಂಗವನ್ನು ಗುರುತಿಸುವುದು, ಪ್ರಾಣಿಯ ನಿಖರವಾದ ಉದ್ದ, ಅಗಲ, ಎತ್ತರಗಳನ್ನು ದಾಖಲಿಸುವ ಕಾರ್ಯವೂ ನಡೆಯಲಿದೆ. ಹಕ್ಕಿಗಳ ಲಿಂಗ ಪತ್ತೆಮಾಡಲು ಡಿಎನ್ಎ ಪರೀಕ್ಷೆ ನಡೆಸಲಾಗುವುದು ಎಂದರು.

ಮೃಗಾಲಯದಲ್ಲಿರುವ ಪಶು ವೈದ್ಯಕೀಯ ಆಸ್ಪತ್ರೆಯಲ್ಲೇ ವೈಜ್ಞಾನಿಕ ರೀತಿಯಲ್ಲಿ ಮೈಕ್ರೊಚಿಪ್ ಅಳವಡಿಸಲಾಗುವುದು. ಅದು ಜೀವನಪೂರ್ತಿ ಪ್ರಾಣಿಯ ಶರೀರದಲ್ಲಿರಲಿದೆ ಎಂದು ಜಯಪ್ರಕಾಶ ಭಂಡಾರಿ ತಿಳಿಸಿದರು.

ಸಸ್ತನಿಗಳು, ಪಕ್ಷಿಗಳು, ಸರೀಸೃಪಗಳು ಸೇರಿದಂತೆ 1200ಕ್ಕೂ ಹೆಚ್ಚು ಪ್ರಾಣಿಗಳನ್ನು ಪಿಲಿಕುಳ ಜೈವಿಕ ಉದ್ಯಾನ ಹೊಂದಿದೆ.

ಷೇರುಪೇಟೆ ವಹಿವಾಟು

▲ 1292

80,039 ಹಿಂದಿನ ಅಂತ್ಯ | 81,332 ಇಂದಿನ ಅಂತ್ಯ

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,406
ಇಂದಿನ ಅಂತ್ಯ	24,834
▲	428
ದಿನದ ಗರಿಷ್ಠ	24,861


ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹263-426

ದ್ವಿತಳಿ (ಬಿ.ವಿ) ₹222-603

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹525
12 ಕ್ಕೆ	₹70
ಮೈಸೂರು	
100ಕ್ಕೆ	₹525

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹960 (960)
ಸೂರ್ಯಕಾಂತಿ (ರಿಫೈನ್ಡ್)	₹965 (965)
ಪಾಮೋಲಿನ್	₹905 (905)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹9000-9450
ಕೆ.ಆರ್.ಪೇಟೆ	₹9502-9502
ತಿಪಟೂರು	₹9300-9801
ತುರುವೇಕೆರೆ	₹9300-9300

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	18000-28500
ಹೊಸತು	28500-38500
ಹಳತು	38500-46500
ಚಿತ್ರದುರ್ಗ	
ಅಪಿ	48100-48500
ಬೆಟ್ಟೆ	34600-35000
ಕೆಂಪುಗೋಟು	28600-29000
ರಾಶಿ	47600-48000
ಕುಮಟ	
ಚಿಪ್ಪು	25019-28509
ಕೋಕ	13019-23689
ಫ್ಯಾಕ್ಟರಿ	10109-19672
ಹಳೆಚಾಲಿ	34899-40000
ಹೊಸಚಾಲಿ	30109-35000
ಶಿವಮೊಗ್ಗ	
ಬೆಟ್ಟೆ	49019-54919
ಗೊರಬಲು	18000-33399
ರಾಶಿ	34090-50349
ಸರಕು	53399-68009
ಸಿದ್ದಾಪುರ	
ಬಿಳಿಗೋಟು	26319-28499
ಚಾಲಿ	31699-34900
ಕೋಕ	24119-28399
ಕೆಂಪುಗೋಟು	26599-26599
ರಾಶಿ	44889-47229
ತಟ್ಟಿಬೆಟ್ಟೆ	42889-42889
ಶಿರಸಿ	
ಬೆಟ್ಟೆ	37110-41209
ಬಿಳಿಗೋಟು	20009-30291
ಚಾಲಿ	32099-36399
ಕೆಂಪುಗೋಟು	21905-21905
ರಾಶಿ	44779-47699

ಒಂದೇ ದಿನ ಹೂಡಿಕೆದಾರರ ಸಂಪತ್ತು ₹7.10 ಲಕ್ಷ ಕೋಟಿ ಹೆಚ್ಚಳ

ಸೆನ್ಸೆಕ್ಸ್ 1,292 ಅಂಶ ಏರಿಕೆ



ಮುಂಬೈ (ಪಿಟಿಐ): ಸತತ ಐದು ದಿನಗಳ ವಹಿವಾಟಿನಲ್ಲಿ ಇಳಿಕೆ ಕಂಡಿದ್ದ ದೇಶದ ಷೇರುಪೇಟೆಗಳಲ್ಲಿ ಶುಕ್ರವಾರ ಗೂಳಿಯ ನಾಗಾಲೋಟದಿಂದಾಗಿ ಸೂಚ್ಯಂಕಗಳು ಏರಿಕೆ ಕಂಡಿವೆ. ಇನ್ಫೊಸಿಸ್, ಏರ್‌ಟೆಲ್ ಮತ್ತು ರಿಲಯನ್ಸ್ ಇಂಡಸ್ಟ್ರಿಸ್ ಷೇರುಗಳ ಮಾರಾಟದ ಹೆಚ್ಚಳವು ಸಕಾರಾತ್ಮಕ ವಹಿವಾಟಿಗೆ ನೆರವಾಯಿತು.

ಒಂದೇ ದಿನ ಹೂಡಿಕೆದಾರರ ಸಂಪತ್ತು ₹7.10 ಲಕ್ಷ ಕೋಟಿ ಏರಿಕೆಯಾಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,292 ಅಂಶ ಏರಿಕೆ (ಶೇ 1.62ರಷ್ಟು) ಕಂಡು 81,332 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 428 ಅಂಶ ಏರಿಕೆ ಕಂಡು (ಶೇ 1.76ರಷ್ಟು) 24,834ಕ್ಕೆ ಮುಟ್ಟುವ ಮೂಲಕ ಹೊಸ ಎತ್ತರಕ್ಕೇರಿದೆ.

ಭಾರ್ತಿ ಏರ್‌ಟೆಲ್ ಷೇರಿನ ಮೌಲ್ಯದಲ್ಲಿ ಶೇ4.51ರಷ್ಟು ಏರಿಕೆಯಾಗಿದೆ. ಅದಾನಿ ಪೋರ್ಟ್ಸ್, ಸನ್ ಫಾರ್ಮಾ, ಟಾಟಾ ಸ್ಟೀಲ್, ಎಚ್‌ಸಿಎಲ್ ಟೆಕ್ನಾಲಜೀಸ್, ಇನ್ಫೊಸಿಸ್, ಜೆಎಸ್‌ಡಬ್ಲ್ಯು ಸ್ಟೀಲ್, ಮಹೀಂದ್ರ ಆ್ಯಂಡ್ ಮಹೀಂದ್ರ ಷೇರಿನ ಮೌಲ್ಯದಲ್ಲಿ ಹೆಚ್ಚಳವಾಗಿದೆ.

ನೆಸ್ಲೆ ಇಂಡಿಯಾ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

'2024–25ನೇ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಅಮೆರಿಕದ ಜಿಡಿಪಿಯು ಏರಿಕೆಯಾಗಿದೆ. ಇದು ಹೂಡಿಕೆದಾರರಲ್ಲಿ ಭರವಸೆ ಹೆಚ್ಚಿಸಿದೆ. ಇದರಿಂದ ದೇಶೀಯ ಮಾರುಕಟ್ಟೆಗಳು ಏರಿಕೆ ದಾಖಲಿಸಿವೆ' ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

'ಹೂಡಿಕೆದಾರರು ಷೇರುಗಳ ಮೌಲ್ಯ ಕುಸಿದಾಗ ಖರೀದಿಸುತ್ತಾರೆ. ಜಾಗತಿಕ ಹಾಗೂ ದೇಶೀಯ ವಿದ್ಯಮಾನಕ್ಕೆ ಅನುಗುಣವಾಗಿ ಈ ತಂತ್ರಗಾರಿಕೆ ಅನುಸರಿಸುತ್ತಾರೆ. ಲೋಹ ಮತ್ತು ಐ.ಟಿ ವಲಯದ ಷೇರುಗಳು ಏರಿಕೆಯಾಗಿವೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ (ಸಂಶೋಧನಾ ವಿಭಾಗ) ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಬಿಎಸ್‌ಇ ಮಿಡ್‌ಕ್ಯಾಪ್ ಶೇ 2.12ರಷ್ಟು ಹಾಗೂ ಸ್ಮಾಲ್‌ಕ್ಯಾಪ್ ಸೂಚ್ಯಂಕ ಶೇ1ರಷ್ಟು ಏರಿಕೆ ಕಂಡಿದೆ.

ಟೆಲಿಕಮ್ಯುನಿಕೇಷನ್ (ಶೇ 3.36), ಲೋಹ (ಶೇ 3.19), ಟೆಕ್ (ಶೇ 2.76), ಆಟೊ (ಶೇ 2.35), ಸರಕು (ಶೇ 2.26) ಹಾಗೂ ಹೆಲ್ತ್‌ಕೇರ್ (ಶೇ 2.10) ಸೂಚ್ಯಂಕವು ಏರಿಕೆ ದಾಖಲಿಸಿವೆ.

ಸೋಲ್, ಶಾಂಘೈ, ಹಾಂಗ್‌ಕಾಂಗ್ ಮಾರುಕಟ್ಟೆಯಲ್ಲಿ ಸಕಾರಾತ್ಮಕ ವಹಿವಾಟು ನಡೆದರೆ, ಟೋಕಿಯೊ ಮಾರುಕಟ್ಟೆ ಇಳಿಕೆ ಕಂಡಿದೆ.

ಗುರುವಾರ ನಡೆದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹2,605 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಚಿನ್ನ, ಬೆಳ್ಳಿ ದರ ಅಲ್ಪ ಏರಿಕೆ

ನವದೆಹಲಿ (ಪಿಟಿಐ): ಸತತ ಮೂರು ದಿನಗಳಿಂದ ಇಳಿಕೆ ಕಂಡಿದ್ದ ಚಿನ್ನ ಮತ್ತು ಬೆಳ್ಳಿ ಧಾರಣೆಯು ಶುಕ್ರವಾರದ ವಹಿವಾಟಿನಲ್ಲಿ ಅಲ್ಪ ಪ್ರಮಾಣದಲ್ಲಿ ಏರಿಕೆಯಾಗಿದೆ.



ಚಿನ್ನದ ದರವು 10 ಗ್ರಾಂಗೆ ₹50 ಏರಿಕೆಯಾಗಿ, ₹70,700ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹400 ಹೆಚ್ಚಳವಾಗಿ, ₹84,400ಕ್ಕೆ ತಲುಪಿದೆ.

ಶೇ 7ರಷ್ಟು ಇಳಿಕೆ: ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ಚಿನ್ನ ಮತ್ತು ಬೆಳ್ಳಿ ಮೇಲಿನ ಕಸ್ಟಮ್ಸ್ ಸುಂಕವನ್ನು ಕಡಿತಗೊಳಿಸಿದೆ. ಹಾಗಾಗಿ, ಜುಲೈ 23ರಿಂದ ಇಲ್ಲಿಯವರೆಗೆ ಚಿನ್ನದ ದರವು ₹5,000 ಇಳಿಕೆಯಾಗಿದೆ. ಒಟ್ಟಾರೆ ದೇಶೀಯ ಮಾರುಕಟ್ಟೆಯಲ್ಲಿ ಶೇ 7ರಷ್ಟು ದರ ಕುಸಿದಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

'ಬೆಲೆ ಇಳಿಕೆಯಾಗಿದೆ. ಇದರಿಂದ ಚಿನ್ನದ ಮೇಲಿನ ಹೂಡಿಕೆಗೆ ಉತ್ತೇಜನ ಸಿಗಲಿದೆ. ಕರೆನ್ಸಿ ಮೌಲ್ಯ ಇಳಿಕೆ ಹಾಗೂ ಚಿಲ್ಲರೆ ಹಣದುಬ್ಬರದಿಂದ ಪಾರಾಗಲು ಹಳದಿ ಲೋಹದ ಮೇಲಿನ ಹೂಡಿಕೆಯು ಹೆಚ್ಚು ಪ್ರಯೋಜನಕಾರಿಯಾಗಿದೆ' ಎಂದು ಹಣಕಾಸು ತಜ್ಞರು ಹೇಳಿದ್ದಾರೆ.

ಇಂಡಿಗೊ ಲಾಭ ಇಳಿಕೆ

ನವದೆಹಲಿ (ಪಿಟಿಐ): ಇಂಡಿಗೊ ಕಂಪನಿಯ ಮಾತೃಸಂಸ್ಥೆ ಇಂಟರ್‌ಗ್ಲೋಬಲ್ ಏವಿಯೇಷನ್, 2024–25ನೇ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ₹2,728 ಕೋಟಿ ತೆರಿಗೆ ನಂತರದ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹3,090 ಕೋಟಿ ಲಾಭ ಗಳಿಸಲಾಗಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 12ರಷ್ಟು ಇಳಿಕೆಯಾಗಿದೆ. ವಿಮಾನದ ಇಂಧನ ದರದ (ಎಟಿಎಫ್) ಏರಿಕೆ ಮತ್ತು ವೆಚ್ಚ ಹೆಚ್ಚಳದಿಂದಾಗಿ ಲಾಭದ ಪ್ರಮಾಣದಲ್ಲಿ ಕಡಿಮೆಯಾಗಿದೆ ಎಂದು ವಿಮಾನಯಾನ ಸಂಸ್ಥೆ ಶುಕ್ರವಾರ ತಿಳಿಸಿದೆ.

ಈ ತ್ರೈಮಾಸಿಕದಲ್ಲಿ ಒಟ್ಟು ವರಮಾನವು ₹20,248 ಕೋಟಿ ಆಗಿದೆ. ಹಿಂದಿನ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹17,160 ಕೋಟಿ ಗಳಿಸಿತ್ತು. ಒಟ್ಟಾರೆ ವೆಚ್ಚದಲ್ಲಿ ಶೇ 24ರಷ್ಟು ಜಿಗಿತವಾಗಿದ್ದು, ₹17,444 ಕೋಟಿಗೆ ತಲುಪಿದೆ.

ಏರ್‌ಕ್ರಾಫ್ಟ್ ಮತ್ತು ಎಂಜಿನ್‌ಗಳನ್ನು ಬಾಡಿಗೆ ನೀಡುವ ಮೂಲಕ ₹624 ಕೋಟಿ ಗಳಿಸಲಾಗಿದೆ. ಜೂನ್ ಅಂತ್ಯದ ವೇಳೆಗೆ ವಿಮಾನ ಸಂಸ್ಥೆಯು 18 ಏರ್‌ಕ್ರಾಫ್ಟ್ ಸೇರಿ 382 ವಿಮಾನಗಳನ್ನು ಹೊಂದಿದೆ ಎಂದು ಸಂಸ್ಥೆ ತಿಳಿಸಿದೆ.

ಬಿಎಸ್‌ಇಯಲ್ಲಿ ಕಂಪನಿಯ ಪ್ರತಿ ಷೇರಿನ ಮೌಲ್ಯ ಶೇ 1.37ರಷ್ಟು ಏರಿಕೆಯಾಗಿದ್ದು, ಪ್ರತಿ ಷೇರಿನ ಬೆಲೆ ₹4,491ಕ್ಕೆ ಮುಟ್ಟಿದೆ.

₹1.63 ಲಕ್ಷ ಕೋಟಿ ಬೆಳೆ ವಿಮೆ ಪರಿಹಾರ ವಿತರಣೆ



ನವದೆಹಲಿ (ಪಿಟಿಐ): ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ (ಪಿಎಂಎಫ್‌ಬಿವೈ) ಜಾರಿಗೊಂಡ ದಿನದಿಂದ ಇಲ್ಲಿಯವರೆಗೆ ರೈತರಿಗೆ ₹1.63 ಲಕ್ಷ ಕೋಟಿ ಬೆಳೆ ವಿಮೆ ಪರಿಹಾರ ವಿತರಿಸಲಾಗಿದೆ ಎಂದು ಕೇಂದ್ರ ಸರ್ಕಾರವು, ಸಂಸತ್‌ಗೆ ತಿಳಿಸಿದೆ.

2016ರಲ್ಲಿ ಮುಂಗಾರು ಋತುವಿಗೆ ಈ ಯೋಜನೆ ಜಾರಿಗೊಂಡಿತು. ರೈತರು ಒಟ್ಟು ₹32,440 ಕೋಟಿ ಪ್ರೀಮಿಯಂ ಪಾವತಿಸಿದ್ದಾರೆ. ಇದಕ್ಕೆ ಅನುಗುಣವಾಗಿ ಪರಿಹಾರ ವಿತರಿಸಲಾಗಿದೆ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು, ರಾಜ್ಯಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

'ಪ್ರಾಕೃತಿಕ ವಿಕೋಪದ ವೇಳೆ ರೈತರಿಗೆ ಬೆಳೆ ಹಾನಿಯಿಂದ ಉಂಟಾಗುವ ಆರ್ಥಿಕ ನಷ್ಟ ತಪ್ಪಿಸಲು ಯೋಜನೆಯಡಿ ಸೌಲಭ್ಯ ಕಲ್ಪಿಸಲಾಗುತ್ತದೆ. ಕಡಿಮೆ ಪ್ರೀಮಿಯಂ ಮೂಲಕ ಬೆಳೆ ವಿಮೆ ಒದಗಿಸಲಾಗುತ್ತದೆ. ಯೋಜನೆಯ ನಿರೀಕ್ಷಿತ ಉದ್ದೇಶ ಈಡೇರಿದೆ' ಎಂದು ತಿಳಿಸಿದ್ದಾರೆ.

'2022–23ರಲ್ಲಿ 3.17 ಕೋಟಿ ರೈತರು ಹೆಸರು ನೋಂದಾಯಿಸಿದ್ದರು. 501 ಲಕ್ಷ ಹೆಕ್ಟೇರ್ ಕೃಷಿ ಪ್ರದೇಶವು ಬೆಳೆ ವಿಮೆ ಸೌಲಭ್ಯಕ್ಕೆ ಒಳಪಟ್ಟಿತ್ತು. 2023–24ರಲ್ಲಿ 3.97 ಕೋಟಿ ರೈತರು ಹೆಸರು ನೋಂದಾಯಿಸಿದ್ದು, 598 ಲಕ್ಷ ಹೆಕ್ಟೇರ್ ಪ್ರದೇಶವು ಬೆಳೆ ವಿಮೆಗೆ ಒಳಪಟ್ಟಿತ್ತು' ಎಂದು ವಿವರಿಸಿದ್ದಾರೆ.

ಮಾನವ –ಆನೆ ಸಂಘರ್ಷ 2,853 ಮಂದಿ ಸಾವು

ನವದೆಹಲಿ (ಪಿಟಿಐ): 'ಮಾನವ –ಆನೆ ಸಂಘರ್ಷ ಪ್ರಕರಣಗಳಲ್ಲಿ 5 ವರ್ಷಗಳಲ್ಲಿ 2,853 ಮಂದಿ ಸತ್ತಿದ್ದಾರೆ. 2023ರಲ್ಲಿ ಗರಿಷ್ಠ ಅಂದರೆ 628 ಮಂದಿ ಮೃತಪಟ್ಟಿದ್ದಾರೆ' ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ರಾಜ್ಯಸಭೆಯಲ್ಲಿ ಈ ಕುರಿತ ಪ್ರಶ್ನೆಗೆ ಉತ್ತರಿಸಿರುವ ಕೇಂದ್ರ ಪರಿಸರ ಸಚಿವ ಕೀರ್ತಿ ವರ್ಧನ್ ಸಿಂಗ್, ಕರ್ನಾಟಕದಲ್ಲಿ ಈ ಅವಧಿಯಲ್ಲಿ 160 ಮಂದಿ ಸತ್ತಿದ್ದಾರೆ ಎಂದು ತಿಳಿಸಿದರು.

ಒಡಿಶಾದಲ್ಲಿ ಗರಿಷ್ಠ 624 ಪ್ರಕರಣಗಳು ವರದಿಯಾಗಿವೆ. ನಂತರದ ಸ್ಥಾನದಲ್ಲಿ ಜಾರ್ಖಂಡ್ (474), ಪಶ್ಚಿಮ ಬಂಗಾಳ (436), ಅಸ್ಸಾಂ (383), ಛತ್ತೀಸಗಢ (303), ತಮಿಳುನಾಡು (256) ಹಾಗೂ ಕೇರಳ (124) ಇದೆ ಎಂದು ಮಾಹಿತಿ ನೀಡಿದರು.

ಇಂದು ಸಭೆ: ಕರ್ನಾಟಕ ಸೇರಿ 7 ರಾಜ್ಯಗಳಿಂದ ಬಹಿಷ್ಕಾರ

ನೀತಿ ಆಯೋಗ ರದ್ದುಪಡಿಸಿ: ಮಮತಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನೀತಿ ಆಯೋಗದ ಆಡಳಿತ ಮಂಡಳಿಯ 9ನೇ ಸಭೆಯು ಶನಿವಾರ ನಡೆಯಲಿದೆ.

ಇದರ ಬೆನ್ನಲ್ಲೇ ನೀತಿ ಆಯೋಗವನ್ನು ರದ್ದುಪಡಿಸಬೇಕು. ಈ ಹಿಂದಿನ ಯೋಜನಾ ಆಯೋಗವನ್ನು ಮರುಸ್ಥಾಪಿಸಬೇಕು ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆಗ್ರಹಿಸಿದ್ದಾರೆ.

'ನೀತಿ ಆಯೋಗವು ಅಧಿಕಾರರಹಿತವಾಗಿದೆ. ಅದು ಸಭೆಗಳನ್ನು ನಡೆಸುವುದಕ್ಕಷ್ಟೇ ಸೀಮಿತವಾಗಿದೆ' ಎಂದು ದೂರಿದ್ದಾರೆ.

ಈಗಾಗಲೇ, ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ, ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ಸುಖವಿಂದರ್ ಸಿಂಗ್ ಸುಖು, ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಸಭೆ ಬಹಿಷ್ಕರಿಸುವುದಾಗಿ ಪ್ರಕಟಿಸಿದ್ದಾರೆ. ಬಜೆಟ್‌ನಲ್ಲಿ ತಮ್ಮ ರಾಜ್ಯಗಳಿಗೆ ಅನುದಾನ ಕಲ್ಪಿಸಿಲ್ಲ. ಹಾಗಾಗಿ, ತಾರತಮ್ಯ ಖಂಡಿಸಿ ಈ ನಿರ್ಧಾರ ಕೈಗೊಂಡಿರುವುದಾಗಿ ಹೇಳಿದ್ದಾರೆ.

ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ದೆಹಲಿ ಮತ್ತು ಪಂಜಾಬ್ ಸರ್ಕಾರದ ಮುಖ್ಯಮಂತ್ರಿಗಳು ಸಭೆ ಬಹಿಷ್ಕರಿಸುವುದಾಗಿ ಹೇಳಿದ್ದಾರೆ.



'ವಿಕಸಿತ ಭಾರತ@2047' ಎಂಬುದು ಈ ವರ್ಷದ ನೀತಿ ಆಯೋಗದ ಥೀಮ್ ಆಗಿದೆ. ಕೇಂದ್ರ ಸರ್ಕಾರವು 'ಮೇಕಿಂಗ್ ಇಂಡಿಯಾ'ಕ್ಕೆ ಹೆಚ್ಚು ಒತ್ತು ನೀಡುವ ಗುರಿ ಹೊಂದಿದೆ.

ಮಮತಾ, ಹೇಮಂತ್ ಸೋರೇನ್ ಭಾಗಿ?: ಮಮತಾ ಬ್ಯಾನರ್ಜಿ ಮತ್ತು ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೋರೇನ್ ಅವರು ಸಭೆಯಲ್ಲಿ ಪಾಲ್ಗೊಂಡು ಬಜೆಟ್‌ನಲ್ಲಿನ ತಾರತಮ್ಯದ ಬಗ್ಗೆ ಪ್ರಧಾನಿ ಎದುರು ಪ್ರಸ್ತಾಪಿಸಲಿದ್ದಾರೆ ಎಂದು ಹೇಳಲಾಗಿದೆ. ಸಭೆಯಲ್ಲಿ ಪಾಲ್ಗೊಳ್ಳಲು ಗುರುವಾರವೇ ಮಮತಾ ದೆಹಲಿಗೆ ಭೇಟಿ ನೀಡಬೇಕಿತ್ತು. ಕೊನೆಯ ಕ್ಷಣದಲ್ಲಿ ಪ್ರಯಾಣ ರದ್ದುಗೊಳಿಸಿದ್ದಾರೆ ಎಂದು ಹೇಳಲಾಗಿದೆ. ಸಭೆಯಲ್ಲಿ ಅವರು ಪಾಲ್ಗೊಳ್ಳುವುದು ಖಚಿತವಾಗಿಲ್ಲ.

'ತಾರತಮ್ಯ ಸರಿಯಲ್ಲ'



ಕೆಲವು ಪತ್ರಕರ್ತರ ಜೊತೆಗೆ ಮಾತನಾಡಿದ ಮಮತಾ ಬ್ಯಾನರ್ಜಿ, 'ನೀವು (ಎನ್‌ಡಿಎ ಸರ್ಕಾರ) ನಿಮ್ಮ ಸ್ನೇಹಿತರಿಗೆ (ಮೈತ್ರಿಕೂಟದ ಪಕ್ಷಗಳು) ವಿಶೇಷ ಪ್ಯಾಕೇಜ್ ನೀಡುವುದಿದ್ದರೆ ನಮ್ಮ ಅಭ್ಯಂತರವಿಲ್ಲ. ಆದರೆ, ಇತರೆ ರಾಜ್ಯಗಳಿಗೆ ತಾರತಮ್ಯ ಎಸಗಬಾರದು. ಬಿಜೆಪಿ ಬೆಂಬಲಿಸಿರುವ ಪಕ್ಷಗಳಿಗೆ ಮಾತ್ರವೇ ಬಜೆಟ್‌ನಲ್ಲಿ ಹೆಚ್ಚು ಅನುದಾನ ನೀಡಲಾಗಿದೆ' ಎಂದು ದೂರಿದ್ದಾರೆ.

'ನಾನು ಈ ಹಿಂದಿನ ಯೋಜನಾ ಆಯೋಗದ ಸಭೆಗಳಲ್ಲಿ ಭಾಗವಹಿಸಿದ್ದೇನೆ. ಮತ್ತೆ ಅದು ಅಸ್ತಿತ್ವಕ್ಕೆ ಬರಬೇಕಿದೆ. ಹಿಂದೆ ರಾಜ್ಯ ಸರ್ಕಾರಗಳು ಮತ್ತು ಯೋಜನಾ ಆಯೋಗವು ಒಟ್ಟಾಗಿ ಕೆಲಸ ಮಾಡುತ್ತಿದ್ದವು. ನೀತಿ ಆಯೋಗದ ಮೇಲೆ ಅಂತಹ ನಂಬಿಕೆಯಿಲ್ಲ' ಎಂದು ಹೇಳಿದ್ದಾರೆ.



ಗಾಜಾ ಪಟ್ಟಿಯಲ್ಲಿರುವ ಧಾರ್ಮಿಕ ತಾಣ ಸಂತ ಹಿಲೆರಿಯನ್ ದೇಗುಲ/ಟೆಲ್ ಉಮ್ ಅಮೆರ್ –ಎಎಫ್‌ಪಿ ಚಿತ್ರ

ಅಸ್ಸಾಂ: ವಿಶ್ವ ಪಾರಂಪರಿಕ ಪಟ್ಟಿಗೆ 'ಮೊಯ್ದಂ' ಸೇರ್ಪಡೆ

ನವದೆಹಲಿ(ಪಿಟಿಐ): ಅಸ್ಸಾಂನ ಅಹೋಂ ರಾಜಮನೆತನ ನಿರ್ಮಿಸುತ್ತಿದ್ದ ದಿಬ್ಬ ಸ್ವರೂಪದ ಸಮಾಧಿಗಳಾದ 'ಮೊಯ್ದಂ' ಗಳನ್ನು ಯುನೆಸ್ಕೊ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಶುಕ್ರವಾರ ಸೇರಿಸಲಾಗಿದೆ.

ಈಶಾನ್ಯ ಭಾಗದ ಐತಿಹಾಸಿಕ ತಾಣವೊಂದಕ್ಕೆ ಯುನೆಸ್ಕೊ ಪಟ್ಟಿಯಲ್ಲಿ ಇದೇ ಮೊದಲ ಬಾರಿಗೆ ಸ್ಥಾನ ಸಿಕ್ಕಂತಾಗಿದೆ.

ಇಲ್ಲಿ ನಡೆಯುತ್ತಿರುವ ವಿಶ್ವ ಪಾರಂಪರಿಕ ಸಮಿತಿಯ (ಡಬ್ಲ್ಯುಎಚ್‌ಸಿ) 46ನೇ ಸಭೆಯಲ್ಲಿ ಈ ಕುರಿತು ನಿರ್ಣಯ ಕೈಗೊಳ್ಳಲಾಗಿದೆ. ಜುಲೈ 21ರಂದು ಆರಂಭವಾಗಿರುವ ಈ ಸಭೆಯು ಜುಲೈ 31ರ ವರೆಗೆ ನಡೆಯಲಿದೆ. ಇದೇ ಮೊದಲ ಬಾರಿಗೆ ಭಾರತ, ಡಬ್ಲ್ಯುಎಚ್‌ಸಿ ಸಭೆಯ ಆತಿಥ್ಯ ವಹಿಸಿಕೊಂಡಿದೆ.

ಈ ವಿಶಿಷ್ಟ ಸಮಾಧಿ ರಚನೆಗಳನ್ನು ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರಿಸುವಂತೆ ಭಾರತ ಕಳೆದ ವರ್ಷ ಮನವಿ ಸಲ್ಲಿಸಿತ್ತು.

'ಮೊಯ್ದಂ'ಗಳು ಭದ್ರವಾದ ಕೋಣೆಗಳನ್ನು (ಚೌ–ಚಲಿ) ಹೊಂದಿದ್ದು, ಎರಡು ಮಹಡಿಗಳಿಂದ ಕೂಡಿರುತ್ತವೆ. ಅರ್ಧವೃತ್ತಾಕಾರದ ಪ್ರವೇಶ ದ್ವಾರ ನಿರ್ಮಿಸಲಾಗಿರುತ್ತದೆ. ಮೇಲ್ಭಾಗದ ಅರ್ಧಗೋಳಾಕಾರದ ರಚನೆಯು ಮಣ್ಣು, ಇಟ್ಟಿಗೆಗಳಿಂದ ಕೂಡಿರುತ್ತದೆ' ಎಂದು ಯುನೆಸ್ಕೊ ವೆಬ್‌ಸೈಟ್‌ನಲ್ಲಿ ವಿವರಿಸಲಾಗಿದೆ.

'ಮೊಯ್ದಂ'ಗಳ ಒಳಭಾಗದಲ್ಲಿ, ಮಧ್ಯದಲ್ಲಿರುವ ವೇದಿಕೆ ಮೇಲೆ ಶವ ಇಡಲಾಗುತ್ತಿತ್ತು. ರಾಜಮನೆತನ ಲಾಂಛನ, ಕಟ್ಟಿ, ಆನೆದಂತ, ಕಬ್ಬಿಣ ಅಥವಾ ಚಿನ್ನದ ಆಭರಣಗಳು, ಆಯುಧಗಳು, ಬಟ್ಟೆಗಳು ಸೇರಿದಂತೆ ಮೃತ ವ್ಯಕ್ತಿ ಬಳಸುತ್ತಿದ್ದ ಹಲವು ವಸ್ತುಗಳನ್ನು ಸಹ ಸಮಾಧಿಯಲ್ಲಿ ಇಡಲಾಗುತ್ತಿತ್ತು' ಎಂದು ವಿವರಿಸಲಾಗಿದೆ.

ಪ್ಯಾಲೆಸ್ಟೀನ್ ತಾಣಕ್ಕೂ ಸ್ಥಾನ

ಗಾಜಾಪಟ್ಟಿಯಲ್ಲಿರುವ ಪ್ಯಾಲೆಸ್ಟೀನ್ ಧಾರ್ಮಿಕ ಸ್ಥಳ, ಸಂತ ಹಿಲೆರಿಯನ್ ದೇಗುಲ/ಟೆಲ್ ಉಮ್ ಅಮೆರ್ ಕೂಡ ಯುನೆಸ್ಕೊ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದೆ.

ಈ ತಾಣವನ್ನು, 'ಅಪಾಯದಲ್ಲಿರುವ ವಿಶ್ವದ ಪಾರಂಪರಿಕ ತಾಣ'ಗಳ ಪಟ್ಟಿಯಲ್ಲಿಯೂ ಸೇರಿಸಲಾಗಿದೆ.

ಈ ಕ್ರಮವನ್ನು ಲೆಬನಾನ್, ಟರ್ಕಿ ಹಾಗೂ ಕಜಕಸ್ತಾನ ಸೇರಿದಂತೆ ಹಲವು ದೇಶಗಳು ಸ್ವಾಗತಿಸಿವೆ.

ವಿನಿಮಯ ದರ

$ ಡಾಲರ್	83.73
£ ಪೌಂಡ್	107.77
€ ಯುರೊ	90.89
¥ ಯೆನ್ (100ಕ್ಕೆ)	55

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹213
ಆರ್‌ಎಸ್‌ಎಸ್-5	₹206
ಗುಡ್ ಲಾಟ್	₹194

(ಪ್ರತಿ ಕೆ.ಜಿಗೆ)

ಮಸೂದೆಗಳಿಗೆ ಅನುಮೋದನೆ: ಕೇರಳ, ಬಂಗಾಳ ಅರ್ಜಿ

ರಾಜಭವನಕ್ಕೆ 'ಸುಪ್ರೀಂ' ನೋಟಿಸ್

ನವದೆಹಲಿ (ಪಿಟಿಐ): ವಿಧಾನಸಭೆಗಳಲ್ಲಿ ಅಂಗೀಕರಿಸಲಾದ ಮಸೂದೆಗಳಿಗೆ ಅನುಮೋದನೆ ನಿರಾಕರಿಸಿರುವ ಪ್ರಕರಣಗಳಲ್ಲಿ ಎನ್‌ಡಿಎಯೇತರ ಪಕ್ಷಗಳ ಆಡಳಿತವಿರುವ ಕೇರಳ, ಪಶ್ಚಿಮ ಬಂಗಾಳ ಸರ್ಕಾರದ ಅರ್ಜಿಗಳನ್ನು ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ಸಮ್ಮತಿಸಿದೆ.

ಕೇರಳದ ರಾಜ್ಯಪಾಲ ಆರೀಫ್ ಮೊಹಮ್ಮದ್ ಖಾನ್ ಅವರು ಕೆಲ ಮಸೂದೆಗಳನ್ನು ರಾಷ್ಟ್ರಪತಿಯವರ ಪರಿಶೀಲನೆಗೆ ಒಪ್ಪಿಸಿದ್ದಾರೆ. ಅವು ಇನ್ನೂ ಇತ್ಯರ್ಥವಾಗಬೇಕಿದೆ ಎಂದು ಕೇರಳ ಸರ್ಕಾರ ಹೇಳಿದೆ.

ಕೇಂದ್ರ ಗೃಹ ಸಚಿವಾಲಯ, ಕೇರಳ, ಪಶ್ಚಿಮ ಬಂಗಾಳದ ರಾಜ್ಯಪಾಲರ ಕಾರ್ಯದರ್ಶಿಯವರಿಗೆ ನೋಟಿಸ್ ಜಾರಿ ಮಾಡಿದ್ದು, ಮೂರು ವಾರಗಳಲ್ಲಿ ಉತ್ತರಿಸಬೇಕು ಎಂದು ಸುಪ್ರೀಂ ಕೋರ್ಟ್ ಸೂಚಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ, ಮನೋಜ್ ಮಿಶ್ರಾ ಅವರಿದ್ದ ಪೀಠವು, ಇದೇ ವೇಳೆ ಪ್ರಕರಣದ ಸಂಬಂಧ ಗೃಹ ಸಚಿವಾಲಯವನ್ನೂ ಪ್ರತಿವಾದಿಯಾಗಿ ಉಲ್ಲೇಖಿಸಬೇಕು ಎಂದು ಪಶ್ಚಿಮ ಬಂಗಾಳ ಸರ್ಕಾರಕ್ಕೆ ನಿರ್ದೇಶನ ನೀಡಿತು.



'ಅನುಮೋದನೆ ಕೋರಿದ್ದ ಎಂಟು ಮಸೂದೆಗಳನ್ನು ರಾಜ್ಯಪಾಲರು ತಡೆಹಿಡಿದಿದ್ದಾರೆ' ಎಂದು ಪಶ್ಚಿಮ ಬಂಗಾಳ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಅರ್ಜಿಯಲ್ಲಿ ಆರೋಪಿಸಿದೆ.

ಕೇರಳ ಸರ್ಕಾರವನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಕೆ.ಕೆ.ವೇಣುಗೋಪಾಲ್ ಅವರು, 'ರಾಷ್ಟ್ರಪತಿ ಪರಿಶೀಲನೆಗೆ ಒಪ್ಪಿಸುವುದರ ಗೊಂದಲ ರಾಜ್ಯಪಾಲರುಗಳಲ್ಲಿ ಉಳಿದಿದೆ. ಅನುಮೋದನೆ ನೀಡದೆ ಬಾಕಿ ಉಳಿಸುವುದು ಸಂವಿಧಾನಕ್ಕೆ ವಿರುದ್ಧವಾದುದು' ಎಂದು ವಾದಿಸಿದರು.

ಪಶ್ಚಿಮ ಬಂಗಾಳ ಸರ್ಕಾರವನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಅವರು, 'ನಾನು ಈ ಪ್ರಕರಣದಲ್ಲಿ ಕೇಂದ್ರ ಸರ್ಕಾರವನ್ನು ಪ್ರತಿವಾದಿಯಾಗಿ ಹೆಸರಿಸಲಿದ್ದು, ಪ್ರಕರಣ ಇತ್ಯರ್ಥಪಡಿಸಲು ಕೋರ್ಟ್‌ಗೆ ಸಹಕರಿಸಬೇಕು ಎಂದು ಲಿಖಿತವಾಗಿ ಮನವಿ ಮಾಡುತ್ತೇನೆ' ಎಂದರು. ಕೇರಳ ಸರ್ಕಾರವು, 'ರಾಜ್ಯಪಾಲರು ಏಳು ಮಸೂದೆ ಬಾಕಿ ಉಳಿಸಿಕೊಂಡಿದ್ದಾರೆ. ಇವು, ರಾಜ್ಯ–ಕೇಂದ್ರ ಬಾಂಧವ್ಯಕ್ಕೆ ಸಂಬಂಧಿಸಿದ್ದಾಗಿಲ್ಲ' ಎಂದು ಪೀಠದ ಗಮನಸೆಳೆದಿದೆ.

ರಾಷ್ಟ್ರಪತಿ ಭವನದ ಪರಿಶೀಲನೆಗೆ ಒಪ್ಪಿಸಲಾದ ಮಸೂದೆಗಳಿಗೆ ಅನುಮೋದನೆ ನೀಡುವ ಅಥವಾ ತಿರಸ್ಕರಿಸುವ ಕುರಿತು ರಾಷ್ಟ್ರಪತಿಯವರು ಎಷ್ಟು ದಿನದಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಸಂವಿಧಾನದಲ್ಲಿ ಸ್ಪಷ್ಟತೆ ಇಲ್ಲವಾಗಿದೆ ಎಂದೂ ಕೇರಳ ಸರ್ಕಾರ ಉಲ್ಲೇಖಿಸಿದೆ.

'ಕಾರ್ಗಿಲ್ ವಿಜಯ ದಿವಸ': ಯುದ್ಧ ಸ್ಮಾರಕಕ್ಕೆ ಪ್ರಧಾನಿ ನರೇಂದ್ರ ಮೋದಿ ನಮನ

'ಅಗ್ನಿಪಥ: ಸೇನೆ ಯುದ್ಧ ಸನ್ನದ್ಧತೆಗೆ ಬಲ'

ಪ್ರಜಾವಾಣಿ ವಾರ್ತೆ/ಪಿಟಿಐ

ದ್ರಾಸ್ (ಕಾರ್ಗಿಲ್): 'ಭಾರತೀಯ ಸೇನೆ ತನ್ನ ಸಾಮರ್ಥ್ಯವೃದ್ಧಿಗೆ ಸುಧಾರಣೆಗಳನ್ನು ಕೈಗೊಂಡಿದ್ದು, ಅಗ್ನಿಪಥ ಯೋಜನೆ ಇದಕ್ಕೆ ನಿದರ್ಶನ. ಸೇನೆಯನ್ನು ಸದಾ ಯುದ್ಧ ಸನ್ನದ್ಧವಾಗಿರಿಸಲು ಅಗ್ನಿಪಥ ನೆರವಾಗಲಿದೆ. ಆದರೆ, ರಾಷ್ಟ್ರೀಯ ಭದ್ರತೆಯಂತಹ ಸೂಕ್ಷ್ಮ ವಿಚಾರವಾಗಿ ವಿಪಕ್ಷಗಳು ರಾಜಕೀಯ ಮಾಡುತ್ತಿವೆ' ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದರು.

ಕಾರ್ಗಿಲ್ ವಿಜಯ ದಿವಸದ 25ನೇ ವರ್ಷಾಚರಣೆ ಅಂಗವಾಗಿ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಭದ್ರತಾ ಪಡೆಗಳು ತಾರುಣ್ಯದಿಂದ ಕೂಡಿರಬೇಕು ಎಂಬ ಕಾರಣಕ್ಕೆ ಸರಾಸರಿ ವಯೋಮಿತಿ ನಿಗದಿ ಮಾಡಲಾಗಿದೆ. ವಿಪಕ್ಷಗಳು ಈ ವಿಚಾರವಾಗಿ ರಾಜಕೀಯ ಮಾಡುತ್ತಿವೆ' ಎಂದು ಟೀಕಿಸಿದರು.

ಪಿಂಚಣಿಗೆ ನೀಡಬೇಕಾದ ಹಣ ಉಳಿಸಲು ಅಗ್ನಿಪಥ ಯೋಜನೆ ಆರಂಭಿಸಲಾಗಿದೆ ಎಂಬ ವಿಪಕ್ಷಗಳ ಹೇಳಿಕೆಗಳನ್ನು ತಳ್ಳಿ ಹಾಕಿದರು.

'ರಾಷ್ಟ್ರೀಯ ಭದ್ರತೆಯಂತಹ ಸೂಕ್ಷ್ಮ ವಿಚಾರವನ್ನು ಕೆಲವರು ರಾಜಕೀಯ ವಿಷಯ ಮಾಡಿದ್ದಾರೆ. ಇನ್ನೂ ಕೆಲವರು ತಮ್ಮ ವೈಯಕ್ತಿಕ ಹಿತಾಸಕ್ತಿಗಳನ್ನು ಕಾಪಾಡುವುದಕ್ಕಾಗಿ ಹುಸಿ ರಾಜಕೀಯ ಮಾಡುತ್ತಿದ್ದಾರೆ' ಎಂದರು.

'ಸಶಸ್ತ್ರ ಪಡೆಗಳಿಗೆ ತಾರುಣ್ಯ ತುಂಬಬೇಕು ಎಂಬ ಕುರಿತು ಸಂಸತ್‌ನಲ್ಲಿ ದಶಕಗಳಿಂದ ಚರ್ಚೆ ನಡೆಯುತ್ತಿದ್ದವು. ಈ ಕುರಿತು ಅಧ್ಯಯನ ಕೈಗೊಳ್ಳಲು ಹಲವು ಸಮಿತಿ ರಚಿಸಲಾಗಿತ್ತು. ಜಾಗತಿಕ ಸರಾಸರಿ ವಯಸ್ಸಿಗಿಂತ ಭಾರತೀಯ ಯೋಧರ ಸರಾಸರಿ ವಯಸ್ಸು ಹೆಚ್ಚು ಇದ್ದ ಬಗ್ಗೆ ಕಳವಳ ವ್ಯಕ್ತವಾಗಿತ್ತು' ಎಂದರು.

'ಹಲವಾರು ಸಮಿತಿಗಳು ಈ ವಿಷಯವನ್ನು ಪ್ರಸ್ತಾಪಿಸುತ್ತಲೇ ಇದ್ದವು. ರಾಷ್ಟ್ರೀಯ ಭದ್ರತೆಗೆ ಒದಗಿದ್ದ ಈ ಸವಾಲನ್ನು ಬಗೆಹರಿಸಲು ಈ ಹಿಂದೆ ಗಂಭೀರ ಪ್ರಯತ್ನಗಳು ನಡೆದಿರಲಿಲ್ಲ. ಈಗ, ಅಗ್ನಿಪಥ ಯೋಜನೆ ಮೂಲಕ ಪರಿಹಾರ ಕಂಡುಕೊಳ್ಳಲಾಗಿದೆ' ಎಂದು ವಿವರಿಸಿದರು.

'ಸಾವಿರಾರು ಕೋಟಿ ರೂಪಾಯಿ ಮೊತ್ತದ ಹಗರಣಗಳನ್ನು ಮಾಡುವ ಮೂಲಕ ನಮ್ಮ ಭದ್ರತಾ ಪಡೆಗಳನ್ನು ದುರ್ಬಲಗೊಳಿಸಿದವರೇ ಈಗ ಅಗ್ನಿಪಥ ಯೋಜನೆಯನ್ನು ವಿರೋಧಿಸುತ್ತಿದ್ದಾರೆ. ವಾಯುಪಡೆ ಬತ್ತಳಿಕೆಗೆ ಆಧುನಿಕ ಯುದ್ಧವಿಮಾನಗಳ ಸೇರ್ಪಡೆ ಇವರಿಗೆ ಬೇಕಿರಲಿಲ್ಲ. ತೇಜಸ್ ಯುದ್ಧವಿಮಾನವನ್ನು ಮುಚ್ಚಿಡಲು ಎಲ್ಲ ಸಿದ್ಧತೆಗಳನ್ನು ನಡೆಸಲಾಗಿತ್ತು' ಎಂದು ಮೋದಿ ವಾಗ್ದಾಳಿ ನಡೆಸಿದರು.



ಕಾರ್ಗಿಲ್ ವಿಜಯ ದಿವಸ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ದ್ರಾಸ್‌ನಲ್ಲಿರುವ ಯುದ್ಧ ಸ್ಮಾರಕದಲ್ಲಿ ಹುತಾತ್ಮ ಯೋಧರಿಗೆ ಶುಕ್ರವಾರ ಗೌರವ ಸಲ್ಲಿಸಿದರು ಎಎಫ್‌ಪಿ ಚಿತ್ರ

ಪ್ರತಿಪಕ್ಷಗಳ ನಾಯಕರ ಪ್ರತಿಕ್ರಿಯೆ

ಕಾರ್ಗಿಲ್ ವಿಜಯೋತ್ಸವ ವೇಳೆಯೂ ಮೋದಿ ಸುಳ್ಳು ಹೇಳುತ್ತಿದ್ದಾರೆ. ಅಗ್ನಿಪಥ ಯೋಜನೆ ಜಾರಿಯು ಮೂರು ಪಡೆಗಳಿಗೆ ಅಚ್ಚರಿ ತಂದಿತ್ತು ಎಂಬುದಾಗಿ ಆಗಿನ ಸೇನೆ ಮುಖ್ಯಸ್ಥ ಎಂ.ಎಂ.ನರವಣೆ ಪತ್ರ ಬರೆದಿದ್ದರು
ಜೈರಾಮ್ ರಮೇಶ್
ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಮೋದಿ ಹೇಳಿಕೆಯನ್ನು ಒಪ್ಪಲಾಗದು. ಸೇನೆಯಲ್ಲಿ ಪೂರ್ಣಾವಧಿ ಕರ್ತವ್ಯ ನಿರ್ವಹಿಸಬೇಕು. ಅಗ್ನಿಪಥ ಯೋಜನೆ ಈ ವ್ಯವಸ್ಥೆಗೆ ಕೊನೆ ಹಾಡಲಿದೆ. ಯೋಜನೆ ವಿರುದ್ಧದ ನಮ್ಮ ಹೋರಾಟ ನಿಲ್ಲದು
ಡೋಲಾ ಸೇನ್
ಟಿಎಂಸಿಯ ರಾಜ್ಯಸಭಾ ಸಂಸದೆ

ಅಗ್ನಿವೀರರಿಗೆ ಯಾವುದೇ ಸಾಮಾಜಿಕ ಭದ್ರತೆ ಒದಗಿಸದ ಕಾರಣ, ಅಗ್ನಿಪಥ ಯೋಜನೆಯ ಕುರಿತು ಮರು ಪರಿಶೀಲನೆ ನಡೆಸಬೇಕು
ಮಹುವಾ ಮಾಜಿ
ಜೆಎಂಎಂ ಸಂಸದೆ

ಹಳೆಯ ನೇಮಕಾತಿ ಪದ್ಧತಿಯೇ ಉತ್ತಮ. ಅದು ಸೈನಿಕರಿಗೆ ಉತ್ತಮ ಭವಿಷ್ಯ ಹಾಗೂ ಅವರ ಕುಟುಂಬಗಳಿಗೆ ಭದ್ರತೆಯನ್ನು ಖಾತರಿಪಡಿಸುತ್ತಿತ್ತು
ಧರ್ಮೇಂದ್ರ ಯಾದವ್
ಸಮಾಜವಾದಿ ಪಕ್ಷ ನಾಯಕ

ಬಿಜೆಪಿ ಮುಖಂಡರ ಸಮರ್ಥನೆ

ಅಗ್ನಿಪಥ ಉತ್ತಮ ಯೋಜನೆ. ನನ್ನ ಮಗಳು ಕೂಡ ಸೇನೆ ಸೇರಲು ಸಿದ್ಧತೆ ನಡೆಸಿದ್ದಾಳೆ. ಯೋಜನೆ ಕುರಿತು ಗೊಂದಲಕ್ಕೆ ಒಳಗಾಗಬಾರದು
ರವಿ ಕಿಶನ್
ಬಿಜೆಪಿ ಸಂಸದ

ಇಸ್ರೇಲ್‌ನಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಸೇನಾ ತರಬೇತಿ ಕಡ್ಡಾಯವಿರುವಂತೆ, ಅಗ್ನಿಪಥ ಯೋಜನೆ ದೇಶದ ಯುವ ಜನರಲ್ಲಿ ರಾಷ್ಟ್ರ ಭಕ್ತಿಯನ್ನು ತುಂಬುವ ಉದ್ದೇಶ ಹೊಂದಿದೆ
ಬ್ರಿಜಮೋಹನ್ ಅಗ್ರವಾಲ್
ಬಿಜೆಪಿ ಸಂಸದ

'ಇತಿಹಾಸದಿಂದ ಪಾಕ್ ಪಾಠ ಕಲಿತಿಲ್ಲ'

ಶ್ರೀನಗರ: ಪಾಕಿಸ್ತಾನ ಇತಿಹಾಸದಿಂದ ಪಾಠ ಕಲಿತಿಲ್ಲ. ಭಯೋತ್ಪಾದನೆ ಮತ್ತು ಪರೋಕ್ಷ ಯುದ್ಧದ ಮೂಲಕ ಅದು ಪ್ರಸ್ತುತವಾಗಲು ಯತ್ನಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದರು.

'ಭಯೋತ್ಪಾದಕ ಚಟುವಟಿಕೆಗಳನ್ನು ಹೊಸಕಿ ಹಾಕಲು ಭಾರತೀಯ ಸೇನೆ ತನ್ನ ಸಂಪೂರ್ಣ ಸಾಮರ್ಥ್ಯ ಬಳಸಲಿದ್ದು, ದೇಶದ ಶತ್ರುಗಳಿಗೆ ತಕ್ಕ ಉತ್ತರ ನೀಡಲಿದೆ' ಎನ್ನುವ ಮೂಲಕ ಅವರು ಪಾಕಿಸ್ತಾನಕ್ಕೆ ಕಠಿಣ ಎಚ್ಚರಿಕೆ ನೀಡಿದರು.

1999ರಲ್ಲಿ ಶಾಂತಿ ಸ್ಥಾಪಿಸಲು ಭಾರತ ಯತ್ನಿಸುತ್ತಿತ್ತು. ಇದಕ್ಕೆ ಪ್ರತಿಯಾಗಿ ಪಾಕಿಸ್ತಾನ ತನ್ನ ವಿಶ್ವಾಸಘಾತುಕ ಮುಖ ತೋರಿಸಿತು
ನರೇಂದ್ರ ಮೋದಿ, ಪ್ರಧಾನಿ

ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ ಕಾರ್ಗಿಲ್‌ನಲ್ಲಿರುವ ಯುದ್ಧ ಸ್ಮಾರಕದಲ್ಲಿ ಹುತಾತ್ಮ ಯೋಧರಿಗೆ ಗೌರವ ಸಲ್ಲಿಸಿದ ನಂತರ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಭಯೋತ್ಪಾದನೆ ನಿಯಂತ್ರಕರು ನನ್ನ ಮಾತುಗಳನ್ನು ನೇರವಾಗಿ ಕೇಳಿಸಿಕೊಳ್ಳಲು ಸಾಧ್ಯವಿರುವ ಸ್ಥಳದಿಂದ ನಾನು ಮಾತನಾಡುತ್ತಿರುವೆ. ಅವರ ದುಷ್ಟತನದ ಉದ್ದೇಶಗಳು ಈಡೇರುವುದಿಲ್ಲ ಎಂದು ಅವರಿಗೆ ಹೇಳಬಯಸುವೆ' ಎಂದರು.

'ಲಡಾಖ್ ಅಥವಾ ಜಮ್ಮು–ಕಾಶ್ಮೀರವೇ ಇರಲಿ, ಅಭಿವೃದ್ಧಿ ಕಾರ್ಯಗಳಿಗೆ ಎದುರಾಗುವ ಪ್ರತಿಯೊಂದು ಸವಾಲನ್ನು ಭಾರತ ಮೆಟ್ಟಿ ನಿಲ್ಲಲಿದೆ' ಎಂದೂ ಹೇಳಿದರು.

ಚಾಲನೆ: ಶಿಂಕುನ್ ಲಾ ಸುರಂಗ ಮಾರ್ಗ ನಿರ್ಮಾಣ ಯೋಜನೆಗೆ ಪ್ರಧಾನಿ ಮೋದಿ ಅವರು ಇದೇ ವೇಳೆ ವರ್ಚುವಲ್ ಆಗಿ ಚಾಲನೆ ನೀಡಿದರು. 4.1 ಕಿ.ಮೀ. ಉದ್ದದ ಜೋಡು ಮಾರ್ಗದ ಈ ಸುರಂಗವನ್ನು 15,800 ಅಡಿ ಎತ್ತರದಲ್ಲಿ ನಿಮು–ಪದಮ್–ದರ್ಚಾ ರಸ್ತೆಯಲ್ಲಿ ನಿರ್ಮಿಸಲಾಗುತ್ತಿದೆ.

ಈ ಸುರಂಗ ಮಾರ್ಗವು ಲೇಹ್‌ಗೆ ಸರ್ವ ಋತುವಿನಲ್ಲಿಯೂ ಸಂಪರ್ಕ ಒದಗಿಸಲಿದೆ.

ಪ್ರಧಾನಿ ಮೋದಿ ಹೇಳಿಕೆ ಶುದ್ಧ ಸುಳ್ಳು: ಖರ್ಗೆ



ನವದೆಹಲಿ: ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ಯೋಧರಿಗೆ ಗೌರವ ಸಲ್ಲಿಸುವ ಸಂದರ್ಭದಲ್ಲಿಯೂ ಪ್ರಧಾನಿ ನರೇಂದ್ರ ಮೋದಿ ಅವರು, ವಿವಾದಾತ್ಮಕ ಅಗ್ನಿಪಥ ಯೋಜನೆ ಪ್ರಸ್ತಾಪಿಸಿ, ಕೀಳು ರಾಜಕೀಯ ಮಾಡುತ್ತಿದ್ದಾರೆ ಎಂದು ಕಾಂಗ್ರೆಸ್ ಸೇರಿದಂತೆ ವಿಪಕ್ಷಗಳು ಶುಕ್ರವಾರ ಟೀಕಿಸಿವೆ.

ಕಾರ್ಗಿಲ್ ವಿಜಯ ದಿವಸ ಅಂಗವಾಗಿ ಕಾರ್ಗಿಲ್‌ನಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡುವ ವೇಳೆ, 'ಅಗ್ನಿಪಥ ಯೋಜನೆಯು ಸೇನೆಯ ಚಿಂತನೆ' ಎಂಬ ಮೋದಿ ಅವರ ಹೇಳಿಕೆಯನ್ನು ಕಾಂಗ್ರೆಸ್ ಖಂಡಿಸಿದೆ.

'ಅಗ್ನಿಪಥ ಯೋಜನೆ ಕುರಿತಾಗಿ ಮೋದಿ ಅವರ ಹೇಳಿಕೆ ಶುದ್ಧ ಸುಳ್ಳು ಹಾಗೂ ಭದ್ರತಾ ಪಡೆಗಳಿಗೆ ಮಾಡಿರುವ ಘೋರ ಅವಮಾನ. ಈ ಯೋಜನೆ ಕುರಿತು ಮೋದಿ ಅವರು ಸುಳ್ಳುಗಳು ಹಾಗೂ ಗೊಂದಲ ಹಬ್ಬಿಸುತ್ತಿದ್ದಾರೆ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದ್ದಾರೆ.

'ಐಟಿಬಿಪಿಗೆ ಅಗ್ನಿವೀರರಿಂದ ಅನುಕೂಲ'

ನವದೆಹಲಿ (ಪಿಟಿಐ): ಭಾರತ ಮತ್ತು ಚೀನಾ ನಡುವಿನ ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಉದ್ದಕ್ಕೂ ಕಾವಲಿರುವ ಇಂಡೊ–ಟಿಬೆಟನ್ ಗಡಿ ಪೊಲೀಸ್ (ಐಟಿಬಿಪಿ) ಪಡೆಗೆ ಅಗ್ನಿವೀರರಿಂದ ಬಹಳ ಅನುಕೂಲವಾಗಲಿದೆ ಎಂದು ಐಟಿಬಿಪಿ ಪ್ರಧಾನ ನಿರ್ದೇಶಕ ರಾಹುಲ್ ರಸಗೋತ್ರ ಶುಕ್ರವಾರ ಹೇಳಿದ್ದಾರೆ.

ಅವರ ಹೇಳಿಕೆ ಇರುವ ವಿಡಿಯೊವನ್ನು ಗೃಹ ಸಚಿವಾಲಯ ತನ್ನ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದೆ.

'ಸೇನೆಯಲ್ಲಿ ಸೇವೆ ಸಲ್ಲಿಸಿರುವ ಅಗ್ನಿವೀರರನ್ನು ಐಟಿಬಿಪಿಯಲ್ಲಿ ನೇಮಕ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ' ಎಂದು ಅವರು ಹೇಳಿದ್ದಾರೆ.

ಸುದ್ದಿ 2 ನಿಮಿಷ

ರಾಹುಲ್ ಗಾಂಧಿಗೆ ಸುನೇಹ್ರಿ ಬಾಗ್ ಮಾರ್ಗದ ಬಂಗಲೆ

ನವದೆಹಲಿ: ಲೋಕಸಭೆಯ ವಿರೋಧ ಪಕ್ಷದ ನಾಯಕ, ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರಿಗೆ ಇಲ್ಲಿನ 5 ಸುನೇಹ್ರಿ ಮಾರ್ಗದ ಟೈಪ್–8 ಬಂಗಲೆಯನ್ನು ಹಂಚಿಕೆ ಮಾಡಲಾಗಿದೆ.

'ರಾಹುಲ್ ಗಾಂಧಿ ಈ ಮೊದಲು ಎರಡು ಬಂಗಲೆಗಳನ್ನು ಆಯ್ಕೆ ಮಾಡಿಕೊಂಡಿದ್ದರು. ಅವುಗಳನ್ನು ಎನ್‌ಡಿಎ ನಾಯಕರಿಗೆ ಹಂಚಿಕೆ ಮಾಡಿರುವ ಕಾರಣ, ಸುನೇಹ್ರಿ ಮಾರ್ಗದ ಬಂಗಲೆಯನ್ನು ಒಪ್ಪಿಕೊಂಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.



'ಮೋದಿ' ಉಪನಾಮ ಬಳಕೆಗೆ ಸಂಬಂಧಿಸಿದ ಮಾನನಷ್ಟ ಪ್ರಕರಣದಲ್ಲಿ ರಾಹುಲ್ ಅವರು ತಪ್ಪಿತಸ್ಥರು ಎಂದು ಗುಜರಾತ್ ಕೋರ್ಟ್ ಹೇಳಿತ್ತು. ರಾಹುಲ್ ಅವರಿಗೆ ಎರಡು ವರ್ಷಗಳ ಜೈಲುಶಿಕ್ಷೆ ವಿಧಿಸಿತ್ತು. ಇದರ ಪರಿಣಾಮವಾಗಿ ರಾಹುಲ್ ಅವರ ಲೋಕಸಭಾ ಸದಸ್ಯತ್ವವು ರದ್ದಾಗಿತ್ತು. ಇದರ ಬೆನ್ನಲ್ಲೇ, ತುಘಲಕ್ ಮಾರ್ಗದ ತಾವು ವಾಸವಿದ್ದ ಬಂಗಲೆಯನ್ನು ತೆರವುಗೊಳಿಸಿದ್ದರು.

ರಾಹುಲ್ ಅವರಿಗೆ ವಿಧಿಸಿದ್ದ ಶಿಕ್ಷೆಗೆ ಸುಪ್ರೀಂ ಕೋರ್ಟ್ ತಡೆ ನೀಡಿತು. ಇದರ ನಂತರ ರಾಹುಲ್ ಗಾಂಧಿ ಅವರ ಸದಸ್ಯತ್ವವನ್ನು ಮರುಸ್ಥಾಪಿಸಲಾಯಿತು.

ಆದರೆ, ಅವರು ಪುನಃ 10, ತುಘಲಕ್ ಮಾರ್ಗದ ಬಂಗಲೆಗೆ ಮರಳದೇ, ತಾಯಿ ಸೋನಿಯಾ ಗಾಂಧಿ ಅವರೊಂದಿಗೆ 10, ಜನಪಥ ನಿವಾಸದಲ್ಲಿ ವಾಸಿಸುತ್ತಿದ್ದಾರೆ.

ಖಾಸಗಿ ಕಂಪನಿಗಳಲ್ಲಿ ಉದ್ಯೋಗ ಸ್ಥಳೀಯರಿಗೆ ಆದ್ಯತೆ: ಸಾವಂತ್

ಪಣಜಿ (ಪಿಟಿಐ): 'ಖಾಸಗಿ ಕಂಪನಿಗಳಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡುವುದನ್ನು ಖಚಿತಪಡಿಸಿಕೊಳ್ಳಲು 'ರಾಜ್ಯ ಉದ್ಯೋಗ ವಿನಿಮಯ ಕಾಯ್ದೆ'ಗೆ ತಿದ್ದುಪಡಿ ತರಲು ನಿರ್ಧರಿಸಲಾಗಿದೆ' ಎಂದು ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರು ಶುಕ್ರವಾರ ವಿಧಾನಸಭೆಯಲ್ಲಿ ತಿಳಿಸಿದರು.

'ಈಗಿನ ಪರಿಸ್ಥಿತಿಯಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡಬೇಕು ಎಂದು ಬಲವಂತ ಮಾಡಲು ಸಾಧ್ಯವಿಲ್ಲ. ಉದ್ಯೋಗ ವಿನಿಮಯ ಕೇಂದ್ರವು ನೇಮಕಾತಿ ವೇಳೆ ಖಾಸಗಿ ಸಂಸ್ಥೆಗಳಿಗೆ ಸ್ಥಳೀಯರಿಗೆ ಆದ್ಯತೆ ನೀಡುತ್ತದೆ. ನೇಮಕಾತಿ ವೇಳೆ ಅಭ್ಯರ್ಥಿಯ ಕೌಶಲ, ವಿದ್ಯಾರ್ಹತೆ ಹಾಗೂ ನಡವಳಿಕೆಯನ್ನು ಆಧರಿಸಿರುತ್ತದೆ' ಎಂದು ತಿಳಿಸಿದರು.

'ಕೈಗಾರಿಕೆಗಳ ವಿಶ್ವಾಸಕ್ಕೆ ಪಡೆದ ನಂತರ 10 ಹಾಗೂ ಅದಕ್ಕಿಂತ ಹೆಚ್ಚಿನ ನೇಮಕಾತಿ ವೇಳೆ ಸ್ಥಳೀಯರಿಗೆ ಆದ್ಯತೆ ನೀಡುವ 'ರಾಜ್ಯ ಉದ್ಯೋಗ ವಿನಿಮಯ ಕಾಯ್ದೆ'–1959 ತಿದ್ದುಪಡಿ ತರಲಾಗುವುದು. ಈ ಹಿಂದೆ 25ಕ್ಕಿಂತಲೂ ಹೆಚ್ಚಿನ ನೇಮಕಾತಿ ವೇಳೆ ಆದ್ಯತೆ ನೀಡಬೇಕು ಎಂದು ಕಾನೂನು ತಿದ್ದುಪಡಿ ತರಲು ನಿರ್ಧರಿಸಲಾಗಿತ್ತು' ಎಂದು ಸಾವಂತ್ ಸ್ಪಷ್ಟಪಡಿಸಿದರು. 'ಕಾಯ್ದೆಗೆ ತಿದ್ದುಪಡಿ ಬಂದರೆ, ಯುವಕರಿಗೆ ಗರಿಷ್ಠ ಸಂಖ್ಯೆಯಲ್ಲಿ ಉದ್ಯೋಗ ಪಡೆಯಲಿದ್ದಾರೆ' ಎಂದರು.

ಅಪಾಯ ಮಟ್ಟ ಮೀರಿದ ಪಂಚಗಂಗಾ

ಕೊಲ್ಹಾಪುರ/ಸಾಂಗ್ಲಿ (ಪಿಟಿಐ): ಪಶ್ಚಿಮ ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯಲ್ಲಿ ಪಂಚಗಂಗಾ ನದಿಯು ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ಹಲವು ಪ್ರದೇಶಗಳು ಜಲಾವೃತವಾಗಿವೆ. ಸುಮಾರು ಎರಡು ಸಾವಿರಕ್ಕೂ ಹೆಚ್ಚು ಜನರನ್ನು ತಗ್ಗು ಪ್ರದೇಶಗಳಿಂದ ಸ್ಥಳಾಂತರಿಸಲಾಗಿದೆ.

ಸಾಂಗ್ಲಿಯಲ್ಲಿ ಕೃಷ್ಣಾ ನದಿಯ ನೀರಿನ ಮಟ್ಟವೂ ಹೆಚ್ಚಾಗಿದೆ. ಸುರಕ್ಷತೆಯ ಕ್ರಮವಾಗಿ ಸಾಂಗ್ಲಿ ಜೈಲಿನಿಂದ 80 ಕೈದಿಗಳನ್ನು ಕೊಲ್ಹಾಪುರಕ್ಕೆ ಜೈಲು ಆಡಳಿತವು ಸ್ಥಳಾಂತರಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಂಚಗಂಗಾ ನದಿಯ ನೀರಿನ ಅಪಾಯದ ಮಟ್ಟ 43 ಅಡಿಗಳನ್ನು ಮೀರಿದ್ದು, ರಾಜಾರಾಮ್ ವೈರ್ ಸ್ಥಳದಲ್ಲಿ ಶುಕ್ರವಾರ ಮಧ್ಯಾಹ್ನದ ವೇಳೆಗೆ ನದಿಯ ನೀರಿನ ಹರಿವು 45.2 ಅಡಿಗಳಿಗೆ ಏರಿಕೆಯಾಗಿದೆ ಎಂದು ಕೊಲ್ಹಾಪುರ ಜಿಲ್ಲಾಡಳಿತ ಮಾಹಿತಿ ನೀಡಿದೆ.

ಜಿಲ್ಲಾಡಳಿತವು ನಗರದ ಸುತರವಾಡ ಮತ್ತು ಕುಂಬಾರವಾಡ ಪ್ರವಾಹ ಪೀಡಿತ ಪ್ರದೇಶಗಳಿಂದ ಜನರನ್ನು ಸ್ಥಳಾಂತರಿಸಲು ಪ್ರಾರಂಭಿಸಿದೆ. ಕರವೀರ ತಾಲ್ಲೂಕಿನ ಚಿಖಳಿ ಮತ್ತು ಅಂಬೇವಾಡಿ ಮತ್ತು ಹತ್ಕಲಂಗಣೆ, ಶಿರೋಳ ಮತ್ತು ಇಚಲಕರಂಜಿ ತಾಲ್ಲೂಕುಗಳ ಕೆಲವು ಗ್ರಾಮಗಳ ಜನರನ್ನು ಸ್ಥಳಾಂತರಿಸಲಾಗಿದೆ ಎಂದು ಕೊಲ್ಹಾಪುರ ಜಿಲ್ಲಾಧಿಕಾರಿ ಅಮೋಲ್ ಯೆಡ್ಗೆ ತಿಳಿಸಿದರು.

ಅಣೆಕಟ್ಟೆಗಳಿಂದ ನೀರು ಹೊರಕ್ಕೆ: ರಾಧಾನಗರಿ ಅಣೆಕಟ್ಟಿನ 6 ಗೇಟ್‌ಗಳನ್ನು ತೆರೆದು 10,068 ಕ್ಯುಸೆಕ್ ನೀರು ಹರಿಸಲಾಗುತ್ತಿದೆ. ಕೊಯ್ನಾ ಅಣೆಕಟ್ಟು ಶೇ 77ರಷ್ಟು ಭರ್ತಿಯಾಗಿದ್ದು, 30 ಸಾವಿರ ಕ್ಯುಸೆಕ್ ನೀರು ಹೊರ ಬಿಡಲಾಗುತ್ತಿದೆ. ವಾರ್ಣಾ ಅಣೆಕಟ್ಟು ಶೇ 89ರಷ್ಟು ಭರ್ತಿಯಾಗಿದ್ದು, 15,000 ಕ್ಯುಸೆಕ್ ನೀರು ಹರಿಸಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.



ಗುಜರಾತ್‌ನ ಸೂರತ್‌ನಲ್ಲಿ ಶುಕ್ರವಾರ ಭಾರಿ ಮಳೆಯಿಂದ ತಗ್ಗುಪ್ರದೇಶದ ಬಡಾವಣೆ ಜಲಾವೃತವಾಗಿದೆ ಪಿಟಿಐ ಚಿತ್ರ

ದಕ್ಷಿಣ ಗುಜರಾತ್‌ನಲ್ಲಿ ಮಳೆ: 2,500 ಜನರ ಸ್ಥಳಾಂತರ

ನವಸಾರಿ (ಪಿಟಿಐ): ದಕ್ಷಿಣ ಗುಜರಾತ್‌ನಲ್ಲಿ ಭಾರಿ ಮಳೆಯಿಂದಾಗಿ ಪೂರ್ಣಾ ನದಿ ಅಪಾಯದ ಮಟ್ಟ ಮೀರಿದೆ. ಇದರಿಂದ ಹಲವು ಗ್ರಾಮಗಳು ಜಲಾವೃತವಾಗಿವೆ. 2,500ಕ್ಕೂ ಹೆಚ್ಚು ಜನರನ್ನು ತಗ್ಗು-ಪ್ರದೇಶಗಳಿಂದ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ.

'ನವಸಾರಿ ಜಿಲ್ಲೆಯಲ್ಲಿ ಹಾದುಹೋಗುವ ಪೂರ್ಣಾ ನದಿ ಅಪಾಯದ ಮಟ್ಟ 23 ಅಡಿಗಳನ್ನು ಮೀರಿ, 28 ಅಡಿಗಳಿಗೆ ತಲುಪಿದೆ' ಎಂದು ಜಿಲ್ಲಾಧಿಕಾರಿ ಕ್ಷಿಪ್ರಾ ಅಗ್ರೆ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಕಾವಡ್ ಯಾತ್ರೆ: ಹೆಸರು ಪ್ರದರ್ಶನ–ತಡೆಯಾಜ್ಞೆ ವಿಸ್ತರಣೆ

ನವದೆಹಲಿ (ಪಿಟಿಐ): 'ಕಾವಡ್ ಯಾತ್ರೆ'ಯ ಮಾರ್ಗಗಳಲ್ಲಿರುವ ತಿಂಡಿ–ತಿನಿಸುಗಳ ಮಳಿಗೆಗಳ ಮಾಲೀಕರು ತಮ್ಮ ಹೆಸರು ಮತ್ತು ಇತರ ವಿವರಗಳನ್ನು ಮಳಿಗೆಗಳ ಮುಂದೆ ಪ್ರದರ್ಶಿಸುವಂತೆ ಹೊರಡಿಸಿದ್ದ ನಿರ್ದೇಶನಗಳಿಗೆ ನೀಡಿದ್ದ ತಡೆಯಾಜ್ಞೆಯನ್ನು ಸುಪ್ರೀಂ ಕೋರ್ಟ್ ವಿಸ್ತರಿಸಿದೆ.

ನ್ಯಾಯಮೂರ್ತಿಗಳಾದ ಹೃಷಿಕೇಶ್ ರಾಯ್ ಮತ್ತು ಎಸ್‌ವಿಎನ್ ಭಟ್ಟಿ ಅವರಿದ್ದ ಪೀಠ, 'ಜುಲೈ 22ರಂದು ನೀಡಿದ್ದ ಆದೇಶಕ್ಕೆ ಸಂಬಂಧಿಸಿದಂತೆ ಯಾವುದೇ ಸ್ಪಷ್ಟೀಕರಣ ನೀಡುವುದಿಲ್ಲ' ಎಂದು ಶುಕ್ರವಾರ ತಿಳಿಸಿತು. 'ಏಕೆಂದರೆ, ನಮ್ಮ ಆದೇಶದಲ್ಲಿ ಹೇಳಬೇಕಾದುದನ್ನು ಜುಲೈ 22ರಂದೇ ಹೇಳಿದ್ದೇವೆ. ಹೆಸರು ಬಹಿರಂಗಪಡಿಸಲು ಯಾರನ್ನೂ ಒತ್ತಾಯಿಸುವುದಿಲ್ಲ' ಎಂದಿತು.

ಮಳಿಗೆಗಳ ಮಾಲೀಕರು ಮಳಿಗೆಗಳ ಮುಂದೆ ತಮ್ಮ ಹೆಸರು ಪ್ರದರ್ಶಿಸುವಂತೆ ಬಿಜೆಪಿ ಆಡಳಿತವಿರುವ ಉತ್ತರ ಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳಲ್ಲಿ ಸುತ್ತೋಲೆ ಹೊರಡಿಸಲಾಗಿತ್ತು. ಮಧ್ಯಪ್ರದೇಶದ ಉಜ್ಜಯಿನಿಯಲ್ಲಿ ಪಾಲಿಕೆಯ ಇದೇ ರೀತಿಯ ಸುತ್ತೋಲೆ ಹೊರಡಿಸಿತ್ತು. ಸುಪ್ರೀಂ ಕೋರ್ಟ್ ಈ ಮೂರೂ ರಾಜ್ಯಗಳಿಗೆ ನೋಟಿಸ್ ಜಾರಿಗೊಳಿಸಿತ್ತು.

ನೋಟಿಸ್‌ಗೆ ಉತ್ತರಿಸಿರುವುದಾಗಿ ಉತ್ತರ ಪ್ರದೇಶ ಸರ್ಕಾರದ ಪರ ಹಾಜರಿದ್ದ ವಕೀಲ ಮುಕುಲ್ ರೋಹಟಗಿ ತಿಳಿಸಿದರು. ಸುತ್ತೋಲೆಗೆ ತಡೆಯಾಜ್ಞೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳಿಗೆ ಪ್ರತಿಕ್ರಿಯಿಸುವಂತೆ ಪೀಠವು ಮಧ್ಯಪ್ರದೇಶ, ಉತ್ತರಾಖಂಡ ಸರ್ಕಾರಗಳಿಗೆ ಸೂಚಿಸಿ, ಮುಂದಿನ ವಿಚಾರಣೆಯನ್ನು ಆಗಸ್ಟ್ 5ಕ್ಕೆ ನಿಗದಿಪಡಿಸಿತು.

'ಈಗ ಇರುವ ಕಾನೂನಿನ ಅಡಿಯಲ್ಲೇ ಸುತ್ತೋಲೆ ಹೊರಡಿಸಿದ್ದೇವೆ. ಮುಂದಿನ ವಿಚಾರಣೆಯನ್ನು ಸೋಮವಾರ ಕೈಗೆತ್ತಿಕೊಳ್ಳಬೇಕು. ವಿಳಂಬವಾದರೆ ವಿಚಾರಣೆ ಪ್ರಕ್ರಿಯೆಯೇ ನಿಷ್ಪ್ರಯೋಜಕವಾಗುತ್ತದೆ' ಎಂದು ಮುಕುಲ್ ರೋಹಟಗಿ ಮನವಿ ಮಾಡಿದರು.

ಅದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ಹೃಷಿಕೇಶ್ ರಾಯ್, 'ಹಾಗಾದಲ್ಲಿ ಈ ಕಾನೂನು ರಾಜ್ಯದಾದ್ಯಂತ ಜಾರಿಯಾಗಲಿ. ಕೆಲವು ಪ್ರದೇಶಗಳಿಷ್ಟೇ ಸೀಮಿತಗೊಳಿಸಬೇಡಿ. ಎಲ್ಲೆಡೆ ಕಾನೂನು ಜಾರಿಗೊಳಿಸಲಾಗಿದೆ ಎಂಬುದನ್ನು ತೋರಿಸುವ ಅಫಿಡವಿಟ್ ಸಲ್ಲಿಸಿ' ಎಂದು ಹೇಳಿದರು.

ಸಮರ್ಥನೆ: 'ಕಾವಡ್ ಯಾತ್ರೆ'ಗೆ ಸಂಬಂಧಿಸಿದಂತೆ ತಾನು ಹೊರಡಿಸಿರುವ ನಿರ್ದೇಶನವನ್ನು ಉತ್ತರ ಪ್ರದೇಶ ಸರ್ಕಾರ ಸಮರ್ಥಿಸಿಕೊಂಡಿದೆ. 'ಪಾರದರ್ಶಕತೆಯನ್ನು ತರುವುದು, ಯಾತ್ರೆಯ ವೇಳೆ ಉಂಟಾಗಬಹುದಾದ 'ಸಂಭಾವ್ಯ ಗೊಂದಲ' ತಪ್ಪಿಸುವುದು ಇದರ ಹಿಂದಿನ ಉದ್ದೇಶ ಎಂದು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಪ್ರತಿಕ್ರಿಯೆಯಲ್ಲಿ ಹೇಳಿದೆ.

ರೇಣುಕಾ, ರಾಧಾಗೆ ತಲಾ ಮೂರು ವಿಕೆಟ್ • ಸ್ಮೃತಿ ಅಜೇಯ ಅರ್ಧಶತಕ

ಫೈನಲ್‌ಗೆ ಲಗ್ಗೆಯಿಟ್ಟ ಹರ್ಮನ್ ಬಳಗ

ದಂಬುಲಾ(ಪಿಟಿಐ): ಹಾಲಿ ಚಾಂಪಿಯನ್ ಭಾರತ ಮಹಿಳೆಯರ ಕ್ರಿಕೆಟ್ ತಂಡವು ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯ ಫೈನಲ್‌ಗೆ ಲಗ್ಗೆಯಿಟ್ಟಿತು.

ರಣಗಿರಿ ದಂಬುಲಾ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಸೆಮಿಫೈನಲ್‌ನಲ್ಲಿ ರೇಣುಕಾ ಸಿಂಗ್ (10ಕ್ಕೆ3) ಮತ್ತು ರಾಧಾ ಯಾದವ್ (14ಕ್ಕೆ3) ಅವರ ಅಮೋಘ ಬೌಲಿಂಗ್‌ನಿಂದಾಗಿ ಭಾರತ ತಂಡವು ಬಾಂಗ್ಲಾದೇಶ ಎದುರು 10 ವಿಕೆಟ್‌ಗಳಿಂದ ಗೆದ್ದಿತು.

ಟಾಸ್ ಗೆದ್ದ ಬಾಂಗ್ಲಾದೇಶ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ರೇಣುಕಾ ಸಿಂಗ್ ಮತ್ತು ರಾಧಾ ಅವರ ದಾಳಿಯ ಮುಂದೆ ಕುಸಿಯಿತು. 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 80 ರನ್‌ಗಳ ಅಲ್ಪಮೊತ್ತ ಗಳಿಸಿತು. ನಾಯಕಿ ನಿಜರ್ ಸುಲ್ತಾನಾ (32; 51ಎ, 4X2) ಮತ್ತು ಶೋಮಾ ಅಕ್ತರ್ (ಔಟಾಗದೆ 19, 18ಎ, 4X2) ಅವರಿಬ್ಬರನ್ನು ಬಿಟ್ಟರೆ ಉಳಿದ ಬ್ಯಾಟರ್‌ಗಳು ಎರಡಂಕಿ ಮುಟ್ಟಲಿಲ್ಲ. ಈ ಗುರಿಯನ್ನು ಭಾರತದ ಆರಂಭಿಕ ಜೋಡಿಯು ಸುಲಭವಾಗಿ ಮುಟ್ಟಿತು. 11 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 83 ರನ್ ಗಳಿಸಿತು. ಅದರಲ್ಲಿ ಸ್ಮೃತಿ ಮಂದಾನ (ಔಟಾಗದೆ 55; 39ಎ, 4X9, 6X1) ಅರ್ಧಶತಕ ಗಳಿಸಿದರು.

ಭಾರತ ತಂಡವು ಕಳೆದ ನಾಲ್ಕು ಟಿ20 ಏಷ್ಯಾ ಕಪ್ ಟೂರ್ನಿಗಳಲ್ಲಿ ಮೂರು ಬಾರಿ ಚಾಂಪಿಯನ್ ಆಗಿದೆ. ಇದೀಗ ನಾಲ್ಕನೇ ಪ್ರಶಸ್ತಿಯತ್ತ ಚಿತ್ತ ನೆಟ್ಟಿದೆ.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 20 ಓವರ್‌ಗಳಲ್ಲಿ 8ಕ್ಕೆ80 (ನಿಜರ್ ಸುಲ್ತಾನಾ 32, ಶೋಮಾ ಅಖ್ತರ್ ಔಟಾಗದೆ 19, ರೇಣುಕಾ ಸಿಂಗ್ 10ಕ್ಕೆ3, ರಾಧಾ ಯಾದವ್ 14ಕ್ಕೆ3) ಭಾರತ: 11 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 83 (ಶಫಾಲಿ ವರ್ಮಾ ಔಟಾಗದೆ 26, ಸ್ಮೃತಿ ಮಂದಾನ ಔಟಾಗದೆ 55) ಫಲಿತಾಂಶ: ಭಾರತ ತಂಡಕ್ಕೆ 10 ವಿಕೆಟ್‌ಗಳ ಜಯ.



ವಿಕೆಟ್ ಪಡೆದ ಸಂಭ್ರಮದಲ್ಲಿ ಭಾರತ ತಂಡದ ಆಟಗಾರ್ತಿಯರು –ಬಿಸಿಸಿಐ ವುಮೆನ್ಸ್ ಎಕ್ಸ್ ಚಿತ್ರ

ಪಾಕಿಸ್ತಾನಕ್ಕೆ ಸೋಲು: ಫೈನಲ್‌ಗೆ ಶ್ರೀಲಂಕಾ

ಮತ್ತೊಂದು ರೋಚಕ ಸೆಮಿಫೈನಲ್‌ನಲ್ಲಿ ಆತಿಥೇಯ ಶ್ರೀಲಂಕಾ ತಂಡವು ಮೂರು ವಿಕೆಟ್‌ಗಳಿಂದ ಪಾಕಿಸ್ತಾನ ತಂಡವನ್ನು ಮಣಿಸಿ ಫೈನಲ್ ಪ್ರವೇಶಿಸಿತು. ಫೈನಲ್‌ನಲ್ಲಿ ಭಾರತವನ್ನು ಎದುರಿಸಲಿದೆ.

ಮೊದಲು ಬ್ಯಾಟಿಂಗ್ ನಡೆಸಿದ ಪಾಕ್ ತಂಡವು 20 ಓವರ್‌ಗಳಲ್ಲಿ ನಾಲ್ಕು ವಿಕೆಟ್‌ಗೆ 140 ರನ್ ಗಳಿಸಿತು. ಈ ಗುರಿಯನ್ನು ಶ್ರೀಲಂಕಾ ಕೊನೆಯ ಒಂದು ಎಸೆತ ಬಾಕಿ ಇರುವಂತೆ 7 ವಿಕೆಟ್‌ಗೆ 141 ರನ್ ಗಳಿಸಿ ಗೆಲುವಿನ ಗಡಿ ದಾಟಿತು.

ಸಂಕ್ಷಿಪ್ತ ಸ್ಕೋರ್: ಪಾಕಿಸ್ತಾನ: 20 ಓವರ್‌ಗಳಲ್ಲಿ 4 ವಿಕೆಟ್‌ಗೆ 140 (ಮುನೀಬಾ ಅಲಿ 37, ಗುಲ್ ಫಿರೋಜಾ 25; ಉದೇಶಿಕಾ ಪ್ರಬೋಧನಿ 23ಕ್ಕೆ 2). ಶ್ರೀಲಂಕಾ: 19.5 ಓವರ್‌ಗಳಲ್ಲಿ 7 ವಿಕೆಟ್‌ಗೆ 141 (ಚಾಮರಿ ಅಟಪಟ್ಟು 63, ಸಾದಿಯಾ ಇಕ್ಬಾಲ್ 16ಕ್ಕೆ 4

ಕರಾವಳಿ ರಕ್ಷಣಾ ಪಡೆಯಿಂದ ಸಾಹಸಮಯ ಕಾರ್ಯಾಚರಣೆ

ಹಡಗಿನಲ್ಲಿದ್ದ 14 ಸಿಬ್ಬಂದಿ ರಕ್ಷಣೆ

ಪ್ರಜಾವಾಣಿ ವಾರ್ತೆ

ಮುಂಬೈ: ಪ್ರತಿಕೂಲ ಹವಾಮಾನದಿಂದಾಗಿ ಮಹಾರಾಷ್ಟ್ರದ ಕರಾವಳಿಯಲ್ಲಿ ತೊಂದರೆಗೆ ಸಿಲುಕಿದ್ದ ಸರಕು ಸಾಗಣೆ ನೌಕೆಯೊಂದರ 14 ಸಿಬ್ಬಂದಿಯನ್ನು ಭಾರತೀಯ ಕರಾವಳಿ ಕಾವಲುಪಡೆ (ಐಸಿಜಿ) ಯೋಧರು ಕಾರ್ಯಾಚರಣೆ ನಡೆಸಿ ಶುಕ್ರವಾರ ರಕ್ಷಿಸಿದ್ದಾರೆ.

ಮಹಾರಾಷ್ಟ್ರದ ಕೊಂಕಣ ಭಾಗದಲ್ಲಿ ಪ್ರತಿಕೂಲ ಹವಾಮಾನ ಇದ್ದು, ಭಾರಿ ಮಳೆಯಾಗುತ್ತಿದೆ. ಜೆಎಸ್‌ಡಬ್ಲ್ಯು ಉದ್ಯಮ ಸಮೂಹಕ್ಕೆ ಸೇರಿದ 'ಜೆಎಸ್‌ಡಬ್ಲ್ಯು ರಾಯಗಡ' ಎಂಬ ನೌಕೆ, ಅಲಿಬಾಗ್‌ನಿಂದ ಒಂದು ನಾಟಿಕಲ್ ಮೈಲು ದೂರದಲ್ಲಿ ಅಲೆಗಳ ಹೊಡೆತಕ್ಕೆ ಸಿಲುಕಿ ಅರಬ್ಬಿ ಸಮುದ್ರದಲ್ಲಿ ಕೊಚ್ಚಿ ಹೋಗುತ್ತಿತ್ತು.

ಈ ಹಡಗು ತೊಂದರೆಗೆ ಸಿಲುಕಿದ್ದ ಕುರಿತು, ಗಸ್ತಿನಲ್ಲಿದ್ದ ಭಾರತೀಯ ಕರಾವಳಿ ಕಾವಲುಪಡೆಯ 'ಐಸಿಜಿಎಸ್ ಸಂಕಲ್ಪ' ನೌಕೆ ಹಾಗೂ ಮುಂಬೈನಲ್ಲಿರುವ ಕಡಲ ರಕ್ಷಣಾ ಸಮನ್ವಯ ಕೇಂದ್ರಕ್ಕೆ ಸಂದೇಶ ರವಾನೆಯಾಗಿದೆ.

ತಕ್ಷಣವೇ ಕಾರ್ಯಪ್ರವೃತ್ತರಾದ ಐಸಿಜಿ ಯೋಧರು, ಸರಕು ಸಾಗಣೆ ಹಡಗಿನಲ್ಲಿದ್ದ ಎಲ್ಲ 14 ಸಿಬ್ಬಂದಿಯ ರಕ್ಷಿಸಿ, ಅವರನ್ನು ಹೆಲಿಕಾಪ್ಟರ್ ಮೂಲಕ ಅಲಿಬಾಗ್ ತೀರಕ್ಕೆ ಕರೆತಂದಿದ್ದಾರೆ.

'ಮಹಾರಾಷ್ಟ್ರದ ಕರಾವಳಿಯಲ್ಲಿ ಸಮುದ್ರ ಪ್ರಕ್ಷುಬ್ಧಗೊಂಡಿತ್ತಲ್ಲದೇ, 'ಜೆಎಸ್‌ಡಬ್ಲ್ಯು ರಾಯಗಡ' ಹಡಗಿನ ಎಂಜಿನ್ ಕೊಠಡಿಯಲ್ಲಿ ನೀರು ನುಗ್ಗುತ್ತಿದ್ದ ಕಾರಣ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತ್ತು. ಸಿಬ್ಬಂದಿಯನ್ನು ಏರ್‌ಲಿಫ್ಟ್ ಮಾಡುವುದು ನಮ್ಮ ಮುಂದಿದ್ದ ಏಕೈಕ ಆಯ್ಕೆಯಾಗಿತ್ತು' ಎಂದು ಐಸಿಜಿ ಅಧಿಕಾರಿಗಳು ಹೇಳಿದ್ದಾರೆ.



ಮಹಾರಾಷ್ಟ್ರದ ಅಲಿಬಾಗ್ ಸಮೀಪ ಅರಬ್ಬಿ ಸಮುದ್ರದಲ್ಲಿ ಸಿಲುಕಿದ್ದ 'ಜೆಎಸ್‌ಡಬ್ಲ್ಯು ರಾಯಗಡ' ಎಂಬ ಸರಕು ಸಾಗಣೆ ಹಡಗಿನಲ್ಲಿದ್ದ 14 ಸಿಬ್ಬಂದಿಯನ್ನು ಭಾರತೀಯ ಕರಾವಳಿ ಕಾವಲುಪಡೆಯ ಯೋಧರು ಶುಕ್ರವಾರ ರಕ್ಷಿಸಿದ್ದಾರೆ ಪಿಟಿಐ ಚಿತ್ರ

ಭಾರತ –ಶ್ರೀಲಂಕಾ ಟಿ20 ಕ್ರಿಕೆಟ್ ಪಂದ್ಯ ಇಂದು

ಸೂರ್ಯ–ಗಂಭೀರ್ ಜೋಡಿಗೆ ಮೊದಲ ಸವಾಲು

ಪೆಲೆಕೆಲೆ (ಪಿಟಿಐ): ವಿಶ್ವ ಚಾಂಪಿಯನ್ ಭಾರತ ತಂಡವು ಶನಿವಾರ ಶ್ರೀಲಂಕಾ ತಂಡದ ಎದುರಿನ ಟಿ20 ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಕಣಕ್ಕಿಳಿಯಲಿದೆ.

ನೂತನ ಮುಖ್ಯ ಕೋಚ್ ಗೌತಮ್ ಗಂಭೀರ್ ಮತ್ತು ಹೊಸ ನಾಯಕ ಸೂರ್ಯಕುಮಾರ್ ಯಾದವ್ ಅವರ ಜೋಡಿಗೆ ಇದು 'ಚೊಚ್ಚಲ' ಸರಣಿಯಾಗಿದೆ. ಮೂರು ಟಿ20 ಪಂದ್ಯಗಳು ಈ ಸರಣಿಯಲ್ಲಿ ನಡೆಯಲಿದೆ.

ಎರಡು ಬಾರಿ ವಿಶ್ವ ಚಾಂಪಿಯನ್ ಗಂಭೀರ್ ಅವರು ಈಚೆಗೆ ಐಪಿಎಲ್‌ನಲ್ಲಿ ಮೆಂಟರ್ ಆಗಿದ್ದ ಕೋಲ್ಕತ್ತ ನೈಟ್ ರೈಡರ್ಸ್ ತಂಡವೂ ಚಾಂಪಿಯನ್ ಆಗಿತ್ತು. ಇದೀಗ ರಾಷ್ಟ್ರೀಯ ತಂಡದ ಕೋಚ್ ಆಗಿ ಹೊಸ ಇನಿಂಗ್ಸ್ ಆರಂಭಿಸುತ್ತಿದ್ದಾರೆ. ಟಿ20 ಮಾದರಿಯ ಉತ್ತಮ ಬ್ಯಾಟರ್ ಆಗಿರುವ ಸೂರ್ಯ, ಯಶಸ್ವಿ ಜೈಸ್ವಾಲ್, ರಿಂಕು ಸಿಂಗ್, ರಿಯಾನ್ ಪರಾಗ್ ಹಾಗೂ ಶಿವಂ ದುಬೆ ಅವರು ತಂಡದಲ್ಲಿದ್ದಾರೆ. ಆಲ್‌ರೌಂಡರ್ ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್ ಅವರ ಬಲವೂ ತಂಡಕ್ಕೆ ಇದೆ. ಸ್ಪಿನ್ನರ್ ರವಿ ಬಿಷ್ಣೋಯಿ, ವೇಗಿ ಅರ್ಷದೀಪ್ ಸಿಂಗ್, ಮೊಹಮ್ಮದ್ ಸಿರಾಜ್ ಅವರು ಬೌಲಿಂಗ್ ವಿಭಾಗದ ಶಕ್ತಿಯಾಗಿದ್ದಾರೆ.

ಜಿಂಬಾಬ್ವೆ ವಿರುದ್ಧದ ಸರಣಿಯಲ್ಲಿ ನಾಯಕತ್ವ ವಹಿಸಿದ್ದ ಶುಭಮನ್ ಗಿಲ್ ಇಲ್ಲಿ ಉಪನಾಯಕರಾಗಿದ್ದಾರೆ. ಈ ಹಿಂದೆ ಮುಖ್ಯ ಕೋಚ್ ಆಗಿದ್ದ ರಾಹುಲ್ ದ್ರಾವಿಡ್, ನಾಯಕ ರೋಹಿತ್ ಶರ್ಮಾ ಮತ್ತು ಬ್ಯಾಟರ್ ವಿರಾಟ್ ಕೊಹ್ಲಿ ಅವರು ಅಂತರರಾಷ್ಟ್ರೀಯ ಟಿ20 ಮಾದರಿಯಿಂದ ನಿರ್ಗಮಿಸಿದ್ದಾರೆ.

ಚರಿತ ಅಸಲಂಕಾ ನಾಯಕತ್ವದ ಶ್ರೀಲಂಕಾ ತಂಡದಲ್ಲಿ ಅನುಭವಿ ಆಟಗಾರರ ಕೊರತೆ ಇದೆ. ಹಂಗಾಮಿ ಕೋಚ್ ಸನತ್ ಜಯಸೂರ್ಯ ಅವರ ಮುಂದೆ ಈ ತಂಡಕ್ಕೆ ಮಾರ್ಗದರ್ಶನ ನೀಡುವ ಸವಾಲು ಇದೆ. ಟಿ20 ವಿಶ್ವಕಪ್ ಟೂರ್ನಿಯಲ್ಲಿ ತಂಡವು ಕಳಪೆ ಪ್ರದರ್ಶನ ನೀಡಿತ್ತು. ಆದ್ದರಿಂದ ಆಗಿನ ತರಬೇತಿ ಸಲಹೆಗಾರ ಮಹೇಲ ಜಯವರ್ಧನೆ ರಾಜೀನಾಮೆ ನೀಡಿದ್ದರು. ತವರಿನಂಗಳದಲ್ಲಿ ಗೆಲುವಿನ ಆರಂಭ ಮಾಡುವ ಛಲದಲ್ಲಿ ಲಂಕಾ ತಂಡವಿದೆ.

ಪಂದ್ಯ ಆರಂಭ: ರಾತ್ರಿ 7



ಶ್ರೀಲಂಕಾ ತಂಡದ ನಾಯಕ ಚರಿತ ಅಸಲಂಕಾ ಮತ್ತು ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರು ಟ್ರೋಫಿಯೊಂದಿಗೆ –ಪಿಟಿಐ ಚಿತ್ರ





ಅಥ್ಲೀಟ್‌ಗಳ ಮೆರವಣಿಗೆ ಪ್ಯಾರಿಸ್ ನಗರದ ಸೀನ್ ನದಿಯಲ್ಲಿ ಶುಕ್ರವಾರ ನಡೆದ ಒಲಿಂಪಿಕ್ಸ್ ಉದ್ಘಾಟನೆ ಸಮಾರಂಭದಲ್ಲಿ ವಿವಿಧ ದೇಶಗಳ ಕ್ರೀಡಾಪಟುಗಳು ದೋಣಿಯಲ್ಲಿ ಸಾಗಿದರು –ಎಎಫ್‌ಪಿ ಚಿತ್ರಗಳು

ಮತ್ತಷ್ಟು ಮಳೆಯಾಗುವ ಮುನ್ಸೂಚನೆ, ಎಲ್ಲೆಡೆ ಬಿಗಿ ಭದ್ರತೆ • 85 ದೋಣಿಗಳಲ್ಲಿ ಆರು ಕಿ.ಮೀ. ದೂರ ಸಾಗಿದ 7,500 ಮಂದಿ ಅಥ್ಲೀಟುಗಳು

ನದಿ ಅಲೆಗಳಲ್ಲಿ ಪ್ರತಿಫಲಿಸಿದ ಒಲಿಂಪಿಕ್ ಜ್ಯೋತಿ

ಪ್ಯಾರಿಸ್ (ಪಿಟಿಐ/ಎಎಫ್‌ಪಿ): ‘ಬೆಳಕಿನ ನಗರಿ’ಯ ಸೀನ್ ನದಿಯ ನೀರಿನಲ್ಲಿ ಶುಕ್ರವಾರ ರಾತ್ರಿ ಉತ್ಸಾಹದ ಹೊನಲು ಹರಿಯಿತು.

ವಿವಿಧ ಬಣ್ಣ, ಭಾಷೆ, ದೇಶಗಳ ಜನರನ್ನು ಹೊತ್ತು ಸಾಗಿದ ದೋಣಿಗಳ ಪ್ರತಿಬಿಂಬಗಳು ನದಿಯ ನೀರಿಗೆ ಹೊಸ ರಂಗು ತುಂಬಿದವು. ಭ್ರಾತೃತ್ವ, ಮನೋಲ್ಲಾಸ ಮತ್ತು ಮಾನವೀಯತೆಯ ಸಂದೇಶ ಸಾರುವ ಒಲಿಂಪಿಕ್ ಕೂಟಕ್ಕೆ ಚಾಲನೆ ನೀಡಿದ ಖುಷಿಯ ರಂಗು ಅದು. ಗಣ್ಯ ಅಥ್ಲೀಟ್‌ಗಳು ಹಿಡಿದ ಕ್ರೀಡಾಜ್ಯೋತಿಯು ನೀರಿನಲೆಗಳಲ್ಲಿ ಪ್ರತಿಫಲಿಸಿತು.

ಆಧುನಿಕ ಒಲಿಂಪಿಕ್ಸ್ ಇತಿಹಾಸದಲ್ಲಿ ಇದೇ ಮೊದಲ ಸಲ ಕ್ರೀಡಾಂಗಣದಿಂದ ಹೊರಗೆ ಉದ್ಘಾಟನೆ ಸಮಾರಂಭ ನಡೆಯಿತು. ಅದೂ ಸೀನ್ ನದಿಯಲ್ಲಿ ಈ ಅಭೂತಪೂರ್ವ ಕಾರ್ಯಕ್ರಮ ನಡೆಯಿತು. ಸುಮಾರು 7,500 ಅಥ್ಲೀಟುಗಳು 85 ದೋಣಿಗಳಲ್ಲಿ ಆರು ಕಿ.ಮೀ. (ನಾಲ್ಕು ಮೈಲಿ) ದೂರ ಸಾಗಿದರು. ಅದರಲ್ಲಿ ಭಾರತ ತಂಡದ ದೋಣಿಯೂ ಗಮನ ಸೆಳೆಯಿತು. ಟೇಬಲ್ ಟೆನಿಸ್ ಆಟಗಾರ ಅಚಂತ ಶರತ್ ಕಮಲ್ ಮತ್ತು ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ. ಸಿಂಧು ಅವರ ನೇತೃತ್ವದಲ್ಲಿ ಭಾರತೀಯ ಪೋಷಾಕಿನಲ್ಲಿ ಕ್ರೀಡಾಪಟುಗಳು ಮಿಂಚಿದರು. ಕೈಬೀಸುತ್ತ, ತ್ರಿವರ್ಣ ಧ್ವಜವನ್ನು ಬೀಸುತ್ತ ಸಾಗಿದರು.



ಪ್ಯಾರಿಸ್ ನಗರದ ಸೀನ್ ನದಿಯಲ್ಲಿ ಶುಕ್ರವಾರ ನಡೆದ ಒಲಿಂಪಿಕ್ಸ್ ಉದ್ಘಾಟನೆ ಸಮಾರಂಭದಲ್ಲಿ ದೋಣಿಯಲ್ಲಿ ಸಾಗಿದ ಭಾರತದ ಕ್ರೀಡಾಪಟುಗಳು

ವಿಶ್ವ ಭೂಪಟದಲ್ಲಿ ಪುಟ್ಟ ಚುಕ್ಕೆಯಂತೆ ಕಾಣುವ ದೇಶಗಳು, ಯುರೋಪಿನ ದೊಡ್ಡ ರಾಷ್ಟ್ರಗಳ ತಂಡಗಳ ದೋಣಿಗಳು ಸಾಲು ಸಾಲಾಗಿ ಸಾಗಿದವು. ರ್‍ಯಾಪ್ ಗಾಯಕ ಸ್ನೂಪ್ ಡಾಗ್ ಅವರು ಕ್ರೀಡಾಜ್ಯೋತಿಯನ್ನು ಹಿಡಿಯುವ ಗೌರವಕ್ಕೆ ಪಾತ್ರರಾದರು. ಬೇರೆ ಬೇರೆ ದೇಶಗಳ ದಿಗ್ಗಜ ಕ್ರೀಡಾಪಟುಗಳು ಸೇರಿದ್ದರು.

ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್, ಐಒಸಿ ಅಧ್ಯಕ್ಷ ಥಾಮಸ್ ಬಾಕ್ ಮತ್ತಿತರ ಗಣ್ಯರು ಹಾಜರಿದ್ದರು.

ಟಿಕೆಟ್ ಅವ್ಯವಸ್ಥೆ (ಎಎಫ್‌ಪಿ): ಸಮಾರಂಭಕ್ಕೆ ಸಾಕ್ಷಿಯಾಗಲು ಬಂದಿದ್ದ ಪ್ರೇಕ್ಷಕರು ಟಿಕೆಟಿಂಗ್ ಅವ್ಯವಸ್ಥೆಯಿಂದಾಗಿ ಉದ್ದನೆಯ ಸರದಿ ಸಾಲುಗಳಲ್ಲಿ ನಿಲ್ಲಬೇಕಾಯಿತು. ಹಲವು ಗೇಟುಗಳನ್ನು ಒಂದು ಗಂಟೆ ತಡವಾಗಿ ತೆರೆಯಲಾಯಿತು. ಅಲ್ಲಿದ್ದ ಸಿಬ್ಬಂದಿಗೆ ಟಿಕೆಟ್‌ಗಳ ತಪಾಸಣೆಗೆ ಬಳಸುವ ಸ್ಕ್ಯಾನರ್‌ಗಳನ್ನು ತಡವಾಗಿ ನೀಡಿದ್ದು ಈ ಅವ್ಯವಸ್ಥೆಗೆ ಕಾರಣವಾಯಿತು.

‘ಪೊಲೀಸ್ ವ್ಯವಸ್ಥೆ ಚೆನ್ನಾಗಿದ್ದು, ಅವರು ಸಹಕರಿಸಿದರು. ಆದರೆ ವ್ಯವಸ್ಥೆ ಸರಿಯಾಗಿಲ್ಲದೇ ತೊಂದರೆಯಾಯಿತು’ ಎಂದು ಜರ್ಮನಿಯ ಚಿತ್ರ ನಿರ್ಮಾಪಕ, 48 ವರ್ಷ ವಯಸ್ಸಿನ ಮೈಕೆಲ್ ಒಹೊವೆನ್ ಹೇಳಿದರು. ಪತ್ನಿ ಜೊತೆಗೆ ಬಂದಿದ್ದ ಅವರು ತಲಾ ₹83,700 (2,700 ಯೂರೊ) ನೀಡಿ ಎರಡು ಟಿಕೆಟ್‌ಗಳನ್ನು ಖರೀದಿಸಿದ್ದರು. ಸಾಲಿನಲ್ಲಿ ನಿಂತಿದ್ದ ವ್ಯಕ್ತಿಯೊಬ್ಬರು ಕುಸಿದು ಬಿದ್ದು ಅವರಿಗೆ ಪ್ರಥಮ ಚಿಕಿತ್ಸೆ ನೀಡಬೇಕಾಯಿತು.



ಪ್ಯಾರಿಸ್‌ನಲ್ಲಿ ಒಲಿಂಪಿಕ್ಸ್ ಜ್ಯೋತಿ ಹಿಡಿದು ಸಾಗುತ್ತಿರುವ ಅಮೆರಿಕ ಖ್ಯಾತ ರ್‍ಯಾಪರ್ ಸ್ನೂಪ್ ಡಾಗ್ –ಎಎಫ್‌ಪಿ ಚಿತ್ರ

‘ವಿಧ್ವಂಸಕ ಕೃತ್ಯ’: ರೈಲು ಸಂಚಾರ ಅಸ್ತವ್ಯಸ್ತ

ಪ್ಯಾರಿಸ್ (ಎಪಿ/ಎಎಫ್‌ಪಿ/ರಾಯಿಟರ್ಸ್): ಒಲಿಂಪಿಕ್ ಕೂಟದ ಉದ್ಘಾಟನಾ ಸಮಾರಂಭಕ್ಕೆ ಕೆಲವೇ ಗಂಟೆಗಳ ಮುನ್ನ ಪ್ಯಾರಿಸ್‌ನ ವಿವಿಧೆಡೆ ರೈಲು ಸಂಪರ್ಕ ಜಾಲದ ಮೇಲೆ ಸಂಘಟಿತ ದಾಳಿ ನಡೆದಿದ್ದು, ಫ್ರಾನ್ಸ್‌ನಾದ್ಯಂತ ರೈಲು ಸಂಚಾರ ಅಸ್ತವ್ಯಸ್ತಗೊಂಡಿದೆ.

ಸಿಗ್ನಲ್ ಮೂಲಸೌಕರ್ಯ, ಕೇಬಲ್‌ಗಳು ಸೇರಿದಂತೆ ರೈಲ್ವೆಗೆ ಸೇರಿದ ಸ್ವತ್ತುಗಳಿಗೆ ಬೆಂಕಿ ಹಚ್ಚಲಾಗಿದೆ. ಪ್ಯಾರಿಸ್‌ನ ಉತ್ತರ, ನೈರುತ್ಯ ಮತ್ತು ಪೂರ್ವ ಭಾಗಗಳಲ್ಲಿನ ಪ್ರಮುಖ ಜಂಕ್ಷನ್‌ಗಳನ್ನು ಗುರಿಯಾಗಿಸಿ ಗುರುವಾರ ರಾತ್ರಿ ಬೆಂಕಿ ಹಂಚಲಾಗಿದ್ದು, ಭಾರಿ ಪ್ರಮಾಣದಲ್ಲಿ ಹಾನಿ ಉಂಟಾಗಿದೆ ಎಂದು ಫ್ರಾನ್ಸ್‌ನಲ್ಲಿ ರೈಲ್ವೆ ಸಂಪರ್ಕವನ್ನು ನಿರ್ವಹಿಸುತ್ತಿರುವ ಎಸ್‌ಎನ್‌ಸಿಎಫ್ ತಿಳಿಸಿದೆ.

ರಾಜಧಾನಿಯ ಆಗ್ನೇಯ ಭಾಗದಲ್ಲಿ ಶುಕ್ರವಾರ ಬೆಳಗಿನ ಜಾವ ಇಂತಹದೇ ದಾಳಿಯ ಪ್ರಯತ್ನ ನಡೆದಿದ್ದು, ರೈಲ್ವೆ ಸಿಬ್ಬಂದಿ ಅದನ್ನು ವಿಫಲಗೊಳಿಸಿದ್ದಾರೆ.

ಪ್ಯಾರಿಸ್‌ನಿಂದ ದೇಶದ ಇತರ ನಗರಗಳಿಗೆ ಹಾಗೂ ನೆರೆಯ ದೇಶಗಳಿಗೆ ಸಂಪರ್ಕ ಕಲ್ಪಿಸುವ ಹಲವಾರು ಹೈಸ್ಪೀಡ್ ರೈಲುಗಳ ಸಂಚಾರ ರದ್ದುಗೊಳಿಸಲಾಗಿದೆ ಎಂದು ಫ್ರಾನ್ಸ್‌ನ ಸಾರಿಗೆ ಸಚಿವ ಪ್ಯಾಟ್ರಿಸ್ ವೇಗ್ರಿಯೇಟ್ ಹೇಳಿದ್ದಾರೆ.

ಫ್ರಾನ್ಸ್ ಪ್ರಧಾನಿ ಗೇಬ್ರಿಯಲ್ ಅಟ್ಟಲ್ ಅವರು ಈ ದಾಳಿಯನ್ನು ‘ಪೂರ್ವಯೋಜಿತ ಮತ್ತು ಸಂಘಟಿತವಾಗಿ ನಡೆದ ವಿಧ್ವಂಸಕ ಕೃತ್ಯ’ ಎಂದು ಕರೆದಿದ್ದಾರೆ. ‘ಈ ಕೃತ್ಯದ ಹಿಂದಿರುವವರನ್ನು ಪತ್ತೆಹಚ್ಚಿ ಶಿಕ್ಷಿಸಲು ನಮ್ಮ ಗುಪ್ತಚರ ದಳದ ಸಿಬ್ಬಂದಿ ಮತ್ತು ಪೊಲೀಸರು ಕಾರ್ಯಾಚರಣೆ ಆರಂಭಿಸಿದ್ದಾರೆ’ ಎಂದು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಪ್ಯಾರಿಸ್– ಲಂಡನ್ ನಡುವಣ ‘ಯೂರೊಸ್ಟಾರ್’ ರೈಲು ಸಂಚಾರವನ್ನು ರದ್ದುಗೊಳಿಸಲಾಗಿದೆ. ಇದರಿಂದ ಉದ್ಘಾಟನಾ ಸಮಾರಂಭವನ್ನು ವೀಕ್ಷಿಸಲು ಪ್ಯಾರಿಸ್‌ಗೆ ಪ್ರಯಾಣಿಸಲು ಬಯಸಿದ್ದ ಬ್ರಿಟನ್‌ನ ಹಲವು ಕ್ರೀಡಾ-ಪ್ರೇಮಿಗಳು ನಿರಾಸೆ ಅನುಭವಿಸಿದ್ದಾರೆ.

ಎಲ್ಲ ಮಾರ್ಗಗಳಲ್ಲಿ ರೈಲುಗಳ ಸಂಚಾರ ಯಥಾಸ್ಥಿತಿಗೆ ಬರಲು ಇನ್ನೂ ಕೆಲವು ಸಮಯ ಬೇಕಾಗಬಹುದು. ಆದ್ದರಿಂದ ಈ ವಾರಾಂತ್ಯದವರೆಗೆ ಸುಮಾರು ಎಂಟು ಲಕ್ಷ ಪ್ರಯಾಣಿಕರು ತೊಂದರೆ ಅನುಭವಿಸಬಹುದು ಎಂದು ಮೂಲಗಳು ಹೇಳಿವೆ.

ಬ್ರಿಟನ್ ಪ್ರಧಾನಿಯ ಪ್ರಯಾಣ ಯೋಜನೆ ಬದಲು: ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರು ಒಲಿಂಪಿಕ್ಸ್ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲು ‘ಯೂರೊಸ್ಟಾರ್’ ರೈಲಿನಲ್ಲಿ ಪ್ಯಾರಿಸ್‌ಗೆ ತೆರಳುವವರಿದ್ದರು. ‘ಈ ಘಟನೆಯ ಕಾರಣ ಅವರ ಪ್ರಯಾಣ ಯೋಜನೆ ಬದಲಾಗಿದ್ದು, ವಿಮಾನದಲ್ಲಿ ಪ್ರಯಾಣಿಸುವರು’ ಎಂದು ಅವರ ವಕ್ತಾರರು ಹೇಳಿದ್ದಾರೆ.

ದಾಳಿಯ ಹಿಂದೆ ಯಾರು?: ದಾಳಿಯ ಹೊಣೆಯನ್ನು ಯಾರೂ ಹೊತ್ತುಕೊಂಡಿಲ್ಲ. ‘ಇದರ ಹಿಂದೆ ಯಾರಿದ್ದಾರೆ ಎಂಬುದನ್ನು ಈಗಲೇ ಊಹಿಸಲು ಸಾಧ್ಯವಿಲ್ಲ’ ಎಂದು ಪ್ರಧಾನಿ ಗೇಬ್ರಿಯಲ್ ಅಟ್ಟಲ್ ಹೇಳಿದ್ದಾರೆ. ದಾಳಿಯ ವಿಧಾನವನ್ನು ನೋಡಿದಾಗ ಎಡಪಂಥೀಯ ಭಯೋತ್ಪಾದಕರು ಅಥವಾ ಪರಿಸರ ಹೋರಾಟಗಾರರ ಮೇಲೆ ಅನುಮಾನ ಮೂಡುತ್ತದೆ ಎಂದು ಭದ್ರತಾ ಪಡೆಯ ಮೂಲಗಳು ತಿಳಿಸಿವೆ. ಆದರೆ ಅವರ ಮೇಲೆ ಅನುಮಾನಪಡಲು ಯಾವುದೇ ಪುರಾವೆಗಳು ಲಭಿಸಿಲ್ಲ ಎಂದು ಹೇಳಿವೆ.

ಟೆನಿಸ್: ಬೋಪಣ್ಣಗೆ ಪದಕ ಗೆಲ್ಲಲು ಕೊನೆಯ ಅವಕಾಶ

ಪ್ಯಾರಿಸ್ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವ ಭಾರತ ತಂಡದ ಅತಿ ಹಿರಿಯ ಆಟಗಾರ ರೋಹನ್ ಬೋಪಣ್ಣ ಅವರು ಪದಕ ಗೆಲ್ಲುವ ಕೊನೆಯ ಪ್ರಯತ್ನದಲ್ಲಿದ್ದಾರೆ.

ಮೂರನೇ ಬಾರಿ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುತ್ತಿರುವ 44 ವರ್ಷ ವಯಸ್ಸಿನ ಬೋಪಣ್ಣ ಅವರು ಶ್ರೀರಾಮ್ ಬಾಲಾಜಿ ಅವರೊಂದಿಗೆ ಟೆನಿಸ್ ಪುರುಷರ ಡಬಲ್ಸ್‌ನಲ್ಲಿ ಶನಿವಾರ ಅಭಿಯಾನ ಆರಂಭಿಸುವರು. ಮೊದಲ ಸುತ್ತಿನಲ್ಲಿ ಅವರು, ಫ್ರಾನ್ಸ್‌ನ ಫ್ಯಾಬಿಯನ್ ರೆಬೌಲ್ ಮತ್ತು ಎಡ್ವರ್ಡ್ ರೋಜರ್ ವ್ಯಾಸೆಲಿನ್ ಜೋಡಿಯನ್ನು ಎದುರಿಸಲಿದ್ದಾರೆ.



ಟೆನಿಸ್‌ನಲ್ಲಿ ಭಾರತಕ್ಕೆ ಈತನಕ ಒಂದು ಒಲಿಂಪಿಕ್ ಪದಕ ಒಲಿದಿದೆ. 1996ರ ಅಟ್ಲಾಂಟಾ ಕ್ರೀಡಾಕೂಟದಲ್ಲಿ ಲಿಯಾಂಡರ್ ಪೇಸ್, ಪುರುಷರ ಸಿಂಗಲ್ಸ್‌ನಲ್ಲಿ ಕಂಚು ಗೆದ್ದಿದ್ದರು.

1 ಭಾರತಕ್ಕೆ ಟೆನಿಸ್‌ನಲ್ಲಿ ಈತನಕ ದೊರಕಿದ ಒಲಿಂಪಿಕ್ ಪದಕ

4 ಎಟಿಪಿ ರ್‍ಯಾಂಕಿಂಗ್‌ನಲ್ಲಿ ರೋಹನ್ ಬೋಪಣ್ಣ ಹೊಂದಿರುವ ಸ್ಥಾನ

80 ಎಟಿಪಿ ರ್‍ಯಾಂಕಿಂಗ್‌ನಲ್ಲಿ ಸುಮಿತ್ ನಗಾಲ್ ಗಳಿಸಿರುವ ಸ್ಥಾನ

2012ರಲ್ಲಿ ಬೋಪಣ್ಣ ಅವರು ಮಹೇಶ್ ಭೂಪತಿ ಅವರೊಂದಿಗೆ ಎರಡನೇ ಸುತ್ತು ಪ್ರವೇಶಿಸಿದ್ದರು. 2016ರಲ್ಲಿ ಪೇಸ್ ಜೊತೆ ಮೊದಲ ಸುತ್ತಿನಲ್ಲಿ ನಿರಾಸೆ ಅನುಭವಿಸಿದ್ದರು. ಆದರೆ, ಅದೇ ಕೂಟದಲ್ಲಿ ಸಾನಿಯಾ ಮಿರ್ಜಾ ಅವರೊಂದಿಗೆ ಮಿಶ್ರ ಡಬಲ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆದು, ಸ್ವಲ್ಪದರಲ್ಲೇ ಕಂಚನ್ನು ತಪ್ಪಿಸಿಕೊಂಡಿದ್ದರು. ಎಟಿಪಿ ಟೂರ್ ರ್‍ಯಾಂಕಿಂಗ್‌ನಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಕೊಡಗಿನ ಬೋಪಣ್ಣ ಅವರಿಗೆ ಪದಕ ಜಯಿಸಲು ಇದು ಅವಕಾಶವಾಗಿದೆ.

ನಗಾಲ್‌ಗೆ ಕೊರೆಂಟಿನ್ ಸವಾಲು: ಭಾರತದ ಅಗ್ರಮಾನ್ಯ ಟೆನಿಸ್ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಮೊದಲ ಸುತ್ತಿನಲ್ಲಿ ಆತಿಥೇಯ ಫ್ರಾನ್ಸ್‌ನ ಮೌಟೆಟ್ ಕೊರೆಂಟಿನ್ ಅವರನ್ನು ಎದುರಿಸುವರು.

ಟಿಟಿ: ಹರ್ಮೀತ್‌ಗೆ ಝೈದ್ ಸವಾಲು

ಪ್ಯಾರಿಸ್ ಒಲಿಂಪಿಕ್ಸ್ ಧ್ವಜಧಾರಿ ಅಚಂತ ಶರತ್ ಕಮಲ್ ನಾಯಕತ್ವದ ಟೇಬಲ್ ಟೆನಿಸ್ ತಂಡವು ಶನಿವಾರ ತನ್ನ ಅಭಿಯಾನ ಆರಂಭಿಸಲಿದೆ.

ಪುರುಷರ ಸಿಂಗಲ್ಸ್‌ನಲ್ಲಿ ಗುಜರಾತ್‌ನ 31 ವರ್ಷದ ಹರ್ಮೀತ್ ದೇಸಾಯಿ ಅವರು ಜೋರ್ಡಾನ್‌ನ ಝೈದ್ ಅಬೊ ಯಮನ್ ವಿರುದ್ಧ ಸೆಣಸಲಿದ್ದಾರೆ. 63ನೇ ರ್‍ಯಾಂಕ್ ಆಟಗಾರ ಹರ್ಮೀತ್ 2022ರ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ತಂಡ ವಿಭಾಗದ ಚಿನ್ನ ಗೆದ್ದ ಭಾರತದ ಬಳಗದಲ್ಲಿದ್ದರು.

ಇದೇ ವಿಭಾಗದಲ್ಲಿ 41 ವರ್ಷದ ಶರತ್ ಕಮಲ್ ಅವರು ತಮ್ಮ ಮೊದಲ ಪಂದ್ಯದಲ್ಲಿ ಸ್ಲೊವೇನಿಯಾದ ಡೆನಿ ಕೊಜುಲ್ ವಿರುದ್ಧ ಆಡಲಿದ್ದಾರೆ.

ಮಹಿಳೆಯರ ಸಿಂಗಲ್ಸ್‌ನಲ್ಲಿ ಕಾಮನ್‌ವೆಲ್ತ್ ಗೇಮ್ಸ್ ಚಿನ್ನದ ಪದಕವಿಜೇತೆ ಮಣಿಕಾ ಬಾತ್ರಾ ಅವರು ಗ್ರೇಟ್ ಬ್ರಿಟನ್‌ನ ಅನಾ ಹರ್ಸೆ ವಿರುದ್ಧ ಆಡುವರು. 18ನೇ ಶ್ರೇಯಾಂಕದ ಮಣಿಕಾ ಅವರು 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ 32ರ ಘಟ್ಟಕ್ಕೆ ತಲುಪಿದ್ದರು.

ಪುರುಷರ ತಂಡ ವಿಭಾಗದಲ್ಲಿ ಶರತ್ ಕಮಲ್, ದೇಸಾಯಿ ಮತ್ತು ಮಾನವ್ ಠಕ್ಕರ್ ಇದ್ದಾರೆ. ಮಹಿಳೆಯರ ತಂಡದಲ್ಲಿ ಮಣಿಕಾ, ಶ್ರೀಜಾ ಅಕುಲಾ ಹಾಗೂ ಕರ್ನಾಟಕದ ಅರ್ಚನಾ ಕಾಮತ್ ಇದ್ದಾರೆ. ಜಿ. ಸತ್ಯನ್, ಐಹಿಕಾ ಮುಖರ್ಜಿ ಕಾಯ್ದಿಟ್ಟ ಆಟಗಾರರಾಗಿದ್ದಾರೆ.



ಹರ್ಮೀತ್ ದೇಸಾಯಿ

58 ವರ್ಷದ ಝಿಯಾಂಗ್ ಪದಾರ್ಪಣೆ

ಸ್ಯಾಂಟಿಯಾಗೊ (ಎಪಿ): ಝೆಂಗ್ ಝಿಯಾಂಗ್ ಅವರಿಗೆ ಈಗ 58 ವರ್ಷ. ಅವರು 1989ರಲ್ಲಿ ಚೀನಾದಿಂದ ಚಿಲಿಗೆ ವಲಸೆ ಹೋದರು. ಅಲ್ಲಿಯೇ ಮಕ್ಕಳಿಗೆ ಟೇಬಲ್ ಟೆನಿಸ್ ಕಲಿಸುವ ಕಾಯಕ ಮಾಡಿದರು. ಇದೀಗ ಅವರು ಚಿಲಿ ಮಹಿಳಾ ತಂಡವನ್ನು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಪ್ರತಿನಿಧಿಸಲಿದ್ದಾರೆ. ಇದು ಅವರಿಗೆ ಚೊಚ್ಚಲ ಒಲಿಂಪಿಕ್ಸ್ ಆಗಿದೆ. ಅವರು ಹೋದ ವರ್ಷ ಪ್ಯಾನ್ ಅಮೆರಿಕನ್ ಗೇಮ್ಸ್‌ನಲ್ಲಿ ಕಂಚಿನ ಪದಕ ಜಯಿಸಿದ್ದರು.

ಬ್ಯಾಡ್ಮಿಂಟನ್: ನಿರೀಕ್ಷೆ ಹೆಚ್ಚಿಸಿದ ಸಿಂಧು, ಸಾತ್ವಿಕ್–ಚಿರಾಗ್

ಪ್ಯಾರಿಸ್ (ಪಿಟಿಐ): ಕಳೆದ ಮೂರು ಒಲಿಂಪಿಕ್ಸ್‌ಗಳಲ್ಲೂ ಬ್ಯಾಡ್ಮಿಂಟನ್‌ನಲ್ಲಿ ಭಾರತಕ್ಕೆ ಪದಕ ಒಲಿದಿದೆ. ಹೀಗಾಗಿ, ಈ ಬಾರಿಯೂ ಬ್ಯಾಡ್ಮಿಂಟನ್ ಆಟಗಾರರ ಮೇಲೆ ಪದಕ ನಿರೀಕ್ಷೆ ಹೆಚ್ಚಿದೆ.

ಭಾರತದ ಸ್ಪರ್ಧಿಗಳು ಶನಿವಾರದಿಂದ ತಮ್ಮ ವಿಭಾಗಗಳಲ್ಲಿ ಅಭಿಯಾನ ಆರಂಭಿಸುವರು. ಪುರುಷರ ಸಿಂಗಲ್ಸ್‌ನಲ್ಲಿ ಎಚ್.ಎಸ್. ಪ್ರಣಯ್, ಲಕ್ಷ್ಯ ಸೇನ್, ಡಬಲ್ಸ್‌ನಲ್ಲಿ ಚಿರಾಗ್ ಶೆಟ್ಟಿ– ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ, ಮಹಿಳೆಯರ ಸಿಂಗಲ್ಸ್‌ನಲ್ಲಿ ಪಿ.ವಿ. ಸಿಂಧು, ಡಬಲ್ಸ್‌ನಲ್ಲಿ ಅಶ್ವಿನಿ ಪೊನ್ನಪ್ಪ– ತನಿಶಾ ಕ್ರಾಸ್ಟೊ ಕಣದಲ್ಲಿದ್ದಾರೆ. ಬ್ಯಾಡ್ಮಿಂಟನ್‌ನಲ್ಲಿ ಭಾರತವು ಈತನಕ ಒಟ್ಟು ಮೂರು ಒಲಿಂಪಿಕ್ ಪದಕಗಳನ್ನು ಗೆದ್ದಿದೆ. ಆದರೆ, ಚಿನ್ನದ ಪದಕ ಮಾತ್ರ ಇನ್ನೂ ಕನಸಾಗಿಯೇ ಉಳಿದಿದೆ.

3 ಒಲಿಂಪಿಕ್ಸ್‌ನ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ಈತನಕ ಭಾರತ ಗೆದ್ದ ಪದಕಗಳು

7 ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುತ್ತಿರುವ ಭಾರತದ ಬ್ಯಾಡ್ಮಿಂಟನ್‌ಪಟುಗಳು

3 ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್– ಚಿರಾಗ್ ಜೋಡಿ ಪಡೆದಿರುವ ಶ್ರೇಯಾಂಕ

2012ರ ಲಂಡನ್ ಕ್ರೀಡಾಕೂಟದ ಮಹಿಳಾ ಸಿಂಗಲ್ಸ್‌ನಲ್ಲಿ ಸೈನಾ ನೆಹ್ವಾಲ್ ಕಂಚು ಗೆದ್ದು, ಮೊದಲ ಒಲಿಂಪಿಕ್ ಪದಕ ತಂದುಕೊಟ್ಟರು. 2016 ಮತ್ತು 2020ರಲ್ಲಿ ಪಿ.ವಿ. ಸಿಂಧು ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದಿದ್ದಾರೆ. ವಿಶ್ವದ ಮಾಜಿ ನಂಬರ್ 1 ಜೋಡಿ ಸಾತ್ವಿಕ್ ಮತ್ತು ಚಿರಾಗ್ ಮೇಲೆ ಚಿನ್ನದ ನಿರೀಕ್ಷೆ ಹೆಚ್ಚಿದೆ. ವಿಶ್ವ ಕ್ರಮಾಂಕದಲ್ಲಿ 13ನೇ ಸ್ಥಾನದಲ್ಲಿರುವ ಸಿಂಧು ಮೇಲೆಯೂ ಪದಕದ ಭರವಸೆ ಇಡಲಾಗಿದೆ.



ಚಿರಾಗ್ ಶೆಟ್ಟಿ– ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ



ಪಿ.ವಿ. ಸಿಂಧು

ಬಾಕ್ಸಿಂಗ್: ನಿಖತ್ ಮೇಲೆ ಚಿತ್ತ

ಪ್ಯಾರಿಸ್ (ಪಿಟಿಐ): ಭಾರತದ ಪ್ರೀತಿ ಪವಾರ್ ಅವರು ಒಲಿಂಪಿಕ್ಸ್‌ನ ಮಹಿಳೆಯರ 54 ಕೆ.ಜಿ.ವಿಭಾಗದಲ್ಲಿ ಶನಿವಾರ ಸ್ಪರ್ಧೆಗಿಳಿಯಲಿದ್ದಾರೆ. ವಿಯೆಟ್ನಾಂನ ತಿ ಕಿಮ್ ವೊ ಅವರು ಪ್ರೀತಿ ಅವರಿಗೆ ಮೊದಲ ಎದುರಾಳಿಯಾಗಿದ್ದಾರೆ.


ವಿಶ್ವ ಚಾಂಪಿಯನ್‌ಷಿಪ್ ಪದಕ ವಿಜೇತೆ ಭಾರತದ ನಿಖತ್ ಜರೀನ್ (50 ಕೆಜಿ.), ಲವ್ಲೀನಾ ಬೊರ್ಗೊಹೈನ್ (75 ಕೆ.ಜಿ.) ಮತ್ತು ನಿಶಾಂತ್ ದೇವ್ (71 ಕೆ.ಜಿ.) ಅವರೂ ಬಾಕ್ಸಿಂಗ್‌ನಲ್ಲಿ ತಮ್ಮ ಅಭಿಯಾನ ಆರಂಭಿಸಲಿದ್ದಾರೆ. ಭಾರತಕ್ಕೆ ಪದಕ ತಂದು ಕೊಡಲು ಕಠಿಣ ಎದುರಾಳಿಗಳೊಂದಿಗೆ ಸೆಣಸಲಿದ್ದಾರೆ.

ಭಾರತದ ಆರು ಬಾಕ್ಸರ್‌ಗಳಿಗೆ ಗುರುವಾರ ಕಠಿಣ ಡ್ರಾಗಳನ್ನು ನೀಡಲಾಗಿದೆ. ಎರಡು ಬಾರಿಯ ವಿಶ್ವ ಚಾಂಪಿಯನ್ ಜರೀನ್ ಮೇಲೆ ಪದಕ ನಿರೀಕ್ಷೆ ಹೆಚ್ಚಿದೆ. ಜೈಸ್ಮಿನ್ ಲಂಬೋರಿಯಾ (57 ಕೆ.ಜಿ.), ಅಮಿತ್ ಪಂಗಲ್ (51 ಕೆ.ಜಿ) ಅವರೂ ಸ್ಪರ್ಧಾಕಣ ದಲ್ಲಿದ್ದು, ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದ್ದಾರೆ. ಭಾರತದ ಬಾಕ್ಸರ್‌ಗಳು ಇದುವರೆಗೆ ಒಲಿಂಪಿಕ್ಸ್‌ನಲ್ಲಿ ಮೂರು ಕಂಚಿನ ಪದಕಗಳನ್ನು ಗೆದ್ದಿದ್ದಾರೆ.

ಬಾಕ್ಸಿಂಗ್‌ನಲ್ಲಿ ಪದಕ ವಿಜೇತರು		
ಬೀಜಿಂಗ್	2008	ವಿಜೇಂದರ್ ಸಿಂಗ್
ಲಂಡನ್	2012	ಮೇರಿ ಕೋಮ್
ಟೋಕಿಯೊ	2021	ಲವ್ಲೀನಾ ಬೊರ್ಗೊಹೈನ್



ನಿಖತ್ ಜರೀನ್



ಪ್ರೀತಿ ಪವಾರ್

ಒಲಿಂಪಿಕ್ಸ್ ಹಾಕಿ: ಸೇಡು ತೀರಿಸಲು ಹರ್ಮನ್‌ಪ್ರೀತ್ ಪಡೆಗೆ ಅವಕಾಶ

ಭಾರತಕ್ಕೆ ಇಂದು ನ್ಯೂಜಿಲೆಂಡ್ ಸವಾಲು

ಪ್ರಜಾವಾಣಿ ವಾರ್ತೆ

ಪ್ಯಾರಿಸ್: ಭಾರತ ಪುರುಷರ ಹಾಕಿ ತಂಡ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವ ಕಠಿಣ ಹಾದಿಯಲ್ಲಿ ಸಾಗಲು ತನ್ನೆಲ್ಲಾ ಪ್ರಯತ್ನದೊಡನೆ ಸಜ್ಜಾಗಿದೆ. ಈವ್ಸ್ ಡ್ಯು ಮ್ಯಾನುವಾ ಕ್ರೀಡಾಂಗಣದಲ್ಲಿ ಶನಿವಾರ ನಡೆಯುವ 'ಎ' ಗುಂಪಿನ ಮೊದಲ ಪಂದ್ಯದಲ್ಲಿ ಅಪಾಯಕಾರಿ ನ್ಯೂಜಿಲೆಂಡ್ ತಂಡವನ್ನು ಎದುರಿಸುವ ಮೂಲಕ ತನ್ನ ಅಭಿಯಾನ ಆರಂಭಿಸಲಿದೆ.

ಮೂರು ವರ್ಷಗಳ ಹಿಂದೆ ಟೋಕಿಯೊ ಕ್ರೀಡೆಗಳಲ್ಲಿ ಕಂಚಿನ ಪದಕ ಗೆದ್ದು 41 ವರ್ಷಗಳ ಒಲಿಂಪಿಕ್ಸ್ ಪದಕದ ಬರ ನೀಗಿಸಿದ್ದ ಭಾರತ ತಂಡ, ನಂತರ ಹಾಂಗ್‌ಝೌ ಏಷ್ಯನ್ ಕ್ರೀಡೆಗಳಲ್ಲಿ ಚಿನ್ನ ಗೆದ್ದುಕೊಂಡಿತು. ಹೀಗಾಗಿ ಹರ್ಮನ್‌ಪ್ರೀತ್ ಸಿಂಗ್ ಬಳಗದ ಮೇಲೆ ನಿರೀಕ್ಷೆಯ ಭಾರ ಇದೆ. ಆದರೆ ತಂಡಕ್ಕೆ ಮುಂದಿನ ಹಾದಿಯಲ್ಲಿ ಎದುರಾಗುವ ಕಠಿಣ ಸವಾಲುಗಳ ಅರಿವು ಇದ್ದೇ ಇದೆ.

ಮೊದಲನೆಯದಾಗಿ ಭಾರತಕ್ಕೆ ಗುಂಪು ಹಂತದಿಂದಲೇ ಸವಾಲು ಇದೆ. ಭಾರತದ ಜೊತೆ 'ಎ' ಗುಂಪಿನಲ್ಲಿ ಹಾಲಿ ಚಾಂಪಿಯನ್ ಬೆಲ್ಜಿಯಂ, ಮೂರು ಬಾರಿಯ ವಿಶ್ವಕಪ್ ವಿಜೇತ ಆಸ್ಟ್ರೇಲಿಯಾ, ರಿಯೊ ಕ್ರೀಡೆಗಳಲ್ಲಿ ಚಿನ್ನ ಗೆದ್ದ ಅರ್ಜೆಂಟೀನಾ, ನ್ಯೂಜಿಲೆಂಡ್ ಮತ್ತು ಐರ್ಲೆಂಡ್ ತಂಡಗಳಿವೆ.

ಎರಡನೆಯದಾಗಿ ನ್ಯೂಜಿಲೆಂಡ್ ಒಡ್ಡಬಹುದಾದ ಅಪಾಯ. ಕಳೆದ ವರ್ಷ ಭುವನೇಶ್ವರದಲ್ಲಿ ನಡೆದ ವಿಶ್ವಕಪ್ ಕ್ವಾರ್ಟರ್‌ಫೈನಲ್ ಸ್ಥಾನಕಕಾಗಿ ನಡೆದ ಪಂದ್ಯದಲ್ಲಿ ಭಾರತವನ್ನು, ನ್ಯೂಜಿಲೆಂಡ್ ಸೋಲಿಸಿತ್ತು. ಆಗ 'ಬಿ' ಗುಂಪಿನಲ್ಲಿ ಎರಡನೇ ಸ್ಥಾನ ಪಡೆದಿದ್ದ ಭಾರತ, ಕಿವೀಸ್ ತಂಡವನ್ನು ಮಣಿಸುವ ವಿಶ್ವಾಸದಲ್ಲಿದ್ದು ವಿರಾಮದ ವೇಳೆ 2–1 ಗೋಲುಗಳ ಮುನ್ನಡೆ ಹೊಂದಿತ್ತು. ಆದರೆ ಅಮೋಘವಾಗಿ ಪುಟಿದೆದ್ದ ನ್ಯೂಜಿಲೆಂಡ್ ಕೊನೆಗೆ 3–3ರಲ್ಲಿ ಸಮಮಾಡಿಕೊಂಡು, ಶೂಟೌಟ್‌ನಲ್ಲಿ 5–4ರಿಂದ ಗೆದ್ದು ಆತಿಥೇಯರಿಗೆ ಆಘಾತ ನೀಡಿತ್ತು. ತಂಡದ ಮುಖ್ಯ ಕೋಚ್ ಗ್ರಹಾಂ ರೀಡ್ ಸ್ಥಾನಕ್ಕೂ ಇದು ಎರವಾಯಿತು.

ಹರ್ಮನ್‌ಪ್ರೀತ್ ಸಿಂಗ್ ಪಡೆಗೆ ಈಗ ಸೇಡು ತೀರಿಸಲು ಅವಕಾಶವಿದೆ. 'ನಾವು ನ್ಯೂಜಿಲೆಂಡ್ ತಂಡವನ್ನು ಮೊದಲಿಂದಲೂ ಪ್ರಬಲ ಎದುರಾಳಿಯಾಗಿ ಕಂಡಿದ್ದೇವೆ. ಈಗ ವಿಶ್ವಕಪ್ ಪಂದ್ಯದ ನೆನಪಾಗಿದ್ದು ಒಳ್ಳೆಯದೇ. ಯಾವುದೇ ಹಂತದಲ್ಲಿ ನಾವು ಸಡಿಲುಬಿಡುವಂತಿಲ್ಲ. ಉತ್ತಮ ಆರಂಭ ಮಾಡಿ, ಕೊನೆಯವರೆಗೂ ಒತ್ತಡ ಹೇರುವುದು ಬಲು ಮುಖ್ಯ' ಎಂದು ಅನುಭವಿ ಡ್ರ್ಯಾಗ್‌ಫ್ಲಿಕ್ಕರ್ ಸಿಂಗ್ ಶುಕ್ರವಾರ ತಿಳಿಸಿದರು.


ಉತ್ತಮ ಆರಂಭ ಪಡೆಯುವುದು ಭಾರತಕ್ಕೆ ಅನಿವಾರ್ಯ ಕೂಡ. 'ಬಲಾಢ್ಯರ ಗುಂಪಿ'ನಲ್ಲಿ ಮುಂದಿನ ಪಂದ್ಯಗಳೆಲ್ಲಾ ಕಠಿಣವಾಗುತ್ತ ಹೋಗುತ್ತದೆ. ನ್ಯೂಜಿಲೆಂಡ್ ಮತ್ತು ಐರ್ಲೆಂಡ್ ಬಿಟ್ಟರೆ ಉಳಿದ ತಂಡಗಳ ವಿರುದ್ಧದ ಪಂದ್ಯಗಳು ಕಠಿಣ ಸವಾಲಿನದ್ದೇ. ಈ ಎರಡು ತಂಡಗಳ ವಿರುದ್ಧ ಅತ್ಯುತ್ತಮ ಪ್ರದರ್ಶನ ನೀಡಿದರೆ ಕ್ವಾರ್ಟರ್‌ಫೈನಲ್ ರೇಸ್‌ನಲ್ಲಿ ಉಳಿಯಬಹುದು.

ಇದಕ್ಕಾಗಿ ತಂಡದ ಕಾರ್ಯತಂತ್ರ ಸರಿಯಾಗಿರಬೇಕು. ಹಾಲಿ ಕೋಚ್ ಕ್ರೇಗ್ ಫುಲ್ಟನ್ ಡಿಫೆನ್ಸ್‌ಗೆ ಒತ್ತು ನೀಡಿದರೆ, ತಂಡ ಆಕ್ರಮಣ ಬಯಸುತ್ತಿದೆ. ಸಂದರ್ಭ ನೋಡಿಕೊಂಡು ದಾಳಿಗಿಳಿಯುವ ಯೋಜನೆಗೆ ತಂಡ ಹೇಗೊ ಒಗ್ಗಿಕೊಂಡಿದೆ. ಆದರೆ ಇದರಲ್ಲಿ ಶಿಸ್ತಿನ ಕೊರತೆ ಕಾಣುತ್ತಿದೆ.

ಮುನ್ನುಗ್ಗುವ ವೇಳೆ ಮಾಡುವ ಅಚಾತುರ್ಯದಿಂದ ಎದುರಾಳಿ ತಂಡಕ್ಕೆ ಪ್ರತಿದಾಳಿಗೆ ಅವಕಾಶ ನೀಡಿದೆ. ಆಸ್ಟ್ರೇಲಿಯಾ ಪ್ರವಾಸದಲ್ಲಿ ಮತ್ತು ಪ್ರೊ ಲೀಗ್ ವೇಳೆ ಇದರಿಂದ ನಿರಾಶೆ ಅನುಭವಿಸಿದೆ. ಆಸ್ಟ್ರೇಲಿಯಾ ವಿರುದ್ಧ ಐದೂ ಪಂದ್ಯ ಸೋತರೆ, ಪ್ರೊ ಲೀಗ್‌ನ ಎಂಟು ಪಂದ್ಯಗಳಲ್ಲಿ ಗೆದ್ದಿದ್ದು ಕೇವಲ ಒಂದು.

'ನಾವು ಈ ಬಾರಿ ಚಿನ್ನ ಗೆಲ್ಲುವ ಗುರಿಯೊಡನೆ ಬಂದಿದ್ದೇವೆ. ನಾವು ಪ್ರಬಲ ಗುಂಪಿನಲ್ಲಿದ್ದೇವೆ. ಎದುರಾಳಿಗಳೆಲ್ಲಾ ಪದಕಕ್ಕೆ ಪೈಪೋಟಿಯೊಡ್ಡುವವರು. ಆದರೆ ಪಂದ್ಯದ ದಿನ ನಮ್ಮಿಂದ ಉತ್ತಮ ಪ್ರದರ್ಶನ ಮೂಡಿದರೆ, ಉಳಿದವರಿಗಿಂತ ಉತ್ತಮ ಎನಿಸಬಲ್ಲೆವು. ಆ ಮನೋಭಾವದೊಡನೆ ಇಲ್ಲಿಗೆ ಬಂದಿದ್ದೇವೆ' ಎಂದು ಉಪನಾಯಕ ಹಾರ್ದಿಕ್ ಸಿಂಗ್ ಹೇಳಿದರು.


ಭಾರತ ತಂಡದ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ –ಪಿಟಿಐ ಚಿತ್ರ


ಭಾರತ ಹಾಕಿ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ –ಪಿಟಿಐ ಚಿತ್ರ



ಜ್ಯೋತಿ ರಿಲೆ
2008ರ ಬೀಜಿಂಗ್ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಶೂಟರ್ ಭಾರತದ ಅಭಿನವ್ ಬಿಂದ್ರಾ ಶುಕ್ರವಾರ ಪ್ಯಾರಿಸ್‌ನಲ್ಲಿ ಒಲಿಂಪಿಕ್ಸ್ ಜ್ಯೋತಿಯ ರಿಲೆಯಲ್ಲಿ ಪಾಲ್ಗೊಂಡರು –ಪಿಟಿಐ ಚಿತ್ರ

ಶೂಟಿಂಗ್: ಒಲಿಂಪಿಕ್ಸ್‌ಗೆ ಭಾರತದ 21 ಮಂದಿಯ ತಂಡ

12 ವರ್ಷಗಳ ಬಳಿಕ ನಿರೀಕ್ಷೆ

ಚಾಟೆವುರಾಕ್ಸ್ ಫ್ರಾನ್ಸ್ (ಪಿಟಿಐ): ಇದುವರೆಗೆ ಭಾರತ ಗೆದ್ದಿರುವ 35 ಒಲಿಂಪಿಕ್ಸ್ ಪದಕಗಳಲ್ಲಿ ಶೂಟಿಂಗ್‌ನಲ್ಲಿ ಗೆದ್ದ ನಾಲ್ಕು ಪದಕಗಳು ಸೇರಿವೆ. ಆದರೆ ಹಿಂದಿನ ಎರಡು ಒಲಿಂಪಿಕ್ ಕ್ರೀಡೆಗಳ ಶೂಟಿಂಗ್‌ನಲ್ಲಿ ತಂಡಕ್ಕೆ ಪದಕ ಗೆಲ್ಲಲು ಸಾಧ್ಯವಾಗಿಲ್ಲ. ಈ ಅಂಶ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುತ್ತಿರುವ ದಾಖಲೆಯ 21 ಮಂದಿಯ ತಂಡದ ಮೇಲಿನ ಒತ್ತಡ ಸ್ವಲ್ಪ ಹೆಚ್ಚಿಸಿದೆ.

ಪ್ಯಾರಿಸ್‌ನಿಂದ ಸ್ವಲ್ಪ ದೂರದ ಶಾತುಹು ಪಟ್ಟಣದಲ್ಲಿ ಶೂಟಿಂಗ್ ಸ್ಪರ್ಧೆಗಳು ಶನಿವಾರ ಆರಂಭವಾಗಲಿವೆ. ಶೂಟಿಂಗ್ ಫೆಡರೇಷನ್ ಈ ಬಾರಿ ಆಯ್ಕೆ ಟ್ರಯಲ್ಸ್ ನಡೆಸಿದ್ದು, ಶೂಟರ್‌ಗಳ ಹಿಂದಿನ ದಾಖಲೆಗಿಂತ ಹಾಲಿ ಲಯಕ್ಕೆ ಒತ್ತು ನೀಡಿದೆ. ಹೀಗಾಗಿ ವಿವಿಧ ಕಡೆ ಕೋಟಾ ಪಡೆದವರೂ ಟ್ರಯಲ್ಸ್‌ನಲ್ಲಿ ಪೂರ್ಣ ಸಾಮರ್ಥ್ಯ ತೋರಬೇಕಾಯಿತು.

ಮನು ಭಾಕರ್, ಐಶ್ವರಿ ಪ್ರಸಾದ್ ತೋಮಾರ್, ಅಂಜುಮ್ ಮೌದ್ಗಿಲ್ ಮತ್ತು ಇಲವೇನಿಲ್ ವಾಳರಿವನ್ ಬಿಟ್ಟರೆ ಉಳಿದ 17 ಮಂದಿಗೆ ಇದು ಮೊದಲ ಒಲಿಂಪಿಕ್ಸ್. ಭಾರತ ಶೂಟಿಂಗ್‌ನ ಎಲ್ಲ 15 ವಿಭಾಗಗಳಲ್ಲಿ ಕಣಕ್ಕಿಳಿಯಲಿದೆ.

ಸರಬ್ಜೋತ್ ಸಿಂಗ್, ಅರ್ಜುನ್ ಚೀಮಾ ಅವರು ಪುರುಷರ 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಶನಿವಾರ ಭಾರತದ ಸವಾಲು ಮುನ್ನಡೆಸುತ್ತಿದ್ದಾರೆ.

ರಿದಮ್ ಸಾಂಗ್ವಾನ್, ಮನು ಭಾಕರ್ ಅವರು ಮಹಿಳೆಯರ 10 ಮೀ. ಏರ್ ಪಿಸ್ತೂಲ್ ವಿಭಾಗದ ಅರ್ಹತಾ ಸುತ್ತಿನಲ್ಲಿ ಅಗ್ನಿಪರೀಕ್ಷೆ ಎದುರಿಸಲಿದ್ದಾರೆ.

ವಿಶ್ವಕಪ್ ಸೇರಿದಂತೆ ವಿವಿಧೆಡೆ ಪದಕ ಗೆದ್ದಿರುವ 22 ವರ್ಷದ ಮನು ಭಾಕರ್ ಅವರಿಗೆ ಟೋಕಿಯೊ ಒಲಿಂಪಿಕ್ಸ್‌ನಲ್ಲಿ 10 ಮೀ. ಏರ್‌ಪಿಸ್ತೂಲ್ ವಿಭಾಗದಲ್ಲಿ ಸ್ಪರ್ಧಿಸುವ ವೇಳೆ ಪಿಸ್ತೂಲ್ ಕೈಕೊಟ್ಟಿತು. ಅವರು ಮೂರು ವಿಭಾಗಗಳಲ್ಲಿ (10 ಮೀ. ಏರ್‌ಪಿಸ್ತೂಲ್, 25 ಮೀ. ಪಿಸ್ತೂಲ್, 10 ಮೀ. ಪಿಸ್ತೂಲ್ ಮಿಶ್ರ ತಂಡ) ಕಣಕ್ಕಿಳಿಯಲಿದ್ದಾರೆ.

ಭಾರತಕ್ಕೆ ಚೀನಾದಿಂದ ಪ್ರಮುಖ ಸವಾಲು ಎದುರಾಗಲಿದೆ. ಚೀನಾ ಸಹ 21 ಮಂದಿಯನ್ನು ಕಣಕ್ಕಿಳಿಸಿದೆ.

ಏಷ್ಯನ್ ಗೇಮ್ಸ್ ಸ್ವರ್ಣ ವಿಜೇತೆ ಸಿಫ್ಟ್ ಕೌರ್ ಸಮ್ರಾ ಅವರ ಪ್ರದರ್ಶನದ ಮೇಲೂ ಕಣ್ಣಿಡಲಾಗಿದೆ. ತಂಡಕ್ಕೆ ಪುನರಾಗಮನ ಮಾಡಿರುವ ಮೌದ್ಗಿಲ್ ಅವರು ಸಮ್ರಾ ಜೊತೆ ಮಹಿಳೆಯರ 50 ಮೀ. ರೈಫಲ್ ತ್ರಿ ಪೊಸಿಷನ್‌ನಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

24 ವರ್ಷ ವಯಸ್ಸಿನ ರಿದಂ ಎರಡು ಸ್ಪರ್ಧೆಗಳಲ್ಲಿ (10 ಮೀ. ಏರ್‌ಪಿಸ್ತೂಲ್ ಮತ್ತು 10 ಮೀ. ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗ) ಕಣಕ್ಕಿಳಿಯುತ್ತಿದ್ದಾರೆ.

ಪುರುಷರ ವಿಭಾಗದಲ್ಲಿ ತೋಮಾರ್ ಮಾತ್ರ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡ ಅನುಭವ ಹೊಂದಿದ್ದಾರೆ. ಅನೀಶ್ ಭಾನವಾಲಾ, ಸರಬ್ಜೋತ್ ಸಿಂಗ್, ಅರ್ಜುನ್ ಬಬುತಾ, ಅರ್ಜುನ್ ಸಿಂಗ್ ಚೀಮಾ ಮತ್ತು ವಿಜಯವೀರ್ ಸಿಧು ಅವರಿಗೆ ಇದು ಚೊಚ್ಚಲ ಒಲಿಂಪಿಕ್ಸ್.

2012ರಲ್ಲಿ ಗಗನ್ ನಾರಂಗ್ ಶೂಟಿಂಗ್‌ನಲ್ಲಿ ಭಾರತಕ್ಕೆ ಕೊನೆಯ ಪದಕ (ಕಂಚು) ಗೆದ್ದುಕೊಟ್ಟಿದ್ದರು. ಅದರ ನಂತರ ಭಾರತ ಶೂಟರ್‌ಗಳು ಪದಕದ ಬರ ಎದುರಿಸುತ್ತಿದ್ದಾರೆ.


ಅಭ್ಯಾಸದಲ್ಲಿ ನಿರತರಾಗಿರುವ ಮನು ಭಾಕರ್ –ಪಿಟಿಐ ಚಿತ್ರ

ಒಲಿಂಪಿಕ್ಸ್‌ನಲ್ಲಿ ಇಂದು

(ಭಾರತದ ಸ್ಪರ್ಧೆ)

ಬ್ಯಾಡ್ಮಿಂಟನ್ (ಗುಂಪು ಹಂತ)
ಲಕ್ಷ್ಯ ಸೇನ್– ಕೆವಿನ್ ಕಾರ್ಡನ್ (ಪುರುಷರ ಸಿಂಗಲ್ಸ್) (ಗ್ವಾಟೆಮಾಲಾ) ರಾತ್ರಿ 7.10
ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ (ಪುರುಷರ ಡಬಲ್ಸ್) ಲ್ಯೂಕಾಸ್ ಕಾರ್ವೀ ಮತ್ತು ರೊನಾನ್ ಲ್ಯಾಬರ್ (ಫ್ರಾನ್ಸ್) ರಾತ್ರಿ 8
ತನಿಶಾ ಕ್ರಾಸ್ಟೊ - ಅಶ್ವಿನಿ ಪೊನ್ನಪ್ಪ (ಮಹಿಳೆಯರ ಡಬಲ್ಸ್) ಕಿಮ್ ಸೋ ಯೋಂಗ್ ಮತ್ತು ಕಾಂಗ್ ಹೀ ಯೋಂಗ್ (ಕೊರಿಯಾ) ರಾತ್ರಿ 11.50

ಮಹಿಳೆಯರ ಬಾಕ್ಸಿಂಗ್
54 ಕೆಜಿ: ಪ್ರೀತಿ ಪವಾರ್ – ಥಿ ಕಿಮ್ ಅನ್ಹ್ ವೋ (ವಿಯೆಟ್ನಾಂ) ರಾತ್ರಿ 12.05
ಪುರುಷರ ಹಾಕಿ (ಗುಂಪು ಹಂತ)
ಭಾರತ– ನ್ಯೂಜಿಲೆಂಡ್ (ರಾತ್ರಿ 9)


ರೋಯಿಂಗ್
ಬಾಲರಾಜ್ ಪನ್ವಾರ್ (ಪುರುಷರ ಸಿಂಗಲ್ ಸ್ಕಲ್ಸ್) (ಮಧ್ಯಾಹ್ನ 12.30)

ಟೇಬಲ್ ಟೆನಿಸ್ (ಆರಂಭಿಕ ಸುತ್ತು)
ಹರ್ಮೀತ್ ದೇಸಾಯಿ– ಜೈದ್ ಅಬೋ ಯಮನ್ (ಜೋರ್ಡಾನ್) (ಪುರುಷರ ಸಿಂಗಲ್ಸ್) (ರಾತ್ರಿ 7.15)

ಟೆನಿಸ್ (ಆರಂಭಿಕ ಸುತ್ತು)
ರೋಹನ್ ಬೋಪಣ್ಣ ಮತ್ತು ಶ್ರೀರಾಮ್ ಬಾಲಾಜಿ –ಎಡ್ವರ್ಡ್ ರೋಜರ್-ವ್ಯಾಸೆಲಿನ್ ಮತ್ತು ಫ್ಯಾಬಿಯನ್ ರೆಬೌಲ್ (ಫ್ರಾನ್ಸ್) (ಪುರುಷರ ಡಬಲ್ಸ್) (ಮಧ್ಯಾಹ್ನ 3.30)

ಶೂಟಿಂಗ್
ಸಂದೀಪ್ ಸಿಂಗ್, ಅರ್ಜುನ್ ಬಬುತಾ, ಇಲವೇನಿಲ್ ವಲರಿವನ್, ರಮಿತಾ ಜಿಂದಾಲ್ (10 ಮೀ. ಏರ್‌ರೈಫಲ್ ಮಿಶ್ರ ತಂಡ) (ಮಧ್ಯಾಹ್ನ 12.30)
ಸರಬ್ಜೋತ್ ಸಿಂಗ್, ಅರ್ಜುನ್ ಚೀಮಾ (ಪುರುಷರ 10 ಮೀ. ಏರ್ ಪಿಸ್ತೂಲ್, ಅರ್ಹತಾ ಸುತ್ತು) (ಮಧ್ಯಾಹ್ನ 2)
ರಿದಿಮ್ ಸಂಗ್ವಾನ್, ಮನು ಬಾಕರ್ (ಮಹಿಳೆಯರ 10 ಮೀ. ಏರ್ ಪಿಸ್ತೂಲ್, ಅರ್ಹತಾ ಸುತ್ತು) (ಸಂಜೆ 4)

ನೇರ ಪ್ರಸಾರ ಸ್ಪೋರ್ಟ್ಸ್ 18 ಮತ್ತು ಜಿಯೊ ಸಿನಿಮಾ


ಜಿಮ್ನಾಸ್ಟಿಕ್ಸ್ ಕ್ರೀಡೆಯ 'ರಾಣಿ'ಯೆಂದೇ ಹೆಸರಾಗಿರುವ ಅಮೆರಿಕದ ಸಿಮೊನ್ ಬೈಲ್ಸ್ ಅವರು ಸ್ಪರ್ಧೆಗೆ ಮುನ್ನ ಪ್ಯಾರಿಸ್‌ನಲ್ಲಿ ಅಭ್ಯಾಸ ನಡೆಸಿದರು –ಎಎಫ್‌ಪಿ ಚಿತ್ರ

ಮುಖಭಂಗದಿಂದ ಕೋಚ್ ಪಾರು

ಪ್ಯಾರಿಸ್ (ಎಎಫ್‌ಪಿ): ಎದುರಾಳಿ ದಕ್ಷಿಣ ಕೊರಿಯಾದ ಈಜುಸ್ಪರ್ಧಿ, ತಮ್ಮದೇ ದೇಶದ ಪ್ರಮುಖ ಸ್ಪರ್ಧಿಗಳನ್ನು ಹಿಮ್ಮೆಟ್ಟಿಸಿ ಚಿನ್ನಗೆಲ್ಲುತ್ತಾರೆ ಎಂದು ಹೇಳಿದ ಆಸ್ಟ್ರೇಲಿಯಾದ ಕೋಚ್ ಒಬ್ಬರು 'ತವರಿಗೆ ಮರಳಬೇಕಾದ' ಮುಖಭಂಗದಿಂದ ಪಾರಾಗಿದ್ದಾರೆ.

ಈ ಕೋಚ್ ಮೈಕೆಲ್ ಪಾಲ್‌ಫ್ರೆ ಈ ವಾರದ ಆರಂಭದಲ್ಲಿ ದಕ್ಷಿಣ ಕೊರಿಯಾದ ಮಾಧ್ಯಮಗಳ ಎದುರು ಮಾತನಾಡುವಾಗ ಸಮಸ್ಯೆ ಮೈಮೇಲೆ ಎಳೆದುಕೊಂಡಿದ್ದರು. 'ಪುರುಷರ 400 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ದಕ್ಷಿಣ ಕೊರಿಯಾದ ಕಿಮ್ ವೂ–ಮಿನ್ ಅವರು, ಆಸ್ಟ್ರೇಲಿಯಾದ ಸ್ಯಾಮ್ ಶಾರ್ಟ್ ಮತ್ತು ಎಲಿಜಾ ವಿನ್ನಿಂಗ್ಟನ್ ಅವರನ್ನು ಹಿಂದೆಹಾಕಿ ಚಿನ್ನ ಗೆಲ್ಲುವರೆಂಬ ವಿಶ್ವಾಸವಿದೆ' ಎಂದು ಪಾಲ್‌ಫ್ರೇ ಹೇಳಿದ್ದರು.

'ಈ ಮೂರೂ ಮಂದಿ– ಕಿಮ್ ವೂ, ಶಾರ್ಟ್, ವಿನಿಂಗ್ಟನ್– ಮಾಜಿ ವಿಶ್ವ ಚಾಂಪಿಯನ್ನರು. ಲಾ ಡಿಫೆನ್ಸ್ ಅರೇನಾದಲ್ಲಿ ಶನಿವಾರ ನಡೆಯಲಿರುವ ಸ್ಪರ್ಧೆಯಲ್ಲಿ ಮುಖಾಮುಖಿ ಆಗಲಿದ್ದಾರೆ.

ಮುಖ್ಯ ಈಜು ಕೋಚ್ ರೋಹನ್ ಟೇಲರ್ ಅವರು ಪಾಲ್‌ಫ್ರೇ ಅವರನ್ನು 'ಆಸ್ಟ್ರೇಲಿಯನ್ನರಂತೆ ವರ್ತಿಸಿಲ್ಲ. ಅವರ ವರ್ತನೆ ತೀವ್ರವಾಗಿ ನಿರಾಶೆ ಮೂಡಿಸಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಆದರೆ ತಂಡದ ಈಜುಪಟುಗಳ ಜೊತೆ ಚರ್ಚೆ ನಡೆಸಿದ ರೋಹನ್, 'ನಮ್ಮ ಮುಂದೆ ಎರಡೇ ಆಯ್ಕೆಗಳಿದ್ದವು. ಒಂದು ಅವರನ್ನು ಇಲ್ಲೇ ಉಳಿಸುವುದು. ಇಲ್ಲವೇ ಮನೆಗೆ ಕಳಿಸುವುದು. ಆದರೆ ಸ್ಪರ್ಧಿಗಳ ಜೊತೆ ಚರ್ಚೆ ನಡೆಸಿದ ನಂತರ ತಂಡದ ಹಿತಾಸಕ್ತಿಯಿಂದ ಅವರನ್ನು ಇಲ್ಲೇ ಉಳಿಸಿಕೊಳ್ಳಲು ನಿರ್ಧರಿಸಿದೆವು' ಎಂದಿದ್ದಾರೆ. ಆಸ್ಟ್ರೇಲಿಯಾ ತಂಡದಲ್ಲಿ 41 ಮಂದಿ ಈಜುಪಟುಗಳಿದ್ದಾರೆ.

ಮದ್ದು ಪರೀಕ್ಷೆಯಲ್ಲಿ ಸಿಕ್ಕಿಕೊಂಡ ಇರಾಕ್ ಜೂಡೊಕಾ

ಪ್ಯಾರಿಸ್ (ಎಪಿ): ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲು ಬಂದಿದ್ದ ಇರಾಕ್ ಪುರುಷರ ತಂಡದ ಜೂಡೊಪಟು ಅವರು ಡೋಪಿಂಗ್ ಪರೀಕ್ಷೆಯಲ್ಲಿ ಸಿಲುಕಿಕೊಂಡಿದ್ದಾರೆ. ಅವರಿಂದ ಪಡೆದ ಮಾದರಿಯಲ್ಲಿ ಎರಡು ಅನಬಾಲಿಕ್ ಸ್ಟಿರಾಯಿಡ್‌ಗಳ ಅಂಶ ಪತ್ತೆಯಾಗಿದೆ ಎಂದು ಅಂತರರಾಷ್ಟ್ರೀಯ ಟೆಸ್ಟಿಂಗ್ ಏಜನ್ಸಿ (ಐಟಿಎ) ಶುಕ್ರವಾರ ತಿಳಿಸಿದೆ.

28 ವರ್ಷ ವಯಸ್ಸಿನ ಸಜ್ಜದ್ ಸೆಹೆನ್ ಅವರಿಂದ ಮಂಗಳವಾರ ಪ್ಯಾರಿಸ್‌ನಲ್ಲಿ ಮದ್ದು ಸೇವನೆ ಪರೀಕ್ಷೆಯ ಸ್ಯಾಂಪಲ್ ಪಡೆಯಲಾಗಿತ್ತು. ಇದರಲ್ಲಿ ಮೆಟಾಂಡಿನೊನ್ ಮತ್ತು ಬೊಲ್ಡೆನೊನ್ ಅಂಶಗಳು ಕಂಡುಬಂದಿವೆ. ಅವರು ಮುಂದಿನ ಮಂಗಳವಾರ ಉಜ್ಬೇಕಿಸ್ತಾನ ಸ್ಪರ್ಧಿಯ ವಿರುದ್ಧ 81 ಕೆ.ಜಿ ವಿಭಾಗದಲ್ಲಿ ಕಣಕ್ಕಿಳಿಯಬೇಕಿತ್ತು.

ಅವರನ್ನು ತಾತ್ಕಾಲಿಕವಾಗಿ ಅಮಾನತುಗೊಳಿಸಲಾಗಿದೆ.

ಫುಟ್‌ಬಾಲ್ ಮಿಸಾಕಾ ಎಫ್‌ಸಿಗೆ ಗೆಲುವು

ಬೆಂಗಳೂರು: ಮಿಸಾಕಾ ಯುನೈಟೆಡ್ ಎಫ್‌ಸಿ ತಂಡವು ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಕರ್ನಾಟಕ ಮಹಿಳೆಯರ ಲೀಗ್‌ನಲ್ಲಿ 2–0ಯಿಂದ ರೂಟ್ ಎಫ್‌ಸಿ ತಂಡವನ್ನು ಸೋಲಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಮಿಸಾಕಾ ಯುನೈಟೆಡ್ ಎಫ್‌ಸಿ ಪರ ಮರಿಯಾನಾ ಜೋನ್ಸ್ (40 ಮತ್ತು 81ನೇ ನಿ) ಎರಡು ಗೋಲು ದಾಖಲಿಸಿದರು.

ದಿನದ ಮತ್ತೊಂದು ಪಂದ್ಯದಲ್ಲಿ ಕೆಂಪ್ ಎಫ್‌ಸಿ ತಂಡವು 3–2ರಿಂದ ಮಾತೃ ಪ್ರತಿಷ್ಠಾನ ತಂಡವನ್ನು ಸೋಲಿಸಿತು.

ಕೆಂಪ್ ಎಫ್‌ಸಿ ಪರ ವ್ಯಾಸಪುರಂ ನಂದಿನಿ (7ನೇ ನಿಮಿಷ), ಪ್ರಿಯದರ್ಶಿನಿ (39ನೇ ನಿ), ಖುಷ್ಬು (79ನೇ ನಿ) ತಲಾ ಒಂದು ಗೋಲು ದಾಖಲಿಸಿದರು. ಮಾತೃ ಪ್ರತಿಷ್ಠಾನ ಪರ ಪ್ರೀತಿ (48ನೇ ನಿ), ಜನನಿ (58ನೇ ನಿ) ಗೋಲು ಗಳಿಸಿದರು.